355

ಕನ್ನಡ ಶಾಲಾಪತ್ರ

369

1883

ಸಿದ್ಧಸಂಘ ವಾಚನ[illegible]
ಮುರಬ. ಜಿ ಧಾರವಾಡ.

ಶಾಲಾಪತ್ರಕವು

ಪುಸ್ತಕ ೧೮] [ಸಂಚಿಕೆ ೧

ಜಾನವಾರಿ, ೧೮೮೩

Education and Improvement.

ವಿದ್ಯಾಸುಧಾರಣಾಸಂಬಂಧವಾದ ಸಂಗತಿಗಳು.

—*o*—

ಧಾರವಾಡದಲ್ಲಿ ಹುಟ್ಟುವ "ಧಾವಾ" ಎಂಬ ಪತ್ರದ ಎಡಿಟರರು ಈ ತಿಂಗಳಿನ ೧೩ನೇ ತಾರೀಖಿನ ಪತ್ರದಲ್ಲಿ "ಈಗಿನ ಶಿಕ್ಷಣವೂ ಜನರ ದುರ್ದಶೆಯೂ" ಎಂಬ ಸದರಿನ ಕೆಳಗೆ ಬರೆದ ನಿಬಂಧದಲ್ಲಿ ಈಗಿನ ಶಿಕ್ಷಣದಿಂದ ಪ್ರಜೆಗಳಿಗೆ ಕೇಡು ಬಿಡಗುತ್ತದೆಂದು ತೋರಿಸುವದಕ್ಕೆ ಬದಲಾಗಿ ಅವರ ಸ್ಥಿತಿಯು ಸುಧಾರಿಸುತ್ತ ನಡೆದದೆಂದು ತೋರಿಸತಕ್ಕ ಕಲ್ಪಿತ ಉದಾಹರಣೆಗಳನ್ನೇ ಬಹುಶ: ಬರೆದಿದ್ದಾರೆ. ಹುಡುಗರು ಮೂರು ವರ್ಷದವರಾದಕೂಡಲೆ ಅವರಿಗೆ "ಶ್ರೀಗಣೇಶಾಯನಮ:" ಕಲಿಸಲಿಕ್ಕೆ ಆರಂಭ ವಾಗುತ್ತದೆಂದು ಇವರು ಬರೆಯುತ್ತಾರೆ. ಆದರೆ ನೂರರಲ್ಲಿ ಒಬ್ಬಿಬ್ಬರು ಈ ಕ್ರಮವನ್ನು ಅನುಸರಿಸುತ್ತಿದ್ದಾರೆಂದು ನಮಗೆ ತೋರುವದಿಲ್ಲ. ಈ ಕ್ರಮವನ್ನು ಎಲ್ಲರೂ ಹಿಂಬಾಲಿಸಿದರೆ, ಇದರಿಂದ ಖೇದ ಪಡುವದಕ್ಕೆ ಬದಲಾಗಿ ಸಂ

ಕೋಪ ಮಾಡುವದೇ ಶಿಕ್ಷಣವೆಂದು ಹುಡುಗರಿಗೆ ಸಹ ತಿಳಿಯು ವದು. ಚಿಕ್ಕಂದಿನಲ್ಲಿ ವಿದ್ಯಾಭ್ಯಾಸವು ಬೇಗ ಆರಂಭವಾಗುವು ದು ಹಿತಕರವೇ. ಆದರೆ ಅದರಿಂದ ಬಾಲಕರ ಮನಸಿಗೆ ಬೇಸರ ಮಾ ತ್ರ ಹುಟ್ಟಗೊಡಲಾಗದು. ಹುಡುಗರು ನೋಡಿದ್ದನ್ನೆಲ್ಲ ತಿಳಿ ಕೊಳ್ಳಲಿಕ್ಕೆ ಉತ್ಸುಕರಾಗುವದನ್ನು ಯಾರು ಅರಿಯರು. ಅವರ ಕೇಳಿ ತಿಳಿದ ಪ್ರಶ್ನೆಗಳಿಗೆ ಆದಷ್ಟು ಮಟ್ಟಿಗೆ ಅವರಿಗೆ ತಿಳಿಯುವಂ ತೆ ಉತ್ತರಗಳನ್ನು ಹೇಳಿ ಅವರ ಜ್ಞಾನವನ್ನು ಬೆಳಿಸುತ್ತ ಹೋ ದರೆ ಅವರಿಗೆ ಬಹು ಸಂತೋಷವಾಗುತ್ತದೆ ಸ್ವಾರ್ಥ ಬೇಸ ವಾಗಲರಿಯದು.

ಮತ್ತೊಂದು ಕಡೆಯಲ್ಲಿ, ಸೊನ್ನಗಾರರು, ಶಿಂಪಿಗರು, ವ್ಯಾಪಾರರು, ಮುಂತಾದವರು ತಮ್ಮ ಮಕ್ಕಳಿಗೆ ಓದುಬರೆಯು ಕ ಸಲಿಕ್ಕೆ ಹಿಂಜರಿಸುತ್ತಾರೆಂದು ಈ ಪತ್ರಿಕೆಗಳು ಬರೆದದ್ದು ಇದು ಖೇದದ ಸಂಗತಿಯೋ? ಆದರೆ ಇಂಥಾ ಸ್ಥಿತಿಯು ಈ ನಿಜವಾಗಿ ಇರುತ್ತದೆಯೋ? ತಮ್ಮ ಕಸಬು ಕಲಿಯಲಿಕ್ಕೆ ಯಾ ರೂ ಶಿಲ್ಪಿಗರು ಹಮ್ಮಿಸುವದೇ ಇಲ್ಲವೋ? ಈ ಪತ್ರಿಕೆಗ ಜನರಿಗೆ ಏನು ಬೋಧವಾಗಬೇಕೆಂದು ಈ ನಿಬಂಧವನ್ನು ಬರೆ ದ್ದಾರೆಂಬುವದು ನಮಗೆ ತಿಳಿಯುವದಿಲ್ಲ.

—o—

ಪುಣೆಯಲ್ಲಿ ಇರುವ ವಿಕ್ಟೋರಿಯಾ ಹಾಯಸ್ಕೂಲೆಂಬ ಶಾಲೆಯಿಂದ ಮೂವರು ವಿದ್ಯಾರ್ಥಿನಿಯರು ಮ್ಯಾಟ್ರಿಕ್ಯುಲೇ ನ್ ಪರೀಕ್ಷೆಗೆ ಹೋಗಿ ಪಾಸಾದರು.

—o—

ಮಾರ್ಚದಲ್ಲಿ ಧಾರವಾಡದ ಹಾಯಸ್ಕೂಲಿನ ಮಾಸ್ತರರಾ ಗಿದ್ದ ರಾ. ರಾ. ಪಿತ್ರೆ ನಾರಾಯಣ ಸಾಠೆ ಪಂಡಿತರು ಈ

ಸಾತಾರೆಯ ಹಾಯಸ್ಕೂಲಿನ ಮಾಸ್ತರರಿದ್ದಾರೆ. ಇವರು ಮುಂಬಯಿಯೊಳಗಿನ ಮಿಶನರೀ ಕಾಲೇಜದಲ್ಲಿ ವಿದ್ಯಾಭ್ಯಾಸ ಮಾಡಿ ಈಗ ದೊಡ್ಡ ಕೆಲಸ ಮಾಡುತ್ತಿರುವ ಕಾರಣ ಆ ಕಾಲೇಜದ ವಿದ್ಯಾರ್ಥಿಗಳಿಗಾಗಿ ೧೦೦೦ ರೂಪಾಯಿ ಕಾಣಿಕೆ ಕೊಟ್ಟರು.

—o—

ಈಗಿರುವ ಸರಕಾರೀ ಬ್ಯಾಂಕನೋಟುಗಳನ್ನು ತೆಗೆದು, ಹಾಳು ಕಾಗದಗಳಂತೆ ಕಮಿಶನ್ನಿನ ಮೇಲೆ ಬೇಕಾದವರಿಗೆ ಬ್ಯಾಂಕುಗಳನ್ನು ವ್ಯಾಪಾರಕ್ಕೆ ಕೊಡುವ ವಿಚಾರವು ಸರಕಾರದಲ್ಲಿ ನಡೆದಿದೆಂದು ವರ್ತಮಾನಪತ್ರಗಳಲ್ಲಿ ಪ್ರಕಟವಾಗಿದೆ.

—o—

ಮಿ. ಫ್ಲೀಟಧೊರೆಗಳು ಪೂರ್ವದಲ್ಲಿ ಈ ದಕ್ಷಿಣಭಾಗದ ಅಸಿಸ್ಟೆಂಟರಾಗಿದ್ದರೆಂಬುವದನ್ನು ಟಪ್ಪುವ ಮಾಸ್ತರರು ಬಲ್ಲರು. ಈ ಧೊರೆಗಳನ್ನು ಈಗ ಸರಕಾರದವರು ಶಿಲಾಲೇಖಗಳ ಶೋಧದ ಕೆಲಸಕ್ಕೆ ನೇಮಿಸಿದ್ದು ಕೇಳಿ ನಮಗೆ ಅತ್ಯಾನಂದವಾಗುತ್ತದೆ. ಈ ಧೊರೆಗಳು ಈ ದೇಶಕ್ಕೆ ಬಂದು ಸುಮಾರು ೧೫ ವರ್ಷವಾಗಿರಬಹುದು. ಈ ಅವಧಿಯಲ್ಲಿ ಇವರು ಅಹೋರಾತ್ರವಾಗಿ ಬೇಸರವಿಲ್ಲದೆ ಶಿಲಾಲೇಖಗಳ ಅಭ್ಯಾಸವನ್ನು ಮಾಡಿದರಿಂದ ಕರ್ನಾಟಕದ ಪ್ರಾಚೀನ ಇತಿಹಾಸ, ಪೂರ್ವಕಾಲದ ನಡೆವಳಿಗಳೂ, ಹಳೆ ಮಾಪು ಮುಂತಾದವುಗಳೂ ಇವೆಲ್ಲ ಈ ಧೊರೆಗಳಿಗೆ ತಿಳಿದಷ್ಟು ಈ ದೇಶದಲ್ಲಿ ಯಾರಿಗೂ ತಿಳಿದದ್ದಾವೆಂದು ನಮಗೆ ತೋರುವದಿಲ್ಲ. ಕನ್ನಡಭಾಷೆಯ ಮೂಲಸ್ಥಿತಿಯು ಹ್ಯಾಗಿತ್ತು, ಯಾವಯಾವ ಕಾಲದಲ್ಲಿ ಅದು ಹ್ಯಾಹ್ಯಾಗೆ ಸುಧಾರಿಸುತ್ತಬಂತು, ಎಂಬ ವಿವರವನ್ನು ಈ ಹೊತ್ತಿಗೆ ಫ್ಲೀಟ ಧೊರೆಗಳೇ ಹೊರತು ಬೇರೆ ಯಾರೂ ಅರಿಯರು

ದು ನಮ್ಮ ನಂಬಿಕೆಯುಂಟು. ಕರ್ನಾಟಕದ ಹಿತಕರ್ತರಲ್ಲಿ ಈ ಧೊರೆಗಳು ಅಗ್ರಗಣ್ಯರೆಂದು ನಾವು ಯೋಚಿಸುತ್ತೇವೆ.

—o—

ದಕ್ಷಿಣಭಾಗದಲ್ಲಿಯೂ ಪೂರ್ವಭಾಗದಲ್ಲಿಯೂ ಇರುವ ಹಿಂದುಸ್ಥಾನೀ ಶಾಲೆಗಳಿಗಾಗಿ ಖಾನಸಾಹೇಬ ಪಿರ್ಜಾದೆ ಅಬ್ಬಾಸ ಅಲ್ಲೀ ಬೇಗ ಎಂಬವರನ್ನು ಡೆಪ್ಯುಟೀ ಇನಸ್ಪೆಕ್ಟರರಾಗಿ ನೇಮಿಸಿದ್ದಾರೆ. ಇವರು ಬಂಕಾಪುರಕ್ಕೆ ಬಂದಿದ್ದಾರೆಂದು ಕೇಳುತ್ತೇವೆ. ಇನ್ನು ಮುಂದೆ ಹಿಂದುಸ್ಥಾನೀ ಭಾಷೆಯ ಅಭ್ಯಾಸವು ಬೇಗ ಬೆಳೆಯುವದೆಂದು ಕೋರುತ್ತೇವೆ.

—o—

ಧಾರವಾಡದಲ್ಲಿ ಹೋದ ವರ್ಷ ಹುಟ್ಟಿದ ಖಾಸಗೀ ಹಾಯಸ್ಕೂಲಿನ ಹೆಡ್ ಮಾಸ್ತರರಾದ ಮಿಸ್ಟರ ಕಾಶೀನಾಥ ಲೇಲೇ ಇವರು ಇಷ್ಟರೊಳಗೆ ಈ ಸ್ವತಂತ್ರ ಉದ್ಯೋಗಕ್ಕೆ ಬೇಸರಗೊಂಡು ಮ. ಡಾಯರೆಕ್ಟರ ಧೊರೆಗಳ ಕಡೆಗೆ ನೌಕರಿಗಾಗಿ ಅರ್ಜಿಯನ್ನು ಕಳಿಸಿದ್ದರು. ಆದರೆ ಇಷ್ಟರೊಳಗೆ ಇವರಿಗೆ ನೌಕರಿಯನ್ನು ಕೊಟ್ಟರೆ ಇವರ ಶಾಲೆಯ ವಿದ್ಯಾರ್ಥಿಗಳ ನುಕಸಾನು ಬಹಳ ಆಗುವದೆಂದು ನೋಡಿ ಆ ದಯಾಳುಗಳಾದ ಧೊರೆಗಳು ಇವರಿಗೆ ಸದ್ಯಕ್ಕೆ ನೌಕರಿಯನ್ನು ಕೊಡಲಿಲ್ಲವೆಂದು ಕೇಳಿ ನಮಗೆ ಸಂತೋಷವಾಯಿತು.

—o—

ಗದಗಿನ ವಾರ್ಷಿಕ ಪರೀಕ್ಷೆಯಲ್ಲಿ ಹುಡುಗರಿಗೂ ಹುಡುಗಿಯರಿಗೂ ಇನಾಮು ಕೊಡುವದಕ್ಕಾಗಿ ಅಲ್ಲಿಯ ಮಾಮಲೇದಾರರು ವರ್ಗಣಿಯಿಂದ ೧೫೦ ರುಪಾಯಿ ಜಮೆ ಮಾಡಿ, ಅವರೂ ರಾ. ಸಾ. ಡೆಪ್ಯುಟೀ ಇನಸ್ಪೆಕ್ಟರರೂ ಕೂಡಿ ವಾರ್ಷಿಕ

ಪರೀಕ್ಷೆಯು ಸಮಾರಂಭವನ್ನು ಬಹು ಸರಸಾಗಿ ಮಾಡಿದರು. ಯಾವತ್ತು ಮಾಮಲೇದಾರರು ವಿದ್ಯಾಭಿವೃದ್ಧಿಗಾಗಿ ಹೀಗೆ ಯತ್ನಿಸುವ ಸುದಿವಸವು ಯೆಂದು ಬರುವದು!

—o—

ಬೆಳಗಾವಿಯ ಹಾಯಸ್ಕೂಲಿನ ಮಾಸ್ತರರಿಗೂ ಅಲ್ಲಿಯ ಕರ್ನಾಟಕ ಮಿತ್ರವೆಂಬ ವರ್ತಮಾನಪತ್ರಕ್ಕೂ ವ್ಯಾಜ್ಯ ಹುಟ್ಟಿದ ಸುದ್ದಿಯು ವರ್ತಮಾನ ಪತ್ರಗಳಲ್ಲಿ ಪ್ರಕಟವಾಗಿದೆ.

—o—

ಬೆಳಗಾವಿಯ ೭ನೇ ನಂಬರಿನ ಕನ್ನಡಶಾಲೆಯ ಮಾಸ್ತರರಾದ ಗಣೇಶ ಗಂಗಾಧರ ಧೋಪೇಶ್ವರ ಎಂಬವರು ಹೊಲಿಯರ ಮಕ್ಕಳ ವಿದ್ಯಾಭ್ಯಾಸದ ಕೆಲಸದಲ್ಲಿ ಬಹಳ ಶ್ರಮ ತಕ್ಕೊಂಡದ್ದರಿಂದ ಸರಕಾರದ ಠರಾವು ನಂಬರು ೮೩೯೦ ತಾರೀಖು ೩ನೇ ನವಂಬರ ೧೯೯೭, ಇದರ ೭ನೇ ಕಲಮಿನಲ್ಲಿ ಅವರ ಪ್ರಶಂಸೆಯು ಪ್ರಸಿದ್ಧವಾಗಿದೆ. ಈ ಕಲಮಿನ ಅಕ್ಷರಶಃ ಭಾಷಾಂತರವು ಕೆಳಗೆ ಬರೆದಂತೆ—

“ ಹೊಲಿಯರಲ್ಲಿ ವಿದ್ಯಾಭಿವೃದ್ಧಿಯನ್ನು ಮಾಡುವ ಕೆಲಸದಲ್ಲಿ ಬೆಳಗಾವಿಯ ೭ನೇ ನಂಬರಿನ ಕನ್ನಡಶಾಲೆಯ ಹೆಡ್ ಮಾಸ್ತರರಾದ ಗಣೇಶ ಗಂಗಾಧರ ಧೋಪೇಶ್ವರ ಇವರ ಪರಿಶ್ರಮವು ಬಹಳ ಸ್ತುತ್ಯರ್ಹವಿರುತ್ತದೆ ”

(ಮೆ॥ ಹರ್ಬಾನಇನಸ್ಪೆಕ್ಟರ ಧೋರೆಗಳವರ ಅಪ್ಪಣೆಯಿಂದ ಪ್ರಸಿದ್ಧಿಸಲ್ಪಟ್ಟಿತು)

V. R. Katti

ಕನ್ನಡ ಟ್ರಾನ್ಸಲೇಟರ ಧಾರವಾಡ.

—o—

History of India.

ಹಿಂದುಸ್ತಾನದ ಇತಿಹಾಸವು.

(೨೭೫ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

ಪಂಜಾಬದೊಳಗಿನ ಪ್ರಸಿದ್ಧ ಸ್ಥಳಗಳು-ದಿಲ್ಲಿಪ್ರಾಂತದಲ್ಲಿ ದಿಲ್ಲಿ, ಕರ್ನಾಲ, ಪಾನಿಪತ್ತ-ಅಂಬಾಲಾ ಪ್ರಾಂತದಲ್ಲಿ ಥಾನೇಶ್ವರ, ದಿಲ್ಲಿಯ ಉತ್ತರಕ್ಕೆ ಸರಸ್ವತಿಯ ತೀರದಲ್ಲಿ, ಅದರ ಸೆರೆಯಲ್ಲಿ ಶಿರಾಪುರಿ ಎಂಬ ಗ್ರಾಮ, ಕುರುಕ್ಷೇತ್ರ ವೆಂಬ ರಣಭೂಮಿ; ಮತ್ತು ಲೊದಿಯಾನಾ ಪಟ್ಟಣದ ಹತ್ತರ ಮಾಚ್ಛಿದವಾಡಾ, ಆಲಿವಾಲ, ಸರಹಿಂದ, ಎಂಬ ಪಟ್ಟಣಗಳು-ಜಾಲಂಧರ ಪ್ರಾಂತದಲ್ಲಿ ಕಾಂಗ್ರಾ, ನಗರಕೋಟ, ಎಂಬ ಪಟ್ಟಣಗಳು. ಲಾಹೋರ ಪ್ರಾಂತದಲ್ಲಿ ಲಾಹೋರ ಪಟ್ಟಣವು; ಮತ್ತು ಸತಲಜ ನದಿಯ ದಕ್ಷಿಣದಲ್ಲಿ ಫಿರುಝಪುರ, ಫಿರುಝಶಹಾ, ಮುದಕಿ, ಸೊಬ್ರಾವನ. ರಾವಳಪಿಂಡೀ ಪ್ರಾಂತದಲ್ಲಿ (ಇದಕ್ಕೆ ಶಿಕಂದರಬಾದಶಹನೂ ಅವನ ಗ್ರೀಕ ಜನರೂ ತಕ್ಷಿಲಾ ಎಂದೆನ್ನುವರು) ಅಟಕಪಟ್ಟಣವು ಸಿಂಧೂನದಿಯ ದಂಡೆಯಲ್ಲಿ, ಮತ್ತು ಗುಜರಾತಪಟ್ಟಣವು; ಗುಜರಾತದಹತ್ತರ ಲಾರ್ಡಗಾಫ ಎಂಬ ಸರದಾರನು ಸನ್ ೧೮೪೯ನೇ ವರ್ಷ ಸೀಕಜನರನ್ನು ಗೆದ್ದನು. (೩೨ನೇ ಭಾಗನೋಡು). ಪೆಶಾವರ ಪ್ರಾಂತದಲ್ಲಿ ಪೇಶಾವರವು, ಸಿಂಧೂನದಿಯ ಪರತೀರದಲ್ಲಿ ಅಫಗಾಣಿಸ್ಥಾನದ ಮೇರೆಯ ಮೇಲೆ ಹೆಸರಾದಪಟ್ಟಣವು. ಪೇಶಾವರಕ್ಕೂ ಅಫಗಾಣಿಸ್ಥಾನಕ್ಕೂ ನಡುವೆ ಖೈಬರವೆಂಬ ಬಹು ಇಕ್ಕಟ್ಟಿನ ಘಟ್ಟದಮಾರ್ಗವು ಹೆಸರಾದದ್ದಿರುತ್ತದೆ, (೩೦ನೇ ಭಾಗನೋಡು)-ದಕ್ಷಿಣಕ್ಕೆ ಮುಲ್ತಾನಪ್ರಾಂತದಲ್ಲಿ ಸತಲಜ, ಚಿನಾಬ, ಇವೆರಡು ಹೊಳೆಗಳ ನಡುವೆ ಮುಲ್ತಾನ ಪಟ್ಟಣವು

ಪ್ರಸಿದ್ಧ ಉಂಟು.

[೬] ಪಂಜಾಬದ ದಕ್ಷಿಣದಲ್ಲಿ, ವಾಯವ್ಯ ಇಲಾಖೆಯ ಪಶ್ಚಿಮಕ್ಕೆ ರಜಪುತಸ್ಥಾನವಿರುತ್ತದೆ, ಇದು ರಜಪೂತ ಜಾತಿಯವರ ದೇಶವು. ಇದರಲ್ಲಿ ಹದಿನೆಂಟು ಆಶ್ರಿತ ಸಂಸ್ಥಾನಗಳುಂಟು. ವಿಶೇಷವಾಗಿ ರಜಪೂತ ಜನರೇ ಈ ಸಂಸ್ಥಾನಗಳ ಅರಸರುಂಟು; ಅವರನ್ನು ಬ್ರಿಟಿಶ ಸರಕಾರದ ಆಶ್ರಯದಲ್ಲಿ ತಮ್ಮ ತಮ್ಮ ಸಂಸ್ಥಾನಗಳನ್ನು ಆಳುತ್ತಾರೆ. ಉದೇಪುರ ಅಥವಾ ಮೇವಾಡ, ಜೋಧಪೂರ ಅಥವಾ ಮಾರವಾಡ, ಜಯಪೂರ ಅಥವಾ ಅಂಬರ, ಎಂಬ ಮೂರು ಸಂಸ್ಥಾನಗಳು ಮುಖ್ಯವುಂಟು. ಆದರೆ ಈ ದೇಶದಲ್ಲಿ ಅಜಮೀರ ಪ್ರಾಂತವು ಬ್ರಿಟಿಶ ಸರಕಾರಕ್ಕೆ ಸೇರಿದ್ದಾಗಿ, ವಾಯವ್ಯ ಇಲಾಖೆಯೊಳಗೆ ಎಣಿಸಲ್ಪಡುತ್ತದೆ. ರಜಪೂತಸ್ಥಾನದ ಕ್ಷೇತ್ರಫಲವು ೧೩೦೦೦೦ ಚಚ್ಚೌಕು ಮೈಲು, ಜನಸಂಖ್ಯವು ಸುಮಾರು ೬೦ ಲಕ್ಷ್ಯ—ಅಂದರೆ, ಈ ದೇಶದ ವಿಸ್ತಾರವು ಬಂಗಾಲ ಇಲಾಖೆಯ ಅರ್ಧದಷ್ಟು ಇದ್ದಾಗ್ಯೂ, ಜನಸಂಖ್ಯವು ಆ ಇಲಾಖೆಯ ೭ನೇ ಪಾಲಿನಷ್ಟು ಸಹ ಇಲ್ಲ.

ರಜಪೂತಸ್ಥಾನದಲ್ಲಿ ಪ್ರಸಿದ್ಧ ಪಟ್ಟಣಗಳು — ಮೇವಾಡ ಪ್ರಾಂತದಲ್ಲಿ ಉದೇಪೂರವು ಮಹಾರಾಣಾ ಎಂಬ ಅರಸನ ರಾಜಧಾನಿಯು, ಅದರ ಪೂರ್ವಕ್ಕೆ ಚಿತೋರ ವೆಂಬ ಹೆಸರಾದ ಕೋಟೆಯುಂಟು; ಇದನ್ನು ಅಲ್ಲಾಉದ್ದೀನನು, ಅವನ ತರುವಾಯ ಅಕಬರನು, ಬಹು ಶೌರ್ಯದಿಂದ ತಕ್ಕೊಂಡನು. ಅಜಮೀರ ಪ್ರಾಂತದಲ್ಲಿ ಅಜಮೀರವು. ಜಯಪುರ ಪ್ರಾಂತದಲ್ಲಿ ಜಯಪುರ ರಾಜಧಾನಿ, ಅದರ ಈಶಾನ್ಯದಲ್ಲಿ ಅಂಬರ, ಹಳೆ ರಾಜಧಾನಿ, ರಂತನಭೋರ, ಹೆಸರಾದ ಕೋಟೆ. ಮಾರವಾಡ

ಪ್ರಾಂತದಲ್ಲಿ ಜೋಧಪುರ ರಾಜಧಾನಿ. ಅಲವಾರ ಪ್ರಾಂತದಲ್ಲಿ ಅಸ್ವಾರಿ ಎಂಬ ಪ್ರಸಿದ್ಧ ಸ್ಥಳವು ಜಯಪುರದ ಉತ್ತರದಲ್ಲಿ ಇರುತ್ತದೆ. ಭರತಪುರ ಪ್ರಾಂತದಲ್ಲಿ ಭರತಪೂರ[illegible] ಹೆಸರಾದ ಕೋಟೆಯೂ ರಾಜಧಾನಿಯೂ ಉಂಟು; ಡಿಗ್ ಎಂಬ ಪಟ್ಟಣವು ಪ್ರಸಿದ್ಧವದೆ. ಸಿರೋಹೀ ಪ್ರಾಂತದಲ್ಲಿ ಅಬೂ ಪಹಾಡ ಎಂಬ ಪರ್ವತವು ಪ್ರಖ್ಯಾತವಿರುತ್ತದೆ.

(೬) ರಜಪೂತಸ್ಥಾನದ ಪಶ್ಚಿಮಕ್ಕೂ ದಕ್ಷಿಣಕ್ಕೂ ಮುಂಬಯಿ ಇಲಾಖೆಯುಂಟು. ರಜಪೂತಸ್ಥಾನದ ಪಶ್ಚಿಮದಲ್ಲಿ ಇರುವ ಭಾಗಕ್ಕೆ ಸಿಂಧು ದೇಶವೆಂದನ್ನುವರು. ಅದರ ದಕ್ಷಿಣದಲ್ಲಿ ರಣವೆಂಬದೊಂದು ಸಮುದ್ರದ ಕೊಳಚಿ ನೀರಿನ ಪ್ರದೇಶವಿರುತ್ತದೆ. ಅದು ಬೇಸಿಗೆಯಲ್ಲಿ ಒಣಗುತ್ತದೆ. ರಣದ ದಕ್ಷಿಣಕ್ಕೆ ಕಚ್ಛಪ್ರಾಂತ ಉಂಟು. ಕಚ್ಛದ ಪೂರ್ವಕ್ಕೆ, ಅಂದರೆ ರಜಪೂತಸ್ಥಾನದ ದಕ್ಷಿಣಕ್ಕೆ ಗುಜರಾಥ ದೇಶವದೆ. ಕಚ್ಛಪ್ರಾಂತದಲ್ಲಿಯೂ ಗುಜರಾಥದ ಕೆಲಕೆಲವು ಭಾಗಗಳಲ್ಲಿಯೂ ಬೇರೆ ಕಡೆಯಲ್ಲಿಯೂ ದೇಶೀ ಅರಸರ ಆಶ್ರಿತ ಸಂಸ್ಥಾನಗಳು ಬಹಳ ಉಂಟು. ಮೇಲೆ ಹೇಳಿದ ಸಿಂಧುದೇಶವಲ್ಲದೆ ಮುಂಬಯಿ ಇಲಾಖೆಯಲ್ಲಿ—೧ ಗುಜರಾಥದೇಶ, ೨ ಕೊಂಕಣ ಮುಂಬಯಿ ಸಹಿತ, ೩ ಮಹಾರಾಷ್ಟ್ರ, ಕೊಂಕಣದ ಪೂರ್ವಕ್ಕೆ ಪಶ್ಚಿಮ ಘಟ್ಟದಾಚೆ, ೪ ಖಾನದೇಶ, ಗುಜರಾಥದ ಪೂರ್ವಕ್ಕೆ ಮಹಾರಾಷ್ಟ್ರದ ಉತ್ತರಭಾಗ, ೫ ದಕ್ಷಿಣ ಮಹಾರಾಷ್ಟ್ರ ಉತ್ತರಕಾನಡಾ ಸಹಿತ, ಮಹಾರಾಷ್ಟ್ರದ ದಕ್ಷಿಣದಲ್ಲಿ—ಉತ್ತರಕಾನಡಾಕ್ಕೂ ಕೊಂಕಣಕ್ಕೂ ನಡುವೆ ಗೋಮಂತಕ ವೆಂಬ ಘಟ್ಟದ ಕೆಳಗಿನ ಶೀಮೆಯು ಪೋರ್ತುಗೀಸರ ವಶದಲ್ಲುಂಟು. ಗುಜರಾಥ ಹೊರ್ತಾಗಿ, ಇವೆಲ್ಲ ಪ್ರಾಂತಗಳು ದಕ್ಷಿಣ ಹಿಂದುಸ್ತಾನದ ಪಶ್ಚಿ

ಮ ಭಾಗದಲ್ಲಿ ಇರುತ್ತವೆ. ಈ ಇಲಾಖೆಯ ಕ್ಷೇತ್ರಫಲ [...]ಚೌಕಮೈಲು; ಜನಸಂಖ್ಯೆ ಮುಂಬಯಿ ಇಲಾಖೆಯೊಳಗಿನ ಪ್ರಸಿದ್ಧ ಸ್ಥಳಗಳು—ಸಿಂಧು ಪ್ರಾಂತದಲ್ಲಿ ಹೈದರಾಬಾದ ಮುಖ್ಯಪಟ್ಟಣವು; ತಟ್ಟಾ ಹಳೆ ರಾಜಧಾನಿ; ಕರಾಚಿ ಈ ಇಲಾಖೆಯಲ್ಲಿ ಎರಡನೇ ದೊಡ್ಡ ಬಂದರವು; ಮಿಯಾನಿ, ಅಮರಕೋಟೆ, ಹೈದರಾಬಾದದ ಉತ್ತರ — ಗುಜರಾಥದಲ್ಲಿ ಸುರತ, ಅಮದಾಬಾದ, ಹೆಸರಾದ ವ್ಯಾಪಾರ ಸ್ಥಳಗಳು; ಬಡೋದೆ ಗಾಯಕವಾಡನ ರಾಜಧಾನಿ ಕಚ್ಛಪ್ರಾಂತದಲ್ಲಿ ಮಾಂಡವಿ, ಅಲ್ಲಿಯ ರಾವ ಎಂಬ ಅರಸನ ರಾಜಧಾನಿಯು. ಕೊಂಕಣದಲ್ಲಿ ಮುಂಬಯಿ ಹಿಂದುಸ್ತಾನದೊಳಗೆ ಎಲ್ಲಕ್ಕೂ ಮೇಲಾದ ಬಂದರವು; ಠಾಣೆ, ರತ್ನಾಗಿರಿ, ಮಧ್ಯಮ ತರದ ಬಂದರಗಳು; ವಸಯಿ, ಪೇಶವೆಗಳ ಇತಿಹಾಸದಲ್ಲಿ ಹೆಸರಾದವು. ಮಹಾರಾಷ್ಟ್ರದಲ್ಲಿ ಪುಣೆ ಪೇಶವೆಗಳ ರಾಜಧಾನಿ, ಸಾತಾರೆ ಶಿವಾಜಿಯ ವಂಶದವರ ಹಳೆರಾಜಧಾನಿ; ಕೊಲ್ಹಾಪುರ ಅದೇ ವಂಶದವರ ಈಗಿನ ರಾಜಧಾನಿ, ಅಹಮ್ಮದನಗರ ನಿಜಾಮಶಾಹೀ ಬಾದಶಹಗಳ ಹಳೆರಾಜಧಾನಿ; ಶಿವನೇರಿಯ ಕೋಟೆ, ಶಿವಾಜಿಯ ಜನ್ಮಸ್ಥಳ; ಸಿಂಹಗಡ, ಪುರಂದರ, ಹೆಸರಾದ ಕೋಟೆಗಳು. ತ್ರಿಯಂಬಕ, ಮಹಾಬಳೇಶ್ವರ, ಕ್ರಮವಾಗಿ ಗೋದಾ, ಕೃಷ್ಣಾ ನದಿಗಳ ಉಗಮಸ್ಥಾನಗಳು. ದಕ್ಷಿಣ ಮಹಾರಾಷ್ಟ್ರದಲ್ಲಿ ವಿಜಾಪುರ, ಆದಿಲಶಾಹೀ ಬಾದಶಹಗಳ ಹಳೆರಾಜಧಾನಿ, ಹುಬ್ಬಳ್ಳಿ ಬುನಾದಿಯಿಂದ ಹೆಸರಾದ ವ್ಯಾಪಾರ ಸ್ಥಳವು; ಬೆಳಗಾವಿ, ಧಾರವಾಡ, ಇತಿಹಾಸದಲ್ಲಿ ಪ್ರಸಿದ್ಧವಾದ ಸ್ಥಳಗಳು. ಉತ್ತರ ಕಾನಡಾ ಪ್ರಾಂತದಲ್ಲಿ ಕಾರವಾಡ, ಹೊಸ ಬಂದರವು; ಹೊನ್ನಾವರ, ಕುಮಟಾ, ಬೇರೆ ಬಂದರಗಳು. ಗೋಮಾಂತಕ

ಪ್ರಾಂತದಲ್ಲಿ ಗೋವೆ, ಪೋರ್ತುಗೀಸ ಸಂಸ್ಥಾನದ ರಾಜಧಾನಿ.

(ಮುಂದಕ್ಕೆ ಸಾಗುವದು.)

—o—

A Drama.

ಕೃಷ್ಣರಾಧಿಕಾವಿನೋದನಾಟಕ.

(೩೭ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

ನಾನೇಅಲ್ಲವೆ? ಅದೂ ಹಾಗಿರಲಿ! ಸಖಿಮಣಿಗಳನ್ನು ನಂಬದೇ ವೇದಗೋಚರನನ್ನು ನಿನ್ನ ದೃಕ್ಶೃಂಖಳೆಯಿಂದ ಬಂಧನವಮಾಡುವಾಗ್ಗೆ ನನ್ನನ್ನೇ ಸಾಕ್ಷೀ ಇಟ್ಟಿದ್ದಿಲ್ಲವೇ? ಇಷ್ಟೇಯಾಕೆ? ದಯಮಾಡಿ ನೀವು ನನ್ನ ದಾಸ್ಯತ್ವವನ್ನು ಪಹಾರೇ ಎಂಬ ವಿಚಾರದಿಂದ ಪವಿತ್ರಮಾಡಿದ್ದರಿಂದಲೇ ಅಲ್ಲವೇ ಗೋಪಿನಾಥನು ನಿನ್ನ ಹಾವ ಭಾವ ವಿಲಾಸಗಳಿಗೆ ಭ್ರಮಿತನಾದದ್ದು? ಹಾಡು ಹಾಡು! ಹೀಗೆಲ್ಲಾ ಇದ್ದೂ ಈಗ ಅಕಸ್ಮಾತ್ ಅದೃಶ್ಯಳಾದವೇಲೆ ನನಗೆ ಎಂಥಾ ದುಸ್ತರವಾದ ಗಹನದಲ್ಲಿ ಕಣ್ಣು ಕಟ್ಟಿದಂತಾಗಿದ್ದೀತು? [ಪ್ರಕಾಶವಾಗಿ] ಅಮ್ಮಾ! ಎತ್ತನೋಡಿದರೂ ಕತ್ತಲೆಯೇ ಆಗಿರುತ್ತದೆ! ಪ್ರಿಯುಕ್ತ, ದಯಾಸಾಗರಳೇ! ಬೇಗನೇ ನಿನ್ನ ನಾಸಾಭರಣದ ರತ್ನಕಾಂತಿಯಿಂದ ನನ್ನ ಉರಿಗಣ್ಣುಗಳನ್ನು ಶಾಂತಪಡಿಸು! (ಹೊರಗೆಬರಲಿ.)

ಮಂಜುಹಾಸ—ಅಹಾ! ಎಷ್ಟು ಈ ಅಡವಿಯಲ್ಲಿ ಸಂಚರಿಸಿದರೂ ನನ್ನ ಮನೋರಮಣೀಯುಕ ಮಾರ್ಗಿಯು ಕಾಣಲೊಲ್ಲದು! ಇದರಿಂದ ಕಾಲುಗಳೇ ಮುಂದಕ್ಕೆ ಏಳಲೊಲ್ಲವು! ಯೇನುಮಾಡಲಿ? ಎತ್ತಹುಡುಕಲಿ! ಸಮಯವಂತೂ ಬಹಳೇ ಆತ್ತು!

ಲಲಿತಾ—(ಇವನನ್ನು ನೋಡಿ) ಯಾರವರು? ಈ ವಸಂತ

ವನದಲ್ಲಿ ಚಿಂತಾಯುಕ್ತ ಸಂಚಾರಮಾಡುವರು? ಇತ್ತ ತಿರಿಗಿರಿ!

ಮಂಜುಹಾಸ—(ತಿರಿಗಿನೋಡಿ ನಿಂತು) ಓಹೋ! ಲಲಿತೇ! ಯಾಕೆ? ನಾನು ಮಂಜುಹಾಸನು! ನನ್ನಂತೆಯೇ ನೀನೂ ಯಾಕೆ ವಿರಸಸಂಚಾರದಿಂದಲೇ ಈ ವಸಂತವನವನ್ನು ನಗಿಸಬಂದಿರುತ್ತಿ?

ಲಲಿತಾ—ಆಹಾ! ಇದನ್ನು ಯೇನು ಹೇಳಬೇಕು? ಮಂಜುಹಾಸನೂ ಲಲಿತೆಯೂ ನೆರವೇರಿಸಲಿರುವ ವಿಷಯಗಳು ಬಹಳವಾದ ೧೦೦ಮಾಲಿಗೂ ಭಿನ್ನಕಾರಣಗಳುಂಟು ಅನ್ನಿಸಲಿಕ್ಕಿಲ್ಲ!

ಮಂಜುಹಾಸ—ನೀನು ಹೇಳುವ ಮಾತು ಒಪ್ಪಿಗೆಯೇಸರಿ! ಆದರೂ ಈಗಿನ ಸಮಯದಲ್ಲಿ ನನಗೆ ಆದರೆ ಸೂಕ್ಷ್ಮಗ್ರಹಿಕೆಯಾಗುವದಾಗಿಲ್ಲ! ಯಾಕಂದರೆ ಈಗ ನನ್ನ ಸರ್ವಾಭಿಲಾಷೆಯೂ ಶ್ರೀ ಕೃಷ್ಣನ ದರ್ಶನದಲ್ಲಿರುವದು!

ಲಲಿತಾ—ಸೈಸೈ! ನಾನು ಆಗಲೇಹೇಳಿದಂತೆ ಇರುತ್ತದೆ! ನಮ್ಮಿಬ್ಬರ ಅಭಿಲಾಷೆಗಳೂ ಸರಿಯಾದ ಯೋಗ್ಯತೆಯುಳ್ಳವೇ ಇರುತ್ತವೆ! ಯಾಕಂದರೆ ನಿನಗೆ ಹ್ಯಾಗೆ ಶ್ರೀ ಕೃಷ್ಣನದರ್ಶನದಲ್ಲಿ ಅಭಿಲಾಷೆಯುಂಟಾಗಿರುವದೋ ಹಾಗೇ ನನಗೆ ಶ್ರೀ ಮದ್ರಾಧಿಕಾ ಲಕ್ಷ್ಮಿಯದರ್ಶನದ ಅವಶ್ಯವಿರುತ್ತದೆ!

ಮಂಜುಹಾಸ—(ಮುಗುಳುನಗೆಯಿಂದ) ರಾಧಿಕೆಯು ಎಲ್ಲಿಗೆ ಹೋಗಿರುತ್ತಾಳೆ?

ಲಲಿತಾ—ಶ್ರೀ ಕೃಷ್ಣ ಪರಮಾತ್ಮನು ಎಲ್ಲಿರುತ್ತಾನೆ?

ಮಂಜುಹಾಸ—ರಾಧಿಕೆಯೊಡನೆ ಮುನಿದು ಎಲ್ಲಿಗೋ ಹೋಗಿರುತ್ತಾನೆ!

ಲಲಿತಾ—ಕೃಷ್ಣನೊಡನೆ ಮುನಿದವಳಾಗಿ ರಾಧಿಕೆಯೂ ಹಾಗೇ ಮಾಡಿರುತ್ತಾಳೆ!

ಮಂಜುಹಾಸ— ಮನಸಿಗೆ ಕಾರಣವು.

ಲಲಿತಾ— ನಿನಗೆ ಗೊತ್ತಿದ್ದಷ್ಟೇ ನನಗೂ ಗೊತ್ತಿರುತ್ತದೆ!

ಮಂಜುಹಾಸ— ನಾನು ಆಗ ಅಲ್ಲಿದ್ದಿಲ್ಲಾ

ಲಲಿತಾ— ಆಗಿನ ಸಮಯದಲ್ಲಿ ನಾನೂ ನಿನ್ನ ಹಾಗೆಯೇ ಆಗಿದ್ದೆನು!

ಮಂಜುಹಾಸ— (ಎದ್ದನಂತೆ) ಎಲ್ಲಿಗೆಹೋಗಿದ್ದಿ? ಹರ್ಷವಾರಿ ಸಲಕ್ಕಿಲ್ಲೇನು?

ಲಲಿತಾ— ನೀನೆಲ್ಲಿಗೆ? ಕೇಳಲೊದಲಿಕ್ಕೇನು?

ಮಂಜುಹಾಸ— (ಆಲೋಚಿಸುವನಂತೆ ಮಾಡಲು.)

ಲಲಿತಾ— (ಆವನ ಹಾಗೆಯೇ ಮಾಡಲು.)

ಮಂಜುಹಾಸ— ಲಲಿತೇ! ಆ ಪ್ರಣಯಪ್ರಕೋಪದಲ್ಲಿ ಮಂಜುಹಾಸನನ್ನೂ ಲಲಿತೆಯನ್ನೂ ಯಾರು ಮಾತಾಡಿಸಬೇಕು? ಆವರ ಗುಟ್ಟವೇ ಅವರಿಗೆ ಸಾಲದಾಗಿತ್ತು! (ಖಿನ್ನನಾಗಲು.)

ಲಲಿತಾ— ಮಂಜುಹಾಸಾ, ಸತ್ಯವದೆ. ನಿನ್ನ ಮಾತು ಬಹಳೇ ಖರೇವು! (ಸಮಾಧಾನ) ಹಿಳ್ಳೇಯು! ಆದದ್ದುಆಯ್ತು! ರಾಧಿಕಾ ಕೃಷ್ಣರಿಗೇ ಜಯಜಯಕಾರವಿರಲಿ! ಅಂದರೆ ಮತ್ತೆ ನಮಗೆ ನಿಶ್ಚಯವಾಗಿ ನಮ್ಮನಮ್ಮ ಅಧಿಕಾರಗಳು ನಮಗೆ ದೊರೆಯುತ್ತವೆ! ಸದ್ಯಕ್ಕೆ ಈರ್ವರಿಗೂ ವಿಳಂಬವಾಗುತ್ತದೆ! ಪ್ರಯುಕ್ತ, ನಮ್ಮನಮ್ಮ ಮಂಗಲ ದೇಹಗಳನ್ನು ಹುಡುಕಲಿಕ್ಕೆ ಹೊರಟಿರುವ ನಮ್ಮ ಕಾರ್ಯವನ್ನು ನಿರ್ವಹಿಸೋಣಾ!

ಮಂಜುಹಾಸ— ಸತ್ಯವದೆ! ಇದರಹೊರ್ತು ಎರಡನೇ ಧೈರ್ಯವಿಲ್ಲ! ವಸಂತಪ್ರಿಯನಾದ ಕಾಮನೇ ಆವರ್ಶಿಬ್ಬರನ್ನೂ ಸಮ್ಮೇಲನ ಮಾಡಬೇಕು! ಅಂದಿಗೆ ನಮ್ಮಿಬ್ಬರದೂ ಮುಕದಾನಂದವು ಉಕ್ಕೇರಬೇಕು! ಸದ್ಯಕ್ಕೆ ನೀನು ಸೂಚಿಸಿದ ಮೇರೆಗೆ ಮಾಡುವದೇ ವಿಹಿತವು!

ಲಲಿತಾ—ಅಷ್ಟೇಸರಿ! ನನ್ನ ದುರ್ದೈವಕ್ಕೆ ಯಾರು ಯೇನು ಮಾಡ್ಯಾರು? ಹೋಗುತ್ತೇನೆ! [ಹೋಗುತ್ತಾಳೆ ಅಂದರೆ ಪರದೆಯ ಒಳಗೆ ಬರಲಿ.]

ಮಂಜುಹಾಸ— ಲಲಿತೆಯ ಸುಖವೇನ ನನಗೂ ಇರುತ್ತದೆ! [ಪರದೆಯೊಳಗೆ ಬರಲಿ.]

ವಿದೂಷಕ—(ಬಂದು) (ತಿಳಿನಗೆಯಿಂದ) ಅಹಾ! ರಸಿಕಶಿಖಾಮಣಿಗಳಿರಾ! ಶ್ರೀ ಕೃಷ್ಣನ ಸೇವಕನಾದ ಮಂಜುಹಾಸನೂ ಶ್ರೀಮದ್ ರಾಧಿಕೆಯ ದಾಸಿಯಾದ ಲಲಿತೆಯೂ ನುಡಿದ ಮಾತುಗಳಿಂದ ಕಥಾರಂಭವು ಪರಿಷ್ಕಾರವಾಗಿಯೇ ಜ್ಞಾತವಾಯಿತು! ಇದರ ಮಂಗಲವು ಅವರೀರ್ವರ* ಸಮಾಗಮದಿಂದ ಸಂಭವಿಸುತ್ತದೆ! ಅಂದಮೇಲೆ ಭಂಗಾರದ ತಗಡಿಗೂ ನೀರಲಹರಳಿಗೂ ಆದಕಲಹದ ಯೋಗ್ಯತೆಯು ಅಯಸಪ್ಪೋ ಮೋಣಪ್ಪೋ ನೀವೇ ತಿಳಿದು ಹಿಗ್ಗಿ ನನ್ನ ಅಭಿಪ್ರಾಯದಂತೆ ಈರ್ವರೂ ನನಗೆ ಪಂಡಿತರೂ ಸಂಪನ್ನರೂ ಆಗಿಯೇ ಕಾಣಿಸುತ್ತಾರೆ! ಯಾಕಂದರೆ— ಸುರಗರುಡ ಗಂಧರ್ವಾರ್ಣ್ಯದಲ್ಲಿಯ ನ್ಯಾಯವನ್ನು ತಾನು ಪಂಚನಾಗಿ ಹೋಗುವದೂ ಹರಿಯುವದೂ ಈ ಶಾಪತಾರಿಗೆ ತಕ್ಕದ್ದೇ ಅಂದರೂ ಹಿಂದೇ ಮಾತು, ರಾಧಿಕೆಯೊಡನೆ ಸರ್ವದಾಸ್ಮರಿಕಲಹದ ಕುತೂಹಲದಲ್ಲಿಯೇ ಇರುವಗುಂದರೂ ಹಿಂದೇ ಮಾತು! (ಎಂದು ಓಡಿಹೋಗುತ್ತಾನೆ ಒಳಗೆ).

೧ನೇ ಪ್ರವೇಶ ಸಮಾಪ್ತವು.

ಶ್ರೀ ಶಾಂತೇಶಾರ್ಪಣಮಸ್ತು.

ಬಂಕಾಪುರ ತಾ. ೭।೧೧।೮೨ ಬಾಳಾಚಾರ್ಯ ಸಕ್ಕರಿ ಶಾಂತಕವಿ.

ಮುಂದಕ್ಕೆ ಸಾಗುವದು.

*ಅವರೀರ್ವರ ಅಂದರೆ ಶ್ರೀ ಕೃಷ್ಣ ರಾಧಿಕೆಯು.

Domestic Life.

ಸಂಸಾರವು.

ಸಂಸಾರವೆಂಬದು ಧರ್ಮಕ್ಕೆ ಕೇವಲ ಕಂಟಕವಾದದ್ದು ಆದ
ದರೆ ಸಂಸಾರದಲ್ಲಿದ್ದು ಧರ್ಮಾಚರಣೆ ಹಾಗೂ ಈಶ್ವರ
ಪ್ರಾಪ್ತಿ ಮಾಡಿಕೊಳ್ಳುವದಕ್ಕೆ ಸರ್ವಥಾ ಅನುಕೂಲವಾಗುವದಿ
ಲ್ಲ. ಯಾವವೇಳೇ ನಾವು ಸಂಸಾರಾಂಧಕಾಲದಲ್ಲಿ ಮಗ್ನ
ರಾಗಿರುತ್ತೇವೋ, ಆಗ್ಗೆ ಈಶ್ವರಭಕ್ತಿ ಮಾರ್ಗವನ್ನು ನಿಜವಾಗಿ
ಮರೆತು ಬಿಟ್ಟುಬಿಡುತ್ತೇವೆ. ನಾವು ಸಂಸಾರ ಸುಖವನ್ನು
ಭೋಗಿಸುವದಕ್ಕೆ ಯಾವಾಗ್ಯೆ ತೊಡಗಿರುತ್ತೇವೋ, ಆ ಸಮ
ಯ ಈಶ್ವರ ಧ್ಯಾನಮಾಡುವ ಇಚ್ಛೆ ಸಹ ನಮಗೆ ಆಗವಲ್ಲದು.
ವಿಷಯೋಪ ಭೋಗವೆಂಬದು ಬಹು ರುಚಿಕರವಾಗಿ ಕಂಡು,
ಈಶ್ವರ ಭಕ್ತಿಯುಂದರೇನೋ, ಎಂಬ ಭ್ರಾಂತಿಯುಂಟಾಗಿ, ಆ
ಕಡೆಗೆ ಮನಸ್ಸು ಸಹ ಶೇರುವದಿಲ್ಲ. ಐಹಿಕವಿಷಯದಲ್ಲಿ ಆಸ
ಕ್ತರಾಗಿ, ನಾನಾಪ್ರಕಾರವಾದ ಸಂಸಾರ ವ್ಯವಹಾರಗಳು
ವ್ಯಾಪಿಸುತ್ತಿರುವದರಿಂದ, ಈಶ್ವರಧ್ಯಾನ ಮಾಡಿ ಆತನ ವಿಷ
ಯದಲ್ಲಿ ವಿಶ್ವಾಸವನಿಟ್ಟು ಪರಮೇಶ್ವರ ಭಕ್ತನೆನಿಸಿಕೊಂಡು
ಮುಕ್ತಿ ಪಡಿಯಲಕ್ಕೆ ಏನೇನೂ ಅನುಕೂಲವಾಗುವದಿಲ್ಲವು. ಹಾ
ಗು ಆವನ ಉಪಾಸನಾ ಮಾಡಲಿಕ್ಕೆ ಮನಸ್ಸು ಒಡಂಬಡುವದಿ
ಲ್ಲ. ಸಂಸಾರ ಮಾಡಲಿಕ್ಕೆ ಆರಂಭಿಸಿದ ಕೂಡಲೆ ಸ್ತ್ರೀ, ಪುರು
ಷಗಳ ಮೋಹಕ್ಕೂ, ಅವರ ಪಾಲನೆ ಪೋಷಣೆಯ ವಿಷ
ಯಕ್ಕೂ, ಆಪ್ತಇಷ್ಟ ವರ್ಗತೃಪ್ತಿಗೊಳಿಸಿ ಅವರಿಂದ ಬಹು
ಮಾನ ಪಡೆಯು ಅಭಿಲಾಷೆಗೂ, ನಿರಂತರ ಮನಸು ತೊಡಗಿರು
ವದರಿಂದ, ಈಶ್ವರ ಪ್ರಾಪ್ತಿ ವಿಷಯಗಾಗಿ ಬಲಕೂಲ ನಮ್ಮ
ಚಿತ್ತದಲ್ಲಿ ಪ್ರೇಮೋತ್ಪತ್ತಿ ಯಾಗುವದಿಲ್ಲ. ಸಂಸಾರದ ಕೆಲ

ಸಗಳಲ್ಲೀ ನಾವು ಬಹಳ ವೇಳೆಸಿಕ್ಕಿ ಬದ್ಧರಾಗಿರುವ ಕಾರಣ ಈಶ್ವರ ಧ್ಯಾನ ಮಾಡಲಿಕ್ಕೆ ಸಂಧಿ ಸ್ವಲ್ಪವಾದರೂ ಸಹ ದೊರಕೊಳ್ಳುವದಿಲ್ಲ. ದ್ರವ್ಯ, ಸ್ತ್ರೀ, ಪುತ್ರ ಪರಿವಾರ, ಮಾನ ಪ್ರತಿಷ್ಠೆ ಇವುಗಳ ಲಾಭದ ವಿಷಯದಲ್ಲಿ ಚಿತ್ತವು ತತ್ಪರತೆ ಹೊಂದಿರುವ ಸಂಬಂಧ, ಅದು ಈಶ್ವರ ಭಕ್ತಿಸಾಧನವನ್ನಿಯುವದ ಅಶಕ್ತಿಯುಳ್ಳದ್ದಾಗಿರುತ್ತದೆ. ಆದಕಾರಣ ಸಂಸಾರಿಯಾದವನು ನಿಜವಾಗಿ ಸ್ವರ್ಗಪದವನ್ನೈದಲರಿಯನು. ಸಂಸಾರ ಸಂಬಂಧವಾದ ಧನ ಮಾನ, ಸ್ತ್ರೀ, ಪುತ್ರಾದಿಗಳ ಸಂಸರ್ಗದಿಂದ ಮನಸ್ಸು ಅಪವಿತ್ರವಾಗಿರುತ್ತದೆ. ಅದು ಈಶ್ವರನಲ್ಲಿ ಐಕ್ಯತೆ ಹೊಂದುವದಕ್ಕೆ ಪರಿಶುದ್ಧವೆನಿಸಲಾರದು. ಸಂಸಾರವು ಕೇವಲ ನರಕಕ್ಕೆ ಹೋಗುವ ಮುಖ್ಯ ಮಾರ್ಗವಾಗಿದೆ. ಈ ಮಾರ್ಗದಿಂದ ಯಾವನು ಕ್ರಮಿಸುವನೋ ಆ ಮನುಷ್ಯನು ಸ್ವರ್ಗಕ್ಕೆ ಸೇರಲರಿಯನು. ಈ ಪ್ರಕಾರದ ಉದ್ಗಾರವನ್ನು ನಾವು ಅನೇಕ ವೇಳೆ ಕೇಳುತ್ತೇವೆ. ಹಾಗು ನಮ್ಮ ಮುಖದಿಂದ ಸಹ ಆಗಾಗ್ಯೆ ಎಷ್ಟೋಸಾರೆ ಅನ್ನುತ್ತಿರುತ್ತೇವೆ. ಆದರೆ ಸಂಸಾರವೆಂಬದು ಮೋಕ್ಷಪಥಕ್ಕೆ ಖರೋಖರ ವಿರುದ್ಧವಾಗುಂಟೋ ಹ್ಯಾಗೆ? ಸಂಸಾರ ಮಾಡುವಂಥಾ ಮನುಷ್ಯನು ನಿಶ್ಚಯವಾಗಿಯೂ, ಪಾಪಿ, ವ, ಅಧರ್ಮಿಕನಾಗುತ್ತಾನೋ ಹ್ಯಾಗೆ? ಸಂಸಾರ ಈ ರೀತಿ ಅಧರ್ಮ ಕೃತ್ಯ, ಕ್ಷುಲ್ಲಕ ಪದಾರ್ಥವಿದ್ದಮೇಲೆ ನಾವು ಅದಕ್ಕೆ ಅಗದೀ ತುಚ್ಛಕರವಾದದ್ದೆಂದು ತಿಳಿಯಬೇಕು. ಸಂಸಾರವು ಈ ಪ್ರಕಾರ ನಿಜವಾಗಿ ಪಾಪಸ್ಥಾನವೇ ಇದ್ದರೆ, ವಿಶ್ವಕುಟುಂಬಿಯಾದ ದೇವರು ನಮ್ಮನ್ನು ಎಂದೂ ಈ ಸಂಸಾರದಲ್ಲಿ ಜನ್ಮಿಸುತ್ತಿದ್ದಿಲ್ಲ. ಇದರಮೇಲೆ ನೀವೇ ವಿಚಾರ ಮಾಡುವಿರಿ ಅಂದರೆ ಮೇಲಿನ ಉದ್ಗಾರವು ಅಜ್ಞಾನಮೂಲಕವಾದದ್ದೆಂದು

ನಿಮಗೆ ಪ್ರಾಣಾರ್ಪಣಾಭವಕ್ಕೆ ಬಂದೀತು, ಆದಾಗ್ಯೂ ಸರ್ವ ಪ್ರಾಚೀನ ಗ್ರಂಥಗಳು, ವ, ಆಬಾಲವೃದ್ಧ ಮುಂತಾದವರು ಹೇಳುವದೇನಂದರೆ—ಸಂಸಾರ ಪರಿತ್ಯಾಗ ಮಾಡದ ಹೊರತು, ಧರ್ಮಿಷ್ಠ ನೆನಿಸಿ ಮೋಕ್ಷ ಪಡೆಯಲಿಕ್ಕೆ ಆಗುವದಿಲ್ಲ. ಧನ, ಮಾನಾದಿ ಸರ್ವಸ್ವವನ್ನು ತ್ಯಜಿಸಿಬಿಟ್ಟು ಸ್ತ್ರೀ, ಪುತ್ರರುಗಳ ಮುಖವನ್ನು ಯಾವಾಗಲೂ ಅವಲೋಕನ ಮಾಡದೆ, ಅವರ ಮೋಹಪಾಶವೆಂಬದನ್ನು ಕೊರದು, ವಾನಪ್ರಸ್ಥ, ಬ್ರಹ್ಮಚರ್ಯ ಸಂನ್ಯಾಸ ಮುಂತಾದ ಆಶ್ರಮಗಳನ್ನು ಧಾರಣಮಾಡಿ ಶರೀರ ವನ್ನು ಬಳಲಿಸಿ ಯೋಗಸಾಧನವನ್ನು ಮಾಡಿದಲ್ಲಿ ಮಾತ್ರ ಈಶ್ವರನನ್ನು ನೋಡಲಿಕ್ಕೆ ಶಕ್ತನಾದಾನು. ಆತ್ಮವು ತಾಯಿ ತಂದೆ, ಸತಿ ಸುತರೆಂಬ ಪಂಜರದಲ್ಲಿ ಸಿಕ್ಕಿಕೊಂಡಿರುವಮಟ್ಟಿಗೂ, ಅದು ಹೊರಗೆ ಹೋಗುವದಕ್ಕೆ ಶಕ್ತಿಯುಳ್ಳದ್ದಾಗಲಾರದು. ಈ ಪಂಜರವನ್ನು ಪೂರಾ ಮುರದಲ್ಲಿಯೂ, ಸಂಸಾರಪಾಶವನ್ನು ಸಮೂಳ ನಾಶ ಮಾಡಿದಲ್ಲಿ ಮಾತ್ರ ಆತ್ಮವು ಸ್ವತಂತ್ರವಾಗಿ ಈಶ್ವರಧ್ಯಾನ ಮಾಡುವದಕ್ಕೆ ಶಕ್ತಿಯುಳ್ಳದ್ದಾದೀತು. ಹಾಗೂ ಅದಕ್ಕೆ ಯೋಗಸಾಧನ ಮಾಡುವರೆ ಮೋಕಳಿಯುಂಟಾದೀತು. ಈಶ್ವರ ದರ್ಶನ ಸಂಪಾದಿಸುವಲ್ಲಿ ಪಾತ್ರವಾದೀತು, ಆದರೂ ಈ ಮಾತು ನಹ ಯಥಾರ್ಥವಾದದ್ದೆನ್ನಕೂಡದು. ಪರಂತು ನಮ್ಮ ಮತಕ್ಕೆ ಹೀಗೆ ತಿಳಿಯುತ್ತದಲ್ಲಾ—ಸಂಸಾರವು ಶತ್ರುವಾದದ್ದೂ, ದುರ್ಗತಿ ಸಾಧನವಾದದ್ದೂ, ಅಪವಿತ್ರವಾದದ್ದೂ, ಎಂದು ಸರ್ವಥಾ ಅನ್ನಕೂಡದು. ಅದು ಕೇವಲ ನಮಗೆ ಮಿತ್ರತ್ವವುಳ್ಳದ್ದೂ ಜ್ಞಾನಚಕ್ಷುವಾದದ್ದೂ ಮೋಕ್ಷಮಾರ್ಗವಾದದ್ದೂ, ಎಂದು ನಿಜವಾಗಿ ತಿಳಿಯಬೇಕು. ಹ್ಯಾಗಂದರೆ ಸಂಸಾರವಿದ್ದುದರಿಂದಲೇ ನಮಗೆ ಧರ್ಮಸಂಬಂಧವಾದ ಸತ್ಯದ

ಅನುಭವಗಳುಂಟಾಗುತ್ತವೆ. ಮತ್ತು ಅದರಿಂದಲೇ ಜನರು ಧಾರ್ಮಿಕರಾಗುತ್ತಾರೆ. ಸಂಸಾರ ಭೂಮಿಯೆಂಬುದು ಪರಮ ಪವಿತ್ರ ತೀರ್ಥಸ್ಥಾನವೆಂಬುವದಕ್ಕೆ ಏನೂ ಸಂದೇಹವಿಲ್ಲ. ವಿಗ್ರಹಾರಾಧಕರಾದ ಹಿಂದೂಜನರಿಗೆ ಹ್ಯಾಗೆ ಕಾಶಿ ವೃಂದಾವನ ಶ್ರೇಷ್ಠಸ್ಥಾನವೋ, ಮುಸಲಮಾನರಿಗೆ ಮಕ್ಕಾ ಮದೀನ ಹ್ಯಾಗೆ ಪವಿತ್ರ ಯಾತ್ರಾಸ್ಥಳವೋ, ಹಾಗೆಯೇ ನಮಗೆ ನಮ್ಮ ಸಂಸಾರವೆಂಬುವದೇ ಅಧಿಕೋತ್ಕೃಷ್ಟಕರ ಪವಿತ್ರ ತೀರ್ಥಸ್ಥಾನವಾಗಿದೆ. ಇದೇ ಸಂಸಾರ ಶುದ್ಧ ತೀರ್ಥಸ್ಥಾನದಲ್ಲಿ ವಾಸ್ತವ್ಯ ಮಾಡಿಕೊಂಡು, ಸರ್ವೇಶ್ವರನ ಚಿಂತನಾ, ಭಜನಾ, ವ ಅವನಲ್ಲಿ ಸಖಿತ್ವ ಪ್ರೇಮಭಾವ ಇವುಗಳ ವೃದ್ಧಿಂಗತ ಮಾಡಿಕೊಳ್ಳಲಿಕ್ಕೆ ಸಹಜ ರೀತಿಯಿಂದ ಬರುವಹಾಗುಂಟೋ, ಇದನ್ನು ಕೇಳಿ ವಾಚಕರಿಗೆ ಕಿಂಚಿತ್ ಆಶ್ಚರ್ಯಕರವಾಗಿ ಕಂಡೀತು. ಆದರೆ ಇದರಲ್ಲಿ ಅಮೌಲ್ಯ ಸತ್ವವುಂಟು. ಈಶ್ವರ ಸಂಪ್ರೀತಿಯನ್ನು ಪಡೆಯಬೇಕಾದರೆ ಮೂಲತಃ ಧರ್ಮವು ಮುಖ್ಯವಾದದ್ದು. ಅದೇಪ್ರಕಾರ ನಾವು ಈಶ್ವರನಿಗೆ ಏನನ್ನುತ್ತೇವೆ. ಮಾತಾ ಅಂತೇವೆ, ಪಿತಾ ಅನ್ನುತ್ತೇವೆ, ಬಂಧು ಅನ್ನುತ್ತೇವೆ, ತಸ್ಮಾತ್ ಈ ಬಂಧುವಾಚಕ ಶಬ್ದಗಳನ್ನು ನಾವು ಯಾವ ಪುಸ್ತಕಗಳಿಂದ ಕಲಿತುಕೊಂಡಿವಿ? ಜರ ಸಂಸಾರವು ಇಲ್ಲೇ ಆಗಿದ್ದರೆ ನಮಗೆ ಈ ಪ್ರಕಾರದ ಬಂಧುಜ್ಞಾನವು ಯಾವಲ್ಲಿಂದಲೂ ದೊರಕುತ್ತಿದ್ದಿಲ್ಲ. ಸಂಸಾರ ವಿಷಯದಲ್ಲಿ ಪ್ರಥಮ ಸಂಗ ಹುಡುಗರವ, ತಾಯಿಯ ಸಂಬಂಧವಾಗಿ ವಿಚಾರಮಾಡುವ ತಾಯಿಯು ಎಂದೂ ಅರಣ್ಯದಲ್ಲಿರುವದಿಲ್ಲ. ನಿರಂತರವು ಮನೆಯಲ್ಲಿಯೇ ವಾಸವಾಗಿರುತ್ತಾಳೆ. ಸಂಸಾರ ಪರಿತ್ಯಾಗ ಮಾಡಿದ ಯೋಗಿಯು ಅರಣ್ಯದೊಳಗೆ ಅಥವಾ ಹಿಮಾಲಯದ ತಾಂಟಾವ

ಜನರು ಜಹಾಂಗೀರ ಬಾದಶಹನ ಪ್ರೀತಿಯು ಕಡಿಮೆಯಾದ ಕಾರಣ ದಿಲ್ಲಿಯನ್ನು ಬಿಟ್ಟು ಬಂದಿದ್ದನೆಂದು ವರ್ಣಿಸುತ್ತಾರೆ. ಇನ್ನು ೨ನೇ ಆಧಾರದಿಂದ ತಿಳಿಯಬರುವದೇನೆಂದರೆ— ದಿಲ್ಲಿಯ ದರ್ಬಾರದ ಅಧಿಕಾರದಲ್ಲಿ ಕಲಹ ಉತ್ಪನ್ನವಾದ ಕಾರಣ ಬಹ್ಲೋಲಖಾನನು ದಕ್ಷಿಣದ ಕಡೆಗೆ ತೆರಳಿ ಬಂದನು. ಆದರೆ ವಂಶಾವಳಿಯ ಮೇಲಿನಿಂದ ನವಾಬ ಬಹ್ಲೋಲಖಾನನು ದಿಲ್ಲಿಯನ್ನು ಬಿಟ್ಟು ದಕ್ಷಿಣದ ಕಡೆಗೆ ಬಂದು ವಿಜಾಪುರದ ೨ನೇ ಬಾದಶಹನಾದ " ಅಲ್ಲೀಆದಿಲಶಾಹಾ " ಎಂಬುವನ ಹತ್ತಿರ ಚಾಕರಿಗೆ ನಿಂತುಕೊಂಡು ಅವನಿಂದ ನಂದೇರ ಬಸವಂತವೆಂಬ ಇನಾಮು ಗ್ರಾಮವನ್ನು ಸಂಪಾದಿಸಿದನೆಂದು ಮಾತ್ರ ತಿಳಿಯುಬರುತ್ತದೆ.

ಮತ್ತೊಂದು ೨ನೇ ಸಂಗತಿಯಿಂದ ಕಂಡುಬರುವದೇನೆಂದರೆ—ದಕ್ಷಿಣದ ಮೊಗಲರ ಸುಭೇದಾರನಾದ ಖಾನಜಹಾನ ಲೋದಿಯ ಸಂಗಡ ಬಹ್ಲೋಲಖಾನನು ದಕ್ಷಿಣಕ್ಕೆ ಬಂದಿದ್ದನು. ಮುಂದೆ ಶಹಾಜಹಾನನು ದಿಲ್ಲಿಯ ಪಟ್ಟವೇರಿದಾಗ ಈ ಖಾನಜಹಾನ ಲೋದಿಯು ದೊಡ್ಡ ಬಂಡಾಯವನ್ನು ಮಾಡಿದನು; ಆಕಾರಣ ಬಾದಶಹನು ಲೋದಿಯು ಕೂಡ ದ್ವೇಷ ಮಾಡಹತ್ತಿ ಆದಷ್ಟು ಅವನಿಗೆ ಕೇಡು ಬಯಸಹತ್ತಿದನು. ತರುವಾಯ ಲೋದಿಯು ಅಹಮ್ಮದನಗರದ ನಿಜಾಮುಶಾಹನ ಆಶ್ರಯದಲ್ಲಿ ಕೆಲವು ದಿನಗಳನ್ನು ಕಳೆದನು; ಆದರೂ ಕಡೆಗೆ ಇವನು ಬಾದಶಹನ ದ್ವೇಷಕ್ಕೆ ಬಲಿಬಿದ್ದನು. ಆವಾಗ್ಗೆ ಬಹ್ಲೋಲಖಾನನೊಬ್ಬನೇ ನಿಜಾಮುಶಾಹನ ಹತ್ತಿರ ಚಾಕರಿಗೆ ನಿಂತುಕೊಂಡನು. ಮುಂದೆ ಮಲಿಕಂಬರನ ಮಗನಾದ ಫತ್ತೇಖಾನನೆಂಬುವನು ಇವನ ಧೊರೆಯಾದ ನಿಜಾಮುಶಾಹನನ್ನು ಕೊಂದುಹಾಕಿಸಿದ ತರುವಾಯ ಬಹ್ಲೋಲಖಾನನು ಅಲ್ಲಿದ್ದ ತನ್ನ ಚಾಕರಿಯನ್ನು ಬಿಟ್ಟು ವಿಜಾ

ಪುರದ ಬಾದಶಹ ಮಹಮ್ಮದ ಅದಿಲಶಾಹನ ಹತ್ತರ ಹೋಗಿ ಅವನ ಬಹು ಆದರಸತ್ಕಾರದಿಂದ ಅಲ್ಲಿದ್ದುಕೊಂಡನು.

ನವಾಬ ಬಹ್ಲೋಲಖಾನನ ಮಗನಾದ ಅಬ್ದುಲ್‌ರಹಿಮ ಬಹ್ಲೋಲಖಾನನು ಅಲ್ಲೀ ಅದಿಲಶಾಹನ ಕಾಲದಲ್ಲಿ ಈ ವಿಜಾಪುರದವರ ಸ್ವಾಧೀನದಲ್ಲಿದ್ದನು. ಆಗ್ಗೆ ಆವನು ಮುಧೋಳಕರಂದ ಬಾಜೀಘೋರಪಡೆ ಯೆಂಬುವನಕೂಡ ಯಾವದಾದರೂ ದರ್ಬಾರದ ಕೆಲಸಕ್ಕೋಸ್ಕರ ಹೋಗುತ್ತಿದ್ದನು. ಮತ್ತು ಶಿವಾಜಿಯ ಬಲವನ್ನು ತಗ್ಗಿಸುವದಕ್ಕಾಗಿ ಖವಾಸಖಾನನೆಂಬ ಸರದಾರನ ಕೂಡಲಾದರೂ ಕಳುಹಿಸಲ್ಪಟ್ಟಿದ್ದನು. ಆವನ ತರುವಾಯದವನಾದ ಅಬ್ದುಲಕರಿಮಖಾನ (ಅಬ್ದುಲಕರೀಮ ಬಹ್ಲೋಲಖಾನನೆಂತಲೂ ಅನ್ನುವರು.) ವಿಜಾಪುರದವರ ಕಾಲಕ್ಕೆ ದೊಡ್ಡ ಯೋಗ್ಯತೆಗೆ ಬಂದು ಒಬ್ಬ ಮುಖ್ಯ ಸರದಾರನಾದನು. ಆವನು ಆರುವ ಸ್ಥಳವು ವಿಜಾಪುರಶೀಮೆಯ ಹೊರಭಾಗದಲ್ಲಿತ್ತು; ಆದಕ್ಕೆ ಬಹಿಲೋಲಪುರವೆಂದು ಅನ್ನುತ್ತಿದ್ದರು. ಅದನ್ನು ಈಗ್ಗೂ ಜನರು ತೋರಿಸುತ್ತಾರೆ. ಮತ್ತು ಅಲ್ಲಿ ನೋಡಿದರೆ ಮೂಲ ಕೋಟೆಯ ಕಿಡಕಿಗಳೂ, ಗೋಡೆಗಳೂ ದೃಷ್ಟಿಗೆ ಗೋಚರವಾಗುವಂತೆ ಉಂಟು. ಈ ಕರೀಮಖಾನನು ಆದವಾನಿಯ (ಹಬಸೀಜನರ ದೇಶ) ಜಾಹಾಗೀರದಾರನಾದ ಮಸೂದಖಾನನೆಂಬುವನ ಮಗಳನ್ನು ಮದುವೆಯಾಗಿದ್ದನು. ಆದರಿಂದ ಆವನಿಗೆ ಹಬಸೀಜನರ ಸಹಾಯವು ಸ್ವಲ್ಪ ಇತ್ತು. ಮುಂದೆ ಸನ್ನ ೧೬೭೨ ನೇ ಇಸವಿಯಲ್ಲಿ ಅಲ್ಲೀ ಅದಿಲಶಾಹಾ ಬಾದಶಹನು ಮರಣ ಹೊಂದಿದನು. ಆಮೇಲೆ ದೌಲತ ಖವಾಸಖಾನನೆಂಬುವನು ವಿಜಾಪುರದ ಮುಖ್ಯ ಕಾರಭಾರಿಯಾದನು. ಹಾಗು ಆವನು ಕರೀಮಖಾನನಿಗೆ ಕರ್ನಾಟಕ, ಸ್ವಾದಿ ಮತ್ತು ಕೊಂಕಣ

ಈ ಪ್ರಾಂತಗಳ ಅಧಿಕಾರವನ್ನು ಕೊಟ್ಟನು. ಆದರೆ ಇವನು ಈ ಪ್ರಾಂತಗಳನ್ನು ತನಗೋಸ್ಕರ ಮಾಡಿಕೊಳ್ಳುವದಕ್ಕಿಂತ ಪೂರ್ವದಲ್ಲಿಯೇ ವಿಜಾಪುರದ ದರ್ಬಾರದಲ್ಲಿ ದ್ವೇಷ ಬಿದ್ದು ಕಲಹ ಹುಟ್ಟಲು ಇದೇ ಸಮಯವೆಂದರಿತು ಶಿವಾಜಿಯು, ಕೊಂಕಣ ಪ್ರಾಂತ ಮತ್ತು ಸಹ್ಯಾದ್ರಿಯಿಂದ ಪನ್ಹಾಳಾ ಕೊಲ್ಹಾಪುರ ಸಾತಾರೆಗಳ ವರೆಗೆ ಇದ್ದ ಎಲ್ಲಾ ಘಟ್ಟ ಪ್ರದೇಶಗಳನ್ನು ತನ್ನ ಹಸ್ತಗತ ಮಾಡಿಕೊಂಡನು; ಆದರೆ ಕರೀಮಖಾನನು ಶಿವಾಜಿಗೆ ಅಡ್ಡಿಯನ್ನುಂಟು ಮಾಡಿದಾಗ್ಯೂ ಅವನ ಶ್ರಮವೆಲ್ಲಾ ನಿಷ್ಫಲವಾಗಿ ಕಡೆಗೆ ಶಿವಾಜಿಯ ಹತ್ತಿರ ಎರಡು ವೇಳೆ ಪರಾಭವವನ್ನು ಮಾತ್ರ ಹೊಂದಿದನು. ಆಮೇಲೆ ಶಿವಾಜಿಯು ಸಾಧಿಸಿದ ಪ್ರದೇಶಗಳನ್ನು ಕೈವಶ ಮಾಡಿಕೊಳ್ಳುವದನ್ನು ಬಿಟ್ಟು ಬಹು ನಿರಾಶೆಯಾಗಿ ವಿಜಾಪುರಕ್ಕೆ ಬಂದನು. ಮೂರನೇ ವರುಷದಲ್ಲಿ ವಿಜಾಪುರದವರಿಗೂ, ಮೊಗಲರಿಗೂ, ಒಂದು ಒಡಂಬಡಿಕೆ ಯಾಯಿತು. ಆದರೆ ಆ ಒಡಂಬಡಿಕೆಯನ್ನು ದೌಲತ ಖವಾಸಖಾನನು, ತನ್ನ ಜನರ ಸಮ್ಮತಿಯಿಲ್ಲದೆ ಮಾಡಿದ್ದಕಾರಣ ವಿಜಾಪುರದ ಜನರು ಇವನಿಗೆ ಬಹು ಉಪದ್ರವ ಕೊಡಹತ್ತಿ ಕಡೆಗೆ ಕೊಂದು ಹಾಕಿದರು. ಈ ತರುವಾಯ ಕರೀಮಖಾನನು ಖವಾಸಖಾನನ ರಾಜಕಾರಭಾರವನ್ನು ನೋಡಹತ್ತಿದನು. ಇವನು ಈ ಕೆಲಸವನ್ನು ತನ್ನ ಅಂತ್ಯದವರೆಗೆ ಅಂದರೆ ಸನ ೧೬೭೭ ನೇ ಇಸವಿಯವರೆಗೆ ನೋಡಿದನು. ಇವನ ಕಾಲದಲ್ಲಿ ವಿಜಾಪುರವನ್ನು ತೆಗೆದುಕೊಳ್ಳುವದರಾಶೆಯಿಂದ ಮೊಗಲರ ದಂಡು ಬಂದಿತ್ತು; ಆದರೆ ಕರೀಮಖಾನನು ಆ ಮೊಗಲರನ್ನು ಅಪಜಯ ಪಡಿಸಿ ಹಿಂದಟ್ಟಿದನು. ತರುವಾಯ ಅವರು ಇವನಕೂಡ ಒಂದು ಒಪ್ಪಂದವನ್ನು ಮಾಡಿದರು.

ಈ ಕರೀಮಖಾನನಿಗೆ ಅಬ್ದುಲ ರಹ್ಮಾನಖಾನನೆಂಬ ಒಬ್ಬನೇ ಮಗನಿದ್ದನು. ಕರೀಮಖಾನನ ಮರಣದ ನಂತರ ಇವನ ಅಳಿಯನಾದ ಯುಸಾಪ್ರದಖಾನನು ಕಾರಭಾರವನ್ನು ಮಾಡುತ್ತಿದ್ದನು. ಮುಂದೆ ಸಂ. ೧೬೮೬ ರಲ್ಲಿ ಔರಂಗಜೇಬಬಾದಶಹನು, ವಿಜಾಪುರಕ್ಕೆ ದಂಡೆತ್ತಿ ಬಂದು ಮುತ್ತಲು ಅಬ್ದುಲ ರಹ್ಮಾನಖಾನನು ಈ ಮೊಗಲಬಾದಶಹನ ಹತ್ತರ ಸೇವೆಯ ಕೆಲಸವನ್ನು ಒಪ್ಪಿಕೊಂಡನು. ಆಗ್ಗೆ ಔರಂಗಜೇಬಬಾದಶಹನು ಇವನನ್ನು ಕೌನ್ಸಿಲದಾರರಲ್ಲಿ ನೇಮಿಸಿ “ದಲೇಲಖಾನ ಬಹಾದ್ದೂರ ದಲೇರಜಂಗ” ಎಂಬ ಹೊಸ ಪದವಿಯನ್ನು ಕೊಟ್ಟನು.

ಸವನೂರ ನಬಾಬ ಘೋರೆಯು ಹೇಳುವದೇನೆಂದರೆ— ಅಬ್ದುಲ ರಹ್ಮಾನಖಾನನು ಬಾದಶಹನ ಮಗಳನ್ನು ಮದುವೆ ಮಾಡಿಕೊಂಡಿದ್ದನು. ಮತ್ತು ಆ ಕಾಲಕ್ಕೆ ಆಜಮನಗರ (ಮೊದಲು ಬೆಳಗಾವಿಯನ್ನುತ್ತಿದ್ದರು) ಬಂಕಾಪುರ ಇದಲ್ಲದ ತೋರಗಲ್ಲದ ೨೨ ಮಹಾಲುಗಳು ಎಂಬ ಇಷ್ಟು ಜಾಹಾಗೀರಗಳು ದೊರೆತವು. ಇವುಗಳ ಉತ್ಪನ್ನವು ೪೦೦೦೦೦೦ ರೂಪಾಯಿ ಇತ್ತು.

ಧಾರವಾಡ ಕನ್ನಡ ೪ನೇ ನಂ ಸ್ಕೂ. } ತಾ. ೨೨।೧।೯೩.
ಮಾ. ಶಿವಾನಂದಾರ್ಯ ವಾಜಿಪೆ. } (ಮುಂದಕ್ಕೆ ಸಾಗುವದು.)

Correspondence.
ಪತ್ರವ್ಯವಹಾರವು.
ದೇಶಭಾಷೆಯ ಮಧ್ಯಮ ಕನಿಷ್ಠ ಶ್ರೇಣಿಯ ಸಾಲಿಗಳ ಸಾದಿಲವಾರವು.

ಶಾಲಾಗೃಹಗಳನ್ನು ಸ್ವಚ್ಛ ಇಡುವದರ (ಉದಾ. ಗುಡಿಸುವ ಸಾರಿಸುವದರ) ದೆಸೆಯಿಂದಲೂ, ಕಾಗದ ತಿಕೀಟು ಮುಂತಾದ ಸಾಮಾನುಗಳ ದೆಸೆಯಿಂದಲೂ, ವೆಚ್ಚಕ್ಕಾಗಿ ಸರಕಾರದಿಂದ ಕೊಡಲ್ಪಡು

ವ ಹಣಕ್ಕೆ ಸಾದಿಲವಾರ ವೆಂಬ ಹೆಸರು. ಈ ಸಾದಿಲವಾರವು ಅತಿ ಸಾಧಾರಣವಾದ ಕನಿಷ್ಟ ಪ್ರತಿ ಶಾಲೆಗೆ ಎಷ್ಟು ಬೇಕಾಗುತ್ತ ದೆಂಬ ಬಗ್ಗೆ ವಿಚಾರಮಾಡಿದರೆ ಸ್ವಚ್ಛತೆಯ ಬಗ್ಗೆ (ದಿನದಿವಸ ಎರ ಡಾವರ್ತಿ ಉಡುಗುವದೂ, ವಾರಕ್ಕೊಮ್ಮೆ ಸಾರಿಸುವದೂ) ದರ ದಿವಸಕ್ಕೆ ಇಷ್ಟು ಯಂತೆ ೧ ತಿಂಗಳಿಗೆ ೮ ಆಣೆ ಬೇಕಾಗುವದು. ಮು ತ್ತು ಕಲ್ಯಾಣದಾಯಕವಾದದ್ದೂ, ದರ್ಶನಮಾತ್ರಕ್ಕೆ ಅಲ್ಹಾದ ಕೊಡುವಂಥಾದ್ದೂ, ಆದ ಶಾಲಾಪತ್ರಿಕೆಗೆ ೨ ಆಣೆ ಕೊಡಬೇಕಾ ಗುವದು ಮತ್ತು, ತಿಂಗಳ ಹಿಂದಕ್ಕೆ ಟಿಕೆಟುಗಳು ಸರಾಸರಿಯಾ ಗಿ ೨ ಆಣೆಯು ಬೇಕಾಗುವವು, ಇದಲ್ಲದೆ ಕಾಗದ, ಮಸಿ, ಉಸುಬು, ಖಡು, ಅಂಟು ಮೊದಲಾದವುಗಳಿಗಾಗಿ ೪ ಆಣೆ ಸಹ ಬೇಕಾಗುವವು ಅಂತೂ ಎಂಥ ತೀರಸಣ್ಣ ಶಾಲೆಗಾದರೂ, ೧ ರೂಪಾಯಿ ಖರ್ಚು ಹಿಡಿಯುವದೆಂದು ಕಂಡುಬರುವದು. ಆದ ರೆ ನಮ್ಮ ಉದಾರ ಧೊರೆಗಳು ಕನಿಷ್ಠ ಹಾಗು ಮಧ್ಯಮಪ್ರತಿ ಶಾ ಲೆಗಳಿಗೂ ಸುದ್ಧಾ ಉದಾರಹಸ್ತದಿಂದ ೧೨ ಅಣೆಗಳನ್ನು ಕೊಡು ವ ಗೊತ್ತುಪಡಿಸಿ ವಜ್ರಲೇಪಮಾಡಿ ಬಿಟ್ಟಿದ್ದಾರೆ. ಇಷ್ಟರಲ್ಲಿ ನ ಮ್ಮ ಬಡಮಾಸ್ತರರು ಹ್ಯಾಗೆ ಖರ್ಚು ಮಾಡಿಕೊಳ್ಳುತ್ತಿದ್ದಾರೆಂಬದ ನ್ನು ಪ್ರಿಯವಾಚಕರೇ ವಿಚಾರಿಸಿರಿ. ಕೆಲವು ಮಾಸ್ತರರು ಈ ಹ ಣದ ಕೊರತೆಯುಂಟಾಗಿ ತಮ್ಮ ಸಂಬಳದೊಳಗಿಂದ ಖರ್ಚು ಆಗು ವದನ್ನು ನೋಡಿ ದುಃಖಪಟ್ಟು ಸಾದಿಲವಾರ ಹೆಚ್ಚಾಗಬೇಕೆಂದು ಪ್ರ ಯತ್ನಮಾಡುವರು. ಆದರೆ ಒಮ್ಮೆ ವಜ್ರಲೇಪಮಾಡಿದ ಆನಿರ್ಣಯ ವು ಹ್ಯಾಗೆ ತಿರುಗುವದು ಕಡೆಗೆ ಬಡಮಾಸ್ತರರು ತಮ್ಮ ಖಾತೆಯ ಪ್ರಾರಬ್ಧವೇ ಇದೆಂದು ತಣ್ಣಗಾಗುವರು. ಆದರೆ ಉದಾರ ಧೊ ರೆಗಳು ಇದರ ಕಡೆಗೆ ಲಕ್ಷ್ಯಕೊಟ್ಟು ಕೊರತೆಯಾಗದಂತೆ ದಯಮಾ ಲಿಸಬೇಕೆಂಬದಾಗಿ ಅಪೇಕ್ಷೆಯುಂಟು. ತಾ. ೭।೧।೮೩೩ ಇಸವಿ. (ಕ್ಷ

ಶ್ರೀ ಸಿದ್ಧನಾಥ ವಾಚನ ಮಂದಿರ.
ನಂ. ೨ ಧಾರವಾಡ.

ಪ್ರಶ್ನ ಸಮ[illegible]
ಪದೇಶಕನಾದ
ಪುಸ್ತಕ ೨ | ಸಂಚಿಕೆ ೨
ಫೆಬ್ರುವಾರಿ ೧೮೮೩

Education and Improvement.

ವಿದ್ಯಾಸುಧಾರಣೆಯ ಸಂಬಂಧವಾದ ಸಂಗತಿಗಳು.

—*○*—

ಕಲಕತ್ತೆಯ ಕಾಲೇಜದಲ್ಲಿ ಆರು ಜನ ವಿದ್ಯಾರ್ಥಿನಿಯರು ಬಿ. ಏ. ಪರೀಕ್ಷೆಗೆ ಹೋಗತಕ್ಕ ವರ್ಗದಲ್ಲಿ ಅಭ್ಯಾಸ ಮಾಡುತ್ತಿದ್ದರು. ಅವರಲ್ಲಿ ಹಿಂದಿನ ಬಿ. ಏ. ಪರೀಕ್ಷೆಯಲ್ಲಿ ಇಬ್ಬರು ವಿದ್ಯಾರ್ಥಿನಿಯರು ಪಾಸಾದರು. ಅವರ ಹೆಸರುಗಳು ಕಾದಂಬಿನೀ ಬೋಸ, ಚಂದ್ರಮುಖೀ ಬೋಸ — ನಮ್ಮ ದೇಶದ ಸ್ತ್ರೀಯರು ಬಿ. ಏ. ಪರೀಕ್ಷೆಯಲ್ಲಿ ಇಳಿದದ್ದು ಇದೇ ಮೊದಲು. ನಮ್ಮ ಮುಂಬಯಿ [illegible]ಟಿಯಲ್ಲಿಯೂ ಹಿಂದೆರಡು ವರ್ಷದೊಳಗೇ ಬಿ. ಏ. ಆದ [illegible] ತರುಣಿಯರು ಪ್ರಕಾಶಿಸುವರೆಂದು ಕೇಳಿದು

— ೨ —

ಪುಣೆಯ ಗಾಯನ ಸಮಾಜದವರು ಗಾಯನ ಸಂಬಂಧ ಕ್ಕೊಂದು ಮಾಸಿಕ ಪುಸ್ತಕವನ್ನು ಸ್ವಲ್ಪ ದಿವಸದೊಳಗೆ ತೆಗೆಯತಕ್ಕವರಿದ್ದಾರೆ. ಆ ಪುಸ್ತಕದಲ್ಲಿ ದೇಶೀ ಗಾಯನಶಾಸ್ತ್ರದ

ನ್ನು ವಿಲಿಯಮರ ಪದ್ಧತಿಯಂತೆ ಈ ಸಾಂಕೇತಿಕವಾದವು ಎಷ್ಟು ಬೇಕಾಗುತ್ತ ಮೇಲೆ ಚಿನ್ಹಗಳಿಂದ ತೋರಿಸುವರು. ಈ (ಗಾಢವಸ ಎರಡೂ) ದರ ಷ್ಟು ತಿಳಿಕೊಂಡ ಬಳಿಕ ಶಿಕ್ಷಕ ವಿಲ್ಲದೆ ಗ... ಾಗ ವಯ. ಮ ದವರು ಕಲಿಯಬಹುದು. ಇದು ಮೇಲಾದ ... ಲಾ ... ಷ ಬಗ್ಗೆ ಸಂದೇಹ ವಿಲ್ಲ.

—o—

ಸ್ತ್ರೀವೈದ್ಯ — ಗೋಪಾಳ ವಿನಾಯಕ ಜೋಶಿ ಯೆಂಬ ಗೃಹಸ್ಥನು ಈ ಇಲಾಖೆಯ ಟಪಾಲು ಖಾತೆಯಲ್ಲಿ ಕೆಲವು ದಿವಸ ನೌಕರಿಯನ್ನು ಮಾಡಿ ಈಗ ಬಂಗಾಲ ಇಲಾಖೆಯಲ್ಲಿ ಹೋಗಿದ್ದಾನೆ. ಈ ಗೃಹಸ್ಥನ ಚಿಕ್ಕ ಪ್ರಾಯದ ಹೆಂಡತಿಯಾದ ಆನಂದೀ ಬಾಯಿ ಯೆಂಬ ಸ್ತ್ರೀಯು ವೈದ್ಯಶಾಸ್ತ್ರವನ್ನು ಅಭ್ಯಾಸಿಸುವದಕ್ಕೋಸ್ಕರ ಅಮೇರಿಕ ಖಂಡಕ್ಕೆ ಹೋಗತಕ್ಕವಳಿದ್ದಾಳೆ. ಗೋಪಾಳರಾಯನು ಹೆಂಡತಿಗೆ ಇಂಗ್ಲಿಷ ಭಾಷೆಯನ್ನು ಚನ್ನಾಗಿ ಕಲಿಸಿದರಿಂದ ಆಕೆ ಗಂಡನ ಹೊರತಾಗಿ ದೂರದೇಶ ಪರ್ಯಟನಕ್ಕೆ ಧೈರ್ಯವನ್ನೂ ಯೋಗ್ಯತೆಯನ್ನೂ ಪಡೆದಿದ್ದಾಳೆ. ಈ ಸ್ತ್ರೀಯು ನಾಮಾಂಕಿತಳಾದ ಪಂಡಿತ ರಮಾಬಾಯಿ ಯೆಂಬವಳ ಬಳಗಕ್ಕೆ ಸೇರಿದವಳುಂಟು. ಆ ಪಂಡಿತೆಯು ಸಹ ಸ್ವಲ್ಪ ದಿವಸದೊಳಗೆ ವಿಲಾಯತಿಗೆ ಹೊರಡತಕ್ಕವಳಿದ್ದಾಳೆ.

—o—

ಮುಂಬಯಿಯ ವೈದ್ಯಕದ ಕಾಲೇಜದಲ್ಲಿ ಹೆಂಗಸರು ಯ ಧೊ ದು ವರ್ಗವಾಯ್ತುಂಟು. ಆ ವಿದ್ಯಾರ್ಥಿನಿಯರಿಗೆ ಇದುವರೆಗೆ ಪ್ರಸೂತಿಕರಣ (ಸೂಲಗಿತ್ತಿಯ) ವಿದ್ಯವನ್ನು ಮಾತ್ರ ಕಲಿಸುತ್ತಿದ್ದರು, ಆದರೆ ಇನ್ನು ಮುಂದೆ ಯಾವತ್ತು ಸ್ತ್ರೀರೋಗಗಳ ಚಿಕಿತ್ಸೆಯನ್ನು ಅವರಿಗೆ ಕಲಿಸುವ ಕ್ರಮವು ಆರಂಭ ವಾಗಿದೆ.

ಬ್ರಹ್ಮ ಸಮಾಜವೆಂಬ ಏಕೇಶ್ವರ ಪಂಥದ ಖ್ಯಾತ ಧರ್ಮೋಪದೇಶಕನಾದ ಬಾಬೂ ಕೇಶವ ಚಂದ್ರ ಸೇನನೆಂಬ ಗೃಹಸ್ಥನು ಭೂಪ್ರದಕ್ಷಿಣೆಯನ್ನು ಮಾಡಲಿಕ್ಕೆ ಬೇಗ ಹೊರಡತಕ್ಕವನಿದ್ದಾನೆ. ದೇವರು ತನಗೆ ಭೂಪ್ರದಕ್ಷಿಣೆಯನ್ನು ಮಾಡೆಂತಾ ಆಜ್ಞಾಪಿಸಿದ್ದಾನೆಂದು ದರ್ಬ ಮುಂಥ ಜನರಿಗೆ ಅವನು ಹೇಳುತ್ತಾನೆ.

—.o—

ಮದ್ರಾಸ ಇಲಾಖೆಯಲ್ಲಿ ಕಡಲೂರೆಂಬಲ್ಲಿ ಬ್ರಾಹ್ಮಣಜಾತಿಯ ೧೬ ವರ್ಷಗಳವಳೊಬ್ಬ ತರುಣಿಯು ಅಲ್ಲಿಯ ಮಿಶನರಿಯ ಹೆಂಡತಿಯ ಒಳಿಗೆ ಹೋಗಿ ಬಾಪ್ತಿಸ್ಮಾ ತಕ್ಕೊಳ್ಳುವ ಉದ್ಯೋಗಕ್ಕೆ ಬಿದ್ದಿದ್ದಳು. ಅಷ್ಟರಲ್ಲಿ ಆಕೆಯ ತಕ್ಕನಿಗೆ ಈ ವರ್ತಮಾನ ತಿಳಿದದರಿಂದ ಅವನು ತತ್ಕಾಲಕ್ಕೆ ಹೋಗಿ ಆ ಮುಗ್ಧೆಯನ್ನು ಬಲಾತ್ಕಾರದಿಂದ ಎಳೆದುಕೊಂಡು ಮನೆಗೆ ಹೋದನು. ಆ ಮಿಶನರಿಯ ಮಡ್ಡಂಮೆಯು ಆ ತಕ್ಕನ ಮೇಲೆ ಬಡದಾಟದಬಗ್ಗೆ ಫಿರ್ಯಾದಿಯನ್ನು ಮಾಡಿದ್ದರಿಂದ ಅವನಿಗೆ ೩ ತಿಂಗಳಿನವರೆಗೆ ಸಾಧಾ ಕೈದಿನಶಿಕ್ಷೆ ಯಾಯಿತು. "ಜೀವದ ಮೇಲೆ ಬಂದದ್ದು ಬಾಲದ ಮೇಲೆ ಹೋಯಿತು."

—o—

ವಿಲಾಯತಿಯ ಸರಕಾರದ ಮುಖ್ಯ ಪ್ರಧಾನರು ಈಗ ೧೪ ಜನರಿದ್ದಾರೆ. ಅವರಲ್ಲಿ ೭ ಜನ ಲಾರ್ಡ್ಸ ಸಭೆಯವರೂ ೭ಜನ ಕಾಮನ್ಸ ಸಭೆಯವರೂ ಉಂಟು. ಲಾರ್ಡ್ಸ ಸಭೆಯವರ ಸರಾಸರೀ ವಯಸ್ಸು ೬೦ ವರ್ಷದ್ದು, ಕಾಮನ್ಸ ಸಭೆಯವರ ಸರಾಸರೀ ವಯಸ್ಸು ೫೭ ವರ್ಷದ್ದು ಉಂಟು. ವಿಲಾಯತಿಯ ಪ್ರಧಾನಜನರಿಗೆ ಈ ಪ್ರಕಾರದ ವಯೋವೃದ್ಧತೇ ಯಾ

ಹಾಗಲೂ ಇರುತ್ತಾರೆ, ಹೊರ್ತು ಅಲ್ಪ ವಯಸ್ಕರು ಬಹುತರ ಇರುವದಿಲ್ಲ.

—o—

ಮುಂಬಯಿನ ಡಾಯರೆಕ್ಟರ ಧೊರೆಗಳು ಈ ತಿಂಗಳಿನ ೧೯ನೇ ತಾರೀಖಿನಲ್ಲಿ ಧಾರವಾಡಕ್ಕೆ ಬಂದವರು ಇನ್ನೂ ಇಲ್ಲೇ ಇರುತ್ತಾರೆ. ಮುಂದೆ ಕಾನಡಾ ಜಿಲ್ಲೆಯಲ್ಲಿ ಕೆಲವು ಶಾಲೆಗಳನ್ನು ಕಾರವಾಡದ ಮಾರ್ಗವಾಗಿ ಮುಂಬಯಿಗೆ ಹೋಗತಕ್ಕವರಿದ್ದಾರೆಂತ ಕೇಳುತ್ತೇವೆ.

—o—

ಮುಂಬಯಿನ ರಸಲ್ ಧೊರೆಗಳು ಈ ತಿಂಗಳಲ್ಲಿ ಇಲ್ಲಿಗೆ ಬಂದು ಕಾನಡಾ ಜಿಲ್ಲೆಗೆ ಹೋದರು.

—o—

ಹೋದ ವರ್ಷದ ವಿದ್ಯಾಖಾತೆಯ ವಾರ್ಷಿಕ ರಿಪೋರ್ಟ ಈ ತಿಂಗಳಲ್ಲಿ ಪ್ರಸಿದ್ಧವಾಯಿತು. ಹೋದ ವರ್ಷದೊಳಗೆ ದಕ್ಷಿಣ ಭಾಗದಲ್ಲಿ ವಿದ್ಯಾಪ್ರಸಾರವು ಬಹಳ ಬೆಳೆದದ್ದರಿಂದ ಸರಕಾರದವರು ತಮ್ಮ ಠರಾವಿನಲ್ಲಿ ಮಿ. ರಸಲ್ ಧೊರೆಗಳ ತಾರೀಫು ಮಾಡಿದ್ದಾರೆ. ಇದೇ ಮೇರಿಗೆ ಧಾರವಾಡ ಜಿಲ್ಲೆಯಲ್ಲಿ ಶಾಲೆಗಳ ಸಂಖ್ಯೆಯು ಬೆಳೆದದ್ದರಿಂದ ರಾ. ಸಾ. ರೊಡ್ಡ ಶ್ರೀನಿವಾಸ ರಾಯರನ್ನಾದರೂ ಅದೇ ಠರಾವಿನಲ್ಲಿ ಸ್ತುತಿಸಿದ್ದಾರೆ. ಶ್ರೀನಿವಾಸರಾಯರಿಗೆ ಬೇಗ ಬಡತಿ ದೊರೆಯುವದೆಂತಾ ಕೋರುತ್ತೇವೆ.

—o—

ಬೆಳಗಾವಿಯ ಡೆ. ಇನಸ್ಪೆಕ್ಟರರು ಈ ತಿಂಗಳಿನ ರಜೆಯನ್ನು ತಕ್ಕೊಂಡದ್ದರಿಂದ ಅವರ ಸ್ಥಳಕ್ಕೆ ಶ್ರೀರಂಗರಾವ ಜದಲ್ಲಿ

ಪ್ರಿನ್ಸಿಪಾಲರಾಗಿದ್ದ ರಾ. ರಾ. ಶ್ರೀನಿವಾಸ ರಾಘವಯ್ಯಂ ಗಾರಿ ಅವರನ್ನು ನೇಮಿಸಿ ಅವರ ಸ್ಥಳಕ್ಕೆ ಅದೇ ಕಾಲೇಜಿನ ಗಣಿತದ ಶಿಕ್ಷಕರಾದ ಸುಬರಾವ ಯಾತಗಿರಿ ಅವರನ್ನು ನೇಮಿಸಿದರು. ಶ್ರೀನಿವಾಸರಾಯರು ಕೆಲಾಗಿಗೆ ಹೊರಟು ಹೋದರು. ಈ ನೇಮಣೂಕಗಳು ಬಹುತರ ಕಾಯಮು ಆಗುವವೆಂದು ಕೇಳುತ್ತೇವೆ.

—o—

Notices.
ನೋಟೀಸು.

ಅಜಂ ಬಸಯ್ಯಾ ಶಿವಲಿಂಗಯ್ಯಾ ಹೊನ್ನಿಬ್ಬ ಹೆಡ್ ಮಾಸ್ತರ ಸಾಲಿ ಕಾದರೊಳ್ಳಿ ತಾಲೂಕ ಸಂಪಗಾಂವ ಇವರು ಟ್ರೇನಿಂಗ ಕಾಲೇಜದ ೧೨ ರೂಪಾಯಿ ಲಾಯಖ ಸರ್ಟಿಫಿಕೇಟು ಪರೀಕ್ಷೆಯಲ್ಲಿ ಪಾಸಾದವರಂತ ತಿಳಿಯಬೇಕೆಂದು ನೋ. ಎ. ಇ. ಸಾ. ಬಾಹಾದ್ದೂರ ದಕ್ಷಿಣಭಾಗ ಇವರು ತಮ್ಮ ಇಂಗ್ರಜೀ ಪತ್ರ ನಂಬರ ೪೧೯೭ ತಾರೀಖು ೨೭ ಮಾಹೆ ಜನವರಿ ೧೮೮೩ ಇಸವಿಯ ಹುಕುಮು ಕೊಟ್ಟಿರುತ್ತಾರೆ. ತಿಳಿಯುವದು. ತಾರೀಖು ೮ ಫೆಬ್ರುವಾರಿ ೧೮೮೩ ಇಸವಿ.

R. S. Savanur.
ಡೆ. ಎ. ಇ. ಇ. ಬೆಳಗಾಂವ.

—o—

History of India.
ಹಿಂದುಸ್ಥಾನದ ಇತಿಹಾಸವು.

(೧ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

(೮) ಗುಜರಾಥದ ಪೂರ್ವಕ್ಕೆ ಮಾಳವಾದೇಶ ಸಹಿತವಾದ

ಮಧ್ಯಹಿಂದುಸ್ಥಾನದ ಸಂಸ್ಥಾನಗಳುಂಟು. ಈ ಸಂಸ್ಥಾನಗಳು ಕೆಲವು ಉತ್ತರ ಹಿಂದುಸ್ಥಾನದೊಳಗೆ ಬರುತ್ತವೆ, ಕೆಲವು ದಕ್ಷಿಣದೊಳಗೆ ಎಣಿಸಲ್ಪಡುತ್ತವೆ. ಇವೆಲ್ಲ ಕೂಡಿ ೭೧ ಅತ್ರಿಕ ಸಂಸ್ಥಾನಗಳುಂಟು. ಇವುಗಳ ಕ್ಷೇತ್ರಫಲ ೮೦೦೦೦ ಚೌಕು ಮೈಲು, ಜನಸಂಖ್ಯೆ ೮೬೦೦೦೦೦ ಇವುಗಳಲ್ಲಿ ಮುಖ್ಯ ಸಂಸ್ಥಾನಗಳು — ೧ ಗ್ವಾಲ್ಹೇರಿ, ಸಿಂಧ್ಯನ ಸಂಸ್ಥಾನ; ೨ ಇಂದೂರು, ಹೋಳಕರನ ಸಂಸ್ಥಾನ; ೩ ಭೋಪಾಳ, ಬೇಗಮನ ಸಂಸ್ಥಾನ; ೪ ರೇವಾ ಸಂಸ್ಥಾನ, ಬುಂದೇಲ ಖಂಡದ ಸಂಸ್ಥಾನಗಳು ಸಹಿತ, ಮಾಳವ ಇಲಾಖೆಯು ದಕ್ಷಿಣದಲ್ಲಿ ಮಧ್ಯ ಹಿಂದುಸ್ಥಾನದ ಸಂಸ್ಥಾನಗಳಲ್ಲಿ ಪ್ರಸಿದ್ಧ ಸ್ಥಳಗಳು — ಸಿಂಧ್ಯನ ರಾಜ್ಯದಲ್ಲಿ ಗ್ವಾಲ್ಹೇರಿ, ಇವನ ರಾಜಧಾನಿ; ಅದರ ಹತ್ತರ ಮಹಾರಾಜಪೂರ, ಪನಿಯಾರ, ಪ್ರಸಿದ್ಧ ಪಟ್ಟಣಗಳು; ದಕ್ಷಿಣ ಭಾಗದಲ್ಲಿ ಉಜ್ಜಯಿನಿ, ಪೂರ್ವಕಾಲದಲ್ಲಿ ಹೆಸರಾದ ವಿಕ್ರಮಾದಿತ್ಯನ ರಾಜಧಾನಿ. ಹೋಳಕರನ ರಾಜ್ಯದಲ್ಲಿ ಇಂದೂರು, ರಾಜಧಾನಿ; ಮಹಿದಪುರ, ಉಜ್ಜನಿಯ ಹತ್ತರ.

(೧೦) ಮಧ್ಯಹಿಂದುಸ್ಥಾನದ ಸಂಸ್ಥಾನಗಳ ದಕ್ಷಿಣದಲ್ಲಿ ಬಂಗಾಲ ಇಲಾಖೆಯೊಳಗಿನ ಛೋಟಾನಾಗಪೂರ ಪ್ರಾಂತದ ನೈಋತ್ಯಕ್ಕೆ ಮಧ್ಯ ಪ್ರಾಂತಗಳೆಂಬ ವಿಭಾಗವಿರುತ್ತದೆ. ಈ ವಿಭಾಗದ ಮುಖ್ಯಾಧಿಕಾರಿಯು ಚೀಫ ಕಮಿಶನರನು. ಇದರ ಉತ್ತರ ಭಾಗಕ್ಕೆ ಸಾಗರ, ನರ್ಮದಾ ಪ್ರಾಂತಗಳೆಂತಲೂ, ದಕ್ಷಿಣ ಭಾಗಕ್ಕೆ ನಾಗಪೂರ ಪ್ರಾಂತವೆಂತಲೂ, ಪೂರ್ವಭಾಗಕ್ಕೆ ತ್ರಿಬ್ಯುಟರೀ [ಕಪ್ಪಕೊಡುವ] ಮಹಾಲುಗಳೆಂತಲೂ ಅನ್ನುವರು. ಈ ವಿಭಾಗದ ವಿಸ್ತಾರ, ಜನಸಂಖ್ಯೆಗಳು ಸುಮಾರು ಮಧ್ಯಹಿಂದುಸ್ಥಾನದ ಸಂಸ್ಥಾನಗಳೆಂಬ ವಿಭಾಗದಷ್ಟೇ ಉಂ.

೧೦. ಪ್ರಾಚೀನಕಾಲದಲ್ಲಿ ಈ ಮಧ್ಯಪ್ರಾಂತಗಳಿಗೆ ಗೊಂಡವನದ ರಾಜ್ಯವೆಂಬ ಹೆಸರಿತ್ತು. ಮುಸಲ್ಮಾನರ ಆಳಿಕೆಯಲ್ಲಿ ಈ ಪ್ರಾಂತಗಳ ಪಶ್ಚಿಮಭಾಗವು ಮಾಳವದ ಅರಸರ ಕೈ ಸೇರಿತ್ತು.

ಮಧ್ಯಪ್ರಾಂತಗಳಲ್ಲಿಯ ಪ್ರಸಿದ್ಧ ಸ್ಥಳಗಳು — ನೇಮಾಡ ಜಿಲ್ಲೆಯಲ್ಲಿ ಬರಹಾನಪುರವು ಪೂರ್ವದಲ್ಲಿ ಖಾನದೇಶದ ಅರಸರ ರಾಜಧಾನಿ ಯಿತ್ತು. ಅದರ ಹತ್ತರ ಅಶೀರಗಡವೆಂಬ ಬಹು ಹೆಸರಾದ ಕೋಟೆಯುಂಟು. ನಾಗಪುರ ಪ್ರಾಂತದಲ್ಲಿ ನಾಗಪುರವು ಪೂರ್ವದಲ್ಲಿ ಭೋಸಲೇ ಎಂಬ ಮಹಾರಾಷ್ಟ್ರ ಅರಸನ ರಾಜಧಾನಿ ಇತ್ತು.

(೧೧) ಮಧ್ಯಪ್ರಾಂತಗಳ ದಕ್ಷಿಣ ಪಶ್ಚಿಮಗಳಲ್ಲಿ ಖಾನದೇಶದ ಪೂರ್ವಕ್ಕೆ ವರಾಡ ಪ್ರಾಂತವಿರುತ್ತದೆ. ಇದನ್ನು ಹೈದರಾಬಾದದ ನಿಜಾಮನು ಸನ್ ೧೮೫೩ನೇ ವರ್ಷ ಇಂಗ್ಲಿಷರ ಸರಕಾರಕ್ಕೆ ಸಾಲದೊಳಗೆ ಕೊಟ್ಟನು. ಅಂದಿನಿಂದ ಈ ವಿಭಾಗಕ್ಕೆ "ಹೈದರಾಬಾದ ಅಸೈನ್ಡ್ ಡಿಸ್ಟ್ರಿಕ್ಟ್" ಎಂಬ ಹೆಸರು ಬಂದಿದೆ. ಈ ವಿಭಾಗದ ದಕ್ಷಿಣ ಭಾಗಕ್ಕೆ ಬಾಲಾಘಾಟವೆಂಬ ಹೆಸರುಂಟು.

ವರಾಡದೊಳಗಿನ ಪ್ರಸಿದ್ಧಸ್ಥಳಗಳು — ಪೂರ್ವವರಾಡದಲ್ಲಿ ಇಲಿಚಪುರ, ಮುಖ್ಯ ಪಟ್ಟಣವು; ಗಾವಿಲಗಡ, ಹೆಸರಾದ ಕೋಟೆಯು. ಪಶ್ಚಿಮ ವರಾಡದಲ್ಲಿ ಅಕೋಲಾ, ಅಂಗಾವ, ಶಹಾಪುರವೆಂಬ ಹಾಳು ಪಟ್ಟಣ.

[೧೨] ವರಾಡದ ದಕ್ಷಿಣಕ್ಕೆ ನಿಜಾಮನ ರಾಜ್ಯವಿರುತ್ತದೆ. ಈ ರಾಜ್ಯದ ಪಶ್ಚಿಮಕ್ಕೆ ಮುಂಬಯಿ ಇಲಾಖೆಯೂ ಪೂರ್ವಕ್ಕೆ ಮದ್ರಾಸ ಇಲಾಖೆಯೂ ಉಂಟು. ಈ ರಾಜ್ಯದ ಕ್ಷೇತ್ರಫಲ ಜನಸಂಖ್ಯೆಗಳು ವರಾಡ ಪ್ರಾಂತದಷ್ಟು ಇರುತ್ತವೆ.

ನಿಜಾಮನ ರಾಜ್ಯದಲ್ಲಿ ಪ್ರಸಿದ್ಧಸ್ಥಳಗಳು — ಹೈದರಾಬಾದವು ನಿಜಾಮನ ರಾಜಧಾನಿಯುಂಟು, ಅದರ ವಾಯವ್ಯಕ್ಕೆ ಗೋವಳಕೊಂಡ (ಗೋವಲಿಕೊಂಡ) ಪೂರ್ವದ ಕುತುಬಶಾಹೀ ಬಾದಶಹಗಳ ರಾಜಧಾನಿ. ಕಲ್ಯಾಣಪಟ್ಟಣ ಪ್ರಾಚೀನಕಾಲದಲ್ಲಿ ಚಾಲುಕ್ಯರೆಂಬ ಅರಸರ ರಾಜಧಾನಿ. ಕಲಬುರ್ಗಿ, ಬೀದರ, ಪೂರ್ವದಲ್ಲಿ ಬಾಮನಿ, ಬರೀದಶಾಹಿ, ಎಂಬ ಬಾದಶಾಹಿವಂಶಗಳ ರಾಜಧಾನಿಗಳು — ಔರಂಗಾಬಾದ [ಖಡಕಿ] ಪೂರ್ವದಲ್ಲಿ ಮಲಿಕ ಅಂಬರನೆಂಬ ಬಾದಶಹನ ರಾಜಧಾನಿ — ಅದರ ಪಶ್ಚಿಮಕ್ಕೆ ದೌಲತಾಬಾದ (ದೇವಗಿರಿ) ಹೆಸರಾದ ಕೋಟೆ. ಆನೆಗುಂದಿ, ತುಂಗಭದ್ರೆಯ ಉತ್ತರ ತೀರದಲ್ಲಿ, ಬುನಾದಿಯಲ್ಲಿ ಹಲವು ರಾಜವಂಶಗಳು ಆಳಿದಂಥ ಬಹು ಪ್ರಖ್ಯಾತವಾದ ರಾಜಧಾನಿ ಆಸಾಯಿ, ಔರಂಗಾಬಾದದ ಪೂರ್ವಕ್ಕೆ, ಪ್ರಸಿದ್ಧರಣಭೂಮಿಯು.

(೧೨) ದಕ್ಷಿಣ ಹಿಂದುಸ್ಥಾನದ ಪೂರ್ವದಂಡೆಯಲ್ಲಿ ಮದ್ರಾಸ ಇಲಾಖೆಯುಂಟು. ಈ ದಂಡೆಗೆ ಕೋರೋಮಾಂಡಲ್‌ವೆಂಬ ಹೆಸರುಂಟು. ಮದ್ರಾಸ ಇಲಾಖೆಯ ಉತ್ತರಕ್ಕೆ ಓಡಿಸಾಪ್ರಾಂತವೂ, ಪಶ್ಚಿಮಕ್ಕೆ ನಿಜಾಮನರಾಜ್ಯ, ಮೈಸೂರ ಸಂಸ್ಥಾನಗಳೂ ಉಂಟು. ಇದಲ್ಲದೆ ಪಶ್ಚಿಮ ಸಮುದ್ರ ತೀರದಲ್ಲಿ ಉತ್ತರ ಕಾನಡಾಜಿಲ್ಲೆಯ ದಕ್ಷಿಣಕ್ಕಿರುವ ಮಲಬಾರ ಕೋಸ್ಟ ಎಂಬ ಭಾಗವಾದರೂ ಈ ಇಲಾಖೆಗೆ ಸೇರಿರುತ್ತದೆ. ಈ ಇಲಾಖೆಯ ಕ್ಷೇತ್ರಫಲ ೧೪೬೦೦೦ ಚೌಕಮೈಲು; ಜನಸಂಖ್ಯೆ ೪ ಕೋಟಿಗಿಂತ ಹೆಚ್ಚುಂಟು. ಈ ಇಲಾಖೆಯ ಉತ್ತರಭಾಗಕ್ಕೆ ಉತ್ತರ ಸರ್ಕಾರವೆಂತಲೂ, ಪೂರ್ವ ದಕ್ಷಿಣ ಭಾಗಗಳಿಗೆ ಕರ್ನಾಟಕ * ವೆಂತಲೂ ಹೆಸರುಗಳುಂಟು. ಪಶ್ಚಿಮ ಸಮುದ್ರತೀ

---

* ಆದರೆ ಈ ಭಾಗಗಳು ನಿಜವಾಗಿ ಕರ್ನಾಟಕದೇಶದ ಭಾಗಗಳಲ್ಲ.

ರದಲ್ಲಿ ಮಾಲಿಯೊಳ, ಕಾನಡಾ, ಎಂಬ ಜಿಲ್ಲೆಗಳಿರುತ್ತವೆ.

ಮುಂದಕ್ಕೆ ಸಾಗುವದು.

—o—

The Satar, a Musical Instrument.

ಸತಾರವಾದ್ಯ.

೧ ಸತಾರದ ಮೊದಲನೇ ತಂತಿಗೆ "ಪಕ್ಕಾ ತಂತಿ" ಅನ್ನುತ್ತಾರೆ. ಇದೇ ಮುಖ್ಯತಂತಿಯು.

೨ ತಂತಿಯನ್ನು ಒಳ ಬದಿಗೆ ತನ್ನ ಕಡೆಗೆ ಎಳೆದು ಕೊಳ್ಳುವದಕ್ಕೆ "ಆಕರ್ಷಣ" ಅನ್ನುತ್ತಾರೆ.

೩ ತಂತಿಯನ್ನು ಹೊರ ಬದಿಗೆ ನೂಂಕಿ ಬಾರಿಸುವದಕ್ಕೆ "ಅಪಕರ್ಷಣ" ಅನ್ನುತ್ತಾರೆ.

೪ ಆಕರ್ಷಣಾಪಕರ್ಷಣಗಳಿಂದ ಉಂಟಾಗುವ ಧ್ವನಿಗೆ "ನುಡಿತ" ಅನ್ನುತ್ತಾರೆ.

೫ ಸತಾರಕ್ಕೆ ಅಲ್ಲಲ್ಲಿಗೆ ಧಾರದಿಂದ ಕಟ್ಟಲ್ಪಟ್ಟಿರುವ ಹಿತ್ತಾಳಿಯ ದಂಡುಗಳಿಗೆ "ಕಟ್ಟು" ಅನ್ನುತ್ತಾರೆ.

೬ ಸತಾರಕ್ಕೆ ೧೭ರಿಂದ ೨೪ ವರೆಗೆ ಕಟ್ಟುಗಳಿರುತ್ತವೆ.

೭ ಕಟ್ಟಿನ ಮೇಲು ಗಡೆಯಲ್ಲಿ (ಹಾಸು ಕಟ್ಟಿಗೆ ಬಿಟ್ಟು) ತಂತಿಯನ್ನು ಕಾರಣೆ ಒತ್ತಿ ಮಾಡುವ ಆಕರ್ಷಣಾಪಕರ್ಷಣಗಳಿಂದ ಉಂಟಾಗುವ ಧ್ವನಿಗೆ "ಸ್ವರ" ಅನ್ನುತ್ತಾರೆ.

೮ ಮುಖ್ಯಸ್ವರಗಳು ೭ ಇರುತ್ತವೆ. ಯಾವವೆಂದರೆ — ಸಾ ರೀ ಗಾ ಮಾ ಪಾ ಧಾ ನೀ ಸಾ

೯ ಅಕ್ಷರಧ್ವನಿಯ ಪ್ರಮಾಣಕ್ಕೆ "ಮಾತ್ರೆ" ಅನ್ನುವರು.

೧೦ ಹ್ರಸ್ವಾಕ್ಷರವನ್ನು ನುಡಿಸಿದನಂತರ ಎಷ್ಟು ಅವಕಾಶದಿಂದ ಎರಡನೇ ಅಕ್ಷರವನ್ನು ನುಡಿಸ ಬೇಕೋ ಅಷ್ಟು ಅವಕಾ

ಕದ ಅಪ್ಪುಡಿಯ ಅವಕಾಶದಿಂದ ದೀರ್ಘಾಕ್ಷರವನ್ನು ನುಡಿಸಿ ಅನಂತರ ಮುಂದಿನ ಅಕ್ಷರಗಳನ್ನು ನುಡಿಸ ಹತ್ತಬೇಕು.

ನುಡಿತ

೧೧ ಸತಾರದ ನುಡಿತಗಳು ನಾಲ್ಕು

೧೨ ನುಡಿತಗಳಲ್ಲಿ ಎರಡು ವರ್ಗಗಳು.

೧೩ 'ದಾರ' ಗಳು ಒಂದನೇ ವರ್ಗದವು ಮತ್ತು 'ಡಾ ಡ' ಎರಡನೇ ವರ್ಗದವು.

೧೪ "ದಾ ರ" ಗಳು ಹೊಡೆಯಬೇಕಾದರೆ ತಂತಿಯನ್ನು* ಬೆರಳಿನಿಂದ ಆಕರ್ಷಣ ಮಾಡಬೇಕು. ಮತ್ತು "ಡಾ ಡ" ಗಳು ಹೊಡೆಯಬೇಕಾದರೆ ಅಪಕರ್ಷಣ ಮಾಡಬೇಕು.

—o—

ಮೆಟ್ಟು

೧೫ ಗತ್ತಿನ ಕೋಷ್ಟಕದ ೨ನೇ ಸಾಲಿನಲ್ಲಿರುವ ಅಂಕಿಗಳು ನುಡಿತಗಳ ಮೆಟ್ಟುಗಳನ್ನು ತೋರಿಸುತ್ತವೆ. ಆ ಮೆಟ್ಟುಗಳೇ ನುಡಿತದ ಮುಖ್ಯಸ್ಥಾನಗಳು.

—o—

ಸ್ವರ, ಮಾತ್ರಾ

೧೬ ಗತ್ತಿನ ಕೋಷ್ಟಕದ ೩ನೇ ಸಾಲಿನಲ್ಲಿಯ ಅಕ್ಷರಗಳು ಸ್ವರಗಳನ್ನು ತೋರಿಸುತ್ತವೆ! ಈ ಸ್ವರಗಳ ಕೆಳಗಿನ ಅಂಕಿಗಳೇ ಮಾತ್ರೆಗಳನ್ನು ಸೂಚಿಸುವವು! ೧ ಇದ್ದಲ್ಲಿ 'ಲಘು'! ೨ ಇದ್ದಲ್ಲಿ 'ಗುರು'!

—o—

ತಾಳ

೧೭ ಗತ್ತಿನ ೫ನೇ ಪಂಕ್ತಿಯಲ್ಲಿ ತೋರಿಸಿರುವ [x] ಈ ಚಿನ್ಹವು ತಾಳಬೀಳುವ ಸ್ಥಳವನ್ನು ತೋರಿಸುತ್ತದೆ! (೦)ಈ

ಚಿನ್ನ ಪಿಸ್ತಲ್ಲಿ ತಾಳದ ಅವಸಾನ ವಿರುತ್ತದೆ!

—o—

ತಂತಿಕೂಡಿಸುವದು.

೨ಲ ಪ್ರಥಮದಲ್ಲಿ ೩ನೇ ಮತ್ತು ೪ನೇ ತಂತಿಗಳನ್ನು ಬೇಕಾದ ಸ್ವರದಲ್ಲಿ ಇಡಬೇಕು! ಇವೆರಡೂ ಒಂದೇ ಸ್ವರದಲ್ಲಿ ಇರಬೇಕು! ನಂತರ ೪ನೇ ಪಡದೆಯಮೇಲೆ ಬೆರಳಿಟ್ಟು ೧ನೇ ತಂತಿಯನ್ನು ಬಾರಿಸಿ ಆ ಸ್ವರದೊಂದಿಗೆ ಅಪ್ಪುಗಳಿದೆ ಕೂಡಿಸಬೇಕು! ಬಳಿಕ ನಾಲ್ಕನೇ ಘೋರತಂತಿಯನ್ನು ೧ನೇ ತಂತಿಯ ೩ನ ಕಟ್ಟಿನ ಸ್ವರಕ್ಕೆ ಸರಿಯಾಗಿ ಕೂಡಿಸಬೇಕು! ೧ನೇ ತಂತಿಯ ೮ನೇ ಕಟ್ಟಿನ ಸ್ವರಕ್ಕೆ ಸರಿಯಾಗಿ ೫ನೇ ತಂತಿಯನ್ನು ಕೂಡಿಸಬೇಕು. ೧ನೇ ತಂತಿಯ ೧೫ನೇ ಕಟ್ಟಿನಸ್ವರಕ್ಕೆ ಸರಿಯಾಗಿ ೬ನೇ ತಂತಿಯನ್ನು ಕೂಡಿಸಬೇಕು! ೨೦ನೇ ಕಟ್ಟಿನ ಸ್ವರಕ್ಕೆ ಸರಿಯಾಗಿ ೭ನೇ ತಂತಿಯನ್ನು ಕೂಡಿಸಬೇಕು.

ಬಂಕಾಪುರ
ತಾ·೧೦|೫|೮೩ ಇಸ್ವಿ.

ಬಾಳಾಚಾರ್ಯ ಸಕ್ಕರೀ ಶಾಂತಕವಿ.
ಹೆ ಮಾ. ಶಾಳಾ ಬಂಕಾಪುರ

(ಮುಂದೆ ಸಾಗುವದು.)

—o—

Domestic Life.

ಸಂಸಾರವು.

(೧೯ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

“ಮೂಲಶ್ಲೋಕ” ಮಾತರಂ ಪಿತರಂಚೈವ | ಸಾಕ್ಷಾತ್ ಪ್ರ
ತ್ಯಕ್ಷ ದೇವತಾಂ || ಮತ್ವಾಗೃಹೀ ನಿಷೇ
ವೇತ ಸದಾ ಸರ್ವ ಪ್ರಯತ್ನತ:

ಪ್ರೊ. ಶ್ಲೋ. “ ಭಾ. ” ಮಾತಾಪಿತರೆನಿಸುವರನ್ನು ತಸಾ|

ಕ್ಷಾತದೇವತೆಯೆಂದು ಬಗೆದೇ।
ಪ್ರೀತಿಯಿಂದ ವರುಗಳ ಬಯಕೆಯ
ಸಲಿಸುತನವರತಾ॥
ನೀತಿಯಿಂ ಶೇವೆಯನು ಗೈದು।
ಹಾತಿಶಯಯತ್ನಗಳನೆಲ್ಲೀ।
ರೀತಿಯಲಿ ಸಲಿಹುದು ಸಂಸಾರಿಕ
ನುಜಗದೊಳಗೆ ॥

ಅರ್ಥ—ಗೃಹಸ್ಥನಾದವನು ತಾಯಿತಂದೆಗಳನ್ನು ಎದುರಾದ ಪ್ರತ್ಯಕ್ಷ ದೇವತೆಗಳ ಹಾಗೆ ಎಣಿಸಿ ಯಾವಾಗಲು ಸಕಲ ಪ್ರಯತ್ನಗಳಿಂದ ಅವರುಗಳಿಗೆ ಶೇವೆಯನ್ನು ಮಾಡಬೇಕು.

ಮೂ. ಶ್ಲೋ.—ಪಿತ್ರಾಮಯೋರ್ನೃಧುಲಾಂಬಾಗಾಂ
ಸರ್ವದಾಪ್ರಿಯ ಮಾಚರೇತ್। ಪಿತೃರಾಜ್ಞಾನು
ಸಾರೀಸ್ಯಾತ್ಸತ್ಪುತ್ರಃ ಕುಲಪಾವನಃ ॥

ಕ. ಶ್ಲೋ. ಭಾ. ಜನನಿಜನಕರ ಮುಂದೆಪ್ರುದುತರ।
ವೆನಿಸುವಗಳ ಶೋಭಗಸೋರುತ।
ಅನುವಯದೊಳವರಿಂಗೆ ಪ್ರಿಯವಾಗಿರುವ ಕಾ
ರ್ಯಗಳಂ ॥
ಅನುದಿವದಿ ಮಾಡುತ್ತ ಮತ್ತವ
ರನುವರೋಧಗಳಂತೆ ನಡೆಯುವ।
ತನಯನೇ ಸತ್ಪುತ್ರ ಕುಲವನು ಪಾವನವಮಾಳ್ಪ ॥

ಅರ್ಥ—ಕುಲವನ್ನು ಪರಿಶುದ್ಧ ಮಾಡತಕ್ಕವನಾದ ಒಳ್ಳೇ ಪುತ್ರನು ತಾಯಿತಂದೆಗಳ ಬಳಿಯಲ್ಲಿ ಪ್ರಿಯವಾದ ಮಾತುಗಳನ್ನಾಡಬೇಕು, ಅವರುಗಳಿಗೆ ಪ್ರಿಯವಾದಕಾರ್ಯಗಳನ್ನು ಯಾವಾಗಲು ಮಾಡಬೇಕು, ಆದಂಗಳ ಕಟ್ಟಳೆಗಳು ಅವರು ಹೇ

(ಈ) ಪ್ರಕಾರ ನಡಿಯಬೇಕು. ಇಂಥಾ ಹುಡುಗನು ಸತ್ಪುತ್ರನೆ-
ನಿಸಿ ಕುಲವನ್ನು ಪವಿತ್ರ ಮಾಡುವನು.

೩೮. ಶ್ಲೋ.= ಗುರೂಣಾಂಚೈವ ಸರ್ವೇಷಾಂ | ಮಾತಾ
ಪರಮೋಗುರು: | ಮಾತಾಗುರುತರಾ
ಭೂಮೇ: ಖಾತ್ಪಿತೋಚ್ಚತರಸ್ತಥಾ ||

ಹೊ. ಶ್ಲೋ. ಭಾ. ಪ. ಗುರುಗಳೊಳು ತಾನಧಿಕಗುರುವೇ
ನೆರವೆನಗಮ್ಮಮ್ಮಾತೆಯುಂಬಳು |
ಧರಣಿಯಿಂದತ್ಯಧಿಕಗೌರವೆಯು ವಿಪುಳೆ
ಜಗದೀ ||
ಅರರೆಪಿತನಾಕಾಶಕ್ಕಿಂದುರು
ಶರವೆನಿಸುವವರು ಪ್ರಕೃತಿಯನಾ,
ಪರಿಹರಿಸುವೆನದೆಂತೋ ಹರ, ಹರೀ
ಭುವನಗಳಲೀ ||

ಅರ್ಥ= ಗೌರವಕ್ಕೆ ಸಂಬಂಧ ಪಟ್ಟವರೊಳಗೆ ತಾಯಿಯೇ ಅಧಿಕ ಗೌರವಕ್ಕೆ ಪಾತ್ರಳಾಗಿದ್ದಾಳೆ. ತಾಯಿಯು ಭೂಮಿಗಿಂತಲೂ, ಹೊತ್ತವಳು. ಹಾಗೆಯೇ ತಂದೆಯು ಆಕಾಶಕ್ಕಿಂತಲೂ ಉನ್ನತ ನೆಂದೆನಿಸುವನು. ಕಾರಣ ಅವರ ಉಪಕಾರ ತೀರಿಸುವರೆ ಈ ಜನ್ಮ ಪೂರಾ ತೀರಿದರು ಆಗದು.

ಮೂ. ಶ್ಲೋ.= ಯೇಮಾತಾಪಿತರೌಕ್ಲೇಶಂ | ಸಹೇತೇಸಂಭ
ವೇನೃಣಾಂ | ನತಸ್ಯನಿಷ್ಕೃತಿಶಕ್ಯಾಕರ್ತುಂ
ವರ್ಷಶತೈರಪಿ ||

ಹೊ. ಶ್ಲೋ. ಭಾ. ಪ. ಸಂತತಿಯ ಪಡೆಯುವರೆ ಪಿತರೀ
ವೆಂತನಂತವ್ಯಥೆಯ ತಾಳ್ದಪ |
ರಂತಕಾಂತನೆ ಬಲ್ಲ ಪಿತಮಾತೆಗಳದಂ

ದುಗವಾ ||
ಚಿಂತಿಸಲಿಕಪರುಪಕೃತಿಯನೋ
ರಂತೆಕೀರ್ತಿಸಲಿರಿಸುವರಮಾ |
ಶ್ಚಿಂತಶತಶತಮಾಡದರೆಯುಜನ್ಮಶತಂಗಳ
ಅತೀರಾ ||

ಅರ್ಥ— ಮಕ್ಕಳನ್ನು ಹೆರುವದರ ದೆಸೆಯಿಂದ ತಾಯಿತಂದೆಗಳು ಸಹಿಸುವಂಥ ಪರಿಶ್ರಮಾಯಾಸವನ್ನು ಗಣಿಸಿದರೆ, ಅವರ ಉಪಕಾರವನ್ನು ಪರಿಹರಿಸುವದಕ್ಕೆ ಮಾನವಾಯುಷ್ಯ ನೂರು ವರುಷವಾದರೂ ಸಾಲದು. ಮತ್ತೆ ನೂರು ಜನ್ಮ ಮಾಡಿದರೂ ಸಾಲದು.

ಮೂ. ಶ್ಲೋ.— ಭ್ರಾತಾಜ್ಯೇಷ್ಠಸ್ಸಮಃ ಪಿತ್ರಾ ಭಾರ್ಯಾಪುತ್ರಃ
ಸ್ವಕಾತನುಃ ಛಾಯಾಸ್ವದಾಸವರ್ಗಶ್ಚ ದುಹಿ
ತಾಕೃಪಣಂಪರಂ । ತಸ್ಮಾದೇತೈರಧಿಕ್ಷಿಪ್ತಸ್ಸ
ಹ್ಯೇತಾಸಂಜ್ವರಸ್ಸದಾ ||

ಕ. ಶ್ಲೋ. ಭಾ. ಷ. ಜನಕಂಗೆ ಸಮನಗ್ರಜನೆಂಬವ |
ವನಿತೆಸುತರೆನಿಪವರುವರಸ್ತು |
ತನುಸಮಾನರು ಭೃತ್ಯಜನರನುಭಾ
ವಿಸಲು ತಂನಾ ||
ಘನತರದಛಾಯೋಪಮಾನರು |
ತನುಜೆಯುಬಹುದಯಕೆತಕ್ಕವ |
ಇನಿತಿವರಿಂದಾಯಾಸಪಡೆಯಲು ಸಹಿಸಿ
ಕೊಳ್ಳುವದು ||

ಅರ್ಥ— ಅಗ್ರಜನಾದವನು ತಂದೆಗೂ, ಸತಿಪುತ್ರರು ತನ್ನ ದೇಹಕ್ಕೂ, ದಾಸದಾಸೀಜನರು ತನ್ನ ನೆರಳಿಗೂ, ಸಮಾನರಾಗಿದ್ದಾರೆ. ಹಾಗೆಯೇ ಮಗಳು ಕೇವಲ ದಯಕ್ಕೆ ಪಾತ್ರಳಾಗಿದ್ದಾ

೪. ಆದದರಿಂದ ಇವರುಗಳ ಮೂಲಕವಾಗಿ ಸಂಕಟ ತಪ್ಪುಗಳನ್ನು ಸಹಿಸಿಕೊಳ್ಳಬೇಕು.

(ಮುಂದಕ್ಕೆ ಸಾಗುವದು.)

—o—

ಸವನೂರ ಸಂಸ್ಥಾನವು

[೩೩ ನೇ ಪುಟದಿಂದ ಮುಂದಕ್ಕೆ ಸಾಗಿದ್ದು.]

ವಿಜಾಪುರವನ್ನು ಬಿಟ್ಟ ಮೇಲೆ ಇವರು (ಈ ಸಂಸ್ಥಾನಿಕರು) ಸವನೂರಿಗೆ ಎಂದು ಮತ್ತು ಹೇಗೆ ಬಂದರೆಂಬುವದು ಚನ್ನಾಗಿ ತಿಳಿಯ ಬರುವದಿಲ್ಲ. ಕಂದಾಯದ ಜಮೀನದಾರರ ಹತ್ತಿರಿದ್ದ ಎಷ್ಟೋ ಕಾಗದಪತ್ರಗಳಿಂದ ತಿಳಿಯುವದೇನಂದರೆ — ಸರಕಾರೀ ಬಾಕಿಯನ್ನು ೧೬೯೯ ನೆ ಸ್ಟಾರಿಂದ ವಸೂಲ ಮಾಡುವದರಸಲುವಾಗಿ ೫೯,೯೯೯, ರೂಪಾಯಿಗಳ ಜಹಾಗೀರ, ಬಂಕಾಪುರ ಮತ್ತು ಎಂಟನೇ ಹಲವು ತಾಲೂಕಗಳು, ಬಹಲ್ಲೋಲಖಾನನಿಗೆ ಕೊಡಲ್ಪಟ್ಟಿದ್ದವು. ಖಾನನು ತನ್ನ ಜಹಾಗೀರ ಸೀಮೆಯಲ್ಲಿ ಬಂಕಾಪುರದ ಹತ್ತಿರದ್ದ ಕೊಡನೂರ ಸಿರಗಿಯೆಂಬಲ್ಲಿ ಇರುತ್ತಿದ್ದನು ಆ ಮೇಲೆ ಜನಮನ ಹಳ್ಳಿಯಂಬಲ್ಲಿಯ ಸ್ಥಳವು ಇವನ ಮನಸ್ಸಿಗೆ ಬಂದಕಾರಣ ಅಲ್ಲಿ ಒಂದು ದೊಡ್ಡ ಕೋಟೆಯನ್ನು ಕಟ್ಟಿಸಿ ಅಲ್ಲಿಯೇ ಇರುವಂತೆ ಮಾಡಿದನು. ಹಾಗ್ಗೆ ಅದಕ್ಕೆ ಸವನೂರವೆಂಬ ಹೆಸರು ಕೊಟ್ಟು ದೊಡ್ಡ ಶಹರವಾಗಿ ಬೆಳೆಗೊಳಿಸಿದನು.

ಅಬ್ದುಲ ರಹೀಮಖಾನನಿಗೆ ಆಲಮಗೀರ ಬಾದಶಹನು ಹೊಸ ಸನದನ್ನು ಕೊಟ್ಟು ಮೊದಲಿನ ಜಹಾಗೀರವನ್ನು ಸ್ಥಿರವಾಗಿ ಮಾಡಿದನು. ಅಂದಿನಿಂದ ಇವನನ್ನು ಹಲವು ದೊಡ್ಡದೊಡ್ಡ ರಾಜಕಾರ್ಯಗಳ ಮೇಲೆ ನೇಮಿಸುತ್ತಿದ್ದರು. ಮಾಕಣಕೇರಿ

[ಈಗ ಅದಕ್ಕೆ ಸುರಪುರವೆಂದೆನ್ನುವರು] ಕಪ್ಪ ನಾಯಕ ನೆಂಬವನು ಬಹು ಬಂಡಾಟವನ್ನು ಎಬ್ಬಿಸಿದ್ದನು. ಇವನನ್ನು ಶಿಕ್ಷಿಸುವದಕ್ಕೋಸ್ಕರ ಸರಕಾರದವರು ರಹೂಫಖಾನನ್ನೇ ಕಳುಹಿಸಿದರು. ಹಾಗೂ ಮುಂದೆ ಕರ್ನಾಟಕದ್ದೇಯ ಹಲವು ಸಣ್ಣ ಜಹಾಗೀರದಾರರನ್ನು [ಕಿತ್ತೂರ, ನವಲಗುಂದ, ಶಿರಹಟ್ಟಿ, ಡಂಬಳ, ಇತ್ಯಾದಿ ದೇಸಾಯಿಗಳನ್ನು] ಹುಟ್ಟಿಗೆ ತರುವದಕ್ಕಾದರೂ ರಹೂಫಖಾನನನ್ನೇ ಕಳುಹಿಸಿಕೊಟ್ಟಿದ್ದರು. ಇವನು ಆ ದೇಸಾಯಿಗಳ ಕಡೆಯಿಂದ ಕಪ್ಪವನ್ನು ತೆಗೆದುಕೊಳ್ಳುವದು ಗೊತ್ತುಮಾಡಿ ಅವರ ವತನಗಳನ್ನು ಅವರಕಡೆಯೇ ಉಳಿಯಗೊಟ್ಟನು. ರಹೂಫಖಾನನು ಮೊದಲು ಕೇವಲ ಬಾದಶಹನ ಆಜ್ಞೆಗೊಳಗಾಗಿ ವರ್ತಿಸುತ್ತಿದ್ದನು. ಆದರೆ ಮುಂದೆ ಮೊಗಲರ ದಕ್ಷಿಣ ಸುಭೇದಾರನಾದ ನಿಜಾಮನ ಪಕ್ಷದವನಾಗಿ ಆತನ ಆಜ್ಞೆಯಂತೆ ವರ್ತಿಸಹತ್ತಿದನು.

ಅಬ್ದುಲ ರಹೂಫಖಾನನು ಸನ್ ೧೭೧೭ನೇ ಇಸ್ವಿಯಲ್ಲಿ ಮೃತಹೊಂದಿದನು. ಇವನಿಗೆ ೧೨ ಮಂದಿ ಮಕ್ಕಳಿದ್ದರು ಇವರಲ್ಲಿ ಹಿರಿಯವನಾದ ಅಬ್ದುಲ ಫತ್ತೇಖಾನನು ತಂದೆಯ ಕೆಲಸಕ್ಕೆ ಬಂದನು. ಆದರೆ ಅವನು ಮುಂದೆ ಮೂರು ತಿಂಗಳಲ್ಲಿ ಸತ್ತುಹೋದನು ತರುವಾಯ ಅಬ್ದುಲ ಮಹಮುದಖಾನ ನೆಂಬುವನು ಆ ಕೆಲಸದಮೇಲೆ ಬಂದನು. ಇವನಾದರೂ ಬಹಳ ದಿವಸ ನಿಂದೆ ೬ ತಿಂಗಳಲ್ಲಿಯೇ ಮೃತ್ಯುಹೊಂದಿದನು. ಆ ಮೇಲೆ ಅಬ್ದುಲ ಗಫೂರಖಾನ [ಘಾಫರಖಾನನಿಗೆ] ನಿಗೆ ಅಧಿಕಾರವು ದೊರೆಯಿತು ಈಗ್ಗೆ ದಕ್ಷಿಣದಲ್ಲಿ ಮಹಾರಾಷ್ಟ್ರರು ಬಹಳ ಗದ್ದಲವನ್ನೆಬ್ಬಿಸಿದ್ದನ್ನು ನೋಡಿ ಹಲವು ಹಿಂದೂ ರಾಜರು ಸಾರಣಾ ಮಾಡಹತ್ತಿದರು ಈ ಕಾರಣದಿಂದ ಗಫೂರಖಾನನು ಬಾದಶಹ

ಶರಸುಭೇದಾರನ ಆಶ್ರಯದಲ್ಲಿ ...ದನಾಗಿ ತನ್ನ ...ನಾಗಿ
ಗಳನ್ನು ಚೆನ್ನಾಗಿ ದಕ್ಷತೆಯಿಂದ ಕಾದುಕೊಂಡಿದ್ದನು. ಇದ
...ಗಿರಿಹಟ್ಟಿಯ ದೇಸಾಯಿಯೂ ದಾಫರಖಾನನಿಗೆ ... ಉ
ಪ್ರವನ್ನು ಕೊಟ್ಟನು ಇದಲ್ಲದೇ ಮಹಾರಾಷ್ಟ್ರರ ಸೈನ್ಯವನ್ನು
ತ್ತಿಕೊಂಡುಬಂದು ಇವನ ದೇಶದಲ್ಲಿ ಬಂದು ಬಿದ್ದನು. ಆ
ದೇಸಾಯಿಗೆ ಮಿತ್ತಿಕೋಟಿ ಕಿಲ್ಲೆಯನ್ನು ಇನಾಮು ಕೊಟ್ಟಕೆ
ಟೀಕಾಯಿತು. ಇದರಹೊರತು ...ನನದೇಶದಲ್ಲಿ ದೇಸಾ
ಯರ ಅಧಿಕಾರವು ವಿಷ್ಟೋ ಕಡಿತಬಹುದು ...ಕಂಡ
ದೇಸಾಯಿಯು ಪುನಃಹೊಂದಿದ್ದಾಗ್ಗೆ ಅವನ ಸ್ವಾಸ್ಥ್ಯತ್ತು
ಪ್ರಾಂತದಿಯಿಂದ ತುಂಗಭದ್ರೆಯವರೆಗೆ ಇದ್ದ ...ಯದ್ಯಕೆ
...ಯ ಕೆಲವು ಭಾಗಗಳು ಮಾತ್ರ ಮಹಾರಾಷ್ಟ್ರರ ವಶಿಗಿದ್ದವು.
ಇವನಿಗೆ [ದಾಫರಖಾನನಿಗೆ] ಇವರಿಂದ ಮಕ್ಕಳಿದ್ದರು. ಅವ
ರ ಹೆಸರುಗಳು — ೧ ಅಬ್ದುಲ ಮಜೀದಖಾನ ೨ ಅಬ್ದುಲ ಸತಾ
ರಖಾನ ೩ ಕರೀಮಖಾನ ಇವರಲ್ಲಿ ೨ನೇ ಯವನಾದ ಅಬ್ದುಲಸ
ತಾರಖಾನನು ಗಾದಿಯಮೇಲೆ ಕುಳಿತನು. ಆದರೆ ಉಳಿದವರಿ
ಬ್ಬರು ಅಣ್ಣತಮ್ಮಂದಿರು ಅವನನ್ನು ಕೊಂದು ಹಾಕಿಸಿದರು
ತರುವಾಯ ಹಿರಿಯ ಮಜೀದಖಾನನು ಗಾದಿಯ ಅಧಿಕಾರಿಯಾ
ದನು. ಈ ಕಾಲಕ್ಕೆ ಮೊಗಲರಾಜ್ಯವು ಕಳಾಹೀನವಾಗಿ ಅ
...ಪ್ರಾಬಲ್ಯವು ದಿನದಿನಕ್ಕೆ ಕಡಿಮೆಯಾಗಹತ್ತಿತು. ಆ
...ದ್ದರಿಂದ ಮಜೀದಖಾನನು ಇನ್ನು ನಾನು ಮೊಗಲಬಾದಶಹ
ನ ಸ್ವಾಧೀನನಾಗಿ ನಡೆಯತಕ್ಕ ಕಾರಣವಿಲ್ಲ. ಹಾಗೂ ನನ್ನ
ಅಧಿಕಾರವನ್ನು ನಾನು ಸ್ವತಂತ್ರದಿಂದ ನಡಿಸಬೇಕು. ಎಂದು
ತಿಳಿದು ದಕ್ಷಿಣದ ಮೊಗಲರ ಸುಭೇದಾರನಿಂದ ಮುಕ್ತನಾ
...ಪ್ರವಾಯದಂತೆ ಗಾದಿಯ ವಸ್ತ್ರವನ್ನು ತನೆಯ ಕೊಳ್ಳುವನು

ಇವನು ತೆಗೆದು ಕೊಳ್ಳಲಿಲ್ಲ. ಈಗ್ಗೆ ದಕ್ಷಿಣದಲ್ಲಿ ನಿಜಾಮುಉಲ್
ಲ್ಕ ನೆಂಬುವನು ಮೊಗಲರ ಸುಭೇದಾರನಿದ್ದನು. ಇವನು ಆದ
ಕಾಲಕ್ಕೆ ಮೊಗಲ ಸ್ವಾತಂತ್ರ್ಯವನ್ನು ನಿರಾಕರಿಸಬೇಕೆಂದು ಕಳುಹಿ
ಕೊಟ್ಟನು. ತರುವಾಯ ಪೇಶ್ವೆಯವರು ನಿಜಾಮನಿಗೆ [illegible]
ಗಾರರಾಗಿ ಅವರ ನಾಗಪುರದ ಒಪ್ಪಂದವಾದ ಸಾಂ
ಪ್ರಾಯ ಅಂಶ ವನ್ನು ತೆಗೆದುಕೊಂಡನು. ಆದರೆ ಸರಹದ್ದು
ಯು ಮಹಾರಾಷ್ಟ್ರರು ಪ್ರಬಲರಾಗುತ್ತಾ ನಡೆದಿದ್ದರು. ಇವರಿಂ
ದ ಸಮಸ್ತರ ಸಂತತಿಗೆ ಬಹು ಉಪದ್ರವಾಗ ತೊಡಗಿತು. ಈ
ಪ್ಪ ಪೇಶ್ವೆಯಾಧಿಕಾರಿಗಳಿಂದ ಮೊಗಲರಿಂದ ರಕ್ಷಣೆಯಾಗದ
ಲ್ಲದ. ಈ ಸಲುವಾಗಿ ಪೇಶ್ವೆಯವರು ಮೊಗ್ಲೆಯರ ಮೇಲಿನ
ಸ್ನೇಹವಾದರೆಂದು ನಿಶ್ಚಯಿಸಿದನು. ಮತ್ತು ಆ ಪ್ರಕಾರ ಸ
ಪ್ಲಗಿಳ್ಳಬೇಕು ಇನಿತು ಪೇಶ್ವೆಯವರು ಮೊಗಲರ ಇ
ಷ್ಟವನ್ನು ಹಿಂದು ಹಿಸ್ಸೆದಾರಿಕೆ. ಮಹಾರಾಷ್ಟ್ರರು ಶಿ
ವನ್ನು ಗೆದ್ದು ಅವರ ಪ್ರದೇಶಗಳನ್ನು ತಮ್ಮ ರಾಷ್ಟ್ರದಲ್ಲಿ ಸೇ
ರಿಸಿಕೊಳ್ಳುವುದಕ್ಕೆ ಪ್ರಾರಂಭಿಸಿದರಿಂದ ಈ ಯುವರಾಜರ
ಸ್ನೇಹಮಾಡಿದರು. ಮತ್ತು ಇವರಿಗೆ ಕೆಲವು ಪ್ರದೇಶಗಳ
ನ್ನಿತ್ತರು. ಅಂದಹೇಗೆ. ಈ ಕಾಲಕ್ಕೆ ನವಾಬನು ಬಹರಿಗಿಂತ
ಹೆಚ್ಚು ಮಹತ್ವದ ಸಂಸ್ಥಾನಿಕರು. ಇವರಲ್ಲಿ ಸಂಶಯ
ಲ್ಲ. ಈ ಹಿಂದಿನವರಿಕೆ ವಿಜಯನಗರ, ಹಿಂಗಳಿಕೋಟೆ, [illegible]
ದಾಡಿ, ಪುಟ್ಟಾಪುರ, ಚಿತ್ರದುರ್ಗ, ಧಾರವಾಡ, ನವಲಗುಂದ,
ಹರಸಗಡ, ಡಂಬಳ, ರಾಣಿಬೆನ್ನೂರು, ಕೋಲಾರ ಮತ್ತು ಇದ
ಲ್ಲಿಯ ಕೆಲವು ಭಾಗ, ಗೋಕಾಕ, ಯಾದವಾಡ, ತೊರಗಲ್ಲ,
ಗಿರಿ ಮುಂತಾದವುಗಳು. ಮತ್ತು ಸವಣೂರ ತಾಲೂಕಿನಲ್ಲಿಯ ಕ
ಲ್ಲಾಪುರ, ಹಾಗು ಹರಿಹರ, ಇತ್ಯಾದಿ ಇಷ್ಟು ತಾಲೂಕುಗಳನ್ನು

ಪೇಶ್ವೆಯು ನವಾಬನಿಗೆ ಬಿಟ್ಟು ಕೊಡಬೇಕಾಯಿತು. ಮಿಶ್ರಿಕೋಟಿ, ಹುಬ್ಬಳ್ಳಿ, ಬಂಕಾಪುರ, ಕುಂದಗೋಳ, ಹಾನಗಲ್ಲ, ಹಾಗು ರಾಣೆಬೆನ್ನೂರ, ಇಷ್ಟು ಕೊಟ್ಟ ತಾಲೂಕುಗಳು ಕೆಳ್ಳಿನ ಭಾಗ; ಈಗಿನ ೧೧ ತಾಲೂಕುಗಳನ್ನು ನಕ್ಷ ಅವು ಕಸಿಗೇಲ್ಲಿರು. ಶಿಗ್ಗಾವ, ಬಂಕಾಪುರ, ಹಾನಗಲ್ಲ ಈ ಕ್ಷೇತ್ರಗಳು ಬಹು ದಿವಸದಿಂದ ನವಾಬರವಶದಲ್ಲಿಯೇ ಇದ್ದಕಾರಣ ಅವು ಗಳು ನವಾಬನವಶದಲ್ಲಿಯೇ ಉಳಿದವು.

ರವಾರ ೪ನೇ ನಂಬರ } ಶಿವಾಜಿ ರಾಮಚಂದ್ರ ಚಾ
ಲಹಾಸ್ತೂರ. ತಾ. ೧೭।೬।೮೩ } ಜವ.

ಮುಂದಕ್ಕೆ ಸಾಗುವದು.

---o---

Correspondence.

ಪತ್ರವ್ಯವಹಾರವು.

ರಾವಸಾಹೇಬ ಕನ್ನಡ ಶಾಲಾಪತ್ರಕರ್ತರಾದ ವಿಠಲರಾವ

ಹಾರೋಯರ ಚರಣಾರವಿಂದಗಳಿಗೆ —

ವಿ. ವಿ. ಆರ್ಯ ನರ್ಸ್ ನನ್ನ ಅಲ್ಪಮತಿಯಿಂದ ಪ್ರಾಕೃತದಲ್ಲಿ ರಚಿಸಿದಂಥಾ ಶ್ರೀಪಾರ್ಶ್ವನಾಗವೇಶ್ವರದ ಸಂವಾದರೂಪ ಚಿಕ್ಕ ಗ್ರಂಥವನ್ನು, ರಾವಸಾಹೇಬ ಡಿ. ಎ. ಅಸ್ವಪೀಕ್ಷರ ಜಿಲ್ಲಾ ಸ್ಕೂಲಿನ ಇವರು ನೋಡಿ ಆನಂದಪಟ್ಟು, ತಮ್ಮ ಕಡೆಗೆ ಕಳುಹಿಸಬೇಕೆಂತಾ ಆಜ್ಞಾಪಿಸಿದಕಾರಣ ಕಳುಹಿಸಿದ್ದೇನೆ ಇದಕ್ಕೆ ತಮ್ಮ ಕರಾಬ್ಜಗಳಲ್ಲಿ ದ್ಘಮಿಸುವ ಬರುವ ತಿಂಗಳ ಶಾಲಾಪತ್ರಿಕದಲ್ಲಿ, ಸ್ವಲ್ಪಸ್ವಲ್ಪ ಕೊಡುವಿರೆಂದು ಕಾಣುವೆನು, ಅಲ್ಲದೆ ಮುಂದರ ತಿಂಗಳಲ್ಲಿಯೂ, ನಾನು ಕಳುಹಿಸಿ ಕೊಡುವ ಈ ಸಂವಾದಗಳಿಗೆ ಸಹ ಪ್ರತಿ ತಿಂಗಳ ಶಾಲಾಪತ್ರದಲ್ಲಿ ಸ್ಥಿ

ದ್ವಿತೀಯಾಗಿಯೂ, ವಿನಯಪೂರ್ವಕ ಬೇಡಿಕೊಳ್ಳುತ್ತೇ

ಭಾ॥ಮಿ॥ನಿ॥ ಶ್ರೀರಮಾರಮಣನೊಂದು ದಿನ ಪರೀ
ವಾರಸಹ ವನಕೈದಿ ಪರಮೆಯ।
ತೀರಿಸಿಂತೆ ದಣಿದೈತಂದಾಗ ಮಿತೀರದಲ್ಲಿಹದು॥
ನಾರಿಗಂಗೆಯು ಮೆರೆಸಿಕೊಂಬುದ।
ನೀರಕ್ರೀಡೆಯ ನಾಡುತಿರಲದ
ನಾರದರು ತಿಳಿದಗಜಗೆಲ್ಲ ಪೇಳ್ವ ತೆರದಿ ಬರಲು॥೧॥

ಟೀಕು— ಲಕ್ಷ್ಮೀಕಾಂತನಾದಂಥಾ ಮಹಾವಿಷ್ಣು ಒಂದು ದಿನ ಮಿತ್ರನಾದ ಪರಮೇಶ್ವರನು, ಒಂದು ದಿನ ತನ್ನ ಸೇನೆಸಹಿತ ಅರಣ್ಯಕ್ಕೆ ಬಂದು, ಬೇಟೆಯನ್ನು ತೀರಿಸಿ, ಬಹಳ ದಣಿದು ಬಂದು ಭಾಗೀರಥಿಯ ದಂಡೆಯಲ್ಲಿಹದು, ಆ ಗಂಗಾದೇವಿಯನ್ನು ಕೂಡಿಕೊಂಡು ಜಲಕ್ರೀಡೆಯನ್ನಾಡುತ್ತಿರುವಂಥಾದ್ದನ್ನು ನಾರದರು ತಿಳಿದು ಕೈಲಾಸ ಪರ್ವತಕ್ಕೆ ಗಮಿಸಿ, ಪಾರ್ವತೀದೇವಿಗೆ ಆ ಎಲ್ಲಾ ಸಂಗತಿಯನ್ನು ಶ್ರುತಪಡಿಸಿ ತೆರಳಿದಂಥವರಾದರೂ ॥ ೧ ॥

ಭಾ॥ಮಿ॥ನಿ॥ ಮುನಿಯ ವಾಕ್ಯವ ಕೇಳಿ ಬಾಗಿಲ।
ವನು ಬಲಿದು ಕ್ರೋಧದೊಳಗಿರ್ದಳು।
ವನಿತೆಮಣಿ ತ್ರಿಪುರಾರಿ ಕೋಕಿಲವಾಣಿ ಘನವೇಣಿ।
ಮನುಮಥಾರಿಯು ಇತ್ತ ತನ್ನಯ।
ಗಣಸಹಿತ ಲೈತಂದು ನಡೆಸಿದ।
ವಿನಯದೊಳು ಕಾಂತೆಯನು ಬಾಗಿಲ ಬಳಿಯ ತಾನಿಂದು

ಟೀಕು—(ಸ್ತ್ರೀಯರಲ್ಲಿ ಶ್ರೇಷ್ಠಳಾದಂಥಾ, ಪರಮೇಶ್ವರನ ಪ್ರಿಯಳಾದಂಥಾ ಕೋಕಿಲಾಪಕ್ಷಿಯ ಹಾಂಗೆ ವಾಕ್ಯವುಳ್ಳಂಥಾ, ಮತ್ತ ಪರ್ವದಹಾಗೆ ಜಡೆಯುಳ್ಳಂಥಾ ಪಾರ್ವತಿಯು, ನಾರದರ ಮಾತನ್ನು ಕೇಳಿ ಕವಾಟಬಂಧನವಂ ಮಾಡಿಕೊಂಡು ಇರುವಂಥವಳ

...ಳು. ಇತ್ತಲಾಗಿ ಸ್ಮರವೈರಿಯಾದ ಪರಮೇಶ್ವರನು ತನ್ನ ಭೂ
...ತಗಣಂಗಳ ಒಡಗೊಂಡು ಬಂದು, ಮನೆಯ ಬಾಗಿಲ ಹತ್ತಿರ
...ಂತು ಪ್ರಿಯಳಾದ ಪಾರ್ವತಿಯನ್ನು ಮಾತಾಡಿಸಿದನು ||೨||

... ೨೦|೧|೧೯೩೩. ಮುಕ್ಕಾಮು ಕಡ } ನಾರಾಯಣ ಸುಬ್ರಾವ
...ಕಾ ತಾ. ಹೊನ್ನಾವರ ಜಿ. ಕಾನಡಾ } ಗೋಕರ್ಣಕರ ಹೆ. ಮಾ.

(ಮುಂದಕ್ಕೆ ಸಾಗುವದು

— o —

ರಾ. ಸಾ. ಕನ್ನಡ ಶಾಲಾಪತ್ರದ ಎಡಿಟರ ಪ್ರಾಂತ ದಕ್ಷಿಣ ...ಭಾಗ ಇವರ ಸನ್ನಿಧಿಗೆ—

ವಿ. ವಿ. ಆರ್ಯರೆ— ತಮ್ಮ ಕರದಲ್ಲಿ ಜನಿಸುವ ಸುಂದರ ಶಾ...ಲಾಪತ್ರಿಕೆಯಲ್ಲಿ ಕೆಳಗೆ ಬರೆದ ನಾಲ್ಕು ಪಂಕ್ತಿಗಳಿಗೆ ಆಶ್ರಯ ...ದೊರೆತೀತೆಂದು, ತುಂಬಾ ನಂಬಿದ್ದೇನೆ—

ಬುಧಜನರೇ— ಕೃತಪುರ (ಗದಗ) ತಾಲೂಕ ಪೈಕೀ ಕಸ...ಬಾ ಮುನಿವೃಂದ (ಮುಳಗುಂದ) ಇಲ್ಲಿಯ ಶಾಲೆಯ ಹೆ. ...ಮಾ. ರರಾದ ಗುರುನಾಥ ಬಾಳಾಜಿ ಹೊಂಗಲಕರ ಇವರು ಸ್ವರ್ಗ...ಲೋಕಕ್ಕೆ ಗಮಿಸಿದ್ದು ಕಂಡು ನಮ್ಮ ಶೋಕಾಂಬುಧಿಗೆ ನೆಲೆ ಇಲ್ಲ...ದಂತಾಯಿತು. ಇವರ ಗುಣ ವರ್ಣಿಸುವದಕ್ಕೆ ತಕ್ಕ ಭೂಷಣ...ವಸ್ತುವೆಂದು ತಿಳಿದು ನನ್ನ ಅಲ್ಪಮತಿಗೆ ಸೂಚಿಸಿದಷ್ಟು ವರ್ಣಿ...ಸಿದ್ದೇನೆ. (ಆದರೂ ಅಸಾಧ್ಯವು) ಅವರವರ ಶಿಷ್ಯ ಪ್ರಭೃತಿಗ...ಳಿಗೂ ಬೇರೆ ವಿದ್ವತ್ ಜನರಿಗೂ ತಿಳಿಯಿಸುವ ಅವಶ್ಯ ಇದ್ದುದರಿಂ...ದ ಇಲ್ಲಿ ಕೊಟ್ಟಿರುತ್ತೇನೆ—

...ಕಂದ || ವಸುಧೆಯೊಳಿಪ್ಪಮುನಿಪುರ |
ಭಾಸಿಪದೇಶಿಕನನೆಂಬಪೆಸರಿಂ ಮೆರೆದರ್ ||
ಪಾಠಿಸಗುರುರಾಯರುತಾ |

ಪೀಠನಪಶುಪತಿಯಾಗೆ ಕೈಲಾಸದೊಳು ॥ ೧ ॥
ಯುತಪಾಪಹರುಷದಿಂದಲಿ |
ಭವಭಯಾಪಹಶಿವದಾನಂದವಿದ್ಯಾಧನದಿ ॥
ಕಮಲಾಕ್ಷಿಯಿಂ ಶ್ರೀಕ್ಷಣಾಕ್ಷಣ |
ಜವದಿಂ ಸೇರಿ ಶಿವರಾಗಮಾಂದತ್ತುವನು ॥ ೨ ॥
ಪರಗಣ ವೈಸ್ವದವಿದ್ಯಾ |
ದಿವ್ಯಪರಿಪೂರ್ಣ ಅರುಪಿಚರಿ ಶಿವರವರು ॥
ಸರಿಪರಿ ರೋಗನಿವಾರಣ |
ಕರದಿಂ ಕ್ರಾಪದಿಪಾಶಿಕಳಿಸುವಾದನು ॥ ೩ ॥

ಭಾಮಿನಿ ॥ ಪೋಸವೆಂಬುತಭಾವೆಗ್ಗೆಸುತ |
ರೋಗದಿಂದಪರಿರುಪ್ರವಿಘ್ನಸುತ |
ಈ ಪ್ರೆಯಿಂದನರಕ್ಕೆ ಶವನ್ನು ರಶಿಕಳಿಸುವರು ॥
ಶಕ್ತಿಮೋಗಪದೇಶಿಕನುಕರಯಿಂ |
ಘನನಪ್ರೋದಿಕುಶಾಲಸ್ಥಿತಿಯು |
ಅನವಾಮಸಧಿಯೊಳಿಸೇವ ಮುನಿಪುರದಲ್ಲಿಗತಿ
ಯಾಯ್ತು ॥ ೪ ॥

ಭಾಮಿನಿ ॥ ಬುಧಜನರೇಲಾಲಿನರಿಚರಿತವ |
ಸದಮಲದಗುಣವರ್ಣಿಸಲುವರ |
ಆವಿಶೇಷಗಳ ಅಸಾಧ್ಯವನಾದಸದ್ಗುರುವು ॥
ಮುದಭೇದಪಮಾಡಲರಿಯರು |
ಉದರನಿರ್ವಾಹದಾಶೆರಹಿತರು |
ಪದ್ಮನಾಭನಬಿಡದನುಶಿಸುವರಿಗೆ ದೃಢಾಯುಕೆವೂ ॥

॥ ಶ್ಲೋಕ ॥

ಶಿವಶಂಕರಗುರುಂ | ಕಾಮಿತಾರ್ಥಪ್ರದಾಯಕಂ |

ಪುಷ್ಪಭಯಹರಸುಖಂ । ಕ್ಷೇಮವಿದ್ಯಾದಿದಾಯಕಂ ॥ ೧ ॥

ವ್ಯಾ— ವಿದ್ವಜ್ಜನರೇ ಅನಧ್ಯೋವಾಸಪಠ್ಯೋಪಾಧ್ಯಾಯೋ ನಿವಿದ್ಯತೆ ಎಂಬ ರೀತಿಯ ಅರ್ಥಕ್ಕೆ ಅನುಸರಿಸಿ ಇದರಲ್ಲಿಯು ಸ್ವಾರ್ಥಿಕದ ಕಡೆಗೆ ಲಕ್ಷಗೊಡದೆ ಅವರ ಗುಣಗ್ರಾಹ್ಯದ ಕಡೆ ಕಿತ್ತಬೇಕೆಂದು ನನ್ನ ಆಶೆ ಇರುತ್ತದೆ.—

ತಾ. ೩೧।೧।೮೩ ಇಸವಿ. ಯಲಿಶಿರೂರ ತಾ. ಗದಗ

ಸದರೀಯವರ ಶಿಷ್ಯ.
ನಾರಾಯಣ ಶೇಷೋ ಬೆಟಗೇರಿ
ಹೆ. ಮಾ.

—o—

ರಾವಸಾಹೇಬ ದಕ್ಷಿಣಭಾಗದ ಶಾಲಾಪತ್ರಕರ್ತರ ಸನ್ನಿಧಿ— ವಿ. ವಿ. ಕೆಳಗೆ ಬರೆದ ನಾಲ್ಕು ಪಂಗ್ತಿಗಳಿಗೆ ತಮ್ಮ ಬೆಲೆಯುಳ್ಳ ಪತ್ರಿಕೆಯಲ್ಲಿ ಅವಕಾಶವಾಗಿ ಪ್ರಕಟಿಸಬೇಕೆಂದು ವಿನಂತಿಯುಂಟು.

ಅಣ್ಣಿಗೇರಿ ತಾಲೂಕ ನವಲಗುಂದ, ಜಿಲ್ಲಾ ಧಾರವಾಡ ಇಲ್ಲಿಯ ಶಾಲೆ "ವಿಜಿಟರ್ಸ" ಬುಕ್ಕಿನಲ್ಲಿ ಯೋಗ್ಯಅಧಿಕಾರಸ್ಥರು ಬರದ ಅಭಿಪ್ರಾಯಗಳು:—

ಮೊಹಬೂಬನ ಎಜ್ಯುಕೇಶನಲ ಇನಸ್ಪೆಕ್ಟರ ಸಾಹೇಬ ಬಹಾದೂರ ದಕ್ಷಿಣಭಾಗ ಇವರ ಅಭಿಪ್ರಾಯವು ಇಂಗ್ರೇಜಿಯಲ್ಲಿ ಇದ್ದಂತೆ ಭಾಷಾಂತರವು "ಹೆಡ್ಮಾಸ್ತರ ಗುರುಬಸಪ್ಪ, ಹಳಕಟ್ಟಿ ಇವರು ಟ್ರೇನಿಂಗಕಾಲೇಜದ ಸರ್ಟಿಫಿಕೇಟ ಸಂಪಾದಕರು ಹಾಗು ಧಾರವಾಡ ಹೈಸ್ಕೂಲನಲ್ಲಿ ಇಂ ಗ್ಲಿಷ ಎತ್ತೆಯಿಂದ ಅಭ್ಯಾಸ ಮಾಡಿದವರು ಇದ್ದಾ ಇವರು ಎರಡು ವರುಷಗಳಲ್ಲಿ ಆಶಿರಿದ ೧೮ ಶಾಲಾತನಕ ಗರ ಸಂಖ್ಯೆ ಹೆಚ್ಚಿಸಿದಲ್ಲದೆ ಇಂಗ್ಲಿಷ ಮೂರು ಕ್ಲಾಸಗಳನ್ನು

ನಡ್ಡುಯಿಸಿದ್ದಾರೆ. ಇವರು ಅಪೇಕ್ಷಗಾಗಿ ಬಂದವಾಗ್ಗೆ ಕನ್ನಡಳ ಯತ್ತೆಯುವನಕ ಮಾತ್ರ ಅಭ್ಯಾಸವಿತ್ತು. ಇಷ್ಟು ಕೆಲಸವನ್ನು ಮಾಡ್ಡು ಸ್ತೋತ್ರಕ್ಕೆ ಲಾಯಖ ಹಾಂಗು ಬಡತಿ ಯೋಗ್ಯವ.

ಶ್ರೀ ರಾವಸಾಹೇಬ ಮಾಮಲೇದಾರರ ಅಭಿಪ್ರಾಯವು. ಹೆಡ್ಡಮಾಸ್ತರ ಗು. ಫ. ಹಳಕಟ್ಟಿ ಇವರು ಬಹಳ ಮೋಹನ. ವ ಊರ ಜನರಿಗೆ ಪ್ರಿಯಾಸ್ಪದರು ಇದ್ದಾರೆ. ಅಭ್ಯಾಸವು ಸಾಧಿತು; ಹುಡುಗರು ಬಹಳ; ಮಾಸ್ತರರು ಕಡಿಮೆ. ಆದರೂ ಸಾಲಿ ಬಹಳ ಒಳ್ಳೇ ಸ್ಥಿತಿಯಲ್ಲಿ ಅದೆ—

ಇವುಗಳ ಹೊರ್ತು ಇವ್ನೂ ಅನೇಕ ಶರಗಳುಅವೆ. ಪತ್ರವಿಸ್ತಾರದಬಗ್ಗೆ ತಗೆದು ಕೊಳ್ಳಲಿಲ್ಲ. ಮಾಸ್ತರರಿಗೆ ಇಂಗ್ಲಿಷಿನಲ್ಲಿ ಚನ್ನಾಗಿ ಜ್ಞಾನವಿದ್ದು ನಾಗಾಲತಾ ಈ ಊರ ಯಾವತ್ತುಜನರ ಇಂಗ್ಲಿಷ ಪತ್ರವ್ಯವಹಾರಗಳಲ್ಲಿ ಕೈಲಾದಷ್ಟುಗೆ ಸಹಾಯ ಮಾಡುತ್ತಾರೆ. ಇಂಥಾ ಮಾಸ್ತರರನ್ನು ಈ ಊರಿಗೆ ಕೊಟ್ಟಬಕ್ಕೆ ನಾವು ಸರಕಾರದವರ ದಯ ನೆನಸುತ್ತೇವೆ—

ಅಣ್ಣೀಗೇರಿ ತಾ. ನವಲಗುಂದ ಮಿತಿ. ೧೬।೧।೮೩ಇಸ್ವಿ	ಸಹಿ ಚಂದಪ್ಪಯ್ಯಾ ದೇಶಪಾಂ ಡೆ ಕ. ಅಣ್ಣೀಗೇರಿ. ಸಹಿ ರಾಘ ವೇಂಧ್ರ ವೆಂಕಾಜಿಸ್ತ್ಕ. ಕ. ದಾರ

—೦

ಕನ್ನಡಶಾಲಾಪತ್ರಿಕೆ

CANARESE SCHOOL PAPER.

ಪುಸ್ತಕ ೧೮] [ಸಂಚಿಕೆ ೩

ಮಾರ್ಚ. ೧೮೮೩

ಅನುಕ್ರಮಣಿಕೆಯು.

ಪುಟ.

ದ್ಯಾಸುಧಾರಣೆಗೆ ಸಂಬಂಧವಾದ ಸಂಗತಿಗಳು........... ೪೯

ಂದುಸ್ಥಾನದ ಇತಿಹಾಸವು........................ ೫೩

ಂಸಾರವು.. ೫೬

ತ್ರವ್ಯವಹಾರವು.................................... ೬೪

—*०*—

CONTENTS.

Pages.

Education and Improvement....................49

History of India...... 53

Domestic Life............ 56

Correspondence... 64

—000—

DHARWAR

Printed at the Dnana Wardhaka Press.

ಶಾಲಾಪತ್ರಕವು.

ಸ್ತಕ ೧೮] [ಸಂಚಿಕೆ ೩

ಮಾರ್ಚ. ೧೮೮೩

Education and Improvement.

ವಿದ್ಯಾಸುಧಾರಣಾಸಂಬಂಧವಾದ ಸಂಗತಿಗಳು.

—*०*—

ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ೫ ಕೋಟಿ ಜನರು ಸಿಸುತ್ತಾರೆ. ಅವರಲ್ಲಿ ೬೨ ಲಕ್ಷಜನರಿಗೆ, ಅಂದರೆ ೧೦೦ ಸುಮಾರು ೧೨ ಮಂದಿಗೆ ಓದಲಿಕ್ಕೂ ಬರಿಯಲಿಕ್ಕೂ ವದಿಲ್ಲ.

—०—

ಅಯರ್ಲಂಡದಲ್ಲಿ ವಿದ್ಯಾಭ್ಯಾಸವು ಬೆಳೆಯುತ್ತ ಬಂದ ಮವು ಹ್ಯಾಗಂದರೆ, ಸನ್ ೧೮೪೧ ರಲ್ಲಿ ೧೦೦ ರಲ್ಲಿ ೫೩ ರಿಗೆ ಓದಲಿಕ್ಕೂ ಬರಿಯಲಿಕ್ಕೂ ಬರುತ್ತಿದ್ದಿಲ್ಲ. ಆದರೆ ಸ ೧೮೫೧ ರಲ್ಲಿ ಈ ಪ್ರಮಾಣವು ೧೦೦ ಕ್ಕೆ ೪೭ ರಂತೆ, ೬೧ ರಲ್ಲಿ ೧೦೦ಕ್ಕೆ ೩೯ರಂತೆ, ೧೮೭೧ ರಲ್ಲಿ ೧೦೦ಕ್ಕೆ ೩೩ ಂತೆ, ೧೮೮೧ ರಲ್ಲಿ ೧೦೦ಕ್ಕೆ ೨೫ ರಂತೆ ಇತ್ತು. ಇದರಿಂದ

ಮಾಯಿತು. ಏಳುಮಂದಿ ಗುಡಗ ಗಂಡಸರೂ ಮೂವರು ಹೆಂಗಸರೂ ಈ ಪ್ರದರ್ಶನದಲ್ಲಿ ಇದ್ದರು. ಇವರೆಲ್ಲರ ತೂಕವು ೧೦ ಟನ್ನಿಗಿಂತ (೨೮೦ಮಣಕ್ಕಿಂತ) ಹೆಚ್ಚು ಇತ್ತು. ಎಲ್ಲಕ್ಕೂ ಹೆಚ್ಚು ಗುಡಗ ಹೆಂಗಸು ೨೬ವರ್ಷದವಳು ೩೯ಮಣ, ಎಲ್ಲಕ್ಕೂ ಹೆಚ್ಚು ಗುಡಗ ಗಂಡಸು ೪೭ ಮಣ ಇದ್ದನು!

—o—

ಸೂರತ ಪಟ್ಟಣದಲ್ಲಿ ಹಿಂದಿನ ತಿಂಗಳಲ್ಲಿ ಒಂದೇ ಮುಹೂರ್ತದಿಂದ ೩೦೦೦ಲಗ್ನಗಳಾದವು. ಈ ಪಟ್ಟಣವು ಬಹು ದೊಡ್ಡದುಂಟು. ಮುಂಬಯಿ ಇಲಾಖೆಯಲ್ಲಿ ೧ನೇದು ಮುಂಬಯಿ, ೨ನೇದು ಅಹಮ್ಮದಾಬಾದು, ೩ನೇದು ಸುರತಪಟ್ಟಣವು.

—o—

ಚೇಳುಕಡಿದ ಸ್ಥಳಕ್ಕೆ ಹಲ್ಲಿಯನ್ನು ಒತ್ತಿ ಹಿಡಿದರೆ ಚೇಳು ಬಹು ಬೇಗ ಇಳಿಯುತ್ತದಂತೆ.

—o—

ಮಿ. ರಸೆಲ್ ಧೊರೆಗಳು ಕಾನಡಾ ಜಿಲ್ಹೆಯಲ್ಲಿ ಇದ್ದಾರೆ. ಮುಂದಿನ ತಿಂಗಳಿನ ಕಡೆಯಲ್ಲಿ ಧಾರವಾಡಕ್ಕೆ ಬರತಕ್ಕವರಿದ್ದಾರೆಂದು ಕೇಳುತ್ತೇವೆ.

—o—

ಮಿ. ಡಾಯರೆಕ್ಟರ ಧೊರೆಗಳು ಮುಂಬಯಿಯಾಕಡೆಗೆ ಹೊರಟುಹೋದರೆಂದು ತಿಳಿದದೆ.

—o—

ರಾ. ಸಾ. ಶ್ರೀನಿವಾಸರಾವ ರೊದ್ದ ಇವರು ಸದ್ಯಕ್ಕೆ ಧಾರವಾಡದಲ್ಲಿ ಇದ್ದಾರೆ.

—o—

History of india·

ಹಿಂದುಸ್ಥಾನದ ಇತಿಹಾಸವು.

(೩೩ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

ಮದ್ರಾಸ ಇಲಾಖೆಯ ಕೆಳಗೆ ಕೆಲವು ಆಶ್ರಿತ ಸಂಸ್ಥಾನಗಳುಂಟು. ಅವುಗಳಲ್ಲಿ ತ್ರಾವಣಕೋರ [ತಿರುವಂಕೋಡು] ಕೋಚೀನ (ಕೊಚ್ಚಿ), ಎಂಬೆರಡು ಮುಖ್ಯ—ಮೊದಲನೇದು ದಕ್ಷಿಣ ಸಮುದ್ರ ತೀರದಲ್ಲಿ, ಎರಡನೇದು ಅದರ ಉತ್ತರದಲ್ಲಿ ಉಂಟು.

ಮದ್ರಾಸ ಇಲಾಖೆಯಲ್ಲಿ ಪ್ರಸಿದ್ಧ ಸ್ಥಳಗಳು— ಉತ್ತರ ಸರಕಾರದಲ್ಲಿ ಗುಮಸೂರು, ಮಚ್ಛಲೀಪಟ್ಟಣ, ಗುಂಟೂರು — ಕರ್ನಾಟಕವೆಂಬ ಭಾಗದಲ್ಲಿ ಮದ್ರಾಸ [ಚೆನ್ನಪಟ್ಟಣ], ಅದರ ಹತ್ತಿರ ಚಿಂಗಲಪಟ, ಕಾಂಜೀವರಂ — ಉತ್ತರ ಅರ್ಕಾಟ ಪ್ರಾಂತದಲ್ಲಿ ಅರ್ಕಾಟ, ವೆಲ್ಲೂರು, ವಾಂಡಿವಾಶ — ದಕ್ಷಿಣ ಅರ್ಕಾಟ ಪ್ರಾಂತದಲ್ಲಿ ಕಡಲೂರು, ಸೇಂಟ ಡೇವಿಡ್ ಎಂಬ ಹಾಳು ಕೋಟೆ, ಜಿಂಜಿ, ಪೋರ್ಟೋನೋವೊ ಎಂಬ ಬಂದರ, ಪುದುಚೇರಿ ಫ್ರೆಂಚರ ಮುಖ್ಯ ಪಟ್ಟಣ. ತ್ರಿಚನಾಪಳ್ಳಿಯ ಜಿಲ್ಲೆಯಲ್ಲಿ ತ್ರಿಚನಾಪಳ್ಳಿ, ಕಾವೇರಿಯೊಳಗೆ ಶ್ರೀರಂಗಂ ಎಂಬ ಗಡ್ಡೆ—ತಂಜಾವರ ಜಿಲ್ಲೆಯಲ್ಲಿ ತಂಜಾವರ, ಅದರ ಹತ್ತಿರ ಮಧುರೆ, ಪ್ರಾಚೀನ ಪಾಂಡ್ಯ ಅರಸರ ರಾಜಧಾನಿ. ಮಲಯಾಳ ಜಿಲ್ಲೆಯ ಕಾಲಿಕತ [ಕೋಳಿಕೋಡು], ಕಾನಾನೂರು — ದಕ್ಷಿಣ ಕಾನಡಾ ಜಿಲ್ಲೆಯಲ್ಲಿ ಮಂಗಳೂರು ದೊಡ್ಡ ಬಂದರ — ಬಳ್ಳಾರಿಯ ಜಿಲ್ಲೆಯಲ್ಲಿ ಬಳ್ಳಾರಿ, ಹಂಪಿ ಅಥವಾ ವಿಜಯನಗರವೆಂಬ ಹಾಳು ಪಟ್ಟಣ, ಪೂರ್ವದ ತ್ರೈಲೋಕ್ಯರೆಂಬ ಅರಸರ ರಾಜಧಾನಿ.

[೧೪] ದಕ್ಷಿಣಹಿಂದುಸ್ಥಾನದ ಮಧ್ಯಭಾಗದಲ್ಲಿ ನಿಜಾಮನ ರಾಜ್ಯದ ದಕ್ಷಿಣಕ್ಕೆ ಮೈಸೂರು ಸಂಸ್ಥಾನವುಂಟು. ಮೈಸೂರಿನ ರಾಜ್ಯವು ಎತ್ತರವಾದ ತಪ್ಪಲಶೀಮೆ ಇರುತ್ತದೆ. ಈ ಸಂಸ್ಥಾನದ ಕಾರಭಾರವನ್ನು ಇಂಗ್ಲಿಷ ಸರಕಾರದಿಂದ ನೇಮಿಸಲ್ಪಟ್ಟವನೊಬ್ಬ ಚೀಫಕಮಿಶನರನು ನಡಸುತ್ತಿದ್ದನು. ಆದ ಈಗ ಚಾಮರಾಜೇಂದ್ರ ಒಡಿಯರೆಂಬ ಅರಸನಿಗೆ ಸರಕಾರದವರ ಸ್ವಾತಂತ್ರ್ಯ ಕೊಟ್ಟಿದ್ದಾರೆ.

ಮೈಸೂರಿನ ನೈಋತ್ಯಕ್ಕೆ ಕೊಡಗವೆಂಬ ಸಣ್ಣ ಗುಡ್ಡಗಾಡಿ ಪ್ರದೇಶ ಉಂಟು. ಈ ನಾಡಿನ ಮುಖ್ಯ ಪಟ್ಟಣವಾದ ಮಡಿಕೆರಿಯಲ್ಲಿ ವೀರರಾಜ್ಯರೆಂಬ ಅರಸರು ಪೂರ್ವಕಾಲದಲ್ಲಿ ಳುತ್ತಿದ್ದರು.

ಮೈಸೂರ ಪ್ರಾಂತದಲ್ಲಿ ಪ್ರಸಿದ್ಧ ಸ್ಥಳಗಳು — ಮೈಸೂರು ರಾಜಧಾನಿ; ಶ್ರೀರಂಗಪಟ್ಟಣ ಹಳೆರಾಜಧಾನಿ. ಬೆಂಗಳೂರು ಇಂಗ್ಲಿಶ ಅಧಿಕಾರಿಗಳಿರುವ ಸ್ಥಳ — ಬಿದನೂರು (ನಗರ)ಪೂರ್ವದ ಇಕ್ಕೇರಿಯ ಅರಸರ ರಾಜಧಾನಿ. ದ್ವಾರಸಮುದ್ರ (ಹಳೆಬೀಡು) ಪೂರ್ವದ ಬಲ್ಲಾಳ ಅರಸರ ರಾಜಧಾನಿ. ನಂದಿದುರ್ಗ, ಚಿತ್ರದುರ್ಗ, ಹೆಸರಾದ ಕೋಟೆಗಳು. ಶೃಂಗೇರಿ ಶಂ ರಾಚಾರ್ಯರ ಜನ್ಮಭೂಮಿ.

[೧೫]ಮೇಲೆ ಹೇಳಿದ ರಾಜಕೀಯ ವಿಭಾಗಗಳಲ್ಲದೆ ಮಾಲಯ ಪರ್ವತದೊಳಗೆ ಮೂರು-ದೇಶೀ ಅರಸರ ಸಂಸಾನಗಳುಂಟು. ಇವು ಹೆಸರಿಗೆ ಮಾತ್ರ ಸ್ವತಂತ್ರ ಸಂಸ್ಥಾನಳೆಂದೆನಿಸಿಕೊಳ್ಳುತ್ತವೆ, ವಸ್ತುತ: ಇಂಗ್ಲಿಷ ಸರಕಾರದ ಸಂದ ಸ್ನೇಹದ ಒಡಂಬಡಿಕೆಯನ್ನು ಮಾಡಿಕೊಂಡು ಬಾಳುತ್ತವೆ ಇವುಗಳಲ್ಲಿ ಭುತಾನವೆಂಬ ಸಂಸ್ಥಾನವು ಆಸಾಮ ಪ್ರಾಂ

ದ ಉತ್ತರದಲ್ಲಿ ಹಿಮಾಲಯದ ಇಳಕಲಿನ ಮೇಲೆ ಇರುತ್ತದೆ. ಸಿಕಿಂ ಸಂಸ್ಥಾನವು ಬಂಗಾಲ ಪ್ರಾಂತದ ಉತ್ತರದಲ್ಲಿ ಅದೇ ಇಳಕಲಿನ ಮೇಲೆ; ನೇಪಾಳದ ಸಂಸ್ಥಾನವು ಬಂಗಾಲ ವಾಯುವ್ಯ ಪ್ರಾಂತಗಳ ಉತ್ತರದಲ್ಲಿ ಅದೇ ಇಳಕಲಿನಮೇಲೆ.

(೧೬) ಪೋರ್ತುಗೀಸರ ವಶದಲ್ಲಿ ಹಿಂದೆ ಹೇಳಿದ ಗೋವಾಂತಕ ಪ್ರಾಂತ ಹೊರ್ತಾಗಿ, ಗುಜರಾಥದಲ್ಲಿ ಸೂರತ ಪಟ್ಟಣದ ಹತ್ತಿರ ದಮಾನವೆಂಬ ಬಂದರವೂ, ಕಾಠೇವಾಡ ಪ್ರಾಂತದ ದಂಡೆಯ ಹತ್ತಿರ ದಿವ್ಹಾ ಎಂಬ ನಡುಗಡ್ಡೆಯೂ ಉಂಟು. ಫ್ರೆಂಚರ ವಶದಲ್ಲಿ ಪಾಂಡಿಚರಿ ಅಲ್ಲದೆ, ಕಲಕತ್ತೆಯ ಹತ್ತಿರ ಚಂದ್ರನಗರ ವೆಂಬ ಬಂದರವು ಇರುತ್ತದೆ.

(೧೭) ಹಿಂದುಸ್ಥಾನದ ಸರಹದ್ದಿನ ಹೊರಗೆ ಬ್ರಹ್ಮದೇಶದ್ದೊಂದು ದೊಡ್ಡ ಭಾಗವು ಇಂಗ್ಲಿಷ ಸರಕಾರದ ಅಮಲಿನೊಳಗೆ ಇರುತ್ತದೆ. ಆ ಭಾಗವು ಚೀಫ ಕಮಿಶನರನು ಹಿಂದುಸ್ಥಾನದ ಗವರ್ನರ ಜನರಲ್ಲಿನ ಕೈಕೆಳಗೆ ನಡೆಯುತ್ತಾನೆ. ಆ ಭಾಗದೊಳಗೆ ಮೂರು ಬಹು ಬೆಳೆಯುಳ್ಳ ಪ್ರಾಂತಗಳು ಬಂಗಾಲದ ಉಪಸಾಗರದ ಪೂರ್ವದಂಡೆಯಲ್ಲಿ ಇರುತ್ತವೆ. ಅವುಗಳಲ್ಲಿ ಅರಾಕಾನ ವೆಂಬ ಪ್ರಾಂತವು ಬಂಗಾಲದ ಪೂರ್ವ ಮೇರೆಗೆ ಹೊಂದಿರುತ್ತದೆ. ಅದರ ದಕ್ಷಿಣಕ್ಕೆ ಪೆಗು, ತನೆಸರಿಂ, ಎಂಬೆರಡು ಪ್ರಾಂತಗಳುಂಟು. ಪೆಗೂ ಪ್ರಾಂತದಲ್ಲಿ ಇರಾವತಿ, ಸಿತಾಂಗ, ಸಲ್ವೆನ, ಎಂಬ ದೊಡ್ಡ ಹೊಳೆಗಳು ಹರಿಯುತ್ತವೆ.

(ಮುಂದಕ್ಕೆ ಸಾಗುವದು.)

—o—

Domestic Life.

ಸಂಸಾರಧರ್ಮ.

[೪೯ನೇ ಪುಟದಿಂದ ಮುಂದಕ್ಕೆ ಸಾಗಿದ್ದು]

ಈ ರೀತಿಯಲ್ಲಿ ಪುತ್ರರುಗಳಿಗೆ ತಾಯಿತಂದೆಗಳೇ ಇಹದಲ್ಲಿ ಅಧಿಕ ಪೂಜ್ಯತ್ವವುಳ್ಳವರೆಂದು ಕೆಲವು ಪುರಾತನದ ಪೌರಾಣಿಕ ಸಮ್ಮತ ವಾದಗಳು ಸಹ ಪ್ರಸಿದ್ಧ ಪಡಿಸುತ್ತವೆ. ತಾಯಿ ಮೊಲೆಯಿಂದ ಹಾಲು ಕೊಡುವ, ಕೋಮಲಾರ್ಭಕರ ರಕ್ಷಣೆಯಾಗುತ್ತದೆ. ಯಾವಲ್ಲಿ ತಾಯಿಯು ವಸ್ತಿ ಮಾಡಿಕೊಂಡಿರುತ್ತಾಳೋ ಆ ಸ್ಥಲವು ಬಾಲಕರಿಗೆ ಕಾಶಿಪ್ರಯಾಗವಕ್ಕಿಂತಲೂ, ಅಧಿಕೋತ್ಕೃಷ್ಟ ವಾಗಿದೆ. ಐಹಿಕ ಮಾತಾಪಿತೃಗಳನ್ನು ತಿಳಿಯುವ ಜ್ಞಾನ ಉಂಟಾದ ಹೊರತು, ಪಾರಲೌಕಿಕ ಮಾತಾಪಿತೃವಾದ ದೇವರನ್ನು ಹ್ಯಾಗೆ ತಿಳಿದಾನು? ತಿಳಿಯಲಾರನು. ಯಾವನಿಗೆ ತನ್ನ ತಾಯಿ, ತಂದೆಗಳೆಂಬ ತಿಳುವಳಿಕೆ ಇಲ್ಲವೋ, ಅವನು ತಾಯಿಗೂ, ತಂದೆಗೂ, ತಂದೆಯಾದ ದೇವರನ್ನು ತಿಳಿಯುವ ಜ್ಞಾನವು ಹ್ಯಾಗೆ ಉಂಟಾದೀತು? ಉಂಟಾಗದು. ತಾಯಿಯಲ್ಲಿ ಮಮತೆ ಇಲ್ಲದವನಿಗೆ ತಾಯಿಗೆ ತಾಯಾದ ಅಜ್ಜಿಯಲ್ಲಿ ಮಮತೆ ಯುಂಟಾದೀತೇ, ಹಾಗೆಯೇ ತಂದೆಯ ಮೇಲೆ ಪ್ರೀತಿ ಮಾಡದವನು ತಂದೆಗೆ ತಂದೆಯಾದ ಅಜ್ಜನಮೇಲೆ ಪ್ರೀತಿ ಮಾಡ್ಯಾನೆ? ಮಾಡಲಾರನು. ಇದನ್ನು ಅರಿಯಬೇಕಾದರೆ ಮೊದಲು ನಾವು ಸಂಸಾರವೆಂಬ ಪಾಠಶಾಲೆಯಲ್ಲಿ ಅಭ್ಯಾಸ ಮಾಡಿ ತಾಯಿ, ತಂದೆ, ಅಣ್ಣ, ತಮ್ಮ ಅಕ್ಕ ತಂಗಿ, ಎಂಬ ಮೂಲಾಕ್ಷರಗಳನ್ನೂ ಉಚ್ಚರಿಸಲಿ, ಪ್ರೇಮಭಾವವೆಂಬ ಶಬ್ದಗಳನ್ನೂ ಸಂಸಾರ ಸಂಬಂಧವಾದ ಅನೇಕ ಕೃತ್ಯಗಳೆಂಬ ವಾಕ್ಯಗಳನ್ನೂ, ಪೂರಾ ಕಲಿತುಕೊಂಡ ತರುವಾಯ, ಈ ಸರ್ವ ಸಂಸಾರ ಸಂರಕ್ಷಕನಾದ ದೇವರನ್ನು ತಿಳಿಯ

...ಕು. ಇದನ್ನು ತಿಳಿಯಬೇಕೆಂಬುವದಕ್ಕಾಗಿಯೇ ನಮಗೆ ಪರಿ...ರವು ಅತ್ಯವಶ್ಯವಿದೆ.

ಒಬ್ಬ ತಂದೆಗೆ ಐದುಮಂದಿ ಹುಡುಗರಿದ್ದಾರೆ, ಈ ಐವರು ...ಕಸ್ಥರಾಗಿ ತಂದೆಯ ಬಳಿಯಲ್ಲಿ ಭ್ರಾತೃಭಾವದಿಂದ ಬದ್ಧ...ಾಗಿರುತ್ತಾರೆ. ಆದರೆ ಪರಸ್ಪರರಲ್ಲಿ ಭ್ರಾತೃಭಾವವಿಲ್ಲದ್ದರಿಂ... ಉಂಟಾಯಿತು? ನಿಜವಾದ ಅರಣ್ಯದಲ್ಲಿದ್ದುದರಿಂದಲ್ಲ, ...ಂಸಾರದಲ್ಲಿದ್ದುದರಿಂದಲೇ, ಕಣ್ಣು ತೆರೆದು ನೋಡಿರಿ! ಈ ...ೊಂದು ಪ್ರಚಂಡ ಬ್ರಹ್ಮಾಂಡವು. ಈ ಸಕಲ ಬ್ರಹ್ಮಾಂಡದ ಮಿ...ನಾದವನು ಏಕೋದೇವ ಈಶ್ವರನು. ಸಮಸ್ತ ಲೋಕವು ಒ...ು ತಂದೆಯಾದ ಕರ್ತನ ಸಂತಾನವು ಸ್ತ್ರೀ ಪುರುಷರುಗಳು ...ಂಗತಂಗಿಯರುಂದಿರು, ಎಂಬ ಈ ತರದ ಜ್ಞಾನೋಪಾಯದ ...ನೋಟಸ್ಥಾನವೆಲ್ಲಿ? ಈ ಜ್ಞಾನ ಸೂತ್ರಧಾರಿಯು ಎಲ್ಲಿದ್ದರಿಂ...ನಮಗೆ ತಿಳಿದು ಬಂದನು? ಸಂಸಾರದಲ್ಲಿದ್ದುದರಿಂದಲೇ ಹೊ...ರ್ತ ಅನ್ಯಮಾರ್ಗದಿಂದಲ್ಲ. ಒಂದೇ ತಾಯಿಯ ಗರ್ಭಸಂಭೂ...ರರಾದವರೆಲ್ಲರು ತಮ್ಮತಮ್ಮೊಳಗೆ ಅಣ್ಣ, ತಮ್ಮ, ಅಕ್ಕ, ...ತಂಗಿ ಅಂದು ಕೊಳ್ಳುತ್ತಾರೆ. ಇದೇ ಸಂಬಂಧದಿಂದ ಜನರಲ್ಲಿ ಬಂಧುಜ್ಞಾನವುಂಟಾಯಿತು. ಇದರಿಂದಲೇ ಜನರಿಗೆ ಧರ್ಮಶಾಸ್ತ್ರದ ಶಿಕ್ಷಣ ದೊರಕಿತು, ಮತ್ತು ಉತ್ತಮ ಸಂಸ್ಕಾರ ಹೊಂದಿದರು. ಆದರೆ ಜಗದೋದ್ಧಾರಿಯೂ, ಕರುಣಾಸಾಗರನೂ, ಜತಾರೋಪಾಯನೂ ಆದ ಸರ್ವೇಶ್ವರನೆಂಬ ದೇವರು. ನಾನು ಮ ದೇಹಿಂಗಳು ಪ್ರಥಮ ಸಂಸಾರದಲ್ಲಿದ್ದು ಮಾತಾಪಿತೃ ಬಂಧುಗಳೆಂಬ ಭಾವಗಳ ಜ್ಞಾನವುಳ್ಳವರಾಗಿ ಅದೇ ಬಂಧು ಭಾವದಿಂದ ಅವರಿಗೆ ಬಂಧುವು, ತಂದೆಯು, ಪಿತನು, [illegible], ರಕ್ಷಕನೂ, ಗುರುವೂ, ಕರ್ತೃವೂ, ಆದ ತನ್ನನ್ನು ತಿಳಿಯುವ-

ಜ್ಞಾನವುಂಟಾಗಬೇಕೆಂತಲೇ ನಮಗೆ ಈ ಸಂಸಾರದಲ್ಲಿ ಹುಟ್ಟಿಸಿದ್ದಾನೆ. ಇಂಥಾ ಅಪೂರ್ವ ಜ್ಞಾನೋತ್ಪತ್ತಿ ಯಾಗುವ ಸಂಸಾರವು ಸಾಮಾನ್ಯವಾದದ್ದಲ್ಲ.

ಸಂಸಾರವೆಂಬುದು ಕೇವಲ ಪರಮಾತ್ಮನಾದ ದೇವರಮನೆಯು. ಪರಮಾತ್ಮನೆನಿಸಿ ದೇವರೇ ಈ ಸಂಸಾರದ ಕುಲದೇವತೆಯು. ಈ ದೇವತೆ ಎಂಬವಳು ಸಂಸಾರ ಮಂದಿರವನ್ನು ತನ್ನ ಸ್ವಾಧೀನ ಮಾಡಿಕೊಂಡಿದ್ದಾಳೆ. ಅವಳೇ ಸ್ತ್ರೀ ಪುರುಷರಿಗೆ ಪವಿತ್ರತರವಾದ ವಿವಾಹಮುಖದಿಂದ ಬದ್ಧಮಾಡಿ ಐಕ್ಯ ಪಡಿಸಿದ್ದಾಳೆ. ಮಾತಾಪಿತೃಗಳ ಅಂತಃಕರಣದಲ್ಲಿ ಸ್ನೇಹಭಾವವನ್ನು ಅವಳೇ ಉತ್ಪನ್ನ ಮಾಡುತ್ತಾಳೆ. ಆದದರಿಂದ ನಾವು ಇದೇ ಸಂಸಾರದಲ್ಲಿದ್ದು ಈ ಸಂಸಾರ ಕುಲದೇವತೆ ಎಂಬವಳನ್ನ ತಿಳಕೊಳ್ಳಬೇಕು. ಹಾಗು ಅವಳ ಪಾದಪದ್ಮಗಳನ್ನು ನಾವು ನಮ್ಮ ವಕ್ಷಸ್ಥಲದಲ್ಲಿ ಧಾರಣಮಾಡಬೇಕು. ಸಂಸಾರದಲ್ಲಿದ್ದು ಧಾರ್ಮಿಕ ನೆನಿಸಿಕೊಳ್ಳಲಿಕ್ಕೆ ಬರುವದಿಲ್ಲೆಂದೂ, ಸ್ತ್ರೀ, ಪುತ್ರ, ಪರಿವಾರ, ಮುಂತಾದವರು ಧರ್ಮಕ್ಕೆ ಕಂಟಕರೆಂದೂ ಮೂರ್ಖ ಜನರು ಮಾತ್ರ ತಿಳಿಯುವರು. ಸ್ತ್ರೀ ಪುತ್ರರೂ ಎಂದೂ ಧರ್ಮಕ್ಕೆ ಹಾನಿ ಮಾಡುವಂಥವರಲ್ಲ. ಅವರು ಆಗಾಗ್ಯೆ ಈಶ್ವರನಲ್ಲಿ ಎಚ್ಚರಿಕೆಯನ್ನುಂಟು ಮಾಡಿಕೊಡುತ್ತಾರೆ. ಧರ್ಮಕಂಟಕರು ಸ್ತ್ರೀ, ಪುತ್ರರೆಂದು ಮೂರ್ಖ ಜನರು ತಿಳಿಯುತ್ತಾರೆ. ಅದು ವ್ಯರ್ಥ. ಅವರ ಮೂರ್ಖ ಮನಸ್ಸೆಂಬುವದೇ ಧರ್ಮಕಂಟಕವಾದದ್ದೆಂದು ತಿಳಿಯಬೇಕು. ನಾವು ಸಂಸಾರದಲ್ಲಿದ್ದು, ಈಶ್ವರನಲ್ಲಿ ಭಕ್ತಿ, ಪ್ರೇಮ, ಮತ್ತು ಸಖಿತ್ವ ಸಂಪಾದಿಸಿಕೊಂಡಮೇಲೆ ಅಧರ್ಮ ಮಾರ್ಗಕ್ಕೆ ಹ್ಯಾಗೆ ಹೋದೇವು? ಪರಮ ಪಿತನಾದ ದೇವರಲ್ಲಿ ಭಕ್ತಿ ಇದುವದು, ಸಮಸ್ತ ನರನಾರೀಜನರಲ್ಲಿ ಬಂ

ಧು ಭಗಿನಿ ಭಾವವಿಡುವದು ಇವೆರಡು ಧರ್ಮದ ಮುಖ್ಯ ಲಕ್ಷಣ ಗಳಾಗಿರುತ್ತವೆ. ಯಾವ ಸಂಸಾರವು ತನ್ನಲ್ಲಿರುವಂಥಾ ನಮಗೆ ಅತಿ ಪ್ರೀತಿಯಿಂದ, ಈಶ್ವರಭಕ್ತಿ, ಪಿತೃವಾತ್ಸಲ್ಯ, ಮಾತೃಸ್ನೇಹ, ಸ್ತ್ರೀಪ್ರೇಮ, ಬಂಧುಪ್ರೀತಿ ಇತ್ಯಾದಿ ಅನೇಕ ಅಮೂಲ್ಯ ರತ್ನಗಳ ಲಾಭಮಾಡಿಕೊಡುತ್ತದೋ, ಅಂಥಾ ಸಂಸಾರವು ನಮ್ಮ ಶತ್ರುವೆಂದು ತಿಳಿಯದೇ, ನಿಜವಾಗಿ ನಮಗೆ ಅತ್ಯಂತ ಮಿತ್ರತ್ವವುಳ್ಳದ್ದೆಂದು ತಿಳಕೊಳ್ಳಬೇಕು. ಯಾರು ಸಂಸಾರವು ಶತ್ರುವೆಂದು ತಿಳಿದು ಸಂಸಾರ ವಿರುದ್ಧ ಆಚರಣೆಗಳನ್ನು ಮಾಡಿ ಸಂಸಾರ ಮಾರ್ಗವನ್ನು ಬಿಟ್ಟು ಅನ್ಯಮಾರ್ಗದಿಂದ ಪಾರಲೌಕಿಕ ಸುಖ ಇಚ್ಛಿಸುತ್ತಾರೋ ಅವರು ಧರ್ಮವೆಂದರೆ ಏನು ಪದಾರ್ಥವದೆ ಎಂಬದನ್ನು ಅರಿಯದ ಅಜ್ಞಾನಿಗಳೂ ಸಂಸಾರ ಮಾಡುವದಕ್ಕೆ ಅಸಾಮರ್ಥರೂ ಎಂದು ತಿಳಿಯಬೇಕು.

ತಸ್ಮಾತ್ ಯಾವ ಗೃಹದೊಳಗೆ ನಾವು ವಾಸಮಾಡುತ್ತೇವೋ, ಆ ಮನೆಯನ್ನು ಅನಾದರ ಮಾಡಕೂಡದು. ಆ ಮನೆಯಲ್ಲಿದ್ದದರಿಂದಲೇ ನಮಗೆ ಪರಲೋಕ ಗೃಹವು ಪ್ರಾಪ್ತವಾಗತಕ್ಕದ್ದು. ನಾವು ಈ ಭಾವದಿಂದ ಯಾವಾಗ್ಗೆ ಸಂಸಾರ ಮಾಡೇವೋ, ಆಗ್ಯೆ ಸಂಸಾರವೆಂಬುವದೇ ಪರಮ ಪವಿತ್ರ ತೀರ್ಥಸ್ಥಾನವೆಂದು ನಮಗೆ ತಿಳಿದು ಬಂದೀತು. ಇದೇ ತೀರ್ಥದೊಳಗೆ ನಾವು ವಾಸಮಾಡಿಕೊಂಡಿದ್ದರೆ, ನಮಗೆ ಈಶ್ವರನು ದಿನದಿನಕ್ಕೆ ಅಧಿಕಾಧಿಕ ದೃಷ್ಟಿಗೋಚರನಾಗುತ್ತಾ ಇದ್ದಾನು.

ತಾರೀಖು ೨೮ನೇ ದಿಶಂಬರ
೧೮೮೨ ಇ. ಮು. ಸೋಂದಾ
ತಾ. ಶಿರ್ಶಿ ಜಿ. ಕಾನಡಾ.

ಸರ್ ರೇವಪ್ಪಾ ಕುಪ್ಪಯ್ಯಾ ಶೆಟ್ಟಿ ಸ್ವ. ಮು. ಸೋಂದಾ.

ಸವಣೂರ ಸಂಸ್ಥಾನವು.

(೪೩ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

ಈ ಒಡಂಬಡಿಕೆಯಾದ ೫ ವರ್ಷಗಳ ಮೇಲೆ ಅಂದರೆ ಸನ್ನ ೧೭೫೩ ನೇ ಇಸವಿಯಲ್ಲಿ ಮಜೀದಖಾನನು ತೀರಿಕೊಂಡನು. ಇವನು ಬಹು ಶೂರನೂ, ಜಾಗೃತ, ಚತುರತನವುಳ್ಳವನೂ ಇದ್ದನು. ಕರ್ನಾಟಕಸ್ಥರಿಗೆ ಇದುವರೆಗೂ ಇವನ ಹೆಸರ ನೆನಪುಂಟು. ಹಾಗು ಅವರು ಇವನ ಸಂಬಂಧದ ಬಹು ವೃತ್ತಾಂತಗಳನ್ನು ಹೇಳುತ್ತಾರೆ. ಇವನೇ ಹೊಸಹುಬ್ಬಳ್ಳಿ ಶಹರವನ್ನು ನೆಲೆಗೊಳಿಸಿದನು. ಇದರಲ್ಲಿಯ ಒಂದು ಮುಖ್ಯ ಪೇಟೆಗೆ ಈಗೂ ಮಜೀದ ಪೇಟೆಯೆಂಬ ಹೆಸರುಂಟು. ಸ್ವಾದಿಯಲ್ಲಿ ಶೆಟ್ಟಿಯೆಂಬ ಹೆಸರಿನ ಒಬ್ಬ ದೊಡ್ಡ ವ್ಯಾಪಾರಿಯಿದ್ದನು. ಸ್ವಾದಿಯ ರಾಜನು ಇವನಿಂದ ಹಲವು ಪ್ರಕಾರವಾಗಿ ಕರ ತೆಗೆದುಕೊಳ್ಳಹತ್ತಿದನು. ಕಾರಣ ಅವನು ಸವಣೂರಲ್ಲಿ ಬಂದು ನಿಂತುಕೊಂಡನು; ಮತ್ತು ಅವನ ಸಂಗಡ ಎರಡನೇ ಹಲವು ಶ್ರೀಮಂತ ವ್ಯಾಪಾರಸ್ಥರು ಸವಣೂರಿಗೆ ಬಂದು ನಿಂತುಕೊಂಡರು. ಇದರಮೇಲಿಂದ ನವಾಬನ ಖ್ಯಾತಿಯು ಎಷ್ಟಿರಬಹುದು, ಇದು ಸ್ಪಷ್ಟವಾಗಿಯೇ ಕಂಡುಬರುತ್ತದೆ.

ನಿಜಾಮ ಉಲ್ಮುಲುಖನು ಸನ ೧೭೪೮ ನೇ ಇಸವಿಯಲ್ಲಿ ಮರಣ ಹೊಂದಿದನು. ಈ ಗಾದಿಯು ನೇಜರಜಂಗನಿಗೆ ದೊರೆಯಬೇಕೆಂದು ಮಜೀದಖಾನನ ಮನದಲ್ಲಿತ್ತು; ಕಾರಣ ಖಾನನು ನೇಜರಜಂಗನ ಪಕ್ಷವನ್ನು ವಹಿಸಿದ್ದನು. ಕರನೂಲ, ಕಡಪೆ, ಇಲ್ಲಿಯ ಪಠಾಣರು ಮಜೀದಖಾನನ ಕಡೆಯವರಾಗಿ ಮುಜಫ್ಫರ ಜಂಗನ ವಿರುದ್ಧ ಬಂಡಾಯ ಎಬ್ಬಿಸಿದರು. ಈ ದಂಗೆಯಲ್ಲಿಯೇ ಮಜೀದಖಾನನ ಆಯುಷ್ಯವು ತೀರಿಹೋಯಿತು. ತರುವಾ

ಯು ಮುಜೀದಖಾನನ ಮಗನಾದ ಅಬ್ದುಲ ಹಕೀಮಖಾನನು ಗಾದಿಯ ಅಧಿಕಾರಿಯಾದನು. ಇವನು ಆಳಹತ್ತಿ ಬಹಳ ದಿವಸವಾಗಿದ್ದಿಲ್ಲ; ಅಷ್ಟರಲ್ಲಿ ಇವನಮೇಲೆ ಒಂದು ಬಹು ಕಠಿಣ ಪ್ರಸಂಗ ಬಂದಿತು ಮತ್ತು ಇದರಲ್ಲಿ ಅವನಿಗೆ ಬಹು ಲುಕಸಾನ ಆಯಿತು. ಮಾನಸೀ ಅಂಬುಸಿ ಯೆಂಬುವನು ಮೊದಲು ನಿಜಾಮನಲ್ಲಿ ನೌಕರಿ ಇದ್ದನು. ಇತ್ತಲಾಗಿ ಅವನು ಪೇಶ್ವೆಯರ ಸೈನ್ಯದಲ್ಲಿ ಚಾಕರಿಗೆ ನಿಂತನು. ಇವನ ಕೈಕೆಳಗೆ ಮುಜಫರಜಂಗನೊಬ್ಬ ಕಾಮಗಾರನಿದ್ದನು. ಇವನಾದರೂ ಮೊದಲು ನಿಜಾಮನಲ್ಲಿ ಚಾಕರಿಗೆ ಇದ್ದು ತರುವಾಯ ಪೇಶ್ವೆಯರ ಕಡಿಗೆ ಚಾಕರಿಗೆ ನಿಂತಿದ್ದನು. ಇವನು ಏನೋ ತಪ್ಪು ಮಾಡಿದಕಾರಣ ಪೇಶ್ವೆಯರು ಇವನನ್ನು ಕೆಲಸದಿಂದ ದೂರ ಮಾಡಿದರು. ಮತ್ತು ಅವರು ಅದರ ವಿಚಾರವನ್ನು ಮಾಡುವದರೊಳಗೆ ಮುಜಫರಜಂಗನು ಸವನೂರಿಗೆ ಹೋಗಿ ನವಾಬನ ಬೆನ್ನುಬಿದ್ದನು. ತರುವಾಯ ಅವನನ್ನು ಒಪ್ಪಿಸಬೇಕೆಂದು ಪೇಶ್ವೆಯರ ಪತ್ರವು ನವಾಬನಿಗೆ ಬಂತು. ನವಾಬನು ತಂನ ಬೆನ್ನು ಬಿದ್ದವನನ್ನು ಶತ್ರುಗಳ ವಶಕ್ಕೆ ಒಪ್ಪಿಸುವದು ವಿಹಿತವಲ್ಲೆಂದು ತಿಳಿದು, ಅವನನ್ನು ನಿಮ್ಮ ಸ್ವಾಧೀನ ಮಾಡಲೊಲ್ಲೆನು, ಎಂದು ಪೇಶ್ವೆಯರಿಗೆ ಸ್ಪಷ್ಟ ಉತ್ತರ ಕಳುಹಿದನು. ಈ ಕಾಲಕ್ಕೆ ಪೇಶ್ವೆಯರಿಗೆ ಬಹು ಸಿಟ್ಟು ಬಂದು ನವಾಬನ ಮೇಲೆ ಹಲ್ಲಾ ಮಾಡಬೇಕೆಂದು ನಿಶ್ಚಯ ಮಾಡಿದರು. ಹೈದರಾಬಾದಿನ ನವಾಬನಾದ ಶಲಾಬತಜಂಗನು ನವಾಬ ಹಕೀಮಖಾನನು ತನ್ನ ಕೈಕೆಳಗಿನವನೆಂದನ್ನುತ್ತಿದ್ದನು; ಆದರೆ ಈ ಮಾತಿಗೆ ನವಾಬನು ಒಡಂಬಡುವಲ್ಲನು. ಈ ಸಂಬಂಧವಾಗಿ ಶಲಾಬತಜಂಗನ ಸಿಟ್ಟಾದರೂ ನವಾಬನ ಮೇಲೆ ಇತ್ತು. ಇದನ್ನು ತಿಳಿದು ಪೇಶ್ವೆಯರು ನಿಜಾಮನಕೂಡ ಸ್ನೇಹದ ಮಾತಿದೆ

ಹಚ್ಚಿ ನವಾಬನ ವಿರುದ್ಧ ದಂಡನ್ನು ಕಳಿಹುವಂತೆ ನಿಜಾಮನಿಂದ
ಕಬೂಲ ಮಾಡಿಸಿಕೊಂಡರು. ಈ ಪ್ರಕಾರ ಪೇಶ್ವೆ ಮತ್ತು ನಿಜಾ
ಮ ಇವರಿಬ್ಬರು ಒಂದಾಗಿ ಬಾಳಾಜೀ ಬಾಜೀರಾವ ಪೇಶ್ವೆಯು
ದೊಡ್ಡ ದಂಡಿನಿಂದ ಕೂಡಿ ಸವನೂರ ಕಡೆಗೆ ಹೊರಟನು ಇದ
ರ ಸಂಗಡ ಪ್ರಸಿದ್ಧ ಫ್ರೆಂಚಸರದಾರನಾದ ಬುಸಿಯು ಸೈನ್ಯ
ತೋಫುಗಳಿದ್ದವು. ನಿಜಾಮನು ಮಾತಿನ ಪ್ರಕಾರ ದೊಡ್ಡ ದಂ
ಡನ್ನು ಸಲಾಬತಖಾನನೆಂಬವನ ಕೂಡ ಸಹಾಯಕ್ಕಾಗಿ ಕಳು
ಹಿ ಕೊಟ್ಟನು. ನವಾಬನು ಇಂಥಾ ದೊಡ್ಡ ಸೈನ್ಯದ ಕೂಡ
ಯುದ್ಧ ಮಾಡಬೇಕೆಂದು ಮನಸ್ಸಿನಲ್ಲಿದ್ದಿಲ್ಲ ಪರಂತು ಒಂ
ದು ವೇಳೆ ಆಶ್ರಯ ಕೊಟ್ಟ ಮನುಷ್ಯನನ್ನು ತಿರಿಗಿ ಶತ್ರುಗಳ
ಕೈವಶಕ್ಕೆ ಒಪ್ಪಿಸುವದು ಮಹಮದೀಮತದ ಪ್ರಕಾರ ಮಹತ್ಪಾ
ತಕವುಂಟೆಂದು ತಿಳಿದು ಉದ್ಯೋಗಿಸಿದ್ದನು. ಇವನ ಪೂರ್ವದ
ಮಿತ್ರನಾದ ಮುರಾರರಾವ ಘೋರಪಡೆ ಗುತ್ತಿಕರ ನಂಬುವನು
ತಂನ ಉತ್ತಮ ತಿದ್ದುಪಾಟಾದ ಸೈನ್ಯದ ಸಹಾಯ ಕೊಟ್ಟನು.
ಈ ಕಾಲಕ್ಕೆ ಮುರಾರರಾವನ ಸೈನ್ಯಕ್ಕೆ ಸರಿಯಾದ ಸೈನ್ಯವು
ಹಿಂದುಸ್ಥಾನದಲ್ಲಿ ಎರಡನೇ ಯಾವ ರಾಜನ ಬಳಿಯಲ್ಲೂ ಇ
ದ್ದಿಲ್ಲವು ಈಕಾರಣ ನವಾಬನು ಬಹು ದಿನ ತಡೆದು ಹಟ್ಟಿತನ
ದಿಂದ ಪೇಶ್ವೆಯ ಕೂಡ ಕಾದಿದನು. ಬುಸಿಯು ತೋಫಿನ ಕೆ
ಲಸವು ಒಂದೇಸವನೆ ನಡೆದಿದ್ದರೂ ಆ ಶಹರವು ೩ ತಿಂಗಳು
ಗಳವರೆಗೆ ಕೈವಶವಾಗಲಿಲ್ಲ ಶಹರ ಹಸ್ತಗತವಾದ ಮೇಲೆ
ಇನ್ನು ನಮ್ಮ ಪರಿಣಾಮ ಹತ್ತುವದಿಲ್ಲೆಂದು ತಿಳಿದು ನವಾಬ
ನು ಪೇಶ್ವೆಯರ ಕೂಡ ಸಮಾಧಾನದ ಮಾತು ನಡಿಸಿದನು. ಈ
ಮಾತಿನಲ್ಲಿ ಮುಜಫರಜಂಗನನ್ನು ಒಪ್ಪಿಸುವದನ್ನಂತೂ ಒಪ್ಪಿ
ಕೊಳ್ಳಲೇಇಲ್ಲ. ತಂನ ರಾಜ್ಯದ ಅರ್ಧವನ್ನು ಕೊಡುವದಕ್ಕೆ

ಬಿಟ್ಟುಕೊಂಡನು ಈ ಒಡಂಬಡಿಕೆಯು ಸನ ೧೭೫೬ ನೇ ಇಸವಿಯಲ್ಲಿ ನವಾಬ, ಪೇಶ್ವೆ ಇವರ ನಡುವೆ ಆಯಿತು. ಈ ಒಡಂಬಡಿಕೆಯ ಮೇಲಿಂದ ನವಾಬನು, ಮಿಶ್ರಿಕೋಟಿ, ಕುಂದಗೋಳ, ಹುಬ್ಬಳ್ಳಿ ಈ ತಾಲೂಕಗಳನ್ನೂ ಹಾಗು ೧೧,೦೦,೦೦೦ ರೋಖ ರೂಪಾಯಿಗಳನ್ನೂ ಪೇಶ್ವೆಯವರಿಗೆ ಕೊಡಬೇಕಾಯಿತು. ಪೇಶ್ವೆಯು ತನ್ನ ಸಾಮರ್ಥ್ಯದಿಂದ ತೆಗೆದುಕೊಂಡ ಪ್ರದೇಶಗಳ ಉತ್ಪನ್ನವು ಸುಮಾರು ಆ ಕಾಲಕ್ಕೆ ೮,೨೩,೯೨೬।೮ ಇತ್ತು. ಇವುಗಳ ಬದಲು ನವಾಬನಿಗೆ ರಾಣಿಬೆನ್ನೂರ, ಪರಸಗಡದ ಕೆಲವು ಭಾಗ ಜಾಹಗೀರು ಇಷ್ಟನ್ನು ಪೇಶ್ವೆಯರು ಕೊಟ್ಟರು. ೧೧ ಲಕ್ಷ ರೂಪಾಯಿ ರೋಖು ಕೊಡುವದಕ್ಕೆ ನವಾಬನ ಹತ್ತರ ಹಣವಿದ್ದಿಲ್ಲ. ಆದರಲ್ಲಿ ಕೆಲವು ಹಣ ರೋಖು, ಕೆಲವು ಹಣ ಸಾಮಾನ, ವಸ್ತು ಮೊದಲಾದದ್ದು ಕೂಡಿ ೮ ಲಕ್ಷ ಭರತಿ ಮಾಡಿದನು. ಇಂನು ೩ ಲಕ್ಷ ರೂಪಾಯಿ ಬಾಕಿ ಉಳಿಯಿತು. ಇದಕ್ಕಾಗಿ ಬಂಕಾಪುರದ ಕಿಲ್ಲೆಯನ್ನು ಮಲ್ಹಾರರಾವ ಹೋಳಕರ ಇವನಕಡೆಗೆ ಒತ್ತೆ ಇಟ್ಟು ಆರು ತಿಂಗಳದ ಮುದ್ದತಿನಿಂದ ಜಾಮೀನಾನು ಕೊಟ್ಟನು. ಈ ದಿವಸಗಳೊಳಗೆ ಆ ಹಣ ಕೊಡದೆ ಇದ್ದಲ್ಲಿ ಕಿಲ್ಲೆಯು ಸರಕಾರದಲ್ಲಿ ಕೂಡಿಸಿಕೊಳ್ಳಲ್ಪಟ್ಟೀತು ಹೀಗೆ ನವಾಬನಿಗೆ ಸ್ಪಷ್ಟವಾಗಿ ತಿಳಿಸೋಣವಾಯಿತು. ಈ ಒಡಂಬಡಿಕೆಯ ನಂತರ ನವಾಬನ ಕಡೆಗೆ ಉಳಿದ ಪ್ರದೇಶಗಳ ಉತ್ಪನ್ನ ಸುಮಾರು ೮,೩೦,೦೬।೧೨ ಇತ್ತು.

ಧಾರವಾಡ ಕನ್ನಡ ೪ನೇ ನಂಬರ ಸ್ಕೂ. ಮಾ. ತಾ. ೧೨|೩|೮೩ } ಶಿವಾನಂದಯಜ್ಞೇಶ್ವರ ಪಾ.

(ಮುಂದಕ್ಕೆ ಸಾಗುವದು.)

Correspondence.

ಪತ್ರವ್ಯವಹಾರವು.

ಪಾರ್ವತಿ ಪರಮೇಶ್ವರನ ಸಂವಾದ

[೫೫ನೇ ಪುಟದಿಂದ ಮುಂದಕ್ಕೆ ಸಾಗಿದ್ದು.]

ರಾ॥ ಮುಗ್ಧ್ಯಮಾಪತಿ ಆ॥ ಲೋಲಲೋಚನೆ ಓಂಕಾರಮೋಕ್ತಿಕ । ಮಾಲು
ಹಾರೆ ಸಂಸಾರಶರಣ । ಕೇಳು ವ್ಯಾಘ್ರಚರ್ಮದ
ಳನಾಶ್ರಮ ತಾಳಿ ಬಂದಿಹೆ ತ್ವರಿತ ಕದ ಬಿಡು ॥ ಪೆಳೆ
ಧೀರೇ ಸದ್ಗುಣ ॥ ಶೀಲಧಾರೇ ॥೩॥

ಟೀಕು — ಎಲೇ! ಚಪಲಚಿಕೆಯುಳ್ಳಂಥಾ, ಓಂಕಾರನಾದಮು
ಳ್ಳಾದಂಥಾ, ಮುತ್ತಿನ ಮಾಲಿಕೆಗಳನ್ನು ಸರಗಳಾಗಿ ಕೊರಳಿನಲ್ಲಿ
ಧರಿಸಿದಂಥಾ, ಭಕ್ತ ಕುಟುಂಬಿನಿಯಾದಂಥಾ, ಪಾರ್ವತಿಯೇ
ಕೇಳು! ನಾನು ವ್ಯಾಘ್ರ ಚೀಟಿಯುಳ್ಳ ದಣಿದು ಬಂದಿದ್ದೇನೆ; ಕಾ
ರಣ ಬೇಗ ಬಾಗಿಲನ್ನು ತೆಗೆ! (ಎಲು!) ನೀನೆಂಥವಳೆಂದರೆ ಶೂರ
ಳು ಮತ್ತು ಸದ್ಗುಣಶೀಲಧಾರೆ (ಸತ್ = ಒಳ್ಳೆ, ಗುಣ = ಸೌಖ್ಯಕರ
ಮಾದ, ಶೀಲ = ಶುದ್ಧ ಆಚರಣೆ, ಧಾರೆ = ಧರಿಸಿದವಳು) ಆಗಿರು
ತ್ತೀಯೆ ಎಂದನು.

ಶಾ. ಕಾಂ. ಎ. ನಾರೀಯೋರ್ವಳಿರುವಾ। ತಾವಿನಹೊರದ್ವಾರದಾ
ರಿನಿಂದಿರುವಾ ॥ ನೀ ರಾನೀನ್ಯಾರೊ ಮರುಳೋ ಮಾ
ಜಾಗೋರನೋ ಜಾರನೋ ಹೇಳೆಂದಳೂ ॥೪॥

ಟೀಕ — ಪಾರ್ವತಿಯು ಸ್ತ್ರೀಯಳಾದ ನಾನೊಬ್ಬಳೇ ಇರುವ
ಮನೆಯ ಹೊರಬಾಗಿಲಿನಲ್ಲಿ ನಿಂತಿರುವ ಶೂರನೇ ನೀನು ಹು
ಚ್ಚುಹಿಡಿದವನೋ ಅಥವಾ ಹುಡುಗನೋ ಯಾಚಕಾರ್ಥವನ್ನು
ಮಾಡುವ ಮೋಸಗಾರನೋ ಯಾರೆಂಬುದನ್ನು ಹೇಳೆಂದಳು—

ರಾ॥ ಪು॥ ಆ॥ ಚಟುಲನೇತ್ರೆ ಸುಗಾತ್ರೆ ಕೌತುಕ । ನಟನಮೂರ್ತಿಯೇ ತೆ ಪಿ

ಪ್ರಾಂತಲಾಲಿಸು । ವಿಟಕುಡುಗಮರುಳಲ್ಲ ವಿಟರಾ । ಘಟವಮುರಿ ಪಾಕಶೂಲಿಯೆಂಬರು ॥ ಕಟುಸುನೀತೇ । ಮೃಗಪತೀ ಕಟಿಯು ಭೂತೇ ॥ ೫ ॥

ಟೀಕು—ಪರಮೇಶ್ವರನು—ಎಲೇ? ಚಂಚಲನೇತ್ರೆಯಾದಂಥಾ ಒಳ್ಳೇ ಶರೀರವುಳ್ಳಂಥಾ, ಆಶ್ಚರ್ಯಕರವಾದ ನಾಟ್ಯದಲ್ಲಿ ಮಮತೆಯುಳ್ಳಂಥಾ, ಒಳ್ಳೇ ಎಸಸ್ಸು ಹೊಂದಿದಂಥಾ, ಪಾರ್ವತಿಯೇ ಕೇಳು. ನಾನು ಕಳ್ಳನೂ ಭ್ರಷ್ಟನೂ ವಿಟಪುರುಷನೂ ಅಲ್ಲ. ನನಗೆ ನೀನು ಅಂದಂಥಾ ವಿಟಜನರ ಸೊಕ್ಕನ್ನು ಮುರಿವ ಶೂಲಿಯೆಂತಾ ಅಂತಾರೆ. ಏ ಅತಿಶಯ ಒಳ್ಳೇ ನೀತಿಯುಳ್ಳವಳೇ ಮತ್ತು ಸಿಂಹನ ಟೊಂಕದಂತೆ ನಡವುಳ್ಳವಳೇ ಕೇಳೆಂದನು.

ಪಾ. ಕಾಂ. ಏ. ಶೂಲಾರೋಗಕೆ ಯನ್ನೊಳೌ । ಔಷಧಿಯಿಲ್ಲ । ಜಾಲಮಾತಲ್ಲ ಕೇಳೌ ॥ ಆಲಸ್ಯವಿಲ್ಲದೆ ಕೇಳುತ್ತಾನಡೆವೈದ್ಯ । ರಾಲಯಕೀಗನೀನೂ ॥ ೬ ॥

ಟೀಕು—ಪಾ.—ಎಲೋ ನಿನ್ನ ಹೊಟ್ಟೆಯಲ್ಲಿ ಬೆಳೆದ ಶೂಲ ರೋಗಕ್ಕೆ ನನ್ನಹತ್ತಿರ ಔಷಧಿಯಿಲ್ಲ. ಈ ನನ್ನಮಾತು ಸುಳ್ಳಲ್ಲ. ಕಾರಣ ಈಗ ನೀನು ತಡಮಾಡದೆ ಕೇಳಿಕೊಳ್ಳುತ್ತಾ, ವೈದ್ಯರ ಮನೆಯನ್ನು ಕುರಿತು ಗಮನಮಾಡೆಂದಳು.

ಶಿ. ಕಾಂ. ಆ. ಧೀರೆಗಂಗಾಂಭೀರೆ ವ್ಯಾಧಿಗೆ । ಸೇರವಿಹೆ ಬಹುರೋಗನಾಶನ । ಕಾರಿಯಾಗಿಹ ಸ್ವಾಮಿ ನಾನೆಂಬರು । ಧಾರುಣೀರೇಖರಲಿಕವಿಬುಧ ॥ ಚಾರು ನೀರೇಜಾಕ್ಷಿ ಕಾ । ಹಾರಭಾರೇ ॥ ೭ ॥

ಟೀಕು—ಶಿ.—ಏ? ಶೌರ್ಯಗಳುಳ್ಳಂಥಾ, ಗಾಂಭೀರ್ಯಗುಣವುಳ್ಳಂಥಾ, ಪಾರ್ವತಿಯೇ ಕೇಳು; ನಾನು ವ್ಯಾಧಿಗೊಳಪಟ್ಟ ರೋಗಿಷ್ಟನಲ್ಲ ಪರಂತು ಅತಳ, ವಿತಳ, ಸುತಳ ಮುಂತಾದ ಛಳಿ

ಲೋಕಗಳಲ್ಲಿ ನನಗೆ ಬಹು ರೋಗ ನಾಶಮಾಡುವಂಥಾ (ಸಲ್ಲ
ಣಾ) ಮಂತ್ರ ಕರೆಯುತ್ತಾರೆ. ಕಾರಣ ಬಾಗಿಲನ್ನು ತೆಗಿ; ನೀ
ನು ಅತಿ ಪರಾಕ್ರಮಿ ಮತ್ತು ಮುತ್ತಿನ ಸರಗಳನ್ನು ಧರಿಸಿದವಳಾ
ಗಿರುತ್ತೀಯೆ ಎಂದನು.

ರಾ. ಕಾಂ. ವ. ದಕ್ಷಾಪಾತನೆ ನೀಕೇಳೂ ಹೇಳದಿರುವೆ । ಲಕ್ಷ
ಣಪೂತೆಂನೊಳೂ ।। ಲಕ್ಷ್ಮಿನಿತ್ಯಳಿಯೆ:ಭೂ । ಕ-ಕ್ಷಿಜನದಿ
ವ್ಯಾದೆ । ಲಕ್ಷ್ಮಾನೇ ಹೋಗೆಂದಳೂ ।। ೮ ।।

(ಮುಂದಕ್ಕೆ ಸಾಗುವದು.)

—೦—

ಕಾಳಗಿಮುದ್ದಪ್ಪನವರಚರಿತ್ರೆ.

ರಾ. ಸಾ. ಕನ್ನಡ ಶಾಲಾಪತ್ರಿಕೆಯ ಎಡಿಟರ ಇವರಿಗೆ—

ವಿ. ವಿ. ಮುದ್ದೇಬಿಹಾಳ ತಾಲ್ಲೂಕಪೈಕಿ ಕಾಳಗಿ ಗ್ರಾಮದಲ್ಲಿ ಮು
ದಗಲ್ಲಿ ಭಟ್ಟ (ಮುದ್ದಪ್ಪನವರು) ಇರುತ್ತಿನ್ನು ಇವರು ಹಾವಿನ
ಮಂತ್ರ ೧೨ವರ್ಷ ಸಾಧಿಸಿ ಸಾಧ್ಯ ಮಾಡಿಕೊಂಡಿದ್ದಾರೆ. ಯಾ
ರಿಗಾದರೂ ಹಾವು ಕಚ್ಚಿದರೆ ಕಾಳಗಿ ಮುದ್ದಪ್ಪನವರ ಹೆಸರಲೆ
ಕಲ್ಲ ಹರಳು ಕಟ್ಟಿಕೊಬೇಕು ವ ಅವರಿಗೆ ಕೂಡಿದಾಗ ಕಾಳಗೀ
ಗೆಬಂದು ಮುದ್ದಪ್ಪನವರ ಇದರಿಗಾಗಲಿ ಅವರಿಲ್ಲದಾಗ ಅವ
ಮನಿಯು ಮುಂದಾಗಲಿ ಕಾಳಗಿ ಮುದ್ದಪ್ಪನವರಹೆಸರಲೆ ಹಾವು
ಕಡಿತಕ್ಕಾಗಿ ಹಳ್ಳಕಟ್ಟೇನಿಅಂತ ಅಕ್ಷರಶ:ಅಂದು ಆ ಹರಳು
ಬಿಕ್ಕೆಟ್ಟು ನದಿಸ್ನಾನಮಾಡಿ ೬೬೧ವಂದಪ್ಪ ಬೆಲ್ಲಹಂಚಿ ಅಪೇಕ್ಷ
ಣಕ್ಕೆ ಊರಿಗೆ ಹೋಗಬೇಕು. ಈಪ್ರಕಾರ ಮಾಡಿದರೆ ಅವರಿಗೆ
ಬಾಧೇನೆ ಇಲ್ಲಾ ಈಗ ನುರಾರುಮಂದಿ ಅಲ್ಲಿಗೆ ಬರುತ್ತಾರೆ. ಆ
ದರೆ ದರರವಿವಾರ ಅಮಾವಾಸೆಗೆ ಒಮ್ಮೆ ಎರಡು ಮೂರು ಸಾ
ವಿರಮಂದಿ ಬರುತ್ತಾರೆ. ಆಗ್ಯೆ ಭೂತಬಾಧೆ ವಾಯು ಉಪದ್ರ

ಇದ್ದವರು ಇನ್ನು ಅನೇಕ ಬೇನೆ ಇದ್ದವರಿಗೆ ಇವರು ಭಸ್ಮಕೊಟ್ಟು ಪರಿಹಾರಮಾಡುತ್ತಾರೆ. ಕೆಲಬ್ರಹ್ಮೇತ್ತಿ ಪರಿಹಾರವಾದದ್ದರಿಂದ ಈಗ ದರರವಿವಾರ ಅವರಲ್ಲಿಗೆ ಬರುವವರಸಂಖ್ಯೆ ಬಹಳೇ ಆಗಿದೆ ಸದರಿ ಮುದ್ದಪ್ಪನವರು ನಾಳಿನ ಚೈತ್ರಮಾಸದಲ್ಲಿ ಪ್ರಸಿದ್ಧ "ಸೋಮಯಾಗ" ಮಾಡುವದಕ್ಕೆ ನಿಶ್ಚಯಮಾಡಿ ಈಗ ಸಾಹಿತ್ಯತ್ವರದಿಂದ ನಡಸಿದ್ದಾರೆ. ನಿಧಾನ ೪|೫ ಸಾವಿರ ರೂಪಾಯಿ ಖರ್ಚ ಹತ್ತು ಸಾವಿರ ಜನರ ಅನ್ನ ಸಂತರ್ಪಣೆ ಆಗುವದುಂಟು ಆ ಕಾಲಕ್ಕೆ ಕೆಲಆಶ್ಚರ್ಯದ ಸಂಗತಿ ಆಗುವವೆಂದು ವಾರ್ತೆಯುಂಟು ಆದರೆ ಹಾಸ್ಯಸ್ಪದ ವಾಗಬಾರದೆಂದು ಕೆಲಬುದ್ಧಿವಂತರ ಆಶೆಅದೆ.

ಉತ್ತರಭಾಗದಲ್ಲಿ ಯಶವಂತರಾವ ಮಹಾರಾಜದೇವ ಮಾಮಲೇದಾರ ಈಗ್ಗೆ ಹೋಳಕರ ರಾಜಧಾನಿ ಇಂದೂರದಲ್ಲಿ ಇದ್ದಾರೆ. ಇವರ ಮಹಿಮೆಯೂ ಹೇಳಿದ ವಚನಗಳೂ ವ ಬೆಳಗಾಂವಜಿಲ್ಹೆ ಪೈಕಿ ಮುರಗೋಡದಲ್ಲಿ ಇರುವ ಆರು ವರ್ಷದ ಚಿಕ್ಕ ವಯಸ್ಸಿನವರಾದ ದೀಕ್ಷಿತರ ವಚನಗಳೂ ಕೆಲಯುರೋಪಿಯನ್ ಉದ್ಯೋಗಸ್ಥರಿಗೆ ಮನದಟ್ಟಿದ್ದಾವಂತೆ ಲೋಕದಲ್ಲಿ ಮಹಿಮೆಪುರುಷರು ಯಾವಾಗಲೂ ಇದ್ದಾರೆ ಇಂತಿಬಿನ;

ಧವಳಗಿ ತಾ. ಮುದ್ದೆಬಿಹಾಳಜಿ. } ರಾಮಚಂದ್ರ ಶ್ರೀನಿವಾಸ ವಿ
ಕಲಾದಗಿ ತಾ. ೨೨|೩|೮೩ } ದ್ಯಾರ್ಥಿ ಧವಳಗಿ.

—o—

ರಾ॰ ಸಾ. ಕನ್ನಡ ಶಾಲಾಪತ್ರಿಕೆಯ ಎಡಿಟರ ಇವರಿಗೆ—

ವಿ. ವಿ. ಕೆಳಗೆ ಬರೆದ ನಾಲ್ಕು ಸಂಗತಿಗಳನ್ನು ಪ್ರಸಿದ್ಧಿಸಬೇಕೆಂಬದಾಗಿ ಪ್ರಾರ್ಥನೆಯುಂಟು.

ಈ ಸದರ್ನಭಾಗವೆಂಬ ಸಮುದ್ರದಲ್ಲಿ, ಜಲಚರದಂತೆ ನಂ

ಇದ್ದವರು ಇನ್ನು ಅನೇಕ ಜೀವ ಇದ್ದವರಿಗೆ ಇವರು ಭಸ್ಮಕೊಟ್ಟು ಪರಿಹಾರಮಾಡುತ್ತಾರೆ. ಕೆಲಬ್ರಹ್ಮಹತ್ತೇತ್ರಿ ಪರಿಹಾರವಾದ್ದರಿಂದ ಈಗ ದರರವಿವಾರ ಅಮಾಶಿಗೆ ಬಹುಜನಸಂಖ್ಯೆ ೩ ಹಳೇ ಆಗಿದೆ ಸದರಿ ಮುದ್ದಪ್ಪನವರು ನಾಳಿನ ಚೈತ್ರಮಾಸದಲ್ಲಿ ಪ್ರಸಿದ್ಧ "ಸೋಮಯಾಗ" ಮಾಡುವದಕ್ಕೆ ನಿಶ್ಚಯಮಾಡಿ ಈಗ ಸಾಹಿತ್ಯತ್ಸರದಿಂದ ನಡಸಿದ್ದಾರೆ. ನಿಧಾನ ೫|೬ ಸಾವಿರ ರುಪಾಯಿ ಖರ್ಚಾಗಹತ್ತಿ ಸಾವಿರ ಜನರ ಅನ್ನ ಸಂತರ್ಪಣೆಯು ಆಗುವದುಂಟು ಆ ಕಾಲಕ್ಕೆ ಕೆಲಆಶ್ಚರ್ಯದ ಸಂಗತಿ ಆಗುವವೆಂದು ವಾರ್ತೆಯುಂಟು ಆದರೆ ಹಾಸ್ಯಸ್ಪದ ವಾಗಬಾರದೆಂದು ಕೆಲಬುದ್ಧಿವಂತರ ಆಶೆಅದೆ.

ಉತ್ತರಭಾಗದಲ್ಲಿ ಯಶವಂತರಾವ ಮಹಾರಾಜದೇವಮಾಮಲೇದಾರ ಈಗ್ಯೆ ಹೋಳಕರ ರಾಜಧಾನಿ ಇಂದೂರದಲ್ಲಿ ಇದ್ದಾರೆ. ಇವರ ಮಹಿಮೆಯು ಹೇಳಿದ ವಚನಗಳೂ ಬೆಳಗಾಂವಿಜಿಲ್ಲೆಪೈಕಿ ಮುರಗೋಡದಲ್ಲಿ ಇರುವ ಆರು ವರ್ಷದ ಚಿ ವಯಸ್ಸವರಾದ ದೀಕ್ಷಿತರ ವಚನಗಳೂ ಕೆಲಯುರೋಪಿಯ ಉದ್ಯೋಗಸ್ಥರಿಗೆ ಮನದಟ್ಟಿದ್ದಾವಂತೆ ಲೋಕದಲ್ಲಿ ಮಹಿಮಾಪುರುಷರು ಯಾವಾಗಲೂ ಇದ್ದಾರೆ ಇಂತಿಬಿನ.

ವಳಗಿ ತಾ. ಮುದ್ದೆಬಿಹಾಳಜಿ.) ರಾಮಚಂದ್ರ ಶ್ರೀನಿವಾಸ ವಿ
ಲಾದಗಿ ತಾ. ೨೨|೩|೮೩) ದ್ಯಾರ್ಥಿ ಧವಳಗಿ.

—o—

ರಾ. ಸಾ. ಕನ್ನಡ ಶಾಲಾಪತ್ರಿಕೇದ ಎಡಿಟರ ಇವರಿಗೆ—

ವಿ. ವಿ. ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ಪ್ರಸಿದ್ಧಿಸಬೇಕೆಂಬದಾಗಿ ಪ್ರಾರ್ಥನೆಯುಂಟು.

ಈ ಸದರ್ನ ಭಾಗವೆಂಬ ಸಮುದ್ರದಲ್ಲಿ, ಜಲಚರದಂತೆ ನಂ

ಚರಿಸುವ ನನ್ನ ಪ್ರಿಯ ಶಾಲಾಪತ್ರಿಕವೇ? ನನ್ನ ಮನಸ್ಸಿನಲ್ಲಿ
ಉಂಟಾದ ಕೆಲವು ಸಂಶಯಗಳನ್ನು ನಿವಾರಣಮಾಡು, ಅಥವಾ
ನಿನ್ನನ್ನು ಸೇವಿಸುವ ನನ್ನ ಪ್ರಿಯರಾದರೂ ಉತ್ತರಕೊಡಲಿ—

೧ ವಿದ್ಯಾಭಿರುಚಿ ಇಲ್ಲದ ಹಳ್ಳೀಊರುಗಳಲ್ಲಿ ಜನರು ಹುಡು
ಗರನ್ನು ನೇಮಿತವಾಗಿ ಸಾಲಿಗೆ ಕಳುಹಿಸುವದಿಲ್ಲವಲ್ಲ, ಇಂ
ಥ ಸಾಲಿಯು ಮಾಸ್ತರರು ದರದಿವಸ ಪ್ರಾತಃಕಾಲ, ಮಧ್ಯಾ
ಹ್ನಕಾಲ, ಎರಡೂ ಹೊತ್ತುಗಳಲ್ಲಿ ಹುಡುಗರನ್ನು ಕರೆಯ
ಹೋಗಬೇಕಾಗುತ್ತದೆ, ಅಥವಾ ಹಾಗೇಬಿಟ್ಟರೆ ಸಾಲಿಯು
ಲೋಪವಾಗುತ್ತದೆ. ಹೀಗಾದ ಪಕ್ಷದಲ್ಲಿ ತಾನು ನಾಲಾಯಖ
ನೆಂಬ ಶಿಫಾರಸೀ ಪದವಿಯು ದೊರೆಯುವದೆಂದು ಕರೆಯ
ಹೋಗುವದು ಅಗತ್ಯವೇ! ಅಂದಮೇಲೆ ಮಾಸ್ತರನು ಹು
ಡುಗರನ್ನು ಕರೆಯಹೋಗುವದೂ ಕಲಿಸುವದೂ, ಎಂಬ ಎರ
ಡು ಕರ್ತವ್ಯಕರ್ಮಗಳುಳ್ಳವನಾದನು. ಆದರೆ ಮಾಸ್ತರ ಎಂಬ
ದರ ಶಬ್ದಾರ್ಥವು ನನ್ನ ತಿಳುವಳಿಕೆಯ ಪ್ರಕಾರ ಕಲಿಸುವವ ಎಂ
ಬುವದುಂಟು. ಆದರೆ ಮೇಲಿನಂತೆ ನೋಡಿದರೆ ಎರಡು ಅರ್ಥ
ಗಳುಳ್ಳದ್ದಾಗುವದು, ಆದರೆ ಈ ಎರಡರಲ್ಲಿ ನನ್ನ ತಿಳುವಳಿಕೆ
ಯು ಸತ್ಯವಾದದ್ದೋ? ಅಥವಾ ಹುಡುಗರನ್ನು ಕರೆಯಹೋ
ಗುವದೂ ಕಲಿಸುವದೂ ಎರಡೂ ಅರ್ಥಗಳುಳ್ಳದ್ದೋ?

೨ ಎಲ್ಲ ಸಾಲಿಗಳಲ್ಲಿ ಫೀಯನ್ನು ೧೫ನೇ ತಾರೀಖಿನೊ
ಳಗಾಗಿ ಕಳುಹಿಸಬೇಕು ಹುಕುಮು ಇರುವದಷ್ಟೇ ಸದರಿ ಮು
ದ್ದತಿನಲ್ಲಿ ಹುಡುಗರು ಫೀಕೊಡದಿದ್ದರೆ ಅವರ ಹೆಸರನ್ನು ತೆ
ಗಿಯ ಬೇಕಾಗುವದು. ಹೀಗೆ ದರ ತಿಂಗಳಿಗೆ ಫೀಯನ್ನು ಕೊ
ಡಕೊಡದ ಹುಡುಗರನ್ನು ತೆಗಿಯುತ್ತಿದ್ದರೆ ಕೆಲವು ಕಾಲಾಂ
ತ್ರದಿಂದ ಸಾಲಿಯು ಎಕಾಂಗಿಯಾಗುವದು ಅಥವಾ ಸೊರ

ಗುವದು. ಕಡೆಗೆ ಮಾಸ್ತರನೇ ಸಾಲಿಯನ್ನು ಕೆಡಿಸಿದನೆಂದು ಅಪವಾದ ಬಂದರೆ ಆ ಅಪವಾದವು ಸತ್ಯವಾದಗ್ಗೋ?

೩ ಮಾಸ್ತರನೇ ಜನರಲ್ಲಿ ವಿದ್ಯಾಭಿಲಾಷೆಯನ್ನೂ ಈರ್ಷೆಯನ್ನು ಹುಟ್ಟಿಸಬೇಕೆಂದು ಬಹು ಜನರ ತಿಳುವಳಿಕೆ ಇರುವದಷ್ಟೇ ಆದರೆ ಈತನೊಬ್ಬನೇ ಜನರಲ್ಲಿ ಅಭಿಲಾಷೆಯನ್ನು ಹುಟ್ಟಿಸಬೇಕು. ಈರ್ಷೆಯನ್ನು ತುಂಬಬೇಕು. ಮನೆಮನೆಗೆಹೋಗಿ ಆ ಹುಡುಗರನ್ನು ಕರಕೊಂಡು ಬರಬೇಕು. ಅವರಿಗೆ ಕಲಿಸಬೇಕು. ಅಂತು ಇವನು ಮಿತಿಮೀರಿ ಕೆಲಸಗಳನ್ನು ಮಾಡಬೇಕು. ಆದರೆ ಒಬ್ಬನು ಒಂದೇ ಕೆಲಸಮಾಡಿದರೆ ನೆಟ್ಟಗಾದೀತೇಹೊರ್ತು ಎಲ್ಲವುಗಳನ್ನು ಒಮ್ಮಿಗೇ ಗುಂಗಹೋದರೆ ಹ್ಯಾಗಾದೀತು?

೪ ಪರಸ್ಥಳದ ಮಾಸ್ತರರು ಸೂಟಿಯುಳವಸ್ತು, ರಾತ್ರಿಸುದ್ಧಾ ಹುಡುಗರ ಕಾಳಜಿಯನ್ನು ತಕ್ಕೊಂಡು ಶ್ರಮ ಪಡಬೇಕು. ಊರವರು ಅದರ ಕಡಗೆ ಹಣಿಕಿಸಹ ನೋಡಬಾರದು. ಇದರಲ್ಲಿ ಏನಾದ ಆಶ್ಚರ್ಯವು. ತಾ. ೧೫ನೇ ಮಾಹೆ ಮಾರ್ಚ ೧೮೮೩ ಇಸವಿ. (ಕ್ಷ ಎಮ್)

—o—

ರಾ. ಸಾ. ಕನ್ನಡ ಶಾಳಾಪತ್ರಿಕೇದ ಎಡಿಟರ ಇವರಿಗೆ—

ವಿ. ವಿ. ಕೆಳಗೆ ಬರೆದ ನಾಲ್ಕು ಪಂಗ್ತಿಗಳನ್ನು ತಮ್ಮ ಕರಕಮಲದಿಂದ ಉದಯವಾಗುವ ಮಾಸಪತ್ರಿಕೆಯಲ್ಲಿ ಛಾಪಿಸಿ ಒಡವನ ಅಪೇಕ್ಷೆಯನ್ನು ಪೂರ್ಣಮಾಡಬೇಕು.

ಅಯ್ಯಾ ಎಡಿಟರರೇ ನಮ್ಮ ಮೊರೆಯನ್ನು ಯಾರೂ ಕೇಳದವರೂ— ಮೋ. ರಸೆಲ್ ಸಾಹೇಬರವರು ಕೇಳುವರೆಂದರೆ ಯಾವ ಅರ್ಜಿಯನ್ನಾಗಲಿ ಅಥವಾ ರಿಪೋರ್ಟನ್ನಾಗಲಿ ರಾವಸಾಹೇಬ ದಿವಾಣಿಯವರ ಮುಖಾಂತರ ಕಳಿಸಬೇಕೆಂದು ಸರಕ್ಯೂ

ಲರವನ್ನು ಮಾಡಿದ್ದಾರೆ ಅತ್ತ ಕಳ್ಳತಂದರಾಯಿತು ಅದರ ಉತ್ತರ ದೊರಿಯುವತನಕಇರಲಿ ಯೆಲ್ಲಾ ಕೆಲಸವನ್ನು ಬಿಟ್ಟು ದುಡಿಯುವರು ನಮ್ಮನ್ನು ಯಮನಗಡಕ್ಕೆ ಕಳುಹಿಸುತ್ತಾರೆ— ಅಕಟ ಅಕಟ ಕರ್ಮಸಾಕ್ಷಿ ಜಗಚ್ಚಕ್ಷುಗಳಾದ ಪತ್ರಕರ್ತರೇ ನೀವಾದರೂ ನಮ್ಮ ದುರ್ದೈವಿಗಳ ಕಷ್ಟದಕಡೆಗೆ ದೃಷ್ಟಿಕೊಡಿರಿ. ಅಯ್ಯೋ ಕರ್ಮವೇ ಈ ಕಲಾದಗಿ ಜಿಲ್ಲೆಯು ಹೊಸಬಿತಿಯಾಗಿ ಇದ್ದಮೇಲೆ ಮಾಸ್ತರ ಜನರ ಶ್ರಮ ವ್ಯರ್ಥ ಹೋಗಲಿಕ್ಕೇಇಲ್ಲಾ ಅಂತಾ ಕಲ್ಪನೆ ಮಾಡುವಷ್ಟರಲ್ಲೇ ನಮ್ಮಂಥ ೧೦ | ೮ ಪಗಾರಉಳ್ಳ ಮಾಸ್ತರರ ವಿನಾಕಾರಣ ವರ್ಗಾವರ್ಗಿ ಮಾಡಿದ್ದು ದೊಡ್ಡ ಆಶ್ಚರ್ಯ ವಾಗಲಿಲ್ಲ. ನಾವು ಹಾಜರಾದ ಸ್ಥಳಗಳಿಗೆ ನಮ್ಮ ಹಿಂದಿನ ತಿಂಗಳ ಪಗಾರವು ಇಲ್ಲದೆ ಅಭಿಸ್ತ್ರಾಕ್ಟನಲ್ಲಿ ನಮ್ಮ ಹೆಸರೇಇಲ್ಲದ್ದು ನೋಡಿ ಎದೆಒಡೆದದ್ದಲ್ಲದೆ ಆಶ್ಚರ್ಯವಾಯಿತು ಇನ್ನ ನಾವು ಮತ್ತೆ ತಿಂಗಳವರೆಗೆ ಹ್ಯಾಗೆಕಾಲಕಳಿಯಬೇಕು ಈಗ ಹಿಂದು ತಿಂಗಳಪಗಾರ ವಿಲ್ಲದೆ ಕಳೆದದ್ದು ಅಲ್ಲದೆ ಇನ್ನು ಮತ್ತೆ ತಿಂಗಳ ಹ್ಯಾಗೆಕಳಿಯಬೇಕು ನಾವು ಸ್ವಲ್ಪ ಪಗಾರದವರಿದ್ದು ಮತ್ತು ಮೇಲೆಮೇಲೆ ವರ್ಗವಗ್ಗೈರೆ ಆಗತಿದ್ದು ನಮಗೆ ಊರಲ್ಲಿ ಕೈಗಡಸಹ ಯಾರೂ ಕೊಡುವದಿಲ್ಲ, ಈ ಮಾತು ಯಾರಮುಂದೆಹೇಳಬೇಕು——"ಪರಸ್ಥಳಂ ಪ್ರಾಣಸಂಕಟಂ" ಎಂತಲೂ ವಗೈರೆಯನ್ನು ನಮ್ಮ ತಂದೆಗಳ ಕಿವಿಯಲ್ಲಿ ಊದುವವರ್‍ಯಾರು—— ತಾ. ೨೦ | ೩ | ೮೩ಇಸ್ವಿ

[ಕ್ಷ]

ಕಲಾದಗೀ ಜಿಲ್ಹೆಯ ಹಿಬ್ಬ ಅಸಿಷ್ಟಾಂಟ ಮಾಸ್ತರನು—

—೦—

ಕರ್ನಾಟಕನಾಟಕಾಧಾರಿ.

—*○*—

ಎಲೈ! ಕನ್ನಡ ಭಾಷಾಭಿಮಾನಿಗಳಾದ ರಸಪಕ್ಷಪಾತಿಗಳಿರಾ! ಈ ಮಾಸಿಕ ಪುಸ್ತಕವನ್ನು ಪ್ರಕಟಿಸಲಿಕ್ಕೆ ಬರುವ ಮೇ ತಿಂಗ ೧ನೇ ತಾರೀಖಿನಿಂದ ಪ್ರಾರಂಭ ಮಾಡುತ್ತೇವೆ! ಇದರಲ್ಲಿ ನಾಟಕ ಆಡುವವರಿಗೂ ನೋಡುವವರಿಗೂ ಉಚಿತ ಲಾಭವಾಗಲಿಕ್ಕೆ ಮುಖ್ಯ ಕಾರಣಗಳಾಗಿರುವ ನಾಟಕದ ಖರೇ ಅರ್ಥವನ್ನೂ ಅದನ್ನು ಮಾಡುವ ಮತ್ತು ನೋಡುವ ಉದ್ದೇಶವನ್ನೂ ಮೊದಲು ವರ್ಣಿಸಿ ಆ ಮೇಲೆ ಕ್ರಮದಿಂದ ನಾಟಕ ಕಲಿಯಲಿಕ್ಕೆ ಹುಡುಗರನ್ನು ಕೂಡಿಸುವ ಜಾಣತನವನ್ನೂ ಕಲಿಯುವ ಪದ್ಧತಿಯನ್ನೂ ವೇಷ ರಚನೆಯ ಪ್ರಕಾರವನ್ನೂ ಜಾಹೀರನಾಮೆ ತಿಕೀಟುಗಳನ್ನು ತಯಾರು ಮಾಡುವ ರೀತಿಯನ್ನೂ ಅವುಗಳನ್ನು ಊರೊಳಗೆ ಪ್ರಸಿದ್ಧ ಮಾಡುವ ಹಂಚಿಕೆಯನ್ನೂ ನಾಟಕ ಮಂದಿರಕ್ಕೆ ಬಂದ ಪ್ರೇಕ್ಷಕರನ್ನು ಉಪಚರಿಸುವ ವಿಧಿಯನ್ನೂ ಪ್ರೇಕ್ಷಕರು ಥಿಯೇಟರದಲ್ಲಿ ನಾಟಕದವರ ಮೇಲೆ ಮಾಡತಕ್ಕ ಅನುಗ್ರಹವನ್ನೂ ದಿನಸಾಧನದಿಂದ ಹೇಳುತ್ತ ಬರುವದಲ್ಲದೇ ಈ ಪುಸ್ತಕದ ಸಹಾಯದಿಂದ ಯಾವ ಕಥೆಯಂನೇ ಆಗಲಿ ನಾಟಕ ರೂಪದಲ್ಲಿ ತಂದು ಆಡಿತೋರಿಸಲಿಕ್ಕೆ ಬರಬೇಕೆಂಬ ವಿಚಾರದಿಂದ ದೇವತೆಗಳ ಗಾಂಭೀರ್ಯವನ್ನೂ ರಾಕ್ಷಸಾದಿಗಳ ಮಾಯಾ ಕರ್ಮಗಳನ್ನೂ ರಾಜಮಂತ್ರಿ ಸೇನಾಪತಿ ಬ್ರಾಹ್ಮಣಾದಿಪ್ರಮುಖರ ಕರ್ತವ್ಯಗಳನ್ನೂ ಚತುರ್ವರ್ಣಗಳ ಕಾರ್ಯಗಳನ್ನೂ ಸ್ವರ್ಗ, ಕೈಲಾಸ, ಮೇರು ಮುಂತಾದವುಗಳನ್ನೂ ವರ್ಣಿಸಿ ಸಾಗರ, ಅರಣ್ಯ, ಸರೋವರ, ನದಿ, ಉಪವನ, ನಗರ, ಮಂದಿರ, ದೇವಾಲಯಗಳನ್ನೂ ಜಲಕ್ರೀಡಾ, ವಿನೋದ, ಸುರತ, ವಿರಹ,

ಲಗ್ನ, ಪುತ್ರೋತ್ಸಾಹ, ಹಾಸ್ಯ, ವ್ಯಭಿಚಾರ, ಮದ್ಯಪಾನ ಗೋಷ್ಠಿ ಮೊದಲಾದವುಗಳನ್ನೂ ಮತ್ಸರ, ಈರ್ಷ್ಯಾ, ಕಪಟ, ಯುದ್ಧ, ದುರ್ನೀತಿಗಳನ್ನೂ ನೀತಿ, ಭಕ್ತಿ, ಸತ್ವಗಳನ್ನೂ ಸ್ತ್ರೀ ಸೌಂದರ್ಯವನ್ನೂ ಸೂರ್ಯ ಚಂದ್ರರ ಉದಯಾಸ್ತಗಳನ್ನೂ ಪಷ್ಯಾಲಿಗಳನ್ನೂ ನಾಯಿಕಾ, ನಾಯಕ, ಸಖಿ, ದೂತಿಕಾದಿಗಳನ್ನೂ ನಾಟಕ ಭಾಷೆಯಿಂದ ಅಂದಗೊಳಿಸಿ ಪ್ರವೇಶ ಬಂಧನ ಕ್ರಮವನ್ನೂ ಪ್ರಹಸನ (ಫಾರ್ಸ) ಲಕ್ಷಣವನ್ನೂ ಪ್ರವೇಶಾದಿಯಲ್ಲಿ ಉಪಯೋಗಿಸ ಬರುವ ಪದಸಾಧ್ಯಗಳನ್ನೂ ಇರಿಸಿ ಸ್ವತಂತ್ರ ಜೋಡು ನಾಟಕಗಳನ್ನು ಪದಸಹಿತ ಸತತ ಸಾಗಿಸುತ್ತೇವೆ! ಇದನ್ನು ಧಾರವಾಡ ಜ್ಞಾನವರ್ಧಕದಲ್ಲಿ ಮೊಳೆಯಿಂದ ಅಚ್ಚು ಹಾಕಿಸುತ್ತೇವೆ!

ಈ ಮಾದರಿಯ ಪುಸ್ತಕವು ಕನ್ನಡದಲ್ಲಿ ಇಲ್ಲದೇ ಇರುವದರಿಂದಲೂ ಇದೇ ಮೊದಲನೆಯದಾಗಿರುವದರಿಂದಲೂ ದೇಶಭಾಷಾ ಸುಧಾರಣೆಗೆ ಇದರಿಂದ ಕಿಂಚಿತ್ ಸಾಧನವಾಗುವದರಿಂದಲೂ ಅಭಿಮಾನಿಗಳೂ ರಸಿಕರೂ ಆದ ನೀವು ಇದಕ್ಕೆ ಉದಾರಾಶ್ರಯವನ್ನು ನಿಶ್ಚಯವಾಗಿ ಕೊಡುವಿರೆಂದು ತುಂಬಾ ನಂಬುತ್ತೇವೆ!

ಇದರ ಕ್ರಯವು ವರ್ಷ ೧ಕ್ಕೆ ಅಂಚೆವೆಚ್ಚಸಹಿತ ೨॥ ರೂಪಾಯಿ ಇರುತ್ತದೆ! ವರ್ಗಣೀದಾರರಾಗಬಯಸುವವರು ಕೆಳಗೆ ಸಹೀ ಮಾಡಿರುವ ನಮ್ಮ ಕಡೆಗೆ ಅಪ್ರಿಲ ೧೫ನೇ ತಾರೀಖಿನೊಳಗೇ ಹಣವನ್ನು ಮನೀಆರ್ಡರ ಮಾಡಬೇಕು! ಹೆಚ್ಚಿನ ಮಜಕೂರು ಪುಸ್ತಕದಲ್ಲಿ ನೋಡುವದು!

ಬಂಕಾಪುರ ತಾರೀ } ಬಾಳಾಚಾರ್ಯ ಸಕ್ಕರಿ ಶಾಂತಕವಿ ಹೆ.ಮಾ.
ಖು ೧೨।೨।೮೭೭. } ಕೇ. ಗ್ರೇ. ಅಂಟ್ನಸ್ವ. ಜಿ. ಧಾರವಾಡ.

ಶಾಲಾಪತ್ರಿಕೆ.

ಪುಸ್ತಕ ೧೮] [ಸಂಚಿಕೆ ೪

ಏಪ್ರೀಲ. ೧೮೮೩

Education and Improvement.

ವಿದ್ಯಾಸುಧಾರಣಾಸಂಬಂಧವಾದ ಸಂಗತಿಗಳು.

—*○*—

ಬಂಗಡೆಯಲ್ಲಿ ಬಹಳ ಪ್ರಖ್ಯಾತಿಯನ್ನು ಪಡೆದಂಥ ಪಂಡಿತ ರಮಾಬಾಯಿಯು ಈ ದಿನಗಳಲ್ಲಿ ವಿಲಾಯತಿಗೆ ಹೋಗಿ ಇದ್ದು ಈಕೆಯ ಸಂಗಡ ಪುಣೆಯ ಫೀಮೇಲ ಟ್ರೇನಿಂಗ ವಿದ್ಯಾರ್ಥಿನಿಯಾದ ಆನಂದೀಬಾಯಿ ಯೆಂಬ ತರುಣಿ. ಒಬ್ಬ ಬಂಗಾಲೀ ಮನುಷ್ಯನೂ ಪರಿಚಾರಕರಾಗಿ ಇದ್ದಾರೆ. ವಿಲಾಯತಿಯಲ್ಲಿ ಕೆಲವು ದಿವಸ ನಿಂತು ವಿಬಂಡಸ ಮಾಡುವದು ರಮಾಬಾಯಿಯ ಉದ್ದೇಶವಿರುತ್ತದೆ.

—○—

ಶ್ರೀಬಯಿಯವರಿಬ್ಬರು ಅವಿವಾಹಿತರಾದ ತರುಣಿಯರು ವೈದ್ಯಶಾಸ್ತ್ರ ಕಲಿಯುವದಕ್ಕೋಸ್ಕರ ವಿಲಾಯತಿಗೆ ಇಷ್ಟರಲ್ಲಿ ಹೋಗತಕ್ಕವರಿದ್ದಾರೆ.

—○—

ಸ್ವದೇಶದ ಹುಡುಗರು ಬಹಳ ಷಟ್ಟಿಗಂಡ ಜಗಳಗಂಟ

ರೂ ಇರುತ್ತಾರೆಂದು ಮುಂದೆ ಬರೆದ ಸಂಗತಿಯಿಂದ ತಿಳಿ
ವದು. ಒಬ್ಬ ಹುಡುಗನು ಮಾಸ್ತರನ ಹುಕುಮು ಅಮಾನ್ಯ
ಮಾಡಿದ್ದರಿಂದ ಅವನಿಗೆ ಶಾಲೆ ಬಿಟ್ಟು ಹೋಗೆಂದು ಮಾಸ್ತರನು
ಹೇಳಿದನು. ಆದರೆ ಶಾಲೆಯೊಳಗಿನ ೩೦೦ ಹುಡುಗರು ಆ ಹು
ಡುಗನ ಪಕ್ಷವನ್ನು ಸ್ವೀಕರಿಸಿ ಮಾಸ್ತರನಿಗೆ ವಿರೋಧಿಗಳಾಗಿ ಬ
ಗೆಬಗೆಯ ಪ್ರಕಾರದಿಂದ ಅವನ ಚೇಷ್ಟೆಗಳನ್ನು ಮಾಡಿದರು.
ಮಾಸ್ತರನು ಅವರೆಲ್ಲರಿಗೆ ಶಾಲೆ ಬಿಟ್ಟು ಹೋಗಿರೆಂದು ಅಪ್ಪಣೆ
ಮಾಡಿದಾಗ್ಯೂ, ಅವರು ಅದನ್ನು ಲೆಕ್ಕಿಸದೆ ದಂಗೆಯ ಮಾಡಿ,
ಮೇಜು, ಖುರ್ಚಿ, ಖಿಡಕಿ, ಮುಂತಾದವುಗಳನ್ನು ಮುರಿಬಡಿದು,
ಮಾಸ್ತರನು ಸತ್ತನೆಂದು ಕೂಗಾಟ ಎಬ್ಬಿಸಿದರು. ಈ ದಂಗೆ
ಯನ್ನು ಮುರಿಯುವದಕ್ಕೋಸ್ಕರ ಮಾಸ್ತರ ಪೋಲೀಸ ಜ
ರನ್ನು ತರಿಸಲಾಗಿ, ವಿದ್ಯಾರ್ಥಿಗಳು ಆ ಶಿಪಾಯಿಗಳ ಸಂಗ
ನದ ಕದನಕ್ಕೆ ಹೆದರಲಿಲ್ಲ. ಆದದರಿಂದ ಪೋಲೀಸಜನರು
ಲಾತ್ಕಾರದಿಂದ ೩೭೦ ಜನಹುಡುಗರನ್ನು ಹಿಡಿದು
ದು ತಕ್ಕೊಂಡು ಹೋದರು. ಭೂಮಿಯಲ್ಲಿ ಮೊ
ರಿಸಿದ ರಾಷ್ಟ್ರದೊಳಗಿನ ಬಾಲಕರ ನಡತೆ ಇಂ
ತಕ್ಕದ್ದೋ!

—o—

ಮುಂಬಯಿಯಲ್ಲಿ ಇರುತ್ತಿದ್ದ ಆನಂದೀಬಾಯಿ
ಳೊಬ್ಬ ವಿದುಷಿಯು ವೈದ್ಯಶಾಸ್ತ್ರ ಕಲಿಯುವ
ಅಮೇರಿಕಕ್ಕೆ ಹೊರಟುಹೋದಳು. ವೈ

—o— ಒಳಗೆ

ಈ ವರ್ಷ ಪಂಜಾಬದ ಯುನಿವರ್ಸಿಟಿಯಲ್ಲಿ
ಡನು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಹೋಗಿದ್ದ

ಇವನ ಸ್ಮರಣಶಕ್ತಿಯು ಅತ್ಯಾಶ್ಚರ್ಯಕರವಾಗಿ ಇರುತ್ತದೆಂದು ಹೇಳುತ್ತಾರೆ.

—o—

ಈವರ್ಷ ಕಲಕತ್ತೆಯಲ್ಲಿ “ಸಾರ್ವರಾಷ್ಟ್ರೀಯ” ವೆಂಬದೊಂದು ಬಹು ದೊಡ್ಡ ಪ್ರದರ್ಶನವಾಗತಕ್ಕದ್ದಿರುತ್ತದೆ. ಇದರ ಸಲುವಾಗಿ ಹಿಂದುಸ್ತಾನದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಹುಟ್ಟುವ ಬೆಲೆಯುಳ್ಳ ಕಲಾಕೌಶಲ್ಯದ ಒಡವೆಗಳನ್ನು ಯಾವತ್ತು ಇಲಾಖೆಗಳ ಸರಕಾರದವರು ಬಹು ಪ್ರಯತ್ನದಿಂದ ಕೂಡಿಸಹತ್ತಿದ್ದಾರೆ. ಈ ದೇಶದ ಕಲಾಕೌಶಲ್ಯಗಳನ್ನು ಬೆಳಿಸುವದೇ ಈ ಪ್ರದರ್ಶನದ ಉದ್ದೇಶವು.

—o—

ಮಿ. ಡಾಯರೆಕ್ಟರ ಧೊರೆಗಳು ಇನ್ನೂ ಕಾನಡಾ ಜಿಲ್ಲೆಯಲ್ಲಿ ಇದ್ದಂತೆ ತಿಳಿದದೆ.

—o—

ಮಿ. ಇನ್‌ಸ್ಪೆಕ್ಟರ ಧೊರೆಗಳವರೂ ಅದೇ ಜಿಲ್ಲೆಯಲ್ಲಿ ಇದ್ದಾರೆ. ಮುಂದಿನ ತಿಂಗಳಿನ ಆರಂಭದಲ್ಲಿ ಧಾರವಾಡಕ್ಕೆ ಬಂದು ಬೆಳಗಾವಿಗೆ ಹೋಗತಕ್ಕವರಿದ್ದಾರೆಂದು ಕೇಳುತ್ತೇವೆ.

—o—

ಇಲ್ಲಿಯ ಹಾಯಸ್ಕೂಲಿಗೆ ಈ ತಿಂಗಳಿನ ೧೬ನೇ ತಾರೀಖಿನಿಂದ, ಲಿಂಗಕಾಲೇಜಕ್ಕೆ ೨೫ನೇ ತಾರೀಖಿನಿಂದ ಸೂಟಿ ಸುರುವಾಯಿತು.

Notices.

ನೋಟೀಸು.

ಸರಕ್ಯುಲರ ನಂಬರು ೨

ಕಲಾದಗೀ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ ತಿಳಿಯಪಡಿಸುವದೇನಂದರೆ ಇಂಡೀ ತಾಲೂಕದೊಳಗಿನ ತಡವಲಗಿ ಮಾಸ್ತರರಾದ ರಾ. ರಾಮಚಂದ್ರ ಸಂಗೋ ಇವರು ತಾರೀಖು ೧ ಮಾರ್ಚಿಯಿಂದ ತಾರೀಖು ೭ ಮಾರ್ಚವರೆಗೆ ಹಜರೀತಾಂಬಡೇ ಹಾಗೇ ಬಿಟ್ಟಿದ್ದರು. ಈ ಅಪರಾಧಕ್ಕಾಗಿ ಅವರಿಗೆ ಒಂದು ವರ್ಷದ ಪರ್ಯಂತರ ಒಂದು ರುಪಾಯಿ ಕಡಿಮೆ ಪಗಾರ ದೊರಿಯಬೇಕೆಂದು ನಾವು ಮೆ. ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬ ಬಹಾದ್ದೂರ ಇವರಕಡಿಗೆ ಶಿಫಾರಸ ಮಾಡಿದ್ದೆವು. ಆದರೆ ಸಾಲಿಕೆಲಸ ಕೆಡಸಿದ ಸಂಬಂಧವಾಗಿ ಇವರಿಗೆ ಎಂಟು ಆಣೆ ಪಗಾರ ಕಡಿಮೆ ಆಗುವದರಿಂದ ಫಕ್ತ ಎರಡು ರುಪಾಯಿ ದಂಡ ಮಾಡಬೇಕೆಂಬ ಹುಕುಂ ದಯಾಳುತನದಿಂದ ಕೊಟ್ಟಪ್ರಕಾರ ಅವರಿಗೆ ದಂಡವಾಗಿರುತ್ತದೆ. ಈ ಸಂಗತಿಯನ್ನು ಎಲ್ಲ ಮಾಸ್ತರರು ಲಕ್ಷದಲ್ಲಿಟ್ಟು ಹಜರೀ ವಿಷಯಕ್ಕೆ ಬಹು ಎಚ್ಚರಿಕೆಯಿಂದ ನಡಕೊಳ್ಳಬೇಕು. ತಿಳಿಯಬೇಕು ತಾ. ೯ ಮಾಹೆ ಎಪ್ರಿಲ ಸನ್ ೧೮೮೩ ಇಸವಿ.

ಆ. ಡೆಪುಟಿ ಎ. ಇನಸ್ಪೇಕ್ಟರ ಜಿ. ಕಲಾದಗಿ.

—o—

ಕಲಾದಗಿ ಜಿಲ್ಹೆಯೊಳಗಿನ ಯಾವತ್ತೂ ಸ್ಕೂಲಮಾಸ್ತರರಿಗೆ— ತಿಳಿಯಪಡಿಸುವದೇನಂದರೆ—ನಾವು ಕೆಲವು ಸಾಲೆಪರೀಕ್ಷೆ ತೆಗೆದುಕೊಳ್ಳಲಿಕ್ಕೆ ಹೋದಕಾಲಕ್ಕೆ ಕೆಲವು ಆರೋಗ್ಯ ಹಾಗು

ಗೈರಶಿಸ್ತು ಮಾತುಗಳನ್ನು ನೋಡಿದೆವು ಆಬಗ್ಗೆ ಮಾಸ್ತರರು ಯಾವಯಾವ ತಜವೀಜ ಇಡಬೇಕೆಂಬಬಗ್ಗೆ ಕೆಳಗೆ ಕಲಮುವಾರು ಬರಿಯೋಣವಾಗಿದೆ ಅದರಕಡೆಗೆ ಯಾವತ್ತು ಮಾಸ್ತರರು ಲಕ್ಷ್ಯಕೊಟ್ಟು ಅವುಗಳಪ್ರಕಾರ ತಪ್ಪಿಲ್ಲದಂಥ ನ್ಯೂನತೆಯನ್ನು ಬಿಡದೆ ತೆಗೆದುಹಾಕೋ ತಜವೀಜು ಮಾಡಬೇಕು ದುರ್ಲಕ್ಷ್ಯ ಮಾಡಿದರೆ ಅವರಬಗ್ಗೆ ಯೋಗ್ಯ ತಜವೀಜು ಮಾಡೋಣವಾಗೀತು

೧ ಕ್ಲಾಸ ತೆಗೆದುಕೊಂಬುವಾಗ್ಯೆ ಹುಡುಗರನ್ನ ಸವ್ಯವಾಗಿ ಅಂದರೆ ಕ್ಲಾಸದ ಎದುರಿಗೆ ನಿಂತಮಾಸ್ತರರ ಎಡಗಡೆಯಿಂದ ಬಲಗಡಿಗೆ ನಂಬರವಾರ ನಿಂದರಸಬೇಕು. ನಾವು ಹೋದ ಸಾಲಿಗಳಲ್ಲೆಲ್ಲ ಇದಕ್ಕೆ ವಿಪರೀತವಾದ ಸಂಗತಿಯನ್ನೇ ಕಂಡೆವು—

೨ ಸಾಲಿಯಲ್ಲಿ ಸರಕಾರೀ ಕಾಮದಾರರನ್ನಾಗಲೀ ಬೇರೆ ಜನರಿಗಾಗಲೀ ಯಾವ ಕಾರಣದ ದತಿಯಿಂದಾದರು ಇಳಿಗೊಡಬಾರದು. ಒಂದು ಸಾಲಿಯಲ್ಲಿ ಈಪ್ರಕಾರ ಒಬ್ಬ ಫಾರಿಸ್ಟುಖಾತೇ ಆಫೀಸರನು ಇಳಿದಬಗ್ಗೆ ಮೇ॥ಹಬಾರ್ನ್ ಡೈರೆಕ್ಟರಸಾಹೇಬ ಬಹಾದ್ದೂರವರ ಕಡಿಯಿಂದ ಬರಹ ಬಂದಿರುತ್ತದೆ—

೩ ಸಾಲಿನಡಿಯೋಕಾಲಕ್ಕೆ ನಕಾಶಗಳನ್ನೆಲ್ಲ ತೆರದು ಗೋಡಿಗೆ ತೂಗ ಹಾಕಿರಬೇಕು—

೪ ಸಾಲಿಯು ಯಲ್ಲ ಖಿಡಕಿಗಳನ್ನೂ ಬಾಗಲಗಳನ್ನೂ ಸಾಲಿ ನಡಿಯೋವುಂದದ ತಪ್ಪದೇ ತೆರದು ಇಡಬೇಕು. ಒಂದು ಸಾಲಿಯಲ್ಲಿ ಒಬ್ಬ ಮಾಸ್ತರನು ಎಲ್ಲ ಖಿಡಕಿಗಳನ್ನು ಬಂದಮಾಡಿ ಅರ್ಧ ಬಾಗಿಲವನ್ನು ತೆರದು ಸಾಲಿ ನಡಿಸಿದ್ದನ್ನು ನಾವು ನೋಡಿದೆವು. ಸಾಲಿಯಲ್ಲಿ ಚನ್ನಾಗಿ ಗಾಳಿ ಆಡೋದರಿಂದ ಶರೀರದ ಬಲವು ಹೆಚ್ಚುವದು—

೫ ಸಾಲಿಯಲ್ಲಿ ಸಾಲಿಯ ಸಾಮಾನಗಳಹೊರ್ತು ಬೇರೆ

ಸರಕಾರೀ ಕಾಮದಾರರ ಅಥವಾ ಅನ್ಯಜನರ ಸಾಮಾನಗಳನ್ನು ಯಾವ ಕಾರಣಕ್ಕಾದರೂ ಶಾಲೆಯಲ್ಲಿ ಇಡಗೊಡಸಬಾರದು. ಹಿಂದು ಶಾಲೆಯಲ್ಲಿ ಸರಕಾರೀ ಅಮಲದಾರನ ಸಾಮಾನು ಇಡಗೊಟ್ಟ ಉದಾಹರಣೆಯನ್ನು ಕಂಡೆವು—

೬ ಟಾಯಿಮು ಟೇಬಲಗಳನ್ನು ಪತ್ರಗಳನ್ನು ಸುವಾಚ್ಯ ದೊಡ್ಡಾಕ್ಷರದಿಂದ ಬರದು ಅವುಗಳನ್ನು ಆಯಾಕ್ಲಾಸಗಳಿಗೆ ಬೇರೆ ಪಾಳಿಗಳಿಗೆ ತೂಗ ಹಾಕಬೇಕು—

೭ ಜಿಲ್ಲಾಧಿಕಾರಿಗಳೂ ತಾಲೂಕಾಧಿಕಾರಿಗಳೂ ಶಾಲಾಧಿಕಾರಿಗಳೂ ಶಾಲೆಯೊಳಗೆ ಕಾಲಿಟ್ಟಕೂಡಲೆ ಎಲ್ಲ ವಿದ್ಯಾರ್ಥಿಗಳೂ ಮಾಸ್ತರರೂ ಒಮ್ಮಿಲೆ ಎದ್ದುನಿಂತು ಅವರಿಗೆ ಸನ್ಮಾನಕೊಡಬೇಕು—

—o—

ಪ್ರಕಟನೆ ಜಾ. ನಂಬರ ೩೭

ಆಜಂ—ಪಿತಾಂಬರ ರುದ್ರೋ ಕುರಕಕೋಟಿ ಹೆಡ್ಡಮಾಸ್ತರ ಸಂಕೇಶ್ವರ ಇವರು ಟ್ರೇನಿಂಗ ಕಾಲೇಜದಲ್ಲಿ ಮೂರು ವರುಷ ಅಭ್ಯಾಸಮಾಡಿ ತ್ರಿಸಾಮಾಹಿ ಪರೀಕ್ಷೆಯಲ್ಲಿ ಪಾಸಾದ್ದರಿಂದ ಮೆಹರಬಾನ ಯೆ. ಇ. ಸಾಹೇಬ ಬಹಾದ್ದೂರ ದಕ್ಷಿಣಭಾಗ ಇವರು ಸದರೀ ಪಿತಾಂಬರ ರುದ್ರೋ ಇವರಿಗೆ ಟ್ರೇನಿಂಗಕಾಲೇಜದ ತ್ರಿಮಾಹಿಯ ಲಾಯಖ ಸರಟೀಫಿಕೇಟು ಕೊಟ್ಟಿರುತ್ತಾರೆ. ತಿಳಿಯುವದು ತಾರೀಖು ೧೬ ಯಪ್ರಿಲ ೧೮೮೩ ಇಸ್ವಿ

R. S. Savanur.
ಡಿ. ಎ. ಇ. ಜಿ. ಬೆಳಗಾವ.

—o—

ಜಾಪಕನಂಬರ ೧೪೭

ರಾಮಸಾಹೇಬ ಪ. ಎ. ಇನಸ್ಪೇಕ್ಟರ ಜಿಲ್ಹಾ ಕಾನಡಾ
ಇವರ ಸನ್ನಿಧಾನಕ್ಕೆ—

ಸೂಪಾ ಸ್ಕೂಲಮಾಸ್ತರನು ಬರಕೊಂಡ ರಿಪೋರ್ಟ — ತಾರೀಖು ೧೭ನೇ ಮಾರ್ಚ ಸನ್ ೧೮೮೩ನೇ ಇಸ್ವಿ.

ಈ ತಿಂಗಳ ತಾರೀಖು ೧೪ನೇ ದಿವಸ ಮಧ್ಯಾಂನದ ೩ಘಂಟೆ ಸಮಯಕ್ಕೆ ಮೇಕಬಾರ್ನ ಡಾಯಿರೆಕ್ಟರ ಸಾಹೇಬಬಹದ್ದೂರವರುಸ್ವಾರಿ ಸ್ಕೂಲಗೆಬಂದು ಎಲ್ಲ ಹುಡುಗರ ಕಡೆಯಿಂದ ಕನ್ನಡ ಮತ್ತು ಮರಾಠೀ ಈ ಎರಡ ವಿಷಯಗಳನ್ನು ಸ್ಟೆಂಡರ್ಡಪ್ರಕಾರ ಶೋಧಿಸಿಕೊಂಡು ಬಹಳ ಆನಂದಭರಿತರಾಗಿ ಹುಡುಗರಿಗೆ ಮಿಠಾಯಿ ಕೊಡುವದಕೆಯಿಂದ ೫ರು ರುಪಾಯಿ ಇನಾಮು ಕೊಟ್ಟರು, ಮತ್ತು ಇಲ್ಲೀ ವಿಜಿಟರ್ಸ ಬುಕ್ಕನ್ನು ನೋಡಿನೋಡಿ ತಿರಿಗಿಹೋದರು. ಶರಾಮಾತ್ರ ಬರಿಯಲಿಲ್ಲ. ಸನ್ನಿಧಿಗೆ ಜಾಹಿರಾಗಿರಬೇಕು.

ಸ್ಕೂಲಮಾಸ್ತರ ಸೂಪಾ

—o—

History of India.

ಹಿಂದುಸ್ಥಾನದ ಇತಿಹಾಸವು.

(೫೫ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

೧೮ ಬಂಗಾಲದ ಉಪಸಾಗರದೊಳಗೆ ತಾನೆಸರಿಂ ಪ್ರಾಂತದ ಎದುರಿಗೆ ಅಂದಾಮಾನ, ನಿಕೋಬಾರ, ಎಂಬೆರಡು ದ್ವೀಪಸಮುದಾಯಗಳುಂಟು. ಅವಾದರೂ ಹಿಂದುಸ್ಥಾನದ ಬ್ರಿಟಿಶ ರಾಜ್ಯಕ್ಕೆ ಸೇರಿರುತ್ತವೆ. ಹಿಂದುಸ್ಥಾನದೊಳಗೆ ಕಾಳಾಪಾಣಿ, ಅಂದರೆ ಸರಹದ್ದು ಪಾರ ಮಾಡುವ ಶಿಕ್ಷೆಯನ್ನು ಹೊಂದಿದಂ

ಅಪರಾಧಿಗಳನ್ನು ಅಂಡಮಾನ ದ್ವೀಪಕ್ಕೆ ಕಳಿಸುತ್ತಾರೆ.

೧೯ ಹಿಂದುಸ್ಥಾನದ ದಕ್ಷಿಣದಲ್ಲಿ ಸಿಂಹಲ [ಸಿಲೋನ] ಂಬದೊಂದು ದೊಡ್ಡ ದ್ವೀಪವಿರುತ್ತದೆ. ಅದಾದರೂ ಇಂಗ್ಲಿ ಶ ಸರಕಾರದ ಅಮಲಿನಲ್ಲಿ ಇರುತ್ತದೆ. ಆದರೆ ಅಲ್ಲಿಯ ಕಾ ಭಾರವನ್ನು ಹಿಂದುಸ್ಥಾನದ ಸರಕಾರದವರು ನಡಿಸುವದಿಲ್ಲ; ಲಾಯತಿಯ ಸರಕಾರದವರೇ ಸ್ವತಃ ನಡಿಸುತ್ತಾರೆ. ಈ ದ್ವೀಪಕ್ಕೆ ಹಿಂದುಸ್ಥಾನದ ನಿವಾಸಿಗಳು ಲಂಕೆಯೆಂತಲೂ ಅನ್ನುವರು.

೪ ಕುಲಗಳೂ ಭಾಷೆಗಳೂ.—ಹಿಂದುಸ್ಥಾನದೊಳಗೆ ಹಲವು ರೀರೆ ಬೇರೆ ಕುಲಗಳ ಜನರು ವಾಸಿಸುತ್ತಾರೆ. ಅವರ ಭಾಷೆಗ ಂದ ಅವರವರ ಕುಲಗಳನ್ನು ಬಹು ಸುಲಭವಾಗಿ ವಿಂಗ ಡಿಸ ಬಹುದು.

ಮುಸಲ್ಮಾನರು ಹಿಂದುಸ್ಥಾನದ ಯಾವತ್ತು ಭಾಗಗಳಲ್ಲಿ ವಾಸಿಸುತ್ತಾರೆ. ಅವರಲ್ಲಿ ಕೆಲವರು ಆಫಗಾಣರು ಅಂದರೆ ಪಠಾಣರು, ಕೆಲವರು ಮೊಗಲರು, ಕೆಲವರು ಇರಾಣೀ ಜನರು, ಕೆಲವರು ಅರಬರು ಇರುತ್ತಾರೆ. ಆದರೆ ಬಹು ಜನರು ಕುಲಗೆಟ್ಟಂಥ ಹಿಂದೂ ಜನರ ವಂಶದವರುಂಟು. ಆದರೂ ಯಾವತ್ತು ಮುಸಲ್ಮಾನರು ಉರ್ದೂ ಅಥವಾ ಹಿಂದುಸ್ಥಾನೀ ಭಾಷೆಯ ಭಾಷೆಗಳನ್ನು ಆಡುತ್ತಾರೆ. ಇರಾಣೀ ಭಾಷೆಯೊಳಗೆ ದೇಶೀ ಭಾಷೆಗಳು ಮಿಶ್ರವಾಗಿ ಹಿಂದುಸ್ಥಾನೀ ಭಾಷೆಯುಂಟಾಗಿದೆ.

ಉಳಿದ ಯಾವತ್ತು ನಿವಾಸಿಗಳಲ್ಲಿ ಆರ್ಯ ಕುಲದವರು, ದ್ರಾವಿಡ ಕುಲದವರು, ಮೂಲನಿವಾಸಿಗಳು, ಎಂಬ ಮೂರು ವರ್ಗಗಳನ್ನು ಮಾಡಬಹುದು. ಮೂಲನಿವಾಸಿಗಳು ಈ ದೇಶದೊಳಗೆ ಎಲ್ಲಿಕಡೆಯಲ್ಲಿ ಗುಡ್ಡಗಳಲ್ಲಿಯೂ ಕಾಡುಗಳಲ್ಲಿ

ರೂ ವಾಸಿಸುತ್ತಾರೆ. ಬಂಗಾಲ ಪ್ರಾಂತದಲ್ಲಿ ಸಂತಾಲರು, ವಾಯುವ್ಯ ಇಲಾಖೆ, ಅಯೋಧ್ಯಾಪ್ರಾಂತಗಳಲ್ಲಿ ಭಾರರು; ಪಂಜಾಬದೊಳಗೆ ಗಕ್ಕರರು; ಮಧ್ಯಪ್ರಾಂತಗಳಲ್ಲಿ ಗೊಂಡರು; ರಜಪುತಸ್ಥಾನ, ಮುಂಬಯಿ ಇಲಾಖೆಗಳಲ್ಲಿ ಭಿಲ್ಲರು, ಲಂಬಾಣಿಗರು; ದಕ್ಷಿಣ ಹಿಂದುಸ್ಥಾನದಲ್ಲಿ ತೋಡರು, ಕುರುಂಬರು, ಶಾಣಾರರು; ಮುಂತಾದವರೆಲ್ಲರು ಮೂಲನಿವಾಸಿಗಳುಂಟು. ಇದಲ್ಲದೆ ಎಲ್ಲಕಡೆಯಲ್ಲಿ ಹೊಲಿಯರು, ಮಾದಿಗರು, ಢೋರರು, ಮುಂತಾದ ಕೀಳು ಜಾತಿಗಳಲ್ಲಿ ಈ ದೇಶದ ಮೂಲನಿವಾಸಿಗಳು ಬಹಳವಾಗಿ ಬೆರತು ಕೊಂಡಿದ್ದಾರೆ.

ದ್ರಾವಿಡ ಕುಲಗಳಲ್ಲಿ ತೆಲಗರು, ತಮಿಳರು, ಮಲಿಯಾಳರು, ತುಳುವರು, ಕನ್ನಡಿಗರು, ಎಂಬ ಐದು ಮುಖ್ಯ ಭೇದಗಳುಂಟು. ತೆಲಗರು ಮದ್ರಾಸ ಇಲಾಖೆಯ ಉತ್ತರ ಭಾಗದಲ್ಲಿ ವಾಸಿಸುತ್ತಾರೆ. ದಕ್ಷಿಣ ಕರ್ನಾಟಕ, ತ್ರಾವಣಕೋರ ಶೀಮೆಗಳಲ್ಲಿ ತಮಿಳರುಂಟು. ಮಲಿಯಾಳ ದೇಶದಲ್ಲಿ ಮಲಿಯಾಳರೂ ಅವರ ನೆರೆಯಲ್ಲಿ ತುಳುವರೂ ಇರುತ್ತಾರೆ. ಎರಡೂ ಕಾನಡಾ ಜಿಲ್ಹೆಗಳಲ್ಲಿಯೂ, ಮೈಸೂರ ಶೀಮೆಯಲ್ಲಿಯೂ ನಿಜಾಮನ ರಾಜ್ಯದ ಪಶ್ಚಿಮಭಾಗದಲ್ಲಿ ಕನ್ನಡಿಗರ ವಸ್ತಿಯುಂಟು. ಈ ಐದು ಜನಾಂಗಗಳ ಭಾಷೆಗಳು ಬೇರೆ ಬೇರೆ ಇರುತ್ತವೆ. ಆದರೆ ಅವೆಲ್ಲ ಒಂದೇ ಮೂಲ ಭಾಷೆಯಿಂದ ಹುಟ್ಟಿದಂಥವು. ಇವುಗಳಿಗೂ ಸಂಸ್ಕೃತಕ್ಕೂ ಎಷ್ಟು ಮಾತ್ರವೂ ಸಂಬಂಧವಿಲ್ಲ. ದಕ್ಷಿಣ ಹಿಂದುಸ್ಥಾನದಲ್ಲಿ ಈ ದ್ರಾವಿಡರೇ ಮುಖ್ಯ ನಿವಾಸಿಗಳುಂಟು.

ಆದರೆ ಉತ್ತರ ಹಿಂದುಸ್ಥಾನದ ಮುಖ್ಯ ನಿವಾಸಿಗಳು ಆರ್ಯಜನರುಂಟು. ಇವರಿಗೂ ದ್ರಾವಿಡರ

ರುತ್ತದೆಂಬುವದು ಇನ್ನೂ ಚನ್ನಾಗಿ ತಿಳಿದಿಲ್ಲ. ಆದರೂ ಹಿಂದು ಸ್ಥಾನದ ನಿವಾಸಿಗಳು ಆರ್ಯಕುಲದವರಲ್ಲೆಂದು ವಾಡಿಕೆಯಾಗಿ ಎಣಿಸಲ್ಪಡುತ್ತಾರೆ. ಅವರಿಗೂ ಮೂಲನಿವಾಸಿಗಳಿಗೂ ನಿಕಟ ಸಂಬಂಧ ವಿರಬಹುದೆಂದು ತೋರುತ್ತದೆ.

ಮುಂದೆಸಾಗುವದು.

— ೮ —

ಸವನೂರ ಸಂಸ್ಥಾನವು.

(೬೩ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

ಈಪ್ರಕಾರ ಪೇಶ್ವೆಯರ ಕೂಡ ಒಡಂಬಡಿಕೆಯಾದನಂತರ ನವಾಬನಿಗೆ ಮಹಾರಾಷ್ಟ್ರರಿಂದ ಪ್ರತಿಯೊಂದು ಕಾರ್ಯದಲ್ಲು ಸಹಾಯ ದೊರೆಯುತ್ತಿತ್ತು. ಇದೇಕಾಲಕ್ಕೆ ಹೈದರಲ್ಲಿಯು ಮೈಸೂರ ದೊರೆಯನ್ನು ಪಟ್ಟದಿಂದ ದೂರಮಾಡಿ ಮೈಸೂರ ರಾಜ್ಯವನ್ನು ಪಡಕೊಂಡನು. ಇದಲ್ಲದೇ ಸುತ್ತು ಮುತ್ತಲಿನ ಶೀಮೆಗಳ ಮೇಲೆ ಹಲ್ಲಾ ಮಾಡಹತ್ತಿದನು. ಶಿರಾ, ದೊಡ್ಡ ಬಾಳಾಪುರ, ಬಿದನೂರ ಮುಂತಾದ ಪ್ರಾಂತದ ನವಾಬರನ್ನು ಗೆದ್ದು ಆ ಪ್ರಾಂತಗಳನ್ನು ತನ್ನ ರಾಜ್ಯದಲ್ಲಿ ಕೂಡಿಸಿಕೊಂಡನು. ನಿಜಾಮನಲ್ಲಿ ಇವನಿಗೆ ಅಡ್ಡಿಮಾಡುವಷ್ಟು ತ್ರಾಣ ವಿದ್ದಿದ್ದಿಲ್ಲಾ ಪಾನಪತಯುದ್ಧದ ಕೇಡಿನಿಂದ ಮಹಾರಾಷ್ಟ್ರರು ತೀರಾ ಕನಿಷ್ಠಾವಸ್ಥೆಗಳಾಗಿ ಆ ಕಷ್ಟವನ್ನು ಈಗ್ಯು ಸೋಸುತ್ತಾಇದ್ದರು. ಈಕಾರಣ ಹೈದರನಿಗೆ ಮಹಾರಾಷ್ಟ್ರರ ಬಂಧವ್ಯಾಇಲ್ಲದ್ದರಿಂದ ಅವನಿಗೆ ಯಥಾಪ್ರಕಾರ ಇತ್ತರಡಿಯ ರಾಷ್ಟ್ರಗಳನ್ನು ಸಂಪಾದಿಸಲಿಕ್ಕೆ ಆಸ್ಪದದೊರೆಯಿತು. ಇವನ ರಾಜ್ಯದ ಮೇರೆಯು ತುಂಗಭದ್ರಾನದಿಯು ಇತ್ತಕಡೆಗೆ ಎಷ್ಟೋಭಾಗ ಬಂದಿತ್ತು. ಕೃಷ್ಣಾನದಿಯಂತರ ರಾಜ್ಯ ದೊರಕಿಸಬೇಕೆಂದು ಮನಸ್ಸಿನೊಳ

ತ್ತು; ಆದರೆ ಮಧ್ಯದಲ್ಲಿ ಸವನೂರ ಹಾಗು ಎರಡನೇ ಹಲವು ಪಠಾಣ ನವಾಬರ ರಾಜ್ಯಗಳಿದ್ದವು. ಈ ಸಲುವಾಗಿ ಅವನು ಈ ನವಾಬರನ್ನು ಗೆದ್ದರೆ ಅಥವಾ ಇವರಕೂಡ ಸಮಾಧಾನದ ಮಾತುನಡಿಸಿದರೆ ನನ್ನ ಸಿದ್ಧಿದೆಹೋಯೀತು; ಎಂದು ತಿಳಿದು ಅವನು ಈ ಎರಡುತರದ ಉಪಾಯಗಳನ್ನು ಯೋಜಿಸಿದನು.

ಹೈದರಲ್ಲಿಯು ಈ ಮೇರಿಗೆ ಸನ್ ೧೭೬೪ನೆ ಇಸವಿಯಲ್ಲಿ ಸವನೂರ ನವಾಬನಕಡೆಗೆ ಒಡಂಬಡಿಕೆಯ ಪ್ರಯತ್ನ ಮಾಡುವದಕ್ಕಾಗಿ ಮೊದಲು ತನ್ನ ವಕೀಲನನ್ನು ಕಳುಹಿಸಿಕೊಟ್ಟನು; ಆದರೆ ಅದು ವ್ಯರ್ಥವಾಯಿತು.

ತರುವಾಯ ಸರದಾರ ಫಾಜಲಉಲ್ಲಾಖಾನ ನಂಬವನಕೂಡ ದೊಡ್ಡ ದಂಡನ್ನುಕೊಟ್ಟು, ಇದರಿಂದವಾದರೂ ನವಾಬನು ಭೀತಿಯುಳ್ಳವನಾಗಿ ತನ್ನೊಳಗಾಗುವನೋ, ಹ್ಯಾಗೆ ನೋಡಬೇಕೆಂದು ಕಳುಹಿದ್ದನು, ಆದರೆ ನವಾಬನು ಹೈದರನ ಈ ಭೀತಿಗೆ ಒಳಗಾಗಲಿಲ್ಲ. ಆಮೇಲೆ ಹೈದರನು ಬೆದನೂರಿಂದ ಹೊರಟು ಫಾಜಲ್ಉಲ್ಲಾಖಾನನನ್ನು ಕೂಡಿಕೊಂಡು ಸವನೂರಿಗೆಬಂದು ಹಲ್ಲಾಮಾಡಿ, ತನ್ನ ಮನಸ್ಸಿನಪ್ರಕಾರ ಒಡಂಬಡಿಕೆ ಮಾಡುವಂತೆ ನವಾಬನಿಂದ ಗೊತ್ತು ಮಾಡಿಕೊಂಡನು. ಇದಲ್ಲದೆ ನವಾಬನ ಮೇಲೆ ತ್ರಿಲಕ್ಷ ರೂಪಾಯಿ ಕರವನ್ನು ಕೂಡಿಸಿದನು. ಮುಂದೆ ಹಾಗೆಯೇ ಫಾಜಲ ಉಲ್ಲಾಖಾನನು ಧಾರವಾಡದವರಿಗೆ ಮಹಾರಾಷ್ಟ್ರರ ಠಾಣೆಗಳನ್ನು ಸಾಧಿಸಿಕೊಂಡು ಕೃಷ್ಣಾನದಿಯ ವರಿಯಂತರ ಹೈದರನ ರಾಜ್ಯತಂದು ಆವನ ನಿಶಾನಿಯನ್ನು ಝಳಪಿಸಿದನು [೧೭೬೪]

ಈ ತರುವಾಯ ಮಾಧವರಾಯನು ದಂಡನ್ನು ತಯಾರ ಮಾಡಿಕೊಂಡ ತನ್ನ ಕಕ್ಷನಾದ ರಘುನಾಥರಾಯನ ತಂತ್ರ

ಯುಕ್ತಿಗಳಿಂದ ಮರು ಎರಡು ವರುಷದಲ್ಲಿ ರಾಜ್ಯದಲ್ಲಿ ಮೊದಲಿನಂತೆ ಹಕ್ಕುಗಳನ್ನು ಕೂಡಿಸಿಕೊಂಡನು. ಆದರೆ ಸನ್ ೧೭೬೩ನೇ ವರುಷದಲ್ಲಿ ನಿಜಾಮನು ಪುಣೆಯ ಮೇಲೆ ಹಲ್ಲಾ ಮಾಡಿ ಬಹು ನಾಶಮಾಡಿದ್ದರಿಂದ ಈ ಕೆಲಸದಲ್ಲಿ ಬಹು ತೊಡಕಿಕೊಂಡು ಇದ್ದನು. ಕಾರಣ ಹೈದರನಕಡೆಗೆ ಲಕ್ಷ್ಯವಿಡಲಿಕ್ಕೆ ಬರಲಿಲ್ಲ. ಆದರೆ ನಿಜಾಮನನ್ನು ಸೋಲಿಸಿದ ತರುವಾಯ ಹೈದರನ ನಿಶಾನಿಯು ಧಾರವಾಡದವರೆಗೆ ಬಂದದ್ದನ್ನೂ, ಮತ್ತು ತನ್ನ ಸ್ನೇಹಿತನಾದ ನವಾಬನಿಗೆ ಉಪದ್ರ ಮಾಡಿದ್ದನ್ನೂ ತಿಳಿದು, ತತ್ಕಾಲವೇ ಗೋಂದಣವನ್ನು ತಯಾರಮಾಡಿಸಿದನು. ಪುಣೆಯಿಂದ ಗೋಪಾಳರಾವ ಪಟವರ್ಧನಕರ ಎಂಬುವನಿಗೆ ಕೃಷ್ಣಾನದಿಯನ್ನು ದಾಟಿ ನಡೆದು ಹೈದರನ ದಂಡು ಗೊತ್ತುಹಚ್ಚಿ ತಯಾರಿಯಲ್ಲಿರಬೇಕೆಂದು ಹುಕುಂಮಾಡಿ ಕಳುಹಿದನು. ಆದರೆ ಗೋಪಾಳರಾಯನು ಬಹು ಆವಸರದಿಂದ ಯುದ್ಧ ಸಂಧಾನಡಿಸಿದ್ದರಿಂದ ಫಾಜಲ ಉಲ್ಲಾಖಾನನು ಇವನನ್ನು ಮೊದಲು ಪರಾಭವಪಡಿಸಿದನು. ಇಷ್ಟರಲ್ಲಿ ಮಾಧವರಾಯನು ದೊಡ್ಡ ದಂಡಿನಿಂದ ಕೂಡಿಬಂದು ಮುಟ್ಟಿದನು. ತರುವಾಯ ೭|೮ ತಿಂಗಳುಗಳವರೆಗೆ ಹೈದರನಕೂಡ ಕಾದಿ ಶ್ರೀರಂಗಪಟ್ಟಣದವರೆಗೆ ಅವನನ್ನು ಹಿಂದಕ್ಕಟ್ಟಿದ್ದಲ್ಲದೆ ಬಳ್ಳೀ ಸಂಕಟಕ್ಕೆ ತಂದು ಕಡೆಗೆ ಒಡಂಬಡಿಕೆ ಮಾಡಿಕೊಂಡನು. ಈ ರೀತಿ ಹೈದರನಿಂದ ಸವಣೂರಕರಿಗೆ ಆಗುವ ಉಪದ್ರವನ್ನು ಮಹಾರಾಷ್ಟ್ರರು ನಿಲ್ಲಿಸಿ ರಕ್ಷಣೆಮಾಡಿದರು ಮತ್ತು ಈ ಒಡಂಬಡಿಕೆಯ ನೇಮಗಳಲ್ಲಿ ಸವಣೂರಕರರ ವಿಷಯವಾಗಿ ಮಹಾರಾಷ್ಟ್ರರು ಹೈದರನಿಂದ, ಒಂದು ಕಲಮು ಹಾಕಿಸಿಕೊಂಡರು.

"ಇನ್ನು ಮೇಲೆ ಸವಣೂರ ನವಾಬನಮೇಲೆ ಮತ್ತು ಅವನ

ಪ್ರದೇಶದ ಮೇಲೆ ನನ್ನ ಯಾವ ತರದ ಹಕ್ಕೂ ಉಳಿದಿರುವದಿಲ್ಲ. ಹಾಗೂ, ಅವನಿಗೆ, ಅವನ ಪ್ರದೇಶಕ್ಕೆ ಉಪದ್ರ ಕೊಡುವದಿಲ್ಲ.''

ಮುಂದೆ ಮಾಧವರಾಯನು ತೀರಿಕೊಂಡಮೇಲೆ ನಾರಾಯಣರಾಯನನ್ನು ಘಾತಕರು ಕೊಂದುಹಾಕಿದ ತರುವಾಯ ಮನೆಯಲ್ಲಿ ಎರಡು ಭಾಗಗಳಾಗಿ, ಯಾವತ್ತೂ ದರ್ಬಾರದ ಕಡೆಯ ಸೈನ್ಯವು ರಘುನಾಥರಾಯನ ಪಕ್ಷದ್ದಾಯಿತು. ಹೈದರನು ಈಗ್ಗೆ ಕರ್ನಾಟಕವನ್ನು ಸಾಧಿಸಬೇಕೆಂದು ದಂಡೆತ್ತಿ ಹೋದನು. ಮತ್ತು ಸನ್ ೧೭೭೬ನೇ ಇಸವಿಯಲ್ಲಿ ಸವನೂರ ಮೇಲೆ ದಂಡೆತ್ತಿ ಹೋಗಿ ಅದನ್ನು ತೆಗೆದುಕೊಂಡನು. ಸನ್ ೧೭೭೮ನೇ ವರುಷದ ಅಂತ್ಯದಲ್ಲಿ ಕೃಷ್ಣಾನದಿಯ ಪರ್ಯಂತರದ ಮಹಾರಾಷ್ಟ್ರರ ಸೀಮೆಗಳನ್ನು ಸಾಧಿಸಿದನು. ಹಾಗು ನವಾಬನಂಥ ಬಲಿಷ್ಠ ಸರದಾರನ ಸ್ನೇಹವು ನಮಗೆ ಇದ್ದರೆ ಬಹಳ ಉಪಯೋಗವಾದೀತೆಂದು ನೆನಿಸಿ ಅವನನ್ನು ತಮ್ಮ ಪಕ್ಷದವನಾಗಿ ಮಾಡಿಕೊಳ್ಳುವದರ ಸಲುವಾಗಿ ಅವನಕಡೆಗೆ ವಕೀಲನನ್ನು ಕಳುಹಿ ಎರಡೂ ಮನೆತನದ ಶರೀರ ಸಂಬಂಧವಾಗುವಂತೆ ಮಾಡಬೇಕೆಂದು ಯೋಚನೆಮಾಡಿದನು. ತಾ. ೨೧|೪|೮೩ ಇಸ್ವಿ.

ಧಾ. ಕ. ೪ನೇ ನ. ಸ್ಕೂಲ ಮಾ. } ಶಿವನಂದಾಯ ಗವಾಜಿಮ—

ಮುಂದಕ್ಕೆ ಸಾಗುವದು.

—o—

"ಸರಕಾರೀ ಪತ್ರವ್ಯವಹಾರದ ಚರ್ಚೆಯು"

ಮಾಸ್ತರರು ತಮ್ಮತಮ್ಮೊಳಗೆ ನಡಿಸುವ ಸರಕಾರೀ ಪತ್ರವ್ಯವಹಾರದಲ್ಲಿ ಅವರು ಒಬ್ಬರಿಗೊಬ್ಬರು ವಿನ...

ಸಿದ್ಧನಾಥ ವಾಚನ ಮಂದಿರ.
ಧಾರವಾಡ.
ಮೊರಬ. ಜಿ.

ರ್ಯಾದೆಯೂ, ಉಳ್ಳ ಭಾಷೆಯಿಂದ ಪರಸ್ಪರ ವಿಳಾಸ ಬರೆಯುವದರಲ್ಲಿ ಜಾಗ್ರತೆ ಪಡಬೇಕು ಎಂಬದಾಗಿ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ದಯಾಳು ಫ್ಲೀಟ ಥೊರಗವರು ಫರ್ಮಾಯಿಸಿದ ಹುಕುಮು ನಂ ೧೮೭೩ ನೇ ಇಸವಿಯು ನವಂಬರ ತಿಂಗಳ ಶಾಲಾಪತ್ರಿಕೆಯ ಪುಟ ೪೬೭ ನೇದರಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ.

ಇದಲ್ಲದೆ ಪೂರ್ವದಲ್ಲಿ ತಾಲೂಕ ಮಾಸ್ತರರೆ ಆಗಲಿ, ಪ್ರೋಟಸಾಲಿಯ ಮಾಸ್ತರರೇ ಆಗಲಿ, ಅವರು ಒಬ್ಬರಿಗೊಬ್ಬರು " ರಾ. ರಾ. ಶಾಲಾ ಹೆಡ್‌ಮಾಸ್ತರ ಸಾಹೇಬರಿಗೆ ಕಲ್ಮೇಲಿನ ಹುಕುಮಿನಲ್ಲಿ ನಮೂದಿಸಿದ್ದಂತೆ ಪರಿಪಾಟು ಇದಕ್ಕೆ ಮೆಹರಬಾನಗಿ ಆಗಬೇಕು, (ಯಾ) ಮೇಲಿನ ಸರಕ್ಯುಲರ ಪ್ರಅಮಲಿನಲ್ಲಿ ತರುವ ತಜವೀಜಾಗಬೇಕು " ಎಂತಲೂ, " ಪ್ರೋಟಸಾಲಿಯ ಮಾಸ್ತರರು " ರಾ. ರಾ. ತಾಲೂಕ ಶಾಲಾ ಹೆಡ್ ಮಾಸ್ತರ ಸಾಹೇಬರಿಗೆ--ಕಲ್ಮ (ಕೀ ಯಾ ಮತ್ತೇನಾದರೂ ಕಳುಹಿಸಿದರೆ, ಯಾ ಏನಾದರೂ ಬೇಡುವದಾದರೆ.) ಮುಟ್ಟಿದಬಗ್ಗೆ ದಯಮಾಡಿ ಉತ್ತರಕಲ್ಮಿಯ ಮೇಹರ್ಬಾನಗಿ ಆಗಬೇಕು, ಕಳಿಸುವಂತೆ ತಜವೀಜಾಗಬೇಕು. " ಮುಂತಾದ ಮರ್ಯಾದೆ ವಿನಯಾತ್ಮಗಳಿಂದ ಯುಕ್ತವಾದ ಮಜಕೂರು ಬರೆಯುತ್ತಿದ್ದರು. ಹೀಗಿದ್ದು ಇತ್ತಿತ್ತ ಇವ್ರಗಳಿಗೆಲ್ಲ ಬದಲಾಗಿ, ದಪ್ತರಿಯವರು ಸರ್ಕ್ಯುಲರ ಕೊಡುವಂತೆಯೂ ಹುಕುಮು ಮಾಡುವಂತೆಯೂ, ' ಮಾಸ್ತರರಿಗೆ [ಇಂಥಾ ಮಾಸ್ತರರ ಕಡೆಯಿಂದ ಕೊಡಲ್ಪಡುವದೇನಂದರೆ, ಕಳುಹಿಸಲ್ಪಡುವದೇನಂದರೆ, ಪತ್ರಿಕೆ ಕಳುಹಿಸಬೇಕು, ಯು ಕಳುಹಿಸಲಿಕ್ಕೇ ಬೇಕು, (ಸ್ವಲ್ಪ ಸುಸ್ತಿ ಆದರೆ, ಸುಸ್ತಿ ಆದಕಾರಣ

ತಿಳುಹಿಸಿರಿ ಎಂಬುದಕ್ಕೆ ಬದಲಾಗಿ) ' ಸುಸ್ತಿ ಯಾಕೆ ಮಾಡಿದಿರಿ? ಇದರ ಜವಾಬ ಕೊಡಿರಿ, ಯಾ ಬರೀರಿ, ಮುಂತಾದ ನಿಷ್ಠುರ ಶಬ್ದಗಳನ್ನು ತಂಮೊಳಗೆ ತಾವೇ ಉಪಯೋಗಿಸಿಕೊಂಡು ತರುವಾಯಾ ' ಆ ಮಾಸ್ತರರು ನೋಡಿರಿ ಹ್ಯಾಗೆ ಬರೆದಿರುವರು? ಅವರೇನು ನಂಮ ವರಿಷ್ಠರೋ? ಎಂಬುದಾಗಿ ಮೊದಲು ತಾವು ಬರೆದದ್ದು ಲಕ್ಷಿಸದೆ ಮನಬೇಸರಿಕೆಯು ಮಾತಾಡಿ ಘನ ಮಾಸುವರು. ಒಳ್ಳೇದು ಯಾರಾದರು ಮೇಲಿನ ಮರ್ಯಾದೆ ಪೂರ್ವಕ ವಿಳಾಸದಿಂದ ಬರೆದಕ್ಕಾದರೂ ಸಮಾಧಾನ ಪಡಬೇಕು? (ಪಡರು) ಅವರಿಗೆ ಹಿಯ್ಯಾಳಿಸಿ ಅವರ ಚೇಷ್ಟೆ ಮಾಡುವರು. ಅನ್ಯರಿಗೆ ತಾವು ಮಾನ ಮಾಡರು; ಅನ್ಯರಿಂದಲೂ ಮಾನ ಹೊಂದರು; ಸುಮ್ಮನಾರೇ ಇರರು; ಇದು ಎಂಥಾ ಭಾವವು! ಎಂಥಾ ಮರ್ಯಾದೆಯು!! ಎಂಥಾ ವಿನಯತ್ವವು!!!

ಕಹಿತೋ ಕಹಿ ಜಾತಾನಹಿ, ಕಹಿ ಬಗರ ರಹೆ ಜಾತಾನಹಿ, ಕಹಿತೊ ಬಾವ ಕುತ್ತೆ ಖಾಯೆ, ನಹಿ ಕಹಿತೊ ಮಾಮಾರೆ ಜಾತಿಯೆ. ಎಂಬ ಪಾರಮಾರ್ಥದಂತೆಯೇ ಇದು ಸರಿ.

ಆದರೆ, " ವಿನಯಂ ಸರ್ವಧನ್ಯಂ, ನಿಷ್ಠುರಂ ಸರ್ವನಷ್ಟಂ" ಎಂಬ ವಾಕ್ಯವು, ಸ್ಪಷ್ಟೀಕರಣ ಮಾಡುವ ಅವಶ್ಯವಿಲ್ಲ. ಇದು ಎಲ್ಲರ ಅನುಭವದ ಸಂಗತಿಯೇ ಎಂಬುವಂತೆ ನಂನ ಮಂದಮತಿಗೆ ತಿಳಿಯುತ್ತದೆ.

ಎರಡನೇದು—" ಸರಕಾರೀ ಪತ್ರವ್ಯವಹಾರದಲ್ಲಿ ಪತ್ರದ ತಾರೀಖು, ಮುಕ್ಕಾಮು, ಪತ್ರದ ಕಡೆಗೆ ಹಾಕದೆ ಮೇಲೆ ನಂಬರದ ಹತ್ತರ ಹಾಕಬೇಕು" ಅಂತಾ ಗೊತ್ತು ಪಡಿಸಿದ ಹಿಂದುಸ್ಥಾನ ಸರಕಾರದವರ ಠರಾವು ಸನ್ ೧೮೭೬ ನೇ ಇಸವಿಯ ಜೂನತಿಂಗಳ ಶಾಲಾಪತ್ರಿಕೆಯ ಪುಟ ೩೪೧ನೇದರಲ್ಲಿ

ಪ್ರಕಟಿಸಲ್ಪಟ್ಟಿರುತ್ತದೆ. ಯದ್ಯಪಿ ಹೈಸ್ಕೂಲಿನ ಕಾಗದಪಗಳಲ್ಲಿ ಈಹೊತ್ತಿಗೂ ಈ ತರಾವಿನ ಪದ್ಧತಿಯು ಅಮಲಿನಲ್ಲಿ ಬಂದಿರುವದಿಲ್ಲ. ಇದರ ಕಾರಣವೇನು?

ಇನ್ನೊಂದು ಸಂಗತಿಯು—ಪುಸ್ತಕಗಳ ಕ್ರಯ, ಶಾಲೆಯ ಅಭ್ಯಾಸಿಗಳಿಂದ ಬರತಕ್ಕ ಫೀ ಸಂಬಂಧ ಹಣ ತಾಂಬ್ರನಾಣ್ಯ ರೂಪದಿಂದ ಸ್ವೀಕರಿಸಲಿಕ್ಕೆ ಬೇಕೆಂದು ಸರಕಾರದವ ತರಾವ ನಂಬರು ೩೮೫೫ ತಾ. ೨೮।೧೦।೭೩ನೇದ್ದು ನ್ ೧೮೭೩ನೇ ಇಸವಿಯ ನವಂಬರ ತಿಂಗಳ ಶಾಲಾಪತ್ರಿಕೆಯ ಪು. ೪೭೮ ನೇದರಲ್ಲಿ ಛಾಪಿಸಲ್ಪಟ್ಟಿರುತ್ತದೆ. ಆದರೆ, ಈಹೊತ್ತಿಗೂ ಕೆಲವರು ಈ ವಿಷಯವಾಗಿ ಶಂಕಿಸುವರು.

ಈ ಮೇಲೆ ವಿಧಿಸಲ್ಪಟ್ಟ ವಿಷಯಗಳನ್ನು ಕುರಿತು ಎಡ್ಯುಕೇಶನ ಸಾ. ರೂ, ಪರಿಷ್ಠಾಧಿಕಾರಿಗಳೂ, ಯಾವದೊಂದು ನಿರ್ಣಯವನ್ನು ಪ್ರಕಟಿಸಿ ಎಲ್ಲರ ಮನ ಬೇಸರಿಕೆಯು ಈ [illegible]ನ್ನು ನಿವಾರಣ ಮಾಡುವರೆಂದು ಬೇಡಿಕೊಳ್ಳುತ್ತೇವೆ. ಇಂತಿ ವಿಜ್ಞಾಪನ:

ತಾ. ೧೯।೪।೮೩ ಇಸವಿ.

“ಬಿಬ್ಬ ಮಾಸ್ತರನಾದ (ಕ್ಷ)”

—o—

ಗಾದೆ.

“ಹೆಸರು ಮಾತ್ರ ಗಂಗಾಭವಾನಿ ಕುಡಿಯುವ
ದಕ್ಕೆ ನೀರಿಲ್ಲ.”

ಮಹಾರಾಜಶ್ರೀ ಶಾಲಾಪತ್ರಕದ ಎಡಿಟರರವರ ಸನ್ನಿಧಾನಕ್ಕೆ

ಅಯ್ಯಾ ಎಡಿಟರ ಮಹಾರಾಯರೇ? ತಮ್ಮ ದರ್ಶನವು ಹಿಂದೆ ಬಂದಾವರ್ತಿ ದೊರಕಿಧೆ. ಈಗ ಮತ್ತೆ ತಮ್ಮ ದರ್ಶನ

ದಾಪೇಕ್ಷೆ ಆದಕಾರಣದಿಂದ ತಮ್ಮ ಚಂದ್ರಾಂಶುವನ್ನು ವಂದಿಸಿದ್ದೇನೆ. ಮುಂದಮುಕಿಯು ಹೊಂದಿಸಿ ಕಳುಹಿಸಿದ ಪತ್ರವನ್ನು ಮುದ್ರಿಸಿದರೆ ಮನೋಭಿಲಾಷೆಯನ್ನು ಪೂರ್ಣ ಮಾಡಿದಲ್ಲಿ ತಮ್ಮ ಹೊರತು ಅನ್ಯರನ್ನು ಕಾಣೆ. ಆದ್ದರಿಂದಾ ನಾನು ಬರೆದ ಪತ್ರವನ್ನು ನನ್ನ ಬಂಧುಗಳಾದ ದಕ್ಷಿಣಭಾಗದ ಜನರಿಗೆಲ್ಲ ತಿಳಿಸಬೇಕೆಂಬ ಅಪೇಕ್ಷೆಯುಂಟು. ದಯಮಾಡಿ ಮುದ್ರಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಶಾಲಾಖಾತೆಯ ಮಾಸ್ತರ ಸ್ಥಿತಿ ನೋಡಿದರೆ ಹೇಳಿನಗಾದಗೆ ಯೋಗ್ಯವಾದದ್ದೆ ಸರಿ. ಹಸರಿಗೆ ಸ್ಕೂಲಮಾಸ್ತರ, ಯಾತಕ್ಕೋ ಇಂಥಾ ದೊಡ್ಡ ಪದವಿ, ಸಾಲೆಯಲ್ಲಿ ಖುರ್ಚಿ, ಮೇಜು ಹಾಕಿಕೊಂಡು ಉಪವಾಸ ವನವಾಸದಿಂದ ಅಭ್ಯಾಸ ಮಾಡಿಸಿ ಸಿಫಾರಸ ಪಡೆಯಬೇಕು. ಅಂದರೆ ಸುಖವಾದೀತೆಂತ ಮರ್ಯಾದೆಯಿಂದ ನಡಕೊಂಡರೆ, ಸುಖದೊರಕೀತೇನು? ಸ್ವಪ್ನಾವಸ್ಥೆಯೇ ಸರಿ.

ನೋಡಿರಿ! ಈ ಸಾರೆ ಆದ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲಾ ಜನ ಮಾಸ್ತರರು ತಮ್ಮ ತಮ್ಮ ಯೋಗ್ಯತೆಯ ಪ್ರಕಾರ ಅಭ್ಯಾಸ ಮಾಡಿಸಿ, ವಾರ್ಷಿಕ ಪರೀಕ್ಷೆಯಲ್ಲಿ ಯಶ ಹೊಂದಿದರು. ವಾರ್ಷಿಕ ಪರೀಕ್ಷೆ ಚನ್ನಾಗಿ ಆಯಿತು ಏನಾದರು ಬಡ್ತಿ ದೊರೆಯೀತೆಂದು ಹಿರ್‍ರನೆ ಹಿಗ್ಗಿ, ಆನಂದಪಟ್ಟವರಾಗಿದ್ದರು. ಎಲ್ಲೀ ಬಡ್ತಿ, ಬಡ್ತಿ ಅಂದರೆ ಹಿಂಬಡ್ತಿಯೇ ಸರಿ.

ಅಷ್ಟರಲ್ಲಿ ವಾರ್ಷಿಕ ಲೆಖ್ಖ ಕಳುಹಿಸುವದಕ್ಕೆ ಹುಕುಮುಗಳು ಹೊರಬಿದ್ದವು. ಅದರಲ್ಲಿ ನೀವು ಈ ವರ್ಷ ಹೋದವರ್ಷಕ್ಕಿಂತ ಜಾಸ್ತಿ ಈ ಸಾರೆ ಇರಬೇಕು ಇಲ್ಲದಿದ್ದರೆ ನಿಮ್ಮ ಬಗ್ಗೆ ಮೇಲೆ ಬರಿಯುತ್ತೇವೆ ನೋಡಿರಿ! ಕಣ್ಣುಕಳಕೊಂಡು ಹಗ

ಯು ರಾತ್ರಿ ಸಹಿತ ಕೆಲಸ ಮಾಡಬೇಕು. ಇಷ್ಟಾದಮೇಲೆ ಹುಡುಗರನ್ನು ಕೂಡಿಸಬೇಕು. ಸ್ಕೂಲಕಮೀಟಿದಾರರೆಂಬ ಧೀರ್ಘಾಭಿಧಾನವುಳ್ಳ ಕೆಂಚರಾದ ಪಂಚರು ಯಾತಕ್ಕೆ ಬೇಕು. ಡೊಳ್ಳುಹೊಟ್ಟೆ ಬಿಟ್ಟುಕೊಂಡು, ನಮ್ಮ ಮೇಲೆ ಅಧಿಕಾರ ನಡಿಸಲಿಕ್ಕೇನೋ. ಸಾಕು! ಸಾಕು!! ಸ್ಕೂಲಕಮೀಟಿದಾರರ ಮಹತ್ವ ಇಂಥಾದ್ದರಲ್ಲಿಯೇ ಮಾಸ್ತರರು ಸರಪ್ರಾಣರು ಆದಾಗ್ಯೂ ಎಪ್ಪಾ, ಎಣ್ಣಾ, ಎಮ್ಮಾ, ಎಕ್ಕಾ, ಎಂದು ಹಿಳ್ಳೇ ಮಾತುಗಳಿಂದ ಸಂಬೋಧಿಸಿ ತಮ್ಮ ಕೈಯಿಂದ ಆದಷ್ಟು ಹುಡುಗರನ್ನು ಜಾಸ್ತಿ ಮಾಡಿ ಮಾರ್ಚಿಕಲೆಖ್ಖ ಕಳುಹಿಸಿದರು. ಆ ಮೇಲೆ, ಮತ್ತೆ ನಿಮ್ಮ ಸಾಲೆಯಲ್ಲಿ ಎಷ್ಟು ಹುಡುಗರು ಇರಲಿಕ್ಕೇಬೇಕು. ಇಲ್ಲದಿದ್ದರೆ ನಿಮಗೆ ಇಷ್ಟು ದಂಡ ಅಥವಾ ಇಷ್ಟು ಪಗಾರ ಕಮ್ಮಿ ಮಾಡುತ್ತೇವೆಂದು ಹುಕುಮುಗಳನ್ನು ಕೊಟ್ಟರು. ನೋಡಿರಿ! "ಮಗಳು ಹಡಿಯದಿದ್ದರೆ ಅಳಿಯನ ಹೆಣಕ್ಕೆ ಹೊಯ್ದುಕೊಂಡರು" ಎಂಬ ಗಾದೆಗೆ ಸರಿಯಾಗಿ ನಮಗೆ ಹುಡುಗರನ್ನು ಕೂಡಿಸಬೇಕೆಂದು ಹುಕುಮು ಕೊಡುತ್ತಾರೆ. ಎಲ್ಲಿ ಬಾಂಧವಗಳಿರಾ? ಇದು ಎಂಥಾ ನ್ಯಾಯವು! ಎಂಥಾ ಸುಧಾರಣೆಯು! ಎಂಥಾ ಮಾರ್ಗವು!!!

ಹುಡುಗರನ್ನು ಮಾಡುವದು ಮಾಸ್ತರರ ಕೈಯಲ್ಲಿ ಇದ್ದರೆ ಬೇಕಾದಷ್ಟು ಹುಡುಗರನ್ನು ಮಾಡಿ ಸಾಲೆಯಲ್ಲಿ ಹಾಕುತಿದ್ದರು. ನಮಗ ಬ್ರಹ್ಮಚರ್ಯ ವ್ರತದವರೇ ಬಹಳ. ಮಾಸ್ತರನಿದ್ದವನಿಗೆ ಯಾರೂ ಕನ್ಯಾ ಕೊಡುವದಿಲ್ಲೇ ಇಲ್ಲ. ಇದರ ಸ್ವರೂಪ ಎಲ್ಲಾ ಜನರಿಗೆ ಗೊತ್ತೇ ಇರುತ್ತದೆ. ಇರುವತನಕ ಹೊಟ್ಟೆ ಬಟ್ಟೆಗೆ ತುಟ್ಟಿ ಮಾಡಿಕೊಂಡು ಪಟ್ಟದರಸಿಯರು ಯಾರು ಇದ್ದಾರು? ಹೊಟ್ಟಿಗಿಲ್ಲದವರೇ ಶಾಲಾಖಾತೆ ಗತಿ ಪಗಾ

ನಕಾ ೧೮೦ಶಾ ೨೫ ವರೆಗೆ ಸಾಲ ಹಿಡಿದರೆ ದೊಡ್ಡ ಕುಟುಂ ಇದ್ದವರು ಹ್ಯಾಗೆ ಹೊಟ್ಟೆ ಹೊರೆಕೊಳ್ಳಬೇಕು. ಇದು ಮೇಲೆ ತೋರುತ್ತದೆ. ಇರಲಿ. ಇದ್ದದ್ದರಲ್ಲಿ ಸೌಖ್ಯವೇ? ಸೌಖ್ಯ ಬಂದರೆ ಸ್ವಪ್ನವೇ ಸರಿ.

ಇನ್ನೊಂದು ಸಂಗತಿ ಯೇನಂದರೆ ಫೀ ವಸೂಲ ಅನಕಾ ಎಲ್ಲರ ಅನುಭೋಗದಲ್ಲಿ ಬಂದಿರಬಹುದು. ಇಂದ ನಾಳೆ ಎಂನು ೨೬|೨೭ ತಾರೀಖಿನ ತನಕಾ ಎಳಸುತ್ತಾರೆ. ೨೦ ತಾರೀಖಿನೊಳಗೇ ಬರಣಾಮಾಡಬೇಕೆಂಬ ನೇಮವಿರುವ ಕಾರಣದಿಂದ ಎಲ್ಲಾದರು ದೊರತಷ್ಟು ಸಾಲಾ ಮಾಡಿ ಫೀ ಭರಣಾ ಮಾಡುತ್ತಾರೆ. ಇಷ್ಟಾದಾಗ್ಯೂ, ಪರಿಷ್ಟರು ಫೀ ತಿಲ್ಯ ಯಾಕೆ, ಇಟ್ಟೆ ನಿನಗೆ ದಂಡ ಮಾಡಬೇಕು. ನಿನ್ನ ಜವಾಬು ಏನು ಇದ್ದದ್ದೇ ಬರಿ. ಅಂತಾ ಹುಕುಮು ಕೊಡುತ್ತಾರೆ. ನೋಡಿರಿ ಅನ್ಯಾಯ ಹ್ಯಾಗೂ ಸಾಲಅಪ್ಪಿರಕ್ಕೆ ತಿಲ್ಕ ಉಳಿಯುವದೇ ಇಲ್ಲ. ಪಗಾರದ ಬಗ್ಗೆ ನೋಡಿದರೆ, ಹಿಂದು ತಿಂಗಳ ಪಗಾರ ಮಾತ್ರ ಹಿಂದೆ ತಿಂಗಳ ಅಖೈರವಾದರೂ ದರ್ಶನವೇ ಇಲ್ಲಾ. ಇಂಥಾ ದು:ಖದ ಕೆಲಸ ಮಾಡುವದಕ್ಕಿಂತ ಕೈಯಲ್ಲಿ ಗಾಠಿ ಹಿಡಕೊಂಡು ಊರೂರ ತಿರಿಗಿದರೆ, ನಾಲ್ಕು ಮಂದಿ ಪುಣ್ಯಾತ್ಮರು ನಾಲ್ಕು ಹಿಡಿ ಕಾಳು ಹಾಕ್ತಾರು ೭|೮ ಸಾರಿ ವನ್ನ ಬಾಂಧವರು ಶಾಲಾಪತ್ರಿಕೆಯ ತುಂಬ ಹಿಡಿಕೊಂಡದ್ದು ದಕ್ಷಿಣಭಾಗದಲ್ಲೆಲ್ಲಾ ಕೇಳಿಸುತ್ತದೆ. ನಮ್ಮ ಧರ್ಮ ಪ್ರಭುಗಳು ಎದ್ದು ಬಂದವರು ಎದ್ದಂತೆ ನಮ್ಮ ಗತಿ ನೋಡಿ, ಯಾಕೆ ರಕ್ಷಿಸಬಾರದು; ಆಯ್ಯಯ್ಯಾ! ಪರಮೇಶ್ವರಾ! ನಾವು ಬಹು ತ್ರಾಸಗೊಂಡಿದ್ದೇವೆ

ಮುಲ್ಕೀಪರೀಕ್ಷೆ ಕೊಡದ ಜನರಿಗನಕಾ—ಜೇಷ್ಠಲಕ್ಷ್ಮಿಯು ಕೈತೊಳೆದು ಬೆನ್ನು ಹತ್ತಿದ್ದಾಳೆ. ಅವರ ಗತಿ ಏನಾಗುತ್ತದೋ,

ಹೀಗೆ ಹೇಳಿಲ್ಲ ಸ್ವಾಮೀ! ಶಾಲಾಖಾತೆಯ ಧೋರಣೆಗಳೇ ನ ವಿಜ್ಞಾಪನೆಗೆ ಚಿತ್ತ ಕೊಟ್ಟು, ಶ್ರೀ ವಸೂಲಿಯೂ ಹುಡುಗ ಜವಾನಾರಿಯೂ ಸ್ಥಳಿಕ ಮ್ಯಾನೇಜರೆಂಬ ಅಧಿಕಾರಾಭಿಧಾ ನವುಳ್ಳವರ ವಶಕ್ಕೆ ಕೊಟ್ಟು, ಇನ್ನು ಕಲಿಸುವದೂ ಸರಕಾರೀ ಕ ಗದಪತ್ರಗಳಿಗೆ ಜವಾಬದಾರರಾಗುವದು ಇಷ್ಟೊಂದು ಮಾಸ್ತರ ಕಡೆಗೆ ವಹಿಸಿದರೆ ಶಾಲಾಖಾತೆಯು ಒಳ್ಳೇ ಪ್ರಾಬಲ್ಯಕ್ಕೆ ಬ ಬಹುದು. ಎಂದಿದ್ದರೆ ಇದನ್ನು ಇದೇ ತಿಂಗಳಲ್ಲಿ ಮಂತ್ರಿಸಭೆ ಯೆಂದು ಬೇಡಿಕೊಂಡು ತಾಳ್ಮೆಧರಿಸುವಿರೆಂದು ಕೋರುತ್ತೇನೆ.

(೮) ಒಬ್ಬ ನವಕಾಸ್ಯಾಖ್ಯಾಪ್ರರಸ್ಥ

—o—

*ಟ್ರೇಂಡ ಅಂಟ್ರೇಂಡ ಮಾಸ್ತರರ ಭೇದಾಭೇದವು.

[೨೩೪ನೇ ಪುಟದಿಂದ ಮುಂದಕ್ಕೆ ಸಾಗಿದ್ದು.]

ಕಂದ|| ಹುಡುಗರು ಕಲಿಯುವ ವಿದ್ಯೆಯು |
ಕೊಡುವ ಪರೀಕ್ಷೆಯು ನಡೆಯುವ ಸ್ಟ್ಯಾಂಡರ್ಡಗಳು ||
ಬಿಡದೆಲ್ಲ ಸಮನಿರುತಿರಲ್ |
ತೋರ್ಪರುಂಟೇ? ಟ್ರೇಂಡಂಟ್ರೇಂಡೆಂದು ಕಲಿಸುವರೋಳ್
|| ೧ ||

ಅರ್ಥ—(ಎಲ್ಲಾ ಶಾಲೆಗಳಲ್ಲಿ] ಹುಡುಗರು ಕಲಿಯುವ ವಿದ್ಯೆಯೂ, ಕೊಡುವ ಪರೀಕ್ಷೆಯೂ, ನಡೆಯುವ ಸ್ಟ್ಯಾಂಡರ್ಡಗಳೂ, ಸಮ ವಿರುತ್ತವೆ. ಆದದರಿಂದ ಕಲಿಸುವ ಮಾಸ್ತರಲ್ಲಿ ಟ್ರೇಂಡ್ ಅಂಟ್ರೇಂಡರೆಂಬ ತೊಡರೆತ್ತಣದು!

---

*ಇದನ್ನು ಕುರಿತು, ಕಳೆದ ಅಗಟೋಬರ ತಿಂಗಳ ಶಾಲಾಪತ್ರಕದ ೨೩೪ನೇ ಪುಟದಲ್ಲಿ ಅವಶ್ಯವಾಗಿ ನೋಡಿಕೊಳ್ಳಿರಿ.

ತಾತ್ಪರ್ಯ:— ಟ್ರೇಂಡ ಮಾಸ್ತರರು ಕಲಿಸುವ ಸ್ಟ್ಯಾಂಡರ್ಡಗಳಿಗೂ, ಅಂಟ್ರೇಂಡ್ ಮಾಸ್ತರರು ಕಲಿಸುವ ಸ್ಟ್ಯಾಂಡರ್ಡಗಳಿಗೂ, ಭೇದವುಂಟೋ? ಟ್ರೇಂಡ್ ಮಾಸ್ತರರಲ್ಲಿ ಕಲಿತು ಪಾಸಾದವನ ಯೋಗ್ಯತೆಯು ಅಂಟ್ರೇಂಡ ಮಾಸ್ತರರಲ್ಲಿ ಕಲಿತು ಪಾಸಾದವನ ಯೋಗ್ಯತೆಗಿಂತ ಹೆಚ್ಚಿರುವದೋ? ಈ ಉಭಯಸ್ಥರಲ್ಲಿ ಆಯಾ ಸ್ಟ್ಯಾಂಡರ್ಡಗಳಂತೆ ಕಲಿತವರ ವಿದ್ಯೆಯು ಸಮವಲ್ಲವೋ? ಮಾರ್ಲಿಕ ಪರೀಕ್ಷೆಯಲ್ಲಾಗಲಿ, ಮುಲ್ಕೀ ಪರೀಕ್ಷೆಯಲ್ಲಾಗಲಿ, ಟ್ರೇಂಡ ಮಾಸ್ತರರ ವಿದ್ಯಾರ್ಥಿಗಳಲ್ಲೊಬ್ಬರೂ, ನಾಪಾಸಾಗದೆಲ್ಲರೂ ಪಾಸಾಗುವದುಂಟೋ? ಟ್ರೇಂಡರ ವಿದ್ಯಾರ್ಥಿಗಳನ್ನೂ, ಅಂಟ್ರೇಂಡರ ವಿದ್ಯಾರ್ಥಿಗಳನ್ನೂ, ಪರೀಕ್ಷಿಸುವದರಲ್ಲಿ ನ್ಯೂನಾಧಿಕವುಂಟೋ? ಇಲ್ಲಾ; ಬಿಲ್ಕುಲ್ ಇಲ್ಲಾ. ಸಮಸ್ತ ಮಾಸ್ತರರು ಕಲಿಸುವ ಸ್ಟ್ಯಾಂಡರ್ಡಗಳೂ, ಉಭಯಸ್ಥರಲಿ ಕಲಿತ ವಿದ್ಯಾರ್ಥಿಗಳ ಯೋಗ್ಯತೆಯೂ ವಿದ್ಯೆಯೂ, ಪರೀಕ್ಷಿಸುವ ವಿಧವೂ ಒಂದೆಯಲ್ಲದೆ ಹೆಚ್ಚು ಕಡಿಮೆ ಇಲ್ಲ ಹಾಗಾದರೆ, ಕಲಿಸುವ ಮಾಸ್ತರರಲ್ಲಿ ಭೇದವೆಲ್ಲಿಂದ ಬಂತು?

ಕಂದ|| ಫಲಗಳ ರುಚಿ ಗುಣ ರೂಪಂ |
ಗಳು ಸರಿಯಿರ್ದ್ದರುಮೊಂದೆಯಿರುವ ತೆರದೋಲ್ ||
ಕಲ ಬಾಲಕರಭ್ಯಾಸವು | || ೩ ||
ಸಲೆ ಸಮ ವಿದಿರ್ದೆ ಕಲಿಪರ ಯೋಗ್ಯತೆಯೊಂದಂ

ಅರ್ಥ—ಫಲಗಳ ಗುಣವೂ, ಸ್ವಾದವೂ, ಆಕಾರವೂ ಸರಿಯಿದ್ದರೆ, ಆ ಫಲಗಳ ವೃಕ್ಷವು ಹ್ಯಾಗೆ ಒಂದೇ ಜಾತಿಯದಿರುವದೋ ಹಾಗೆ, ಸಕಲ ವಿದ್ಯಾರ್ಥಿಗಳ ಅಭ್ಯಾಸವು ಸರಿಯಿದ್ದದರಿಂದ ಕಲಿಸುವ (ಮಾಸ್ತರ) ರ ಯೋಗ್ಯತೆ

ಯು ಒಂದೇ ಇರುವದು.

ತಾತ್ಪರ್ಯ—ಬೇವಿನ ಫಲಗಳು ಪ್ರಿಯವಾಗಿಯೂ, ವಿತ ವರ್ಣಗಳುಳ್ಳವುಗಳಾಗಿಯೂ, ಸ್ವಲ್ಪ ಕಿರಿದು ದೀರ್ಘವರ್ತುಲಾದಿ ಸಂಸ್ಥಾನಾಕಾರವುಳ್ಳವುಗಳಾಗಿಯೂ ಇರುವವು. ಈ ಫಲಗಳೆಲ್ಲ ಬೇರೆ ಬೇರೆಯಾಗಿ ತೋರಿದರೂ, ಅವುಗಳ ವೃಕ್ಷವು ಒಂದೇ ಅಲ್ಲವೇ? ಹೌದು. ಬೇವಿನ ಮರದಲ್ಲಿ ಮಾವಿನ ಫಲಗಳು, ಜಾಲಿಯ ಮರದಲ್ಲಿ ಬಾಳೆಯ ಫಲಗಳು, ಎಂದಿಗೂ ಆಗಲಾರವು. ಆದುದರಿಂದ ಸಮಾನ ವಿದ್ಯೆ ಯೋಗ್ಯತೆಗಳುಳ್ಳ ವಿದ್ಯಾರ್ಥಿಗಳೆಂಬ ಫಲಗಳಿಗೆ ಮೂಲ ಸ್ಥಾನವಾದ ಮಾಸ್ತರರೆಂಬ ವೃಕ್ಷಗಳು ಒಂದೇ ಜಾತಿಯೊಳಗಿನವು. ಅಂದರೆ ಮಾಸ್ತರರ ಉಪದೇಶದಿಂದ ಕಲಿತ ವಿದ್ಯಾರ್ಥಿಗಳ ವಿದ್ಯೆಯೂ, ಯೋಗ್ಯತೆಯೂ ಸರಿಯಿದ್ದದರಿಂದ ಮಾಸ್ತರರಲ್ಲಿ ಟ್ರೇಂಡ್ ಅಂಟ್ರೇಂಡ್ ರೆಂಬ ಭೇದವಿಲ್ಲೆಂಬುವದಕ್ಕೆ ಸಂದೇಹವಿಲ್ಲ.

ಕಂದ || ಕರ್ಮಿಕರಮಾರುಷರಬತಿಯರ್ |
ಶರ್ಮಾರಿಸಮಾತ್ರಮಸ್ಸಿದಡುಭಯರ್ಗಂತಾಂ||
ಕರ್ಮಾರ್ಣ್ಯಮಂಸಮಿಯುದು| ಳ್ ? ||೨||
ಧರ್ಮಂಸರಿಗೊಡದೊಡೆಯಂಜನದೊಳ್|ದನದೋ

ಅರ್ಥ— ಕೂಲಿಕಾರ ಸ್ತ್ರೀಯರು, ಪುರುಷರಿಗೆ ಸರಿಯಾಗಿ ಶ್ರಮಪಟ್ಟರೆ, ಆ ಸ್ತ್ರೀಪುರುಷರು ಉಭಯತರಿಗೂ ಸರಿಯಾಗಿ, ಕೂಲಿಯನ್ನು ಕೊಡುವದು ಒಡೆಯನಿಗೆ ತಕ್ಕದ್ದು; ಸರಿಗೂಲಿಯನ್ನು ಕೊಡದೊಡೆಯನು ಜನದೊಳದೋ? ದನದೊಳಗೋ?

ತಾತ್ಪರ್ಯ— ನಮ್ಮ ಉದಾರ ಧೊರೆಗಳವರು, ಟ್ರೇಂಡ

ಮಾಸ್ತರರಂತೆಯೇ ಅಂಟ್ರೇಂಡ ಮಾಸ್ತರರಿಂದ ಕೆಲಸವನ್ನು
ಮಾಡಿಸಿಕೊಂಡು, ಟ್ರೇಂಡರಿಗೆ ಹೆಚ್ಚು ಅಂಟ್ರೆಂಡರಿಗೆ ಕಡಿಮೆ
ಸಂಬಳ ಕೊಡುತ್ತಾರೆ. ಇದು ಯೋಗ್ಯವೋ? ಸರಿಯಾಗಿ ಕ
ಷ್ಟಪಟ್ಟವರಿಗೆ ಸರಿಯಾಗಿ, ಸಂಬಳಕೊಡುವದು ಉಚಿತವಲ್ಲ
ವೋ? ಇಂಥ ಅವಿಚಾರವು ಕೂಲಿಕಾರರಲ್ಲಿ ಸಹ ನಡೆಯು
ವದಿಲ್ಲ. ಟ್ರೇಂಡರು ಅಂಟ್ರೇಂಡರಿಗಿಂತ ಹುಡುಗರನ್ನು ಕ
ಲಿಸುವದರಲ್ಲಿ ಪರಿಶ್ರಮ ತಕ್ಕೊಳ್ಳುವವರೂ, ಜಾಗ್ರತರೂ, ಕು
ಶಲರೂ ಎಂದೆಣಿಸುವವರಿಗೆ ನಾವು ಸಂತೋಷದಿಂದುತ್ತರ
ಕೊಡುವದೇನಂದರೆ, — ಟ್ರೇಂಡ ಮಾಸ್ತರರಿದ್ದ ಶಾಲೆಗಳಲ್ಲಿ
ಬಹುಶಃ ಒಬ್ಬನಕಿದರೂ ಅಸಿಸ್ಟಂಟನಿರುತ್ತಾನೆ. ಆದರೆ ಅಂಟ್ರೇಂ
ಡರಿಗೆ ಅಸಿಸ್ಟಂಟರಿರುವದು ಅಪರೂಪ. ಟ್ರೇಂಡಮಾಸ್ತರರು ತ
ನ್ನ ಅಸಿಸ್ಟಂಟ ಸಹವಾಗಿ ಹುಡುಗರನ್ನು ಕೂಡಿಸುವದರಲ್ಲಿ
ಯೂ, ಕಲಿಸುವದರಲ್ಲಿಯೂ ಪಡುವ ಶ್ರಮದಷ್ಟೇ, ಅಸಿ
ಸ್ಟಂಟವಿಲ್ಲದ ಅಂಟ್ರೇಂಡ್ ಮಾಸ್ತರನು ತಾನೊಬ್ಬನೇ ಶ್ರ
ಮ ಪಡಬೇಕಾಗುತ್ತದೆ. ನೋಡಿರಿ; ಟ್ರೇಂಡ್ ಮಾಸ್ತರನು ತ
ನ್ನ ಅಸಿಸ್ಟಂಟ ಸಹವಾಗಿ ಮಾಡುವ ಇಬ್ಬರ ಕೆಲಸಗಳನ್ನು,
ಅಂಟ್ರೇಂಡ್ ಮಾಸ್ತರನೊಬ್ಬನೇ ಮಾಡುತ್ತಾನೆ! ಟ್ರೇಂಡ್ ಅಂ
ಟ್ರೇಂಡ್ ಮಾಸ್ತರರ ಶಾಲೆಗಳ ವಾರ್ಷಿಕ ಪರೀಕ್ಷೆಯಲ್ಲಿ ಪಾ
ಸಾದಹುಡುಗರ ಸಂಖ್ಯೆಯ ಮೇಲಿಂದ ನೋಡಿದರೆ, ಸರಕಾರ
ನಿಯಮದಷ್ಟಾಗಲಿ, ಇಲ್ಲವೆ ಹೆಚ್ಚಾಗಲಿ, ಪಾಸಾಗುವದನ್ನು
ನಮ್ಮ ಪ್ರಿಯ ವಾಚಕರು ಕಣ್ಣಿಲೆ ನೋಡಿರಬಹುದು; ಬಣ್ಣಿ
ಸುವ ಅವಶ್ಯವಿಲ್ಲ. ಒಂದುವೇಳೆ ಅಂಟ್ರೇಂಡ್‌ರಲ್ಲಿಯೇ ನಿ
ಯಮದಕ್ಕಿಂತ ಕಡಿಮೆ ಹುಡುಗರು ಪಾಸಾಗುತ್ತಾರೆಂಬುವ
ದಾಗಿಲ್ಲ; ಒಮ್ಮೊಮ್ಮೆ ಟ್ರೇಂಡ್‌ರಲ್ಲಿಯು, ಹೀಗಾಗುವದುಂ

ದು. ಆದದರಿಂದ ಟ್ರೇಂಡ್ ಮಾಸ್ತರರ ಕುಶಲತೆ ಜಾಗ್ರತೆಗಳೂ ಹೆಚ್ಚೋ? ಅಂಟ್ರೇಂಡರವು ಹೆಚ್ಚೋ? ಅಲ್ಲ; "ಊರಿದ್ದಲ್ಲಿ ಹೊಲಗೇರಿ" ಎಂಬ ಗಾದೆಯಂತೆ ಕುಶಲರೂ, ಜಾಗ್ರತರೂ, ಟ್ರೇಂಡರಲ್ಲಿಯೂ ಅಂಟ್ರೇಂಡರಲ್ಲಿಯೂ, ಕೆಲವರು ಇದ್ದೇ ಇರುತ್ತಾರೆ; ಟ್ರೇಂಡರಲ್ಲಿಯೇ ಉಂಟು, ಅಂಟ್ರೇಂರಲ್ಲಿಲ್ಲೆಂದೆನ್ನಲಾಗದು. ಹಾಗಾದರೆ, ಟ್ರೇಂಡ ಮಾಸ್ತರರಿಗೆ ಸಂಬಳವು ಕಡಿಮೆಯೇಕೆ? ಕಡಿಮೆಯೆಂದೆಣಿಸಿದರೆ, ಟ್ರೇಂಡದರಷ್ಟೇ ಕೆಲಸವು ಇವರಿಗ್ಯಾಕೆ? ತಾ. ೨೦ನೇ ಎಪ್ರೇಲ ಸನ್ ೧೮೫೩ ಇಸವಿ.

ಮುಂದಕ್ಕೆ ಸಾಗುವದು.

—o—

ಶಾಲಾಪತ್ರಕವು.

ಪುಸ್ತಕ ೧೮] [ಸಂಚಿಕೆ ೫

ಮೇ. ೧೮೮೩

Education and Improvement.

ವಿದ್ಯಾಸುಧಾರಣಾಸಂಬಂಧವಾದ ಸಂಗತಿಗಳು.

ಕೊಲ್ಹಾಪುರದ ಗುರುಶಾಂತಸ್ವಾಮಿ ಯೆಂಬವರು "ಪಂಚಸಂಧಿವಿವರ" ವೆಂಬ ಸಣ್ಣದೊಂದು ವ್ಯಾಕರಣದ ಪುಸ್ತಕವನ್ನು ಛಾಪಿಸಿ, ಅದರದೊಂದು ಪ್ರತಿಯನ್ನು ನಮಗೆ ಕಳಿಸಿದ್ದಾರೆ. ಅದನ್ನು ನಾವು ಆಭಾರಪೂರ್ವಕವಾಗಿ ಸ್ವೀಕರಿಸುತ್ತೇವೆ. ಸಂಸ್ಕೃತಾಭ್ಯಾಸವನ್ನು ಆರಂಭಿಸುವವರಿಗೆ ಈ ಪುಸ್ತಕವು ಬಹು ಉಪಯುಕ್ತವಾದದ್ದಿರುತ್ತದೆ. ಇದರಕ್ರಯ ೧ ಆಣೆ — ಪ್ರತಿಗಳು ಧಾರವಾಡದಲ್ಲಿ ೨ನೇ ನಂಬರಿನ ಹಂಣುಮಕ್ಕಳಶಾಲೆಯ ಮಾಸ್ತರರಾದ ಕಿಟಿಗಣ್ಣಯ್ಯಾ ಮುಗದ, ಹುಬ್ಬಳ್ಳಿಯಲ್ಲಿ ಶಿವಲಿಂಗಯ್ಯಾ ವಸ್ತ್ರದ ಇವರಬಳಿಯಲ್ಲಿ ದೊರೆಯುತ್ತವೆ.

—— ೨ ——

ಹರಿಕೀರ್ತನಗಳನ್ನು ಮಾಡುವಂಥವಳೊಬ್ಬ ಅನಪೂರ್ಣಾ

ಬಾಯಿಯೆಂಬ ಸ್ತ್ರೀಯಳು ಬೆಳಗಾವಿಗೆ ಬಂದಿರುತ್ತಾಳೆ. ಆಕೆಯ ಕೀರ್ತನಗಳನ್ನು ಜನರು ಬಹಳ ಮಾಡಿಸುತ್ತಾರೆ. ಆಶ್ಚರ್ಯವಲ್ಲ —

—o—

ವಿಲಾಯತಿಯನ್ನು ನಮ್ಮ ಧಾರವಾಡ ಜಿಲ್ಹೆಯ ೧ಹುಬಳ್ಳಿ, ೨ಗದಗ, ೩ರಾಣೀಬಿನ್ನೂರು, ೪ನವಲಗುಂದ, ೫ಬಂಕಾಪುರ, ೬ರೋಣ, ೭ಕರ್ಜಗಿ, ಈ ತಾಲೂಕುಗಳಲ್ಲಿ ಯಾವ ಒಕ್ಕಲಿಗನು ೫ಎಕರು ಭೂಮಿಯಲ್ಲಿ ಬಿತ್ತಿ ಅದರ ಪೈರು ಚನ್ನಾಗಿ ಬೆಳಿಸುವನೋ ಅವನಿಗೆ ೫೦ರುಪಾಯಿ ಇನಾಮು ಸರಕಾರದಿಂದ ದೊರಿಯುವದೆಂದು ಧಾರವಾಡ ವೃತ್ತದಿಂದ ತಿಳಿಯುತ್ತದೆ.

—o—

ವಿದ್ಯಾಖಾತೆಯ ವೃತ್ತಾಂತಗಳು.

ಮೊ. ಡಾಯರೇಕ್ಟರ ದೊರೆಗಳು ಧಾರವಾಡಜಿಲ್ಹೆಯಲ್ಲಿ ಬ್ಬೂರ ಶಾಲೆಯನ್ನು ನೋಡಿ ಬರೆದ ಶೇರೆಯು — "ನಾವು ಇಲ್ಲಿಯ ಶಾಲೆಯನ್ನು ನೋಡಿದೆವು. ಇದು, ವಿಶೇಷವಾಗಿ ಕ ಗಿ ಜಿಲ್ಹೆಯೊಳಗಿನ ಕೆಲವು ಶಾಲೆಗಳನ್ನು ನೋಡಲು ಮೇಲಾದ ಸ್ಥಿತಿಯಲ್ಲಿ ಇರುತ್ತದೆಂದು ತೋರುತ್ತದೆ —'

—o—

ಸದರೀ ದೊರೆಗಳು ಹಲ್ಯಾಳದ ಶಾಲೆಗಳನ್ನು ನೋಡಿ ರಿದಶೇರೆ — ನಾವು ಇಲ್ಲಿಯ ಶಾಲೆಗಳನ್ನು ನೋಡಿದೆವು. ವು ಬಹು ಉಚ್ಚರದಿಂದ ನಡಿಸಲ್ಪಟ್ಟವೆಂದು ತೋರುತ್ತದೆ.

ಇಲ್ಲಿಯ ಹೊಲಿಯ ಜಾತಿಯ ವಿದ್ಯಾರ್ಥಿಗಳಿಗೆ ಹಂಚವದಕ್ಕೋಸ್ಕರ ಮಿಠಾಯಿಗಾಗಿ ದೊರೆಗಳವರು ೩ರುಪಾಯಿ

ಸಾಮು ಕೊಟ್ಟರು.

—o—

ಮ. ಡಾಯರೆಕ್ಟರಧೊರೆಗಳವರು ಈಶಾನ್ಯ ಭಾಗದ ಇನ್
ಸ್ಪೆಕ್ಟರರಿಗೆ ಬರೆದ ಪತ್ರದ ಭಾಷಾಂತರವು—
ಒಬ್ಬ ನಾಶಿಕದಲ್ಲಿ ಮುಸಲ್ಮಾನ ವಿದ್ಯಾರ್ಥಿಯು ಮು
ಲಕೀ ಪರೀಕ್ಷೆಯಲ್ಲಿ ಹಿಂದೂ ಜನರ ಕವಿತೆಯ ಪ್ರಶ್ನಗಳನ್ನು
ಪರೀಕ್ಷಕರು ತನಗೆ ಕೇಳಿದರೆಂದು ನಮಗೆ ತಿಳಿಸಿದನು. ಮು
ಸಲ್ಮಾನರು ಹಿಂದೂ ಕವಿತೆಗಳನ್ನು ಕಲಿಯುವದು ಬಹು ದು
ಸ್ತರವಿರುತ್ತದೆ. ಈ ಬಗೆಯಾಗಿ ಮುಸಲ್ಮಾನರ ಕೈಗಳನ್ನು ಕ
ಟ್ಟಲಿಕ್ಕೆ ಸರಕಾರದವರ ಅಪೇಕ್ಷಿಸುವದಿಲ್ಲ. ಆದಪರಿಂದ ಮು
ಸಲ್ಮಾನ ವಿದ್ಯಾರ್ಥಿಗಳಿಗೆ ಕವಿತೆಯ ಪ್ರಶ್ನಗಳನ್ನು ಕೇಳಬಾರ
ದೆಂದು ನಿಮ್ಮ ಕೈ ಕೆಳಗಿನ ಕಮಿಟಿಯವರಿಗೆ ನೀವು ಅಪ್ಪಣೆ ಮಾ
ಡಬೇಕು. ಭಿಲ್ಲರಿಗೆ ಸಹ ಈ ಕವಿತೆಯ ಪ್ರಶ್ನಗಳನ್ನು ಕೇಳ
ಲಾಗದು. ಮೆಲ್ತರದ ಹಿಂದೂ ಜಾತಿಗಳ ಜನರು ಈ ಕವಿತೆಯ
ನ್ನು ಪ್ರೀತಿಯಿಂದ ಕಲಿಯುತ್ತಿರುವ ಕಾರಣ ಅವರಿಗೆ ಮಾತ್ರ
ಇದರ ಪ್ರಶ್ನಗಳನ್ನು ಕೇಳುವದೇ ಸಾಧಾರಣ ನಿಯಮವೆಂದು
ತಿಳಿಯತಕ್ಕದ್ದು.

K. M. Chalfield.

ಡಾಯರೆಕ್ಟರ ಆಫ್ ಪಬ್ಲಿಕ ಇನ್‌ಸ್ಟ್ರಕ್ಶನ್.

ಮ. ಇನ್‌ಸ್ಪೆಕ್ಟರ ಧೊರೆಗಳವರ ಅಪ್ಪಣೆಯಿಂದ ಭಾಷಾಂ
ತರಿಸಿ ಪ್ರಸಿದ್ಧಿಸಿತು.

V. R. Katti.

ಕನ್ನಡತ್ರಾನ್ಸಲೇಟರ.

—*o*—

Notices.

ನೋಟಿಸುಗಳು.

ಸರಕ್ಯೂಲರ ನಂಬರ.

೩೭೦ ದಕ್ಷಿಣ ಪ್ರಾಂತದೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ—

ಮೆ॥ ಎ. ಇನಸ್ಪೆಕ್ಟರ ಸಾ. ಒ. ಪ್ರಾಂತ ದಕ್ಷಿಣಭಾಗ ಇವರ ಕಡೆಯಿಂದಾ—

ಕೆಲವು ಶಾಲೆಗಳಲ್ಲಿ ವಾರ್ಷಿಕ ಪರೀಕ್ಷೆಯಾಗಿ ೪|೫ ತಿಂಗಳುಗಳಾದನಂತ್ರ ಹೊಸ ಕಾಪೀಬುಕ್ಕುಗಳನ್ನು ಕಟ್ಟಿಸಿ ಬರೆಸುವದು ಆರಂಭ ಮಾಡಿದಂತೆ ತೋರಲಿಲ್ಲ. ಜನರು ತಮ್ಮ ಮಕ್ಕಳಿಗೆ ಕಾಗದ ಮುಂತಾದ್ದನ್ನು ಹೊತ್ತು ಹೊತ್ತಿಗೆ ಕೊಡದಮೂಲಕ ಹೀಗೆ ಸಂಭವಿಸುತ್ತಿದ್ದದ್ದಾಗಿ ತೋರುತ್ತದೆ. ಆದರೆ ಈ ಸರಕ್ಯೂಲರ ದ್ವಾರದಿಂದ ನಿಮ್ಮೆಲ್ಲರಿಗೆ ತಿಳಿಸುವದೇನಂದರೆ—

ಶೀಘ್ರ ಕಾಪೀಬುಕ್ಕುಗಳನ್ನು ಕಟ್ಟಿಸುವದಕ್ಕಾಗಿ ವಿದ್ಯಾರ್ಥಿಯರಿಗೂ ಅವರ ಹಿರಿಯರಿಗೂ ತಿಳಿಸಿ ಹೇಳಬೇಕು ಒಂದು ವೇಳೆ ಅವರು ದಿನಮೋಕಂಮಾಡಿದರೆ ಬಾರಕೊಂಡು ಹಳೇ ಪದ್ಧತಿಯ ಪ್ರಕಾರ ಪ್ರತಿಗಳನ್ನಾದರೂ (ಆಯಾಯ ಇಯತ್ತೆಯ ಹೊಸಕಿತ್ತಾಬನ್ನು ಪ್ರಕಾರ) ಬರೆಸುತ್ತಿರಬೇಕು. ಈ ಪ್ರತಿಗಳನ್ನು ಒಂದು ಕ್ಲಾಸ ಮಾಸ್ತರರು ಒಟ್ಟು ಕೂಡಿಸಿ ತಾರೀಖುದಾಕಿ ತಮ್ಮ ಸಹಿಮಾಡಿ ತಮ್ಮ ಹತ್ತರ ಶಾಲೆಯೊಳಗೆ ಇಡುತ್ತಿರಬೇಕು. ಎಲ್ಲ ಪ್ರತಿಗಳನ್ನು ಇಡಲಿಕ್ಕೆ ತೊಂದರೆಪ್ರಂಬಾದರೆ ಕ್ಲಾಸ ಸುರುವಿನ ಮೊದಲನೇತಿಂಗಳ ಪ್ರತಿಗಳನ್ನು "೫ನೇತಿಂಗಳ ಪ್ರತಿಗಳನ್ನು ವಾರ್ಷಿಕಪರೀಕ್ಷೆಯು ಆಗುವ" ತಿಂಗಳಪ್ರತಿಗಳನ್ನು ಜಾಗ್ರತೆಯಿಂದ ಇಡಬೇಕು ಅಂದ

ಹಸ್ತಾಕ್ಷರ ಸುಧಾರಿಸಿತೋ ಇಲ್ಲವೋ ನೋಡಲಿಕ್ಕೆ ನೆಟ್ಟಗಾಗುವದು. ತಿಳಿಯುವದು. ತಾ. ೨ ನೇ ಜೂನ ಸನ್ ೧೮೬೩ ಇಸ್ವಿ.

W. A. Russell.
ಎ. ಇ. ದಕ್ಷಿಣ ಭಾಗ.

—o—

ಸರಕ್ಯೂಲರ ನಂಬರು ೧೧೨.

ಆಜಂ ಧಾರವಾಡ ಜಿಲ್ಹೇದ ಮಾಸ್ತರರಿಗೆ—

ಧಾರವಾಡ ಜಿಲ್ಹೇದ ಡಿಪ್ಯುಟಿ ಎಜ್ಯುಕೇಶನಲ್ ಇನಸ್ಪೇಕ್ಟರವರ ಕಡಿಯಿಂದ ಕೊಡಲ್ಪಡುವದೇನಂದರೆ—ಮನಸ್ಸಿನ ಶಿಕ್ಷಣದ ಬಗ್ಗೆ ಯಾವಪ್ರಕಾರದ ಶ್ರಮ ತೆಗೆದುಕೊಳ್ಳುತ್ತೀರಿ, ಅದೇಪ್ರಕಾರದ ಶ್ರಮವು ಶರೀರ ರಕ್ಷಣೆಯಬಗ್ಗೆ ತೆಗೆದುಕೊಳ್ಳುವದು ಮಾಸ್ತರಜನರ ಕರ್ತವ್ಯ ಕರ್ಮವೆಂಬ ಮಾತು ಸ್ಪಷ್ಟವದೆ. ಮತ್ತು ಆ ಕರ್ತವ್ಯಕರ್ಮವನು ನೀವು ಹಿಂಗಡಿಗೆ ಕೊಟ್ಟ ಅಪ್ಪಣೇ ಮೇರಿಗೆ ಅನೇಕರು ನಡಿಸುತ್ತಿದ್ದೀರಿ, ಇದನ್ನು ನೋಡಿ ನಮಗೆ ಆ[illegible]ವಾಗುತ್ತದೆ. ಆದಾಗ್ಯೂ ನೀವು ಮಾಡತಕ್ಕ ಸಂಗತಿಗಳು ಅನೇಕವುಂಟು. ಆ ಸಂಗತಿಗಳನ್ನು ಮಾಡಿದರೆ ಹುಡುಗರ ಶರೀರವು ನಿರೋಗಿಯಾಗಿಯೂ ಮನಸ್ಸು ಆನಂದವುಳ್ಳದ್ದಾಗಿಯೂ, ಆಗ ಅವರ ವಿದ್ಯಾಭಿವೃದ್ಧಿಯೂ, ದಿನ ದಿನಕ್ಕೆ ಹೆಚ್ಚಾಗಿ, ಅವರ ಸೌಖ್ಯಕ್ಕೆ ಕಾರಣವಾಗುವದು. ಮತ್ತು ಹೀಗಾದಮೇಲೆ ನಿಮ್ಮ ಕರ್ತವ್ಯ ಕರ್ಮದ ಫಲವು ನಿಮಗೆ ಸಹಜವೇ ದೊರಿಯುವದು. ಈಗ ನೀವು ಮಾಡತಕ್ಕ ಕರ್ತವ್ಯ ಕರ್ಮವನ್ನು ಹಿಂದೆರಡು ಮಾತಿನಲ್ಲಿ ಕೆಳಗೆ ಬರೆಯುತ್ತೇವೆ.

೧ನೇದು—ಈಗ ಹುಡುಗರನು ದರದಿವಸ ತಾಸಿನಂತೆ,

ಅಥವಾ ಎರಡು ದಿವಸಕ್ಕೊಂಮೆ ತಾಸಿನಂತೆ ಏನು ಆಡಲಿಕ್ಕೆಯಾಗಲೀ, ಅಥವಾ ವ್ಯಾಯಾಮದ ಸಲುವಾಗಿಯಾಗಲೀ, ಆಟದ ಸ್ಥಳಕ್ಕೆ ಬಿಡುತ್ತೀರಷ್ಟೆ (ಬಿಡಿಸುತ್ತೀರಷ್ಟೆ) ಆದರೆ ಅಲ್ಲಿ ಆ ಹುಡುಗರು ಇರುವಾಗ್ಯೆ ಅವರ ಆಟದ ಕಡೆಗೇ ಮಾತ್ರ ಲಕ್ಷ್ಯ ಕೊಡಬೇಕು ಹೀಗೆ ಇಲ್ಲ, ಆದರೆ ಅವರ ರೀತಿ, ನಡತೆ, ಸತ್ಯತೆ ಧೈರ್ಯಗುಣಗಳು ಹುಟ್ಟುವಹಾಗೆ ಬೋಧನೆಯಿಂದ ಅವರ ಮನಸ್ಸು ಯಾವಾಗಲೂ ತಿದ್ದುತ್ತಿರಬೇಕು. ಸಾರಾಂಶವೇನಂದರೆ — ಸಾಲೆಯೆಂಬ ಮಾಳಿಗೆ ಮನೆಯಲ್ಲಿ ಕೂತುಕೊಂಡಾಗ್ಯೆ ಅವರ ಮನಸ್ಸು ತಿದ್ದುವದಕ್ಕೆ ಯಾವ ಪ್ರಕಾರ ನೀವು ಯತ್ನ ಮಾಡುತ್ತೀರೋ, ಅದೇ ಪ್ರಕಾರ ಆಕಾಶವೇ ಮಾಳಿಗೆಯಾಗಿರುವ ಬೈಲಸ್ಥಳದಲ್ಲಿ ನೀವು ಅವರ ಮನಸ್ಸಂನು ಸಹಾ ತಿದ್ದಬೇಕು.

೨ನೇದು — ಲಷ್ಕರದಲ್ಲಿ ಕವಾಯಿತ ವಗೈರೆ ಕಲಿಸಿ ಏನೂ ತಿಳಿಯದಂಥಾ ಟೊಣಪರಂನು ಅಪ್ಪಣೆ ಕೊಟ್ಟಕೂಡಲೆ ಮಾಡತಕ್ಕ ಕೆಲಸಗಳಂನು ಯಾವ ಪ್ರಕಾರ ನೇಮಾದಿಂದ ಮಾಡುವಹಾಗೆ ತಯಾರು ಮಾಡುತ್ತಾರೋ ಅದೇ ರೀತಿಗೆ ನಿಂಮ ವಶಕ್ಕೆ ಒಪ್ಪಿಸಿದ ಚಿಕ್ಕ ಬಾಲಕರನಡಿಗೆ, ಕೂಡೋಣ, ಏಳೋಣ, ಮುಂತಾದ ಕೆಲಸಗಳಲ್ಲಿ ಕವಾಯಿತದಂತೆ, ನೇಮವಿದ್ದು ಈ ನೇಮಾಕ್ಕನುಸರಿಸಿ ನಿಮ್ಮ ಬಾಲಕರು ಸಾಲೆಯಲ್ಲಿರುವಾಗ್ಗೆ ಆಗಲಿ, ಅಥವಾ ಆಟದಸ್ಥಳದಲ್ಲಿ ಆಡುವಾಗ್ಗೆ ಆಗಲಿ, ಅಥವಾ ತಮ್ಮ ಮನೆಯಲ್ಲಿರುವಾಗ್ಗೆ ಯಾವ ಉದ್ಯೋಗದಲ್ಲಿರುವಾಗ್ಗೆ ಆಗಲಿ, ಅದನು ಅನುಸರಿಸಿ ನಡಿಯುವಂತೆ ಅವರ ಮನಸ್ಸಿನಲ್ಲಿ ತರಬೇಕು.

೩ನೇದು — ಹುಡುಗರ ಕಂಣೆದುರಿಗೆ ಯಾವಾಗಲೂ, ಸುಂ

ಭಿರ ಪದಾರ್ಥಗಳು, ಸೃಷ್ಟಿಸೌಂದರ್ಯದ ಮಾತುಗಳು, ದೇವರ ಅಗಾಧಮಹಿಮೆಯ ಕೃತ್ಯಗಳು ಇರಬೇಕು. ಮತ್ತು ಇಂಥಾಕೃತ್ಯಗಳ ಮಹತ್ವವನ್ನು ಕುರಿತು ಅವರಿಗೆ ಯಾವಾಗಲೂ, ನೀವು ಭಾಷಣವನ್ನು ಮಾಡುತ್ತಿರಬೇಕು.

೪ನೇದು—ಪ್ರತಿಯೊಂದು ಶಾಲಾಗ್ರಹದ ಸುತ್ತಲೂ, ಯಾವ ಸ್ಥಳದಲ್ಲಿ ಸ್ಥಳವಿದ್ದೀತು, ಹಾಗು ನೀರಿನ ಅನುಕೂಲತೆ ಇದ್ದೀತು, ಅಂಥಾಸ್ಥಳಗಳಲ್ಲಿ ಸುಂದರ ಹೂವಿನಗಿಡಗಳನ್ನೂ, ಅಥವಾ ಚಿತ್ರವಿಚಿತ್ರವಾದ ವನಸ್ಪತಿಗಳನ್ನೂ, ಹಚ್ಚಿನಿ ಶಾಲಾಗ್ರಹದಸುತ್ತಲೂ, ಕಿಂಚಿತ್ತಾದರೂ, ರಮ್ಯವಾದನೋಟವು ಕಂಡುಬರುವಂತೆಮಾಡಿ ಸುಂದರಪದಾರ್ಥಗಳು ನಿಮ್ಮ ಹುಡುಗರ ದೃಷ್ಟಿಗೆ ಯಾವಾಗಲೂ ಬೀಳುವಂತೆ ಮಾಡುತ್ತಿರಬೇಕು. ಈ ಹೂವುಗಿಡ ಮುಂತಾದವುಗಳನ್ನು ಹಚ್ಚುವ ಕೆಲಸಗಳು ದ್ರವ್ಯಸಾಧನದಿಂದ ಮಾತ್ರ ಆಗತಕ್ಕಂಥವು ಅಂತ ಕೆಲವರು ನೆನಸುವರು. ಆದರೆ ಈ ಪ್ರಕಾರದ ಅವರ ಅಭಿಪ್ರಾಯವು ಅಲ್ಪಬುದ್ಧಿಯೆಂದು ತಿಳಿಯುತ್ತೇವೆ. ಯಾವದಾದರೂ ಕೃತ್ಯವನ್ನು ಮಾಡುವ ಇಚ್ಛೆಯು ಯಾವನಲ್ಲಿ ಇರುತ್ತದೆಯೋ, ಅವನಿಂದ ಆ ಕೃತ್ಯವು ಆಯಿತೆಂಬದು ಸತ್ಯವಿರುತ್ತದೆ. ಅಂದರೆ ನಿಮ್ಮ ಮನಸ್ಸಿನಲ್ಲಿ ಮಾಡಬೇಕೆಂಬ ಅಪೇಕ್ಷೆಯು ಹುಟ್ಟಿದಕೂಡಲೆ ಈ ಕೆಲಸವು ನಿಮ್ಮಿಂದಆಯಿತೆಂದು ನಾವು ತಿಳಿಯುತ್ತೇವೆ. ಆದಕಾರಣ ನೀವೆಲ್ಲರೂ ಈ ಸಂಗತಿಯನ್ನು ಕುರಿತು ಪ್ರಯತ್ನ ಮಾಡತಕ್ಕದ್ದು.

೫ನೇದು—ಶಾಲಾಗ್ರಹವೆಂದರೆ—ಸೃಷ್ಟಿಯಲ್ಲಿಯ ಚಿತ್ರವಿಚಿತ್ರ ಪದಾರ್ಥಗಳ ಸಂಗ್ರಾಲಯದಂತೆ ಇರತಕ್ಕದ್ದು. ಯಾಕಂದರೆ ಸೃಷ್ಟಿಯಲ್ಲಿಯ ಚಿತ್ರವಿಚಿತ್ರಪದಾರ್ಥಗಳ ಜ್ಞಾ

ನಕೊಡುವದೋ ಶಾಲೆಯಲ್ಲಿ ಕೊಡುವ ಶಿಕ್ಷಣದ ಪುಣ್ಯ ಉದ್ದೇಶವಿರುತ್ತದೆ. ಚಿಕ್ಕ ಹುಡುಗರಿಗೆ ಯಾವದಾದರೂ ಒಂದು ಪದಾರ್ಥ ತೋರಿಸಿ ಅದರ ಜ್ಞಾನಮಾಡಿಕೊಡುವದರಿಂದ ಎಷ್ಟು ಲಾಭವಾಗುವದೋ ಹಾಗೆಯೇ ಆ ಪದಾರ್ಥವನ್ನು ತೋರಿಸದಲೇ ಬರೇ ಆ ಪದಾರ್ಥದ ವಿಷಯಕ್ಕೆ ವರ್ಣನೆಮಾಡಿದ್ದರಿಂದ ಸಿಷ್ಟು ಲಾಭವಾಗುತ್ತದೆ. ನಕಾಶೆಯಿಲ್ಲದೆ ಭೂಗೋಲ ಕಲಿಸುವದೂ, ಯಂತ್ರಗಳಿಲ್ಲದೆ ಯಂತ್ರಶಾಸ್ತ್ರ ಕಲಿಸುವದೂ, ಯಾವ ಪದಾರ್ಥ ವಿರುವದಿಲ್ಲೋ ಆ ಪದಾರ್ಥದ ವಿಷಯಕ್ಕೆ ಜ್ಞಾನಹೇಳುವದೂ, ಇವೆಲ್ಲಾ ಊದುವುದಿನ ಬೋರಗಲ್ಲಿಗೆ ಎಂಣಿ ಹೊಯ್ದಂತೆ ಅಥವಾ ದಬ್ಬು ಹಾಕಿದ ಕೊಡದಮೇಲೆ ನೀರು ಸುರಿದಂತೆ ಆಗುವದು. ಆದಕಾರಣ ಇದನ್ನು ನೀವೆಲ್ಲರೂ, ಧ್ಯಾನದಲ್ಲಿಟ್ಟು ಈ ಸೃಷ್ಟಿಯಲ್ಲಿಯ ಚಿತ್ರವಿಚಿತ್ರಪದಾರ್ಥಗಳು ಅಂದರೆ ಅಡವಿಯಲ್ಲಿ ಸಿಗುವ ಚಿತ್ರವಿಚಿತ್ರವಾದ ಶಿಲೆಗಳ ಪ್ರಕಾರಗಳು, ಹಳ್ಳಗಳಲ್ಲಿ ಸಿಗುವ ನಾನಾಪ್ರಕಾರದ ಶಂಖಗಳೂ, ಚಿಪ್ಪುಗಳೂ, ಭರಡಿಂದ ಬೆಳೆದ ವಿಲಕ್ಷಣಗಿಡಗಳ, ಯಾವದೇ ತುಂಡುಗಳೂ, ಗಡ್ಡೆಗಳೂ, ಬೇರುಗಳೂ, ಮೊದಲಾದ ಇದೇ ತರದ ಅಥವಾ ಇಂನೂ ಬೇರೇಪ್ರಕಾರದ ಅಪೂರ್ವಪದಾರ್ಥಗಳೂ, ಅಥವಾ ನೀವು ಕಾಲೇಜದಲ್ಲಿದ್ದಾಗ್ಗೆ ಕಲಿತ ಡ್ರಾಯಿಂಗ ವಿಷಯವಾಗಲೀ ನಿಮ್ಮ ಬಾಂಧವರಾಗಲೀ ತೆಗೆದ ಅನೇಕಚಿತ್ರಗಳೂ, ಅಥವಾ ಆಕೃತಿಗಳು ಇವೆಲ್ಲಾ ದೊರಕಿಸಿ ಜ್ಞಾನಕೊಡುವದಕ್ಕೆ ಸಾಧನವಾದ ಸಂಗ್ರಹಾಲಯವು ನಿಮ್ಮಲ್ಲಿ ಆಗುವಂತೆ ನೀವು ಯತ್ನಿಸಬೇಕು. ಈ ಪ್ರಕಾರ ಮಾಡುವದೂ, ಇಂಥಾ ಪದಾರ್ಥಗಳನ್ನು ದೊರಕಿಸುವದೂ, ಹುಚ್ಚುತನವೆಂದು ಕೆಲವು ಅಜ್ಞಾನರು ನೆನಸುವರು ಆದರೆ ಶಾಲೆಗಳಿಂದ ಇವಕ್ಕೆ

ತಕ್ಕಮಹತ್ವವು ಬಂದು, ನೀವು ಮಾಡಿದ ಕೃತ್ಯಕ್ಕೆ ಶ್ರೇಯಸ್ಸು ಬರುವದು. ಇದಕ್ಕೆ ಸಂಶಯವಿಲ್ಲ. ಆದ್ದರಿಂದ ಇದನ್ನು ನೀವು ಚೆನ್ನಾಗಿ ಲಕ್ಷ್ಯದಲ್ಲಿಡರಿ. ತಾರೀಖು ೨೪ ಮಾಹೆ ಎಪ್ರೀಲ ಸನ್ ೧೮೮೩ನೇ ಇಸವಿ.

S. K. Rodda.
ಡಿ. ಇ. ಇ. ಜಿ. ಧಾರವಾಡ.

—o—

ಧಾರವಾಡ ಡಿಸ್ಟ್ರಿಕ್ಟ ಬುಕ್ಕಡಿಪ್ಪೋದಲ್ಲಿ ಹೊಸಭರತಿ ಬಂದದ್ದರಿಂದ ದೊರಿಯುವ ಬುಕ್ಕಗಳ ತಪಸೀಲು—

(ಕನ್ನಡ ಪುಸ್ತಕಗಳ ಹೆಸರುಗಳು.)

		ದರ.		
	ಡಿಪಾರ್ಟಮೆಂಟಪುಸ್ತಕಗಳು.—	ರು.	ಆ.	ಪೈ.
೧	ಕವಿತಾಮೊದಲನೇ ಪುಸ್ತಕವು ಹೊಸದಾಗಿ ಸುಧಾರಿಸಿದ ಆವೃತ್ತಿ.	.	೧	೬
೨	,, ಎರಡನೇಪುಸ್ತಕವು.	.	೩	೬
೩	ಓದುವಮೊದಲನೇ ಪುಸ್ತಕವು ಹೊಸದಾಗಿ ಸುಧಾರಿಸಿದ್ದು.	.	೧	.
೪	,, ಎರಡನೇ ಪುಸ್ತಕವು ಹೊಸದಾಗಿ ಸುಧಾರಿಸಿದ್ದು.		೨	
೫	,, ನಾಲ್ಕನೇ ಪುಸ್ತಕವು ಹೊ. ಸು.		೮	೬
೬	,, ಆರನೇ ಪುಸ್ತಕವು.	೧	೮	
೭	ಸಂಸ್ಕೃತಮೊದಲನೇಪುಸ್ತಕಹೊ. ಸು.		೧೨	೬
೮	ಆರೋಗ್ಯವಿದ್ಯ.		೧	೩

೯	ಶಬ್ದವ್ಯುತ್ಪತ್ತಿ ಹೊ. ಸು.	.	೬	೬
೧೦	ಲಘುವ್ಯಾಕರಣವು.	.	೧	೬
೧೧	ಶಾಲಾವ್ಯಾಕರಣವು.	.	೪	.
೧೨	ಭೂಗೋಲ ಭಾಗ೧ ಮುಂಬಯಿ ಇ. ಪ.	-	೧	೬
	,, ಭಾಗ ೨ನೇದು ಹಿಂದುಸ್ಥಾನದ ವರ್ಣನೆ.	.	೨	.
೧೩	,, ಭಾಗ ೩ನೇದು	.	೪	.
೧೪	ಪ್ರಾಕೃತಿಕ ಭೂಗೋಲ.	.	೮	.
೧೫	ಮುಂಬಯಿ ಪ್ರದೇಶದ ವರ್ಣನೆ.	.	೨	.
೧೬	ಅಂಕಗಣಿತ ಚನ್ನಬಸಪ್ಪನವರು ಮಾ.	.	೧೪	.
೧೭	ಶಬ್ದಮಂಜರೀ ಕೋಶವು.	೩	.	.
೧೮	ಇಸಾಪನೀತಿಕಥೆ.	.	೫	.
೧೯	ಕಥಾಸಂಗ್ರಹ ಭಾಗ೧—೩	೧	.	.
೨೦	,, ಭಾಗ೪—೬	೧	.	.
೨೧	ತಿದ್ದುಪಡಿಯು, ಶಿಕ್ಷಣವು.	.	೧೦	.
೨೨	ಅಂಕಗಣಿತ ಭಾಗ೨	.	೧೧	.
೨೩	ಅಂಕಲಿಪಿ.	.	೧	.
೨೪	ಚಿತ್ರ ನಂಬರ ೧|೨|೩|೪	.	.	೬
೨೫	ಯಂತ್ರಶಾಸ್ತ್ರ.	.	೭	.
೨೬	ಪದಾರ್ಥವಿಜ್ಞಾನಶಾಸ್ತ್ರ.	.	೧೨	೬
೨೭	ಕನ್ನಡ ಇಂಗ್ಲೀಷ ಡಿಕ್ಸನರಿ.	೩	.	.
೨೮	ಹಡಸನ್ಸ ಗ್ರಾಮರ.	೨	.	.
೨೯	ಕನ್ನಡ ಭಾಷಾಂತರಪಾಠ ೧	.	೪	೬
	(ಮರಾಠಿ ಪುಸ್ತಕಗಳು.)			
೧	ಬಾಲಬೋಧ ಮೊದಲನೇ ಪುಸ್ತಕವು.	.	೧	.

೨	,,ಎರಡನೇ ಪುಸ್ತಕವು.	.	೨	.
೩	,,ಮೂರನೇ ಪುಸ್ತಕವು.	.	೫	೬
೪	ನಾಲ್ಕನೇ ಪುಸ್ತಕವು.	.	೮	.
೫	ಐದನೇ ಪುಸ್ತಕವು.	.	೧೨	.
೬	ಮೋಡಿ (ಅರೆ)ಮೊದಲನೇ ಪು. ಹ್ರೊ. ಸು.	.	೨	೬
೭	,,ಎರಡನೇ ಪುಸ್ತಕ ಹ್ರೊ. ಸು.	.	೫	.
೮	,,ಮೂರನೇ ಪುಸ್ತಕವು.	.	೮	.
೯	ಲಘುವ್ಯಾಕರಣವು.	.	೧	೩
೧೦	ಭೂಗೋಲ ಭಾಗ ೧ನೇದ್ದು.	.	೧	.
೧೧	,, ಭಾಗ ೨ನೇದ್ದು.	.	೧	೬
೧೨	,, ಭಾಗ ೩ನೇದ್ದು.	.	೨	.
೧೩	ಉಜಳಣಿ ಪುಸ್ತಕವು.	.	೧	.
೧೪	ಅಂಕಗಣೀತವು.	.	೮	.
	(ಇಂಗ್ಲೀಷ ಪುಸ್ತಕಗಳು.)			
೧	ಹಾವರ್ಡ್ಸ ಪ್ರಾಯಮರ.	.	.	೯
೨	,,ಸೇಕಂಡಬುಕ್ಕು.	.	೧	೬
೩	,, ಥರ್ಡ ಬುಕ್ಕು.	.	೮	.
೪	ರುಡಿಮೆಂಟರಿ ಗ್ರಾಮರ.	.	೩	.
೫	ಹ್ಯೂಷಆಫ ಇಂಡಿಯಾ.	.	೧	.
೬	ಭಾಷಾಂತರ ಪಾಠಮಾಲಾ ಭಾಗ೧ನೇದ್ದು.	.	೩	೬
೭	,, ಭಾಗ ೨ನೇದ್ದು.	.	೫	.
೮	,, ಭಾಗ ೩ನೇದ್ದು.	.	೯	.
	(ಉಡದು ಪುಸ್ತಕಗಳು)	.		
೧	ಪಹಿಲಾ ಕಿತಾಬ.	.	೨	೬

೨	ದುಸರಾ ಕಿತಾಬ.	.	೪	.
೩	ತಿಸರಾ ಕಿತಾಬ.	.	೯	.
೪	ವ್ಯಾಕರಣ.	.	೧	೯
೫	ಅಂಕಗಣಿತ.	೧		.
	(ಸಂಸ್ಕೃತ ಪುಸ್ತಕಗಳು.)			
೧	ಅಮರಕೋಶ ತ್ರಿಕಾಂಡ ಸಟೀಕ.	೧	೪	.
೨	ಧಾತುರೂಪಾವಳಿ.	.	೨	.
೩	ಚಂಪುಭಾರತ.	.	೮	.
೪	ಪಂಚತಂತ್ರ ಪಾರ್ಟ ೧	.	೧೪	.
೫	ರಘುಸರ್ಗ ೧—೬	೧	೪	.
	(ಮರಾಠಿ.)			
೧	ಲೋಟಲಿಕರ ಜಮಾಖರ್ಚ ಪದ್ಧತಿ.	.	೨	.
೨	ಗೋಡಬೋಲೆ ವೃತ್ತದರ್ಪಣ.	.	೧	೯
೩	,, ಮಹಾರಾಷ್ಟ್ರವರ್ಣನ.	.	೨	೬
೪	,, ಮ್ಯಾರೀಸ ಇತಿಹಾಸ.	.	೯	.
೫	ಟೀಕ ಮಧುಮಕ್ಷಿಕಾ.	.	೧೦	.
೬	ಬಾಪಟ ನೀತಿಮಂಜರೀ.	.	೧೦	.
೭	,, ಗದ್ಯರತ್ನಮಾಲಾ.	.	೧೦	೬
೮	ಆರೋಗ್ಯವಿದ್ಯಾ.	.	೧	.

ವಿಶ್ವನಾಥಮೋರೇಶ್ವರ ಬಾಪಟ.

ಡೆ. ಐ. ಡಿ. ಧಾ.

—o—

ಸವನೂರ ಸಂಸ್ಥಾನವು.

(ಆಶ್ವೀನ ಮಾಸದಿಂದ ಮುಂದಕ್ಕೆ ಸಾಗಿದ್ದು)

ಅಬ್ದುಲಹಕೀಮ ನವಾಬಸಾಹೇಬನ ಹಿರೆಮಗನಿಗೆ ಹ್ಯಾದ

ರನ ಕನ್ನಿಕೆಯನ್ನು ಮತ್ತು ಹೈದರನ ಎರಡನೇಮಗನಾದ ಟಿ
ಪ್ಪೂಸಾಹೇಬನೆಂಬುವನಿಗೆ ನವಾಬನ ಕನ್ನಿಕೆಯನ್ನು ಕೊಡಬೇ
ಕೆಂಬದಾಗಿ ನಿಶ್ಚಯವಾಗಿ ಶ್ರೀರಂಗಪಟ್ಟಣದಲ್ಲಿ ಲಗ್ನ ವಾಗಬೇ
ಕೆಂದು ನೇಮಿಸಿಕೊಂಡರು. ಈ ಮೇರಿಗೆ ಆ ಎರಡೂ ಲ
ಗ್ನಗಳು ಬಹು ಸಮಾರಂಭದಿಂದ ಸನ ೧೭೮೪ನೇ ಇಸ್ವಿ
ಯಲ್ಲಿ ಆದವು. ಈಗ್ಯೆ ಹೈದರನು ನವಾಬನಿಗೆ ಬಾಗಲಕೋ
ಟೆ, ಮುಂತಾದ ಪ್ರಾಂತಗಳನ್ನು ತಿರಿಗಿ ಕೊಟ್ಟನು. ಮತ್ತು
ನವಾಬನ ಮೇಲೆ ಕೂಡಿಸಿದ್ದ ೪ ಲಕ್ಷ ರೂಪಾಯಗಳ ಕಪ್ಪ
ಗಾಣಿಕೆಯನ್ನು ೨ ಲಕ್ಷವಾಗಿ ಮಾಡಿ ನವಾಬನು ೪೦೦೦ ಸ್ವಾ
ರರಿಂದ ಕೂಡಿ ತನ್ನಲ್ಲಿ ಚಾಕರಿಯನ್ನು ಮಾಡಬೇಕೆಂಬದಾಗಿ
ಠಹರೊತ್ತಾಯಿತು. ಈ ಹಿಡಂಬಡಿಕೆಯು ಉಭಯತರಲ್ಲಿ ಹೈ
ದರನ ಅಂತ್ಯದವರಿಗೂ ನಡೆಯಿತು. ಮುಂದೆ ಹೈದರನು
ಮರಣಹೊಂದಿದನಂತರ ಟೀಪೂಸುಲತಾನನು ಗಾದಿಯಮೇಲೆ ಕು
ತುಕೊಂಡನು. ತರುವಾಯ ಅವನು ಪುನಃ ನವಾಬನ ಮೇ
ಲೆ ಕೈ ಸಾಗಿಸಹತ್ತಿದನು. ಸುಲತಾನನಿಗೂ, ನವಾಬನಿಗೂ,
ಮೊದಲಿಂದಲೇ ವಿರುದ್ಧವಿತ್ತು. ತಂದೆಯು ನವಾಬನ ಸಂ
ಗಡ ಶರೀರಸಂಬಂಧ ಮಾಡಿದ್ದು ಅವನಿಗೆ ಸೇರಿಕೆಯಿರಲಿಲ್ಲ.
ಈ ಕಾರಣವಾಗಿ ಸುಲತಾನನು ನವಾಬನಮೇಲೆ ಹಲ್ಲಾ ಮಾ
ಡುವದಕ್ಕೋಸ್ಕರ ಕೆಲವು ಕುಯುಕ್ತಿ ಕಾರಣಗಳನ್ನು ತೆಗೆ
ದನು.

ಹೈದರನ ಮರಣದನಂತರ ಹಕೀಮುಖಾನನು ಅವನ ಮ
ತನಾದವ ಸಮಾಚಾರವನ್ನು ತೆಗೆದುಕೊಳ್ಳುವದರಸಲುವಾಗಿ
ಹೋಗಲಿಲ್ಲ. ಮತ್ತು ನೌಕರಿಯ ಸ್ವಾರರನ್ನು ಬೇಕಾದಷ್ಟು
ಮತ್ತು ನೆಟ್ಟಗೆ ಇಡಲಿಲ್ಲ. ಹೀಗೆ ಕೆಲವು ಕಾರಣಗಳನ್ನು

ಹೆಚ್ಚಿ ಸುಲತಾನನು ನವಾಬನಿಗೆ ಬಹಳ ದ್ರವ್ಯವನ್ನು ಲುಚ ಸಾಯದಶಿಯಿಂದ ಬೇಡಿದನು. ಇಷ್ಟರಲ್ಲಿ ಮಹಾರಾಷ್ಟ್ರರು ಕರ್ನಾಟಕಪ್ರಾಂತವನು ತೆಗೆದುಕೊಳ್ಳುವ ಉದ್ಯೋಗಕ್ಕೆ ಹತ್ತಿದರು. ಆಗ್ಯೆ ಒಂದು ಪ್ರಸಂಗದಲ್ಲಿ ಸುಲತಾನನು ನವಾಬನಹತ್ತರ ಸ್ವಾರರವೆಚ್ಚದ ಸಂಬಂಧದಿಂದ ೨೦ ಲಕ್ಷ ರೂಪಾಯಿ ಹಣವನ್ನು ಬೇಡಿದನು. ಹಾಗು ಆ ಹಣವನ್ನು ತೆಗೆದುಕೊಂಡು ಬರುವದರಸಲುವಾಗಿ ತನ್ನ ಸಾವಕಾರ ರಾಘವೇಂದ್ರನಾಯಕನೆಂಬುವನನ್ನು ಕಳಿಹಿಸಿಕೊಟ್ಟನು. ಈ ಕಾಲಕ್ಕೆ ನವಾಬನು ಮಹಾರಾಷ್ಟ್ರರ ಸಹಾಯವನ್ನು ಕೇಳಿಕೊಂಡನು. ಹೋಳಕರತುಕೋಜಿಯು ಇದೇ ವೇಳ್ಯಕ್ಕೆ ಕಿತ್ತೂರಿಗೆ ಮುತ್ತಿಗೆಹಾಕಿದ್ದನು ಅಲ್ಲಿಂದ ಅವನು ಒಂದು ರಾತ್ರಿಯಲ್ಲಿ ಸವನೂರಿಗೆ ಹೋದನು. ಅವನ ಮನಸ್ಸಿನಲ್ಲಿ ನಾಯಕಸಾವಕಾರನನ್ನು ಒಂದಿಂದಾದರೂ ಮುತ್ತಿಹಿಡಿಯಬೇಕೆಂದಿತ್ತು. ಪರಂತು ನಾಯಕನು ಕೈಗೆ ಸಿಗದೆ ಅವನ ಕಡೆಯ ಕೆಲವು ಜನರು ಮಾತ್ರ ಸಿಕ್ಕರು. ಆ ಜನರಿಂದ ಹೋಳಕರನು ೨ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡನು. ಹಕೀಮಖಾನನು ಮೈಸೂರವರ ದೋಸ್ತಿಯನ್ನು ತೀರಾ ಬಿಟ್ಟು ಬಿಟ್ಟು ಮಹಾರಾಷ್ಟ್ರರ ಸ್ಥಿರವಾದ ಸ್ನೇಹವನ್ನು ಸಂಪಾದಿಸಿದನು. ಸುಲತಾನನು ಕರ್ನಾಟಕವನ್ನು ತೆಗೆದುಕೊಳ್ಳುವದಕ್ಕೆ ಯತ್ನನಡಿಸಿದಾಗ್ಯೆ ಸವನೂರಕರರಿಗೆ ಬಹು ಉಪದ್ರಕೊಟ್ಟನು ಒಂದು ಸಾರೆ ಸವನೂರನ್ನು ಕೈವಶಮಾಡಿಕೊಂಡು ನವಾಬನ ಸಕಲ ಜಹಾಗೀರವನ್ನು ಲೂಟಾಯಿಸಿ ಅವನ ಲ್ಲಯನ್ನು ಸುಟ್ಟುಬಿಟ್ಟನು. ಆಗ್ಯೆ ನವಾಬನು ಸಂಸ್ಥಾನವನ್ನು ಬಿಟ್ಟು ಪುಣೆಯಲ್ಲಿ ಹೋಗಿ ನಿಂತುಕೊಂಡನು. ಅಲ್ಲಿ ಪೇಶ

ವೆಯರಿಂದ ತಿಂಗಳಿಗೆ ೧೦,೦೦೦ ರೂಪಾಯಿ ಸಿಗುತಿತ್ತು. ಮುಂದೆ ಸನ ೧೭೮೬ನೇ ಇಸವಿಯಲ್ಲಿ ಸುಲತಾನನು, ತಂಮ ಹಾಗು ನವಾಬನ ಶರೀರ ಸಂಬಂಧವಾಗುವದಕ್ಕಿಂತ ಮೊದಲು ಯಾವ ಪ್ರದೇಶಗಳು ನವಾಬನ ಕಡೆಗೆ ಇದ್ದವೋ ಅವುಗಳನು ತಿರಿಗಿ ಕೊಡಬೇಕೆಂಬದಾಗಿ ನವಾಬನ ಕಡೆಗೆ ಮಾತಿನ ಸಂಧಾನವನ್ನು ನಡಿಸಿದನು. ಆದರೆ ಖಾನನು ಆ ಮಾತಿಗೆ ಒಡಂಬಡಲಿಲ್ಲ. ಹಾಗು ಮುತ್ತಿಗೆಯನ್ನು ಸಾಯುವ ಪರಿಯಂತರ ಬಿಡಲಿಲ್ಲ. ಆ ವೇಳೆ ಶ್ರೀರಂಗಪಟ್ಟಣದ ಒಡಂಬಡಿಕೆಯಿಂದ ತುಂಗಭದ್ರೆಯ ಉತ್ತರಕಡೆಯ ಸರ್ವ ಪ್ರದೇಶಗಳು ಪೇಶವೆಯರಿಗೆ ಸಿಕ್ಕವು ಮತ್ತು ನವಾಬನ ಪ್ರದೇಶವು ಸಹ ಅವರ ರಾಜ್ಯದಲ್ಲಿ ಸೇರಿಹೋಯಿತು. ಈ ಪ್ರಕಾರ ನವಾಬನ ಸ್ವತಂತ್ರ ರಾಜ್ಯದ ಸಮಾಪ್ತವಾಯಿತು. ಈ ತರುವಾಯ ನವಾಬನಿಗೆ ಪೇಶವೆಯರಿಂದ ತಿಂಗಳಿಗೆ ೧೦,೦೦೦ ರೂಪಾಯಿ ವೇತನವು ದೊರಿಯುತ್ತಿತ್ತು. ಮುಂದೆ ಹಕೀಮಖಾನನು ಸನ ೧೭೯೫ನೇ ಇಸ್ವಿಯಲ್ಲಿ ಮರಣ ಹೊಂದಿದನು. ನವಾಬನ ಹೊಟ್ಟೆಯ ಮಗನು ಮುಂಗಡೆ ಸತ್ತಕಾರಣದಿಂದ ಆವನ ತಾಯಿಯು ಅಬ್ದುಲಖೈರಖಾನನೆಂಬ ಹೆಸರಿನ ಹುಡುಗನನ್ನು ದತ್ತಕ ತೆಗೆದುಕೊಂಡಳು. ತರುವಾಯ ಅವನು ಮೂರು ವರ್ಷದಲ್ಲಿ ಸವನೂರಿಗೆ ಬಂದು, ಧೊಂಡೋಪಂತ ಗೋಖಲೆ ಎಂಬುವನ ಸಹಾಯದಿಂದ ಸವನೂರಲ್ಲಿ ತನ್ನ ಅಧಿಕಾರವನ್ನು ನೆಲೆಗೊಳಿಸಿದನು. ಆದರೆ ನವಾಬನಕಡೆಯ ಪ್ರದೇಶಗಳಿರದ್ದರಿಂದಲೂ, ಹಾಗು ದೊರಿಯುತಕ್ಕ ವೇತನದ ಹಣವು ವೇಳ್ಯ ವೇಳ್ಯಕ್ಕೆ ದೊರಿಯದ್ದರಿಂದಲೂ, ನವಾಬಖ್ಯಾರೆಯು ಬಹು ಕಷ್ಟಕ್ಕೊಳಗಾಗಿದ್ದನು. ಜನರಲ ವೆಲಸಿ

ರಿಯು ಶ್ರೀರಂಗಪಟ್ಟಣವನ್ನು ವಶಮಾಡಿಕೊಂಡು ತಿರಿಗಿ ಪುಣೆಯ ಕಡೆಗೆ ಹೋಗುತ್ತಿರುವಾಗ ನವಾಬನ ಈ ಸ್ಥಿತಿಯನ್ನು ನೋಡಿ ದಯಹುಟ್ಟಿ ಪೇಶವೆಯರಿಗೆ ಹೇಳಿದೆ ತಿಂಗಳಿಗೆ ೧,೨೦,೦೦೦ ರೂಪಾಯಿಗಳ ನೇಮಣೂಕೀದತಿಯಿಂದ ೪೮,೦೦ ರೂಪಾಯಿಗಳ ಉತ್ಪನ್ನದ ೨೫ ಹಳ್ಳಿಗಳನ್ನು ನವಾಬನಿಗೆ ಕೊಡಿಸಿದನು.

ಮುಕ್ಕಾಂ ಲಕ್ಷ್ಮೇಶ್ವರ. ಶಿವಾನಂದ ವಾಜಿಪ್ಪ,

ಮುಂದಕ್ಕೆ ಸಾಗುವದು,

—o—

Correspondence.

ಪತ್ರವ್ಯವಹಾರವು.

ಹುಬ್ಬಳ್ಳಿ ದ್ವಾದಶಮಠಾ ಅಧ್ಯಕ್ಷ ಚರಮೂರ್ತಿಗಳು.

ಹುಬ್ಬಳ್ಳೀ ಗರ್ಲಸ್ಕೂಲ ಮಾಸ್ತರ ಲಕ್ಷ್ಮೇಶ್ವರ ಚನ್ನಪಯ್ಯನವರು ಆರೂಢರ ಜಾತ್ರೆಯಲ್ಲಿ ಆರೂಢರಮೇಲೆ ಸ್ವರಚಿಸಿದ ಮೂರು ಕನ್ನಡ ಪದಗಳನ್ನೂ ಮೂರು ವೃತ್ತಗಳನ್ನೂ ಓದಿಹೇಳುವ ಸಮಯದಲ್ಲಿ ಕೆಲವು ಪದಗಳಲ್ಲಿ ಅರ್ಥವ ಕೇಳಿದರೆ, ಸಮಂಜಸ ಉತ್ತರ ಕೊಡದಲೇ ಬಾಯಿಗೆ ಬದಹಾಗೆ ಅಕ್ರಮವಾದ ಮಾತುಗಳನ್ನಾಡಿ ನಾನು ಮಾಡಿದ ಕತೆಗಳಲ್ಲಿ ಒಂದಾದರು ತಪ್ಪು ಹೊರ್ಟರೆ, ನಾನು ಲೇಖಣಿ ಹಿಡಿಯಲಿಕ್ಕಿಲ್ಲವೆಂದು, ಸಭೆಯಲ್ಲಿ ಪ್ರತಿಜ್ಞೆ, ಮಾಡತಿರಲು ಸರ್ವ ಜಿಜ್ಞಾಸುಗಳೂ, ಅವರ ದುಷ್ಟಗರ್ವ ಪರಿಹರಿಸಬೇಕೆಂಬ ಇಚ್ಛೆಯಿಂದ ನಾವು ಅವರು ರಚಿಸಿದ ಕವಿತೆಗಳಲ್ಲಿದ್ದ ಕೆಲ ದೋಷಗಳನ್ನು ವಿವರಿಸಿರುತ್ತೇವೆ. ಅದ್ದರಿಂದ ಅವರು ರಚಿಸಿ ಪದಗಳನ್ನೂ, ವೃತ್ತಗಳನ್ನೂ, ಪತ್ರಿಕಾ ವಿಸ್ತಾರಭಯದಿಂ ಸಂಪೂರ್ಣ ಕೊಡದೆ ಸಂಕ್ಷಿಪ್ತರೀತಿ ಕೊಟ್ಟಿರುತ್ತೇವೆ.

|| ಪದ || ಪಾಹಿ ಸದಾಶಿವ | ಪಾಹಿ ಸದಾಶಿವ | ಪಾಹಿ ವಿರಂಚಿನ ಶಂಕರನೇ || ಈ ೩ ನುಡಿಪದದಲ್ಲಿ ಮೊದಲು ಶಂಕರನ ವರ್ಣನ ಮಾಡಿ, ಆ ನಂತರ ಭಕ್ತಲತಾ ಚೂತವನಾಶ್ರಿತ ಖ್ಯಾತ ಸಿದ್ಧಾರೂಢ ಭಿಕ್ತರ || ಹೇ ಶಂಕರ | ನೀನು | ಪಾಹಿ | ಅಂದಲ್ಲಿ | ಕರ್ತೃಪದ ಕನ್ನಡವಿಟ್ಟು, ಕ್ರಿಯಾಪದ ಸಂಸ್ಕೃತ ವಿಟ್ಟಿರುವದು ಅಸಾಗ್ರ || ಪಂಕ್ತಿ || ಭಕ್ತಲತಾ ಚೂತವನಾಶ್ರಿತಖ್ಯಾತ ಸಿದ್ಧಾರೂಢ ನಂಬಲ್ಲಿ || ದೋಷಿಗಳು || ಆರೂಢಶಬ್ದಕ್ಕೆ ಆಶ್ರಿತವೆಂಬ ವಿಶೇಷಣ ಕೊಟ್ಟಿರುವದು ಅಶುದ್ಧ || ಇದಕ್ಕೆ ಪ್ರಮಾಣ || ಪಾರಮಾರ್ಥಕ ಪ್ರಕಾಶಿಕೆಯಲ್ಲಿ ಅವಧೂತಯೋಗಿ ಎನೇ ನಿರ್ಣಯದಲ್ಲಿ ಹೇಳಿರುವದು. ನಿರತಿಶಯಾನಂದ ನಿತ್ಯಸ್ವಯಂಪ್ರಕಾಶ | ಸ್ವತಃ ಸಿದ್ಧ | ಪರಮ ಸ್ವತಂತ್ರ | ಪರಿಪೂರ್ಣ | ಜನನಾದಿ ಪ್ರಪಂಚಕ್ರಿಯಾ ವಿದೂರ ಸ್ವಾನುಭವೈಕ ಸ್ವಯಂಪ್ರಕಾಶಃ || ಶ್ರುತಿ || ಅತ್ರಾಯಂ ಪುರುಷಃ ಸ್ವಯಂ ಜ್ಯೋತಿರೆಂಬ ಶ್ರುತಿಯುಂಟಾಗಿ || ಮತ್ತು || ವಿವೇಕ ಚಿಂತಾಮಣೌ || ತಾನೊಂದನಾಶ್ರಯಿಸದಲೆ ತಂನನು | ಸರ್ವವು ಆಶ್ರಯಿಸುವದೇ ಆರೂಢ ಸದುಕ್ತಂ || ಈ ಪ್ರಕಾರ ಶಾಸ್ತ್ರಾಧಾರಗಳಿಂದದಕ್ಕೆ ಪರಿಪೂರ್ಣ ರೂಪನಾದ ಆರೂಢ ಶಬ್ದಕ್ಕೆ ಆಶ್ರಿತವೆಂಬ || ವಿಶೇಷಣ ಕೊ[illegible] ಪುನರುಕ್ತ ದೋಷ || ಚೂತವನವೆಂದು ಮಾವಿನ ತೋಟವೆಂತಲೂ || [illegible] ಅಂತ [illegible] | ಕವಿಗಳು | ವರ್ಣನೆಯ ಮಾಡುವಲ್ಲಿ ಕೇವಲ ಭೋಗಿಗಳಿಗೆ ಆಶ್ರಯಸ್ಥಾನವೆಂದಲೆ ಆಶ್ರಮಧಾರಿಗಳಾದ ವಾನಪ್ರಸ್ಥ ಮುಂತಾದವರಿಗಾಗಿ ವಿರುದ್ಧವಿರುತ್ತದೆ. ಸಕಲಾಶ್ರಮಗಳನ್ನು ಮೀರಿದ ಆರೂಢ ಶಬ್ದಕ್ಕೆ ಚೂತವನಾಶ್ರಿತವೆಂಬ ವಿಶೇಷಣ ಕೊಟ್ಟಿರುವದು

ಮಹಾಅಪದ್ಧಮತ್ತು || ಈ ಪದದಲ್ಲಿ ಶಂಕರನಿಗೆ ಆರೂಢ ಭಕ್ತ್ಯ ರನ್ನು ಸಲಹ್ಬುಯೆಂದು ಕಪಾಲ ಹಾಕಿ ಕೊಟ್ಟಿರುವದು ಮಹಾಪದ್ಧ ಸ್ವತಃ ಮೋಕ್ಷಸ್ವರೂಪಿಯಾದ ಆರೂಢ ಶಬ್ದಕ್ಕೆ ಹೇಳಿರುವದು ಇವರ ಅಜ್ಞಾನವಲ್ಲವೇ ಲೋಕದಲ್ಲಿ ಕರ್ತವ್ಯವುಳ್ಳ ಒಬ್ಬ ಪುರುಷನಿಗೆ ಹೆಂಡರನ್ನು ಮತ್ತೊಬ್ಬರು ನೀವು ಸಂರಕ್ಷಣ ಮಾಡಿರೆಂತ ಹೇಳುವದು ಯಂಥಾ ಅಸಂಭವ ಮಾತು || ಮತ್ತೊಂದು ೩ ನುಡಿ ಪದದಲ್ಲಿ ನೋಡುನು ಬಾರೆ ಸರೋಜಮುಖಿ || ಆರೂಢನ || ಸಖಿ || ಈತನು ದೇವಾಂಶದಿಂದ ಜಾತನಾಗಿ ಚಿತ್ರಶರಧಿಗೆ ಶೀತಕಿರಣ ನಾದನಾಥ ಖ್ಯಾತಪರಮಹಂಸವರನಾ || ಇಲ್ಲಿ ಜನನ ಮರಣರಹಿತನಾದ || ಆರೂಢನಿಗೆ ಉತ್ಪತ್ತಿ ಹೇಳಿದಲ್ಲಿ ಅಪದ್ಧ ಮತ್ತು || ದೇವಾಂಶನೆಂಬಲ್ಲಿ ಒಂದು ದೋಷ || ಮತ್ತು || ಅನಾಥಜಾತನೆಂಬಲ್ಲಿ || ಮೇಲಿನ ಪದಕ್ಕೂ ಇದಕ್ಕೂ ವಿರುದ್ಧವಿರುತ್ತದೆ. ಆವೇಳೆ ಜನನ ಹೇಳಿದಲ್ಲಿ ದ್ವಿರುಕ್ತಿ ದೋಷ ಬಂದಿತು. ಹಾಗು ದೇವಾಂಶದಿಂದ ಜಾತ ಅನಾಥಜಾತ || ನೆಂಬಲ್ಲಿ || ಪರಸ್ಪರಾರ್ಥಗಳೂ ವಿರುದ್ಧವಿಟ್ಟಲ್ಲಿ ಅಸದ್ಧ ಮತ್ತು || ಅತ್ಯಾಶ್ರಮದೊಳಿದ್ದ ಆರೂಢ ಪರಕ್ಕೆ ಪರಮ ಹಂಸರಲ್ಲಿ ಶ್ರೇಷ್ಠನೆಂತ ಹೇಳುವಲ್ಲಿ ಅಪದ್ಧ. ಮತ್ತೊಂದು ೩ ನುಡಿ ಪದದಲ್ಲಿ, ಹರಿಣಾಂಕ ಮುಖಿಯೆ ನೋಡಿದ್ಯಾ ||

ಈ ಧರಿಯೊಳು ಪ್ರಖ್ಯಾತನಾದ ಪರಮಸಿದ್ಧರೂಢ ಯತಿಯು ಇದರಲ್ಲಿ ಆಶ್ರಮಕ್ಕೊಳಗಾದ ಯತಿ ಪದವಿಟ್ಟದ್ದು ತಪ್ಪು || ಸಕಲಾಶ್ರಮಗಳನ್ನು ಮೀರಿದ ಆರೂಢನ ವರ್ಣನೆಯು ಮಾಡುವಲ್ಲಿ ಹಿಂದುಕಡೆ ಆರೂಢನೆಂತಲೂ ಮತ್ತು ಪರಮಹಂಸನೆಂತಲೂ ಯತಿಯೆಂತಲೂ ಹೇಳಿಟ್ಟಿಲ್ಲ ಇವರ ಅಜ್ಞಾನ ...

ಷ್ಟ ಅನಬೇಕಾಯಿತು. || ಹಿಂದು ವೃತ್ತದಲ್ಲಿ || ಸಿದ್ಧಾರೂಢ
ಯತೀಶ್ವರಂಭಜಸದಾ ಭೂವಲ್ಲರೀಸಜ್ಜನಾ : || ಇದರಲ್ಲಿ
ಕರ್ತೃಪದ ಬಹುವಚನವಿಟ್ಟು ಕ್ರಿಯಾಪದ ಏಕವಚನವಿಟ್ಟಿರುವ
ದು ಮಹಾಪಾಪ. ಮತ್ತೊಂದು ವೃತ್ತದಲ್ಲಿ || ಮಂಗಲಾಂ
ಗ ಸುಧಾಂಗನಾಮಣಿ ಸಂಗಸನ್ಮುಮುನಿಪುಂಗವಾ || ಸು
ಧಾಂಗನಾಮಣಿ ಸಂಗನೆಂಬಲ್ಲಿ || ಆರೂಢನು || ಮೋಕ್ಷ
ಸ್ತ್ರೀಸಂಗನೆಂತ ಅರ್ಥ ಹೇಳುವಲ್ಲಿ || ಸದ್ಧಾ ಶಬ್ದ ಮೋಕ್ಷ
ಕ್ಕಿಲ್ಲಾದ್ದರಿಂದ ಅಬದ್ಧ ಮತ್ತು || ಮೋಕ್ಷಸ್ತ್ರೀಯಾಳೊಬ್ಬಳಿದ್ದು
ಮಣಿಶಬ್ದವಿಟ್ಟಿರುವದೊಂದು ತಪ್ಪು. ಮತ್ತು || ಸ್ವತ: ಮೋ
ಕ್ಷಸ್ವರೂಪಿಯಾದ ಆರೂಢರಿದ್ದು | ಮೋಕ್ಷಸ್ತ್ರೀಸಂಗನೆಂತ
ಹೇಳಿರುವದೊಂದು ಮಹಾಪದ್ಧ ಮತ್ತು || ಈ ಕವಿತಾಪುರುಷ
ರಾದ ಚನ್ನವೀರಯ್ಯನವರು ಆರೂಢರನ್ನು ಕುರಿತು ಫಲಪ್ರಾಪ್ತಿ
ಆಗಬೇಕೆಂದು ಕವಿತೆಯನ್ನು ಮಾಡದಲೆ ಆರೂಢರಿಗೆ ನ್ಯೂನಾ
ಧಿಕಾರ ಕೋಣ್ವೃತ್ತ ಹೇಳಿರುವದು ಇವರ ಯಂಥಾ ಸಾಮಾ
ನ್ಯಾಂತ ಬುದ್ಧಿವಿನಬೇಕಾಯಿತು. ಮತ್ತು || ಆರೂಢರಲ್ಲಿ ಹಿಂ
ದೆತನ ಮಾಡತಕ್ಕ ಜನರಮೇಲೆ ಮಾಡಿದ ಕಂದಪದ್ಯಗಳಲ್ಲಿ ||
ಶಂಕರದಾಸಿಮ ಕಿಂಕರಗೌಡರ ವೀರಶಾಸ್ತ್ರಿ ತತ್ವಸಾಗರದನಿ
ರತಂ || ಶಂಕರದಾಸಿಮ ವಂಶಜನಾದ ಗೌಡರ ವೀರಭದ್ರಸ್ವಾ
ನಿಗೆ || ಶಂಕರದಾಸಿಮ ಕಿಂಕರನೆಂಬಲ್ಲಿ, ಕಿಂಕರಶಬ್ದ ಸೇವಾ
ವಾಚಿಕದಲ್ಲ ಇರುತ್ತದೆ || ಹಿಟ್ಟ ಮಹಾಪುರುಷನಿಗೆ ಅನೇಕ
ಜ್ಞಾತಿಯವರು ಸೇವಾ ಮಾಡತಕ್ಕವರಿ. ತ್ತಾರಾದ್ದರಿಂದ ಯಾವ
ಜಾತಿಯವ ಯೆಂಬುವದು ಗೊತ್ತಾಗಲಿಲ್ಲಾ. || ಮತ್ತು ||

|| ಕಂದ || ಜಲರುಹ ಭವವಂಶಜಾತನು | ಸವನೂರಾ ಚಲ
ಗುಣಮುಕ್ತ್ಯಂಥಾ ಸೌಜನ್ಯಾಖಿಳಜನರು ಉತ್ಸಾಹವ ಮಾಡಿಕ್ಕಿ

ಶೀಲರಾಯ ಪಡೆವರ್ ॥ ಇದರಲ್ಲಿ ॥ ವಿಶ್ವಕರ್ಮಪಂಕ್ತಿಕ ಪಾಂಚಾಲನ ಜಾತಿಯವನಾದ ಸವನೂರ ಮುಕುಂದಪ್ಪನಿಗೆ ॥ ಜಲಿರೂಢ ಭುವನಂಶ ಜಾತಿಂಬಲ್ಲಿ ಚತುರ್ಮುಖಬ್ರಹ್ಮನ ವಂಶಕರು(ವೈಶರು) ಪ್ರಮಾಣ ॥ ಸ್ಕಾಂದೆ ॥ ಪಿತಾಮಹಸ್ಯ ವೈಶ್ಯಶ್ಚ । ಕ್ಷತ್ರಿಯಃ ಸಮೋಹರಿ. ॥ ಬ್ರಾಹ್ಮಣೋ ಭಗವಾನ್ರುದ್ರಃ । ಸರ್ವೇಷಾಂ ಉತ್ತಮೋತ್ತಮಃ । ಈ ಪ್ರಕಾರಾ ಶಾಸ್ತ್ರಜ್ಞಾನವಿಲ್ಲದಲೆ ಉತ್ತಮಕುಲಪ್ರೋಕ್ತನ್ನರಿಗೆ ಹೀನಜಾತಿತ್ವವಂ ಕಲ್ಪಿಸಿರುವ ಈ ಕವಿತಾ ಪುರುಷರಿಗೆ ಯಂಥಾ ಹೀನಜಾತಿ ಗುಣವನಬೇಕಾಯಿತು. ॥

ಈ ಪ್ರಕಾರ ನಾವು ವಿವರಿಸಿದ ದೋಷಗಳ ಮೇಲಿಂದ ಈ ಚನ್ನವೀರಯ್ಯನವರಿಗೆ ॥ ಕೋಶಜ್ಞಾನ, ಅರ್ಥಜ್ಞಾನ । ಭಾವಜ್ಞಾನ । ಶಬ್ದಜ್ಞಾನ । ಸಂಸ್ಕೃತ ಕಂನಡಜ್ಞಾನ । ಧಾತುವಜ್ಞಾನ । ವೇದಾಂತಶಾಸ್ತ್ರಜ್ಞಾನ । ವಚನವಿಭಕ್ತಿ । ಪಂಕ್ತಿಭಾವಜ್ಞಾನ । ಅಲ್ಪಾಧಿಕಾರ ಮಹಾಧಿಕಾರಜ್ಞಾನ । ಗಳಿಲ್ಲೆಂತಲೂ ಪಂಡಿತಮಂಡಳಿಗೆ ತೋರದಿರಲಾರದು ॥ ಹೀಗಿದ್ದು ಬಹುಜನ ಸಭೆಯಲ್ಲಿ ಜ್ಞಾನವಿಲ್ಲದಲೇ ಪ್ರತಿಜ್ಞಾ ಮಾಡಿ ದುಷಿಕೆಗೆ ಪಾತ್ರರಾದರು ಈ ಚನ್ನವೀರಯ್ಯನವರ ನಿಜಸ್ವಭಾವಕ್ಕೆ ಚಿಹ್ನಗಳಾಯಿತು. ॥

ರ.ಜು ಚಿಂತೆಸ್ವಾ ಹನ್ನೂರಮಠದ ದ॥ ಸು॥

—೦೦—

ಸುಗ್ಗಿದಿವಸವೋ ಪರೀಕ್ಷೆಯ ದಿವಸವೋ.

ರಾ. ಸಾ. ಪತ್ರದ ಎಡಿಟರ ಸನ್ನಿಧಿಗೆ—

ವಿ. ವಿ. ಐಯ್ಯಾ! ಎಡಿಟರರಾಯರೇ! ಮೂಡಿದವು ಉಂಡಾಪ್ಪ ಮುಣಿಯಂಥ ಕಡಿ, ಎಂಬೀಗಾದಯಂತ್ರ, ತಪ್ಪು ಮಾತ

ವನು ಶಿಕ್ಷೆಯನ್ನೂ, ಒಳ್ಳೇ ಕೆಲಸ ಮಾಡಿದವನು ಸಿಫಾರಸವನ್ನೂ, ಪಡೆಯುವದು ವಿಹಿತವೂ ಸರಳಮಾರ್ಗವೂ ಇದ್ದು. ಇದಕ್ಕೆ ವಿಪರೀತ ಅಂದರೆ ಸೂಳೆ ಮಾಡಿದ ಪಾಪ ಸನ್ಯಾಸಿಗೆ ಬಡೀತೆಂಬಂತೆಯೂ, ಹಳಗಿಟ್ಟವನು ನೀರಲ್ಲಿ ಮುಳಗೋಣಾತೆನು ಘಂಟೆ ಬಡಿಸಿಕೊಂಡಂತೆಯೂ, ತಪ್ಪು ಮಾಡುವ ಜನರ ದೋಷವು ನಮಗೆ ಬಡದು, ದುಃಖವೂ, ಅಪಮಾನವೂ, ಶಾಭಂಗವೂ, ಆಗಿ, ಕೇವಲ ನಾವು ನಿರಾಶ್ರಿತರಾದೆವೆಂತಲೂ, ನಮ್ಮ ವಿಷಯಕ್ಕೆ ಯಾರೂ ಮೇಲ್ತರದ ವಿಚಾರ ಮಾಡುವ ಲ್ಲೆಂತಲೂ, ಹಳ್ಳೀಯೂರ ಮಾಸ್ತರಜನರು ಔದಾಸೀನವೃತ್ತಿಯುಳ್ಳವರು ತಮಗೆ ತಿಳಿಸುವದು ಅತ್ಯಾವಶ್ಯಕವಾದ ಮಾತು. ಯಾಕಂದರೆ, ತಾವು ಹಳ್ಳೀ ಮಾಸ್ತರಜನರ ದುಃಖ ದೂರಮಾಡುವಲ್ಲಿ ಕೇವಲ ಕಂಕಣಬದ್ಧರಾಗಿರುವದರಿಂದ ಈ ಕೆಳಗಿನ ಸಂಗತಿ ವಿಷಯಕ್ಕೆ ವಿಚಾರಮಾಡಿ, ಮಾಸ್ತರಜನರ ದುಃಖ ನಿವಾರಣ ಮಾಡುವಿರೆಂಬಾಶಯವುಂಟು.

೧ ದಕ್ಷಿಣಭಾಗಗಳಲ್ಲಿ ಒಂದಾದ ಈ ನಮ್ಮ ಕಲಾದಗಿ ಜಿಲ್ಲೆಯು ಇತ್ತಿತ್ತ ಸುಧಾರಣೆಯಾಗಿದ್ದರೂ ವಿದ್ಯಾವಿಷಯದಲ್ಲಂತು ಕೇವಲ ಬಾಲ್ಯಾವಸ್ಥೆಯಲ್ಲಿರುವದರಿಂದಲೂ ಹಳ್ಳೀಯಲ್ಲಿ ಹೇಳಕೂಡದಷ್ಟು ಮಾಸ್ತರಜನರಿಗೆ ದುಃಖವಾಗುವದರಿಂದಲೂ ತನವೂ, ಮನವೂ, ತುಂಬಿ ಹೊರಸೂಸಿತೆಂಬಂತೆ ತಮ್ಮ ಕಡೆಗೆ ಬರೆದು ಕಳಸದೆ ನಿಲ್ಲದು.

೨ ಪ್ರತಿವರುಷ ಸುಗ್ಗಿದವಸ ಬರೋಣಾ, ಮನುಷ್ಯ ಪಶು, ಪಕ್ಷಿ, ಕ್ರಿಮಿಕೀಟಕ ಮೊದಲಾದ, ಯಾವ ಜೀವನಕ್ಕೂ ಸೌಖ್ಯವೂ ಆನಂದವೂ ಆಗುತ್ತಿದ್ದು, ಮಾಸ್ತರಜನರಿಗೆ ಮಾತ್ರ ಈ ಸುಗ್ಗಿದವಸದಿಂದ ಹೇಳಕೂಡದಷ್ಟು ದುಃಖವಾಗುತ್ತದೆ ಯಾ

ಶೀಲಯ ಪಡೆವರ್ || ಇದರಲ್ಲಿ || ವಿಶ್ವಕರ್ಮವಂಶಿಕ ಪಾಂ
ಚಾಲನ ಜಾತಿಯವನಾದ ನವನೂರ ಮುಕ್ಕುಂದಪ್ಪನಿಗೆ || ಜಲ
ರೂಪ ಭವವಂಶ ಜಾತಿಯಂಬಲ್ಲಿ ಚತುರ್ಮುಖಬ್ರಹ್ಮನ ವಂಶಕ
ರು,(ವೈಶರು) ಪ್ರಮಾಣ || ಸ್ಕಾಂದೆ || ಪಿತಾಮಹಸ್ಯ ವೈ
ಶ್ಯಶ್ಚ | ಕ್ಷತ್ರಿಯಃ ಮಹೋದರಿ. || ಬ್ರಾಹ್ಮಣೋ ಭಗವಾ
ನ್ಪುತ್ರಃ | ಸರ್ವೇಷಾಂ ಉತ್ತಮೋತ್ತಮಃ | ಈ ಪ್ರಕಾರದ ಶಾ
ಸ್ತ್ರಜ್ಞಾನವಿಲ್ಲದಲೆ ಉತ್ತಮಕುಲಪ್ರೋತ್ಪನ್ನರಿಗೆ ಹೀನಜಾತಿ
ತ್ವವು ಕಲ್ಪಿಸಿರುವ ಈ ಕವಿತಾ ಪುರುಷರಿಗೆ ಯಂಥಾ ಹೀನ
ಜಾತಿ ಗುಣವೆನಬೇಕಾಯಿತು. ||

ಈ ಪ್ರಕಾರ ನಾವು ವಿವರಿಸಿದ ದೋಷಗಳ ಮೇಲಿಂದ ಈ
ಚನ್ನವೀರಯ್ಯನವರಿಗೆ || ಕೋಶಜ್ಞಾನ, ಅರ್ಥಜ್ಞಾನ | ಭಾವ
ಜ್ಞಾನ | ಶಬ್ದಜ್ಞಾನ , ಸಂಸ್ಕೃತ ಕಂನಡಜ್ಞಾನ | ಧಾತು
ಜ್ಞಾನ | ವೇದಾಂತಶಾಸ್ತ್ರಜ್ಞಾನ | ವಚನವಿಭಕ್ತಿ | ವಂಶಾವ
ಳಿಜ್ಞಾನ | ಅಲ್ಪಾರ್ಥ ಮಹಾಧಿಕಾರಜ್ಞಾನ | ಗಳಿಲ್ಲಂತ
ಲೂ ಪಂಡಿತಮಂಡಲಿಗೆ ತೋರದಿರಲಾರದು || ಹೀಂಗಿದ್ದು ಬ
ಹುಜನ ಸಭೆಯಲ್ಲಿ ಅಜ್ಞಾನವಿಲ್ಲದಲೇ ಪ್ರತಿಜ್ಞ ಮಾಡಿ ಮುಡಿ
ಕೆಗೆ ಪಾತ್ರರಾಗಿರುವ ಈ ಚನ್ನವೀರಯ್ಯನವರ ನಿಜಸ್ವಭಾವ
ಕ್ಕೆ ವಿಸ್ಮಯಂಗಳಾಯಿತು . ||

ರುಜು ಶಾಂತಸ್ವಾಮಿ ಹನ್ನೂರಮಠದ ದ|| ಸು||

—೦೦—

ಸುಗ್ಗಿದಿವಸವೂ ಪರೀಕ್ಷೆಯ ದಿವಸವೂ.

ರಾ. ಸಾ. ಪತ್ರದ ಎಡಿಟರ ಸನ್ನಿಧಿಗೆ—

ವಿ. ವಿ. ಐಯ್ಯಾ! ಎಡಿಟರರಾಯರೇ! ಮಾಡಿದವ ಉಂಡಾ
ನ್ನು ಮಾಡಿಯಂಥ ಕಡಿವು, ಎಂಬೀಗಾದಯಂತೆ, ತಪ್ಪು ಮಾಡಿ

ವನು ಶಿಕ್ಷೆಯನ್ನೂ, ಹಳ್ಳೀಕೆಲಸ ಮಾಡಿದವನು ಸಿಫಾರಸನ್ನೂ, ಪಡೆಯುವದು ವಿಹಿತವೂ ಸರಳಮಾರ್ಗವೂ ಇದ್ದು, ಇ ಕ್ಕೆ ವಿಪರೀತ ಅಂದರೆ ಸೂಳೆ ಮಾಡಿದ ಪಾಪ ಸನ್ಯಾಸಿಗೆ ಬ ಇತೆಂಬಂತೆಯೂ, ಹಳಿಗಿಟ್ಟವನು ನೀರಲ್ಲಿ ಮುಳಗೋಣಾ ಸು ಘಂಟೆ ಬಡಿಸಿಕೊಂಡಂತೆಯೂ, ತಪ್ಪು ಮಾಡುವ ಜನ ದೋಷವು ನಮಗೆ ಬರದು, ದುಃಖವೂ, ಅಪಮಾನವೂ, ಶಾಭಂಗವೂ, ಆಗಿ, ಕೇವಲ ನಾವು ನಿರಾಶ್ರಿತರಾದೆವೆಂತಲೂ, ಮ್ಮ ವಿಷಯಕ್ಕೆ ಯಾರೂ ಮೇಲ್ತರದ ವಿಚಾರ ಮಾಡುವವ ಲ್ಲೆಂತಲೂ, ಹಳ್ಳೀಪ್ರಾರ ಮಾಸ್ತರಜನರು ಔದಾಸೀನವೃತ್ತಿ ಯಲ್ಲಿರುವದು ತಮಗೆ ತಿಳಿಸುವದು ಅತ್ಯಾವಶ್ಯಕವಾದ ಮಾತು ಯಾಕಂದರೆ, ತಾವು ಹಳ್ಳೀ ಮಾಸ್ತರಜನರ ದುಃಖ ದೂರಮಾ ವಲ್ಲಿ ಕೇವಲ ಕಂಕಣಬದ್ಧರಾಗಿರುವದರಿಂದ ಈ ಕೆಳಗಿನ ಂಗತಿ ವಿಷಯಕ್ಕೆ ವಿಚಾರಮಾಡಿ, ಮಾಸ್ತರಜನರ ದುಃಖ ನಿ ಾರಣ ಮಾಡುವಿರೆಂಬಾಶಯುಂಟು.

೧ ದಕ್ಷಿಣಭಾಗಗಳಲ್ಲಿ ಬಂದಾದ ಈ ನಮ್ಮ ಕಲಾದಗಿ ಜಿ ಯು ಇತ್ತಿತ್ತ ಸುಧಾರಣೆಯಾಗಿದ್ದರೂ ವಿದ್ಯಾವಿಷಯವ ಂತು ಕೇವಲ ಬಾಲ್ಯಾವಸ್ಥೆಯಲ್ಲಿರುವದರಿಂದಲೂ ಹಳ್ಳೀಪ್ರಾ ಲ್ಲಿ ಹೇಳಕೂಡದಷ್ಟು ಮಾಸ್ತರಜನರಿಗೆ ದುಃಖವಾಗುವದರಿಂ ಲೂ ತನವೂ, ಮನವೂ, ತುಂಬಿ ಹೊರಸೂಸಿತೆಂಬಂತೆ ತಮ್ಮ ಡಿಗೆ ಬರೆದು ಕಳಸದೆ ನಿಲ್ಲದು.

೨ ಪ್ರತಿವರುಷ ಸುಗ್ಗಿಯವಸ ಬರೋಣಾ, ಮನುಷ್ಯ ಪಶು, ಕ್ಷಿ, ಕ್ರಿಮಿಕೀಟಕ ಮೊದಲಾದ, ಯಾವ ಜೀವನಕ್ಕು ಸೌಖ್ಯ ಾ ಆನಂದವೂ ಆಗುತ್ತಿದ್ದು, ಮಾಸ್ತರಜನರಿಗೆ ಮಾತ್ರ ಈ ುಗ್ಗಿಯವಸದಿಂದ ಹೇಳಕೂಡದಷ್ಟು ದುಃಖವಾಗುತ್ತದೆ. ಯಾ

ಅಭಿಪ್ರಾಯ ತೋರಿಸಲು ಆ ಪ್ರಕಾರಾ ಮೆಹರ್ಬಾನಜನರು ಸ್ವೀಕಾರ ಮಾಡಿದರು ಆ ಮೇಲೆ ರಾ. ಸಾ. ಡಿ. ಬಿ. ಇ. ಇವರು ೧ ತಾಸು ಪರಿಯಂತರವಾಗಿ ಹುಡಗರಿಗೂ ಮತ್ತು ಹುಡಿಗಯರಿಗೂ ವಿದ್ಯಾಭ್ಯಾಸ ಮಾಡಿಸಬೇಕೆಂಬದಾಗಿ ಆನಂದ ಆಗುವಂತೆ ತಿಳಿಸಿದರು. ಅಲ್ಲಿಂದ ಮಿ. ಅ. ಕ. ಸಾಹೇಬರವರು ಸದರ ಸಭಾ ಆದದಕ್ಕೆ ನಾನು ಬಹಳ ಆಭಾರಿ ಇದ್ದೇನೆಯೆಂಬ ಬಗ್ಗೆ ಇಂಗ್ಲಿಷದಲ್ಲಿ ಹೇಳಿದ ವಾಕ್ಯದ ತರ್ಜುಮಾ ಮಾಡಿ ಹೇಳಿದರು ಹಾಂಗು ಸದರಿ ಸಾಹೇಬರು ೧೦ ರೂಪಾಯಿ ಪೈಕಿ ಕೆಲವು ಖಣಗಳು ಹಾಂಗು ಮಿಠಾಯಿ ಕೊಟ್ಟರು ಮತ್ತು ರಾ. ರಾ. ನರಸಿಂಗರಾವ ವಕೀಲ ಇವರು ೧೫ ಪುಸ್ತಕಗಳನ್ನು ೧ನೇ ನಂಬರ ಸಾಲಿಯ ಹುಡಗರಿಗೆ ಇನಾಮು ಕೊಟ್ಟರು. ರಾ. ಸಾ. ಅಂಣ್ಣಾರಾಯರು ವಾರ್ಷಿಕ ಪರೀಕ್ಷೆಯಲ್ಲಿ ಪಾಸಾದಬಗ್ಗೆ ಪುಸ್ತಕಗಳನ್ನು ಕೊಟ್ಟರು. ಹೀಗೆ ಆಗಾಗ್ಗೆ ಸಭ್ಯಗೃಹಸ್ಥರು ಸಭೆ ಮಾಡಿ ಇನಾಮು ಕೊಟ್ಟಲ್ಲಿ ವಿದ್ಯಾವೃದ್ಧಿ ಹೆಚ್ಚಾಗುವದು ತಾ. ೬ ಅಪ್ರಿಲ ೧೮೮೩ ಇ.

ವಿಜಾಪೂರ } ಲಕ್ಷ್ಮಣನಾರಾಯಣ ಅತ್ರಿತ ಇ. ಹೆ.
ವಿಜಾಪೂರ ನಂಬರ ೧

ಶಾಲಾಪತ್ರಕವು.

ಪುಸ್ತಕ ೧೮] [ಸಂಚಿಕೆ ೬

ಜೂನ. ೧೮೮೩

Education and Improvement.

ವಿದ್ಯಾಸುಧಾರಣಾಸಂಬಂಧವಾದ ಸಂಗತಿಗಳು.

—*o*—

ಸಾವನೂರಲ್ಲಿ ತಾ. ೧೧ಜೂನ ೧೮೮೩ನೇ ಇಸ್ವಿ ದಿವಸ ಅಲ್ಲಿಯ ಮೆ. ನವಾಬಸಾಹೇಬರಿಗೆ ಅಧಿಕಾರಕೊಡುವ ದೊಡ್ಡ ಸಮಾರಂಭವು ಆಯಿತು.

—o—

ಪುಣೆ ಸಾರ್ವಜನಿಕ ಸಭೆಯ ಏಜಂಟರಾದ ರಾ. ರಾ. ಕಾಶಿನಾಥ ತ್ರ್ಯಂಬಕ ಖರೆ ಇವರು ತಮ್ಮ ದೇಶದ ವಿಪತ್ತು ಮತ್ತು ಅದನ್ನು ಸುಧಾರಿಸುವ ಉಪಾಯ ಇವುಗಳಮೇಲೆ ವ್ಯಾಖ್ಯಾಕೊಡೋದರಲ್ಲಿ ಕಬ್ಬಿಣ ಕಲ್ಲಿನ ಸಂಬಧದಿಂದ ಒಂದು ಉಪಯುಕ್ತ ಮಾಹಿತಿ ಕೊಟ್ಟರು.

—o—

ಅಮೇರಿಕದಲ್ಲಿ ಒಬ್ಬ ನೀರಮುಳಗುವವನಿಗೆ ಒಂದು ದೊಡ್ಡ ಮುತ್ತು ದೀಡಇಂಚಉದ್ದ ಮತ್ತು ಪೌಣಇಂಚು ದಪ್ಪವಾ

ದ ಮುತ್ತು ಶಿಕ್ಕಿರುತ್ತದೆ. ಇವನು ಆ ಮುತ್ತಿನ ಕ್ರಯವು ಐವತ್ತು ಲಕ್ಷ ರೂಪಾಯಿ ಹೇಳತಿದ್ದು ಅದು ಇನ್ನು ಖರ್ಚ ಆದಂತೆ ಇಲ್ಲಾ.

—೦—

ವಿಲಾಯಿತಿಗೆ ಹೋಗಬರುವ ವಿದ್ಯಾರ್ಥಿ, ವ್ಯಾಪಾರಿಜನರಿಗೆ ಜಾತಿಮರ್ಯಾದೆಯಿಂದ ಹೋಗುವದಕ್ಕೆ ಅನುಕೂಲವಾಗಬೇಕೆಂಬ ಉದ್ಯೋಗನಡದದೆ. ಊಟಉಪಚಾರಕ್ಕಾಗಿ ಬ್ರಾಹ್ಮಣರು ಮತ್ತು ಹೋಗಬರುವ ಮೂರು ಕ್ಲಾಸದ ಖರ್ಚು ರುಪಾಯಿ ೧೦೦|೨೦೦|೪೦೦ ಹೀಗೆ ಇಟ್ಟಿರುತ್ತದೆ.

—೦—

ಮದ್ರಾಸದಲ್ಲಿ ಒಂದು ಮ್ಯುಜಿಕ್ ಗಾಯನಶಾಲೆಯ ಬ್ರೆಂಚಆಗಿರುತ್ತದೆ. ಇದರ ಅಧ್ಯಕ್ಷಸ್ಥಾನವನ್ನು ತ್ರಾವಣಕೋರದ ಮಹಾರಾಜ ಇವರು ಸ್ವೀಕಾರಿಸಿರುತ್ತಾರೆ.

—೦—

ರಶಿಯಾದ ಬಾದಶಹನ ರಾಜ್ಯಾಭಿಷೇಕದ ಸಮಾರಂಭದ ವೇಳೆಯಲ್ಲಿ ಮಸ್ಕೋಇಲ್ಲಿ ನಾಲ್ವತ್ತು ಸಾವಿರ ಪೋಲೀಸಜನರು ಬಂದೋಬಸ್ತದ ದರಿಂದ ಹಾಜರಇದ್ದರೆಂಬ ಅನ್ನುತ್ತಾರೆ.

—೦—

ನಾಶಿಕದಲ್ಲಿಯ ಒಬ್ಬ ಗೃಹಸ್ಥನಾದ ರಾ. ರಾ. ವಿಷ್ಣು ಮೋರೇಶ್ವರಛತ್ರೆ ಎಂಬುವವರು " ವಿಲಸನ್ಸ ಸರ್ಕಸ್ " ಎಂಬ ಕುದರೆ ಆಟದಂತೆ ಒಂದು ಆಟವನ್ನು ಮಾಡುವ ಪ್ರಯತ್ನ ನಡಸಿದ್ದಾರೆ.

—೦—

Planets.

ಗ್ರಹಗಳು—

ನಿರಾಭ್ರವಾದ ಕತ್ತಲೆ ರಾತ್ರಿಯಲ್ಲಿ ಆಕಾಶವನ್ನು ಲಕ್ಷ್ಯಪೂರ್ವಕವಾಗಿ ನೋಡಲು ಅಸಂಖ್ಯವಾದ ನಕ್ಷತ್ರಗಳು ಕಂಣ್ಣಿಗೆ ಬೀಳುತ್ತವೆ. ಅವು ಪೂರ್ವದಿಂದ ಪಶ್ಚಿಮಕ್ಕೆ ಗಮನ ಮಾಡುವಂತೆಯೂ ಕೆಲವು ಪೂರ್ವದಲ್ಲಿ ಉದಯವಾಗುವಂತೆಯೂ ಕೆಲವು ಪಶ್ಚಿಮದಲ್ಲಿ ಅಸ್ತವಾಗುವಂತೆಯೂ ಕಾಣುತ್ತವೆ ಆದರೆ ಈ ಪ್ರಕಾರದ ಗತಿಯು ಅವುಗಳಿಗಿಲ್ಲ. ನಾವು ವಾಸಿಸಿರುವ ಪೃಥ್ವಿಗೆ ಪಶ್ಚಿಮದಿಂದ ಪೂರ್ವಕ್ಕೆ ಪ್ರತಿದಿವಸ ಒಂದಾವರ್ತಿ ತನ್ನ ಮೈಸುತ್ತ ತಿರುಗುವ ಗತಿ ಇರುವದರಿಂದ ಅಂದರೆ ಪೃಥ್ವಿಯು ದೈನಂದಿನಗತಿಯಿಂದ ಆಕಾಶದೊಳಗಿನ ನಕ್ಷತ್ರಗಳು ಪೂರ್ವದಿಂದ ಪಶ್ಚಿಮಕ್ಕೆ ತಿರುಗಿದಂತೆ ತೋರುತ್ತವೆ. ಹೊರ್ತಾಗಿ ಅವುಗಳಿಗೆ ಆ ಗತಿಯು ಇಲ್ಲ. ಕಾರಣ ಅವಕ್ಕೆ ಸ್ಥಿರನಕ್ಷತ್ರಗಳೆಂಬ ಸಂಜ್ಞೆಯು ಕೊಡಲ್ಪಟ್ಟಿರುತ್ತದೆ. ಹೀಗಿದ್ದರೂ ಈ ಸ್ಥಿರನಕ್ಷತ್ರಗಳಲ್ಲಿ ಸ್ವಲ್ಪ ಚರನಕ್ಷತ್ರಗಳುಂಟು. ಅವುಗಳೊಳಗಿನ ಯಾವದಾದರೊಂದು ಇವತ್ತು ಒಂದು ಸ್ಥಿರನಕ್ಷತ್ರದಕೂಡ ಇದ್ದಂತೆ ಕಾಣುವಂಥಾದ್ದು ಇನ್ನು ಕೆಲವು ದಿವಸಗಳಮೇಲೆ ಅದರಿಂದ ದೂರಾದ ಮತ್ತೊಂದು ನಕ್ಷತ್ರದ ಕೂಡ ಇರುವಂತೆ ತೋರುತ್ತದೆ. ಇಂಥ ಚರನಕ್ಷತ್ರಗಳಿಗೆ ಗ್ರಹಗಳೆಂಬ ಹೆಸರು ಕೊಡಲ್ಪಟ್ಟಿರುತ್ತದೆ.

ಗ್ರಹಗಳ ವಿಷಯವಾಗಿ ಅನೇಕ ತರದ ಕಲ್ಪನೆಗಳುಂಟು. ಪೃಥ್ವಿಯು ಸ್ಥಿರವಾಗಿದ್ದು ಅದರಸುತ್ತ ಚಂದ್ರ, ಸೂರ್ಯ, ಬುಧ, ಶುಕ್ರ ಮೊದಲಾದಗ್ರಹಗಳು ತಿರುಗುತ್ತವೆಂದು ಪ್ರಾಚೀನಕಾಲದಲ್ಲಿ ಟಾಲಿಮಿ ಎಂಬ ಜ್ಯೋತಿಷಿಯು ಕಲ್ಪನೆಮಾಡಿದ್ದ

ನು. ಪೃಥ್ವಿಯು ಸ್ಥಿರವಾಗಿದ್ದು ಚಂದ್ರ ಸೂರ್ಯರು ಅದರಸುತ್ತ ತಿರುಗುತ್ತ ಸೂರ್ಯನಸುತ್ತ ಬುಧ ಶುಕ್ರರು ತಿರುಗುತ್ತಾರೆ. ಪೃಥ್ವಿಸುತ್ತು ಈ ಎಲ್ಲಗ್ರಹಗಳಸುತ್ತ ಮಂಗಳ ಬೃಹಸ್ಪತಿ ಮುಂತಾದಗ್ರಹಗಳು ಭ್ರಮಣ ಮಾಡುತ್ತವೆಂಬು ಭಾಸ್ಕರಾಚಾರ್ಯ ಟೈಕೋಬ್ರಾಹಿಗಳ ಮತವುಂಟು. ಇನ್ನು ಅನೇಕ ಜೋತಿಶಗಳ ಮತಗಳು ಅನೇಕ ಪ್ರಕಾರದವು. ಆದರೆ ಕೋಪರನಿಕಸನೆಂಬ ಬಹು ಪ್ರಖ್ಯಾತಜ್ಯೋತಿಷಿಯು ಸೂರ್ಯನು ಸ್ಥಿರ ನಕ್ಷತ್ರದೊಳಗಿನೊಬ್ಬನಿದ್ದು ಅವನಸುತ್ತ ಎಲ್ಲ ಗ್ರಹಗಳು ತಿರುಗುತ್ತವೆಂತಲೂ, ನಂವು ಪೃಥ್ವಿಯು ಆ ಗ್ರಹಗಳೊಳಗಿಂದೊಂದೆಂತಲೂ ಬಹು ಸೂಕ್ಷ್ಮ ಹುಡುಕಿತೆಗಿದನು. ಯುರೋಪದ ಮಹನ್ನ ಮಹಜ್ಯೋತಿಷಿಗಳು ಅವನ ಸಿದ್ಧಾಂತವು ಸತ್ಯವಾದದ್ದೆಂದು ಒಪ್ಪಿಕೊಂಡದ್ದರಿಂದ ಸಾಂಪ್ರತಕಾಲದಲ್ಲಿ ಜ್ಯೋತಿಷ್ಯಗ್ರಂಥಗಳು ಕೋಪರನಿಕಸನ ಸಿದ್ಧಾಂತವನ್ನನುಸರಿಸಿ ಬರಿಯಲ್ಪಡುವದಲ್ಲದೆ ಎಲ್ಲ ಜ್ಯೋತಿಷ್ಯಗಣಿತವೂ ಅದಕ್ಕೆ ಅನುಸಾರವಾಗಿ ಮಾಡಲ್ಪಡುತ್ತದೆ.

ಜ್ಯೋತಿಷ್ಯದಲ್ಲಿ ರವಿಕೇಂದ್ರ ಭೂಕೇಂದ್ರಗಳೆಂಬ ಎರಡು ಪ್ರಕಾರದ ಗಣಿತಗಳು ರವಿಕೇಂದ್ರ ಗಣಿತದಲ್ಲಿ ಸೂರ್ಯನು ಮಧ್ಯನು. ಅವನಸುತ್ತ ಎಲ್ಲ ಗ್ರಹಗಳು ತಿರುಗುತ್ತವೆಂಬ ಅಭಿಪ್ರಾಯವು. ಭೂಕೇಂದ್ರಗಣಿತದಲ್ಲಿ ಪೃಥ್ವಿಯು ಮಧ್ಯವಾಗಿದ್ದು ಅದರಸುತ್ತ ಎಲ್ಲ ಗ್ರಹಗಳು ತಿರುಗುತ್ತವೆಂಬ ತಿಳುವಳಿಕೆಯು ಆದರೆ ಕೋಪರನಿಕಸನು ರವಿಕೇಂದ್ರಗಣಿತವು ಸತ್ಯವಾದದ್ದೆಂದು ಸಿದ್ಧಮಾಡಿದ್ದಾರೆ.

ಗ್ರಹ ಉಪಗ್ರಹಗಳೆಂದು ಗ್ರಹಗಳಲ್ಲಿ ಎರಡು ಭಾಗಗಳು ಸೂರ್ಯನಸುತ್ತ ತಿರುಗುವಂಥವು ಗ್ರಹಗಳು. ಗ್ರಹಗಳಸುತ್ತ

ತಿರುಗುವಂಥವು ಉಪಗ್ರಹಗಳು. ಇನ್ನೊಂದು ಪ್ರಕಾರದ ಖಸ್ಥ ಶರೀರಗಳಿವೆ. ಅವಕ್ಕೆ ಧೂಮಕೇತುಗಳೆಂಬ ಸಂಜ್ಞೆಯಿಂದ ಕರೆಯುತ್ತಿದ್ದಾರೆ. ಅವು ಸಹ ಸೂರ್ಯನಸುತ್ತ ಭ್ರಮಣ ಮಾಡುತ್ತವೆ. ಕಾರಣ ಅವುಗಳಿಗೆ ಗ್ರಹಗಳೆಂದೆನ್ನಬಹುದು ಸೂರ್ಯಗ್ರಹ ಉಪಗ್ರಹ ಧೂಮಕೇತುಗಳಿವೆ ಕೂಡಿ ಸೂರ್ಯಮಾಲೆಯೆಂದೆನ್ನುವ ಪ್ರಚಾರವುಂಟು.

ಗ್ರಹಗಳೂ ಅವುಗಳ ಕ್ರಮವು — ಗ್ರಹ, ಶುಕ್ರ, ಪೃಥ್ವಿ, ಮಂಗಳ, ಗ್ರಹಕಲ್ಪಗಳು, ಗುರು (ಬೃಹಸ್ಪತಿ), ಶನಿ, ಯುರೇನಸ್, ಮತ್ತು ನೆಪ್ಚ್ಯೂನ್.

ಉಪಗ್ರಹಗಳು — ಪೃಥ್ವಿಯ ಸುತ್ತಲೆ ತಿರುಗುವದು ಒಂದು ಚಂದ್ರ ಗುರುವಿನಸುತ್ತ ತಿರುಗುವ ನಾಲ್ಕು ಚಂದ್ರಗಳು. ಶನಿಯಸುತ್ತ ತಿರುಗುವ ಎಂಟು ಚಂದ್ರಗಳು. ಯುರೇನಸಿನ ಸುತ್ತ ತಿರುಗುವ ಎಂಟು ಚಂದ್ರಗಳು. ಮತ್ತು ನೆಪ್ಚ್ಯೂನಿನಸುತ್ತ ತಿರುಗುವ ಎರಡು ಚಂದ್ರಗಳು.

ಧೂಮಕೇತುಗಳು — ಧೂಮಕೇತುಗಳು ಒಂದು ಪ್ರಕಾರದ ಗ್ರಹಗಳೇ.

ಸೂರ್ಯನು ಎಲ್ಲ ಗ್ರಹಗಳಿಗೆ ಮಧ್ಯವಾದವನು. ಅವನ ಆಕರ್ಷಣಶಕ್ತಿಯಿಂದ ಅವು ತಮ್ಮತಮ್ಮ ಮಾರ್ಗವನ್ನು ಹಿಡಿದು ತಮ್ಮತಮ್ಮ ಕಕ್ಷೆಗಳಲ್ಲಿ ತಿರುಗುತ್ತವೆ. ಅವನಿಂದಲೇ ಅವುಗಳಿಗೆ ಪ್ರಕಾಶ ಉಷ್ಣತೆಗಳುಂಟಾಗುತ್ತವೆ. ಅವು ಪರಪ್ರಕಾಶ ಶರೀರಗಳಾದ್ದರಿಂದ ಅವನಿಲ್ಲದಿದ್ದರೆ ಅವಕ್ಕೆ ಪ್ರಕಾಶ ದೊರಕುತ್ತಿದ್ದಿಲ್ಲ. ಅವನ ಶರೀರವು ಪೃಥ್ವೀಶರೀರಕ್ಕಿಂತ ಸುಮಾರು ಹದಿನಾಲ್ಕು ಲಕ್ಷಪಾಲಿಲೆ ದೊಡ್ಡದಾಗಿಯೂ ಆಕೃತಿಯಲ್ಲಿ ಗೋಲವಾಗಿಯೂ ಇರುತ್ತದೆ. ದಾರಿಷ್ಟ್ಯದಲ್ಲಮಾತ್ರ ಅ

ನು ಪೃಥ್ವಿಗಿಂತ ಹಗುರಾದದ್ದು, ಅಂದರೆ — ಸೂರ್ಯನ ಶರೀರದೊಳಗಣ ಒಂದು ಘನಮೈಲಿನ ತೂಕವು ಪೃಥ್ವೀ ಶರೀರದೊಳಗಣ ಒಂದು ಘನಮೈಲಿನ ತೂಕಕ್ಕಿಂತ ತೂಕದಲ್ಲಿ ನಾಲ್ಕು ಪಾಲಿಗೆ ಕಡಿಮೆ ಯಾದದ್ದು. ಸೂರ್ಯನಿಗೆ ಉರಿಯುವಂಥ ವಾತಾವರಣವು ಇರುತ್ತದೆ. ಕಾರಣ ಅವನು ಸ್ವಪ್ರಕಾಶಕನು. ದುರ್ಬೀನಿಯಿಂದ ಅವನ ಶರೀರವನ್ನು ನೋಡಿದರೆ ಅದರ ಮೇಲೆ ಕಪ್ಪುಕಲೆಗಳು ಕಂಡುಬರುತ್ತವೆ. ಅವು ಒಮ್ಮೆ ಕಾಣುತ್ತ ಮತ್ತೊಮ್ಮೆ ಕಾಣದೆ ಹೋಗುತ್ತ ಇರುವದರಿಂದ ಅವನು ತನ್ನ ಸುತ್ತ ೨೫ದಿವಸದಲ್ಲಿ ಒಂದು ಪ್ರದಕ್ಷಿಣೆಯನ್ನು ಮಾಡುತ್ತಾನೆಂದು ತಿಳಿದಿದ್ದಾರೆ. ಸೂರ್ಯನ ವ್ಯಾಸವು ೮೮೮೦೦೦ಮೈಲುಗಳು. ಪೃಥ್ವಿಯಿಂದ ಅವನ ಅಂತರವು ೯೫೦೦೦೦೦೦ಮೈಲುಗಳು.—

೧ ಸೂರ್ಯನಿಗೆ ಅತಿ ಸಮೀಪವಾದ ಗ್ರಹ ಬುಧನು. ಅವನ ವ್ಯಾಸವು ೩೧೪೦ಮೈಲುಗಳು. ಅಂತರ ೩೬೮೯೦೦೦೦ಅವನ ದಾರ್ಢ್ಯ೧|೧೨ಪಾಲು ಪೃಥ್ವಿಯ ದಾರ್ಢ್ಯಕ್ಕಿಂತ ಹೆಚ್ಚಾದದ್ದು. ಎಲ್ಲ ಗ್ರಹಗಳ ಕಕ್ಷಕ್ಕಿಂತ ಅವನ ಕಕ್ಷೆಯು ವಿಶೇಷ ದೀರ್ಘ ವರ್ತುಳಾಕಾರವಾದದ್ದು. ಕಾರಣ ಅವನ ಕೇಂದ್ರಚ್ಯುತಿಯು ನೂರೊಂದಕ್ಕೆ ೨೦|೫೬ವಾಗಿರುತ್ತದೆ. ಸೂರ್ಯನ ಸುತ್ತ ಅವನ ಪ್ರದಕ್ಷಿಣಾಕಾಲವು ೮೮ದಿವಸಗಳಷ್ಟಿದ್ದು. ಮತ್ತು ಅವನು ತನ್ನ ಅಕ್ಷದ ಸುತ್ತ ೨೪ತಾಸು ೫ಘಳಿಗೆಗಳಲ್ಲಿ ತಿರುಗುತ್ತಾನೆ. ಅವನು ಸಣ್ಣ ಗ್ರಹವಾದ್ದರಿಂದಲೂ ಸೂರ್ಯನಿಗೆ ಅತಿ ಸಮೀಪವಾದ್ದರಿಂದಲೂ, ಅವನ ಪ್ರಕಾಶವು ರವಿಪ್ರಕಾಶದಲ್ಲಿ ನಿಸ್ತೇಜವಾಗುವ ಕಾರಣ ಅವನು ಸ್ಪಷ್ಟವಾಗಿ ಕಂಡುಬರುವದಿಲ್ಲ. ತನ್ನ ಕಕ್ಷೆಯಲ್ಲಿ ಅತಿತೀವ್ರವಾಗಿ ಭ್ರಮಣ

ಮಾಡುವ ಉಷ್ಣತ್ವ ಅವನಿಗೆ ಯೆಂದರೆ ದೇವದೂತನೆಂಬ ಹೆಸರು ಯುರೋಪಿಯರು ಪ್ರಾಚೀನರು ಕೊಟ್ಟಿದ್ದಾರೆ. ಶುಕ್ರನಂತೆ ಕೆಲವು ಋತುಗಳವರಿಗೂ ಸೂರ್ಯನ ಪಶ್ಚಿಮದಲ್ಲಿದ್ದಾಗ್ಯೆ ಅಂದರೆ ಸೂರ್ಯನಗಿಂತ ಮುಂದೆ ಇದ್ದಾಗ್ಯೆ ಪ್ರಾತಃಕಾಲದಲ್ಲಿ ಮಾಡುತ್ತ, ಸೂರ್ಯನಹಿಂದಿದ್ದಾಗ್ಯೆ ಅಂದರೆ ಅವನ ಪೂರ್ವದಲ್ಲಿದ್ದಾಗ್ಯೆ ಪಶ್ಚಿಮದಲ್ಲಿ ಮಾಡುತ್ತ ಇರುತ್ತಾನೆ.

ಪೃಥ್ವಿ ಅಥವಾ ಶುಕ್ರನಿಗೆ ಇದ್ದಂತ ದಟ್ಟ ವಾತಾವರ್ಣವು ಅವನಿಗಿಲ್ಲ. ಅವನ ಆಕಾರವು ಬಹುಶಾ ಗೋಲಾಕಾರವಾಗಿವೆ, ಆದರೂ ಅವನ ಮೇಲೆ ಹದಿನೈದು ಎತ್ತರವಾದ ಪರ್ವತಗಳುಂಟು. ಅವನು ತನ್ನ ಕಕ್ಷದ ಪಾತಳಿಗೆ ತನ್ನ ಅಕ್ಷವನ್ನು ೭೦ದ ಕೋನವನ್ನು ಮಾಡಿಕೊಂಡು ಸೂರ್ಯನಸುತ್ತ ಭ್ರಮಣ ಮಾಡುತ್ತಾನೆ.

—o—

History of Shahanore.

ಸವನೂರಸಂಸ್ಥಾನದ ಇತಿಹಾಸವು.

(೧೧೩ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

ಈ ವ್ಯವಸ್ಥೆಯು ಪೇಶವೆಸಂಸ್ಥಾನವು ಮುಣುಗುವ ವರೆಗೆ ನಡೆಯಿತು. ಆ ಮೇಲೆ ಇಂಗ್ಲಿಷ ಸರಕಾರದವರು ಇದನ್ನು ಶಾಶ್ವತಮಾಡಿ ಮತ್ತೂ ಖೈರಖಾನನಿಗೆ ೬೦೦೦ರೂಪಾಯಿಯ ಮೂಲನ್ನು ಕೊಟ್ಟರು. ಅಬ್ದುಲಖೈರಖಾನನು ಸಂನ೧೮೨೭ನೇ ಇಸವಿಯಲ್ಲಿ ಮರಣಹೊಂದಿದನು. ಅವನಿಗೆ ೫ಮಂದಿ ಮಕ್ಕಳಿದ್ದರು. ಅವರಲ್ಲಿ ಹಿರಿಯವನಾದ ಅಬ್ದುಲ ಫೈಜಖಾನನು ನವಾಬನಾದನು. ಆದರೆ ಅವನು ಯರಡುವರಿ ತಿಂಗಳಲ್ಲೇ ತೀರಿಕೊಂಡನು. ತರುವಾಯ ಮುನವರಖಾನನು ನವಾಬನಾದನು.

ನವಾಬನ ಕಡೆಯ ಗ್ರಾಮಗಳ ಉತ್ಪನ್ನವು ಹೆಸರಿಗೆ ೪೮,೦೦೦ ರೂಪಾಯಿ ಮಾತ್ರವಿತ್ತು. ಪರಂತು ವಾಸ್ತವ್ಯವಿಚಾರದಿಂದ ಹದಿನೈದು ಅಥವಾ ಇಪ್ಪತ್ತು ಸಾವಿರವಿರುವದು ಪೆನಶನ್ನದ ಸಂಬಂಧದಿಂದ ಈ ಇನಾಮುಗ್ರಾಮು ಕೊಟ್ಟಿದ್ದ ಕಾರಣ ಸರಕಾರೀ ನೌಕರೀಮಾಡುವ ಕಾರಣ ಬೀಳವಿಲ್ಲ, ಮತ್ತು ಇವರನ್ನು ಜಾಹಾಗೀರದಾರರಾಗಿಯೂ ತಿಳಿಯಬರುವದಿಲ್ಲ. ಈ ಸಲುವಾಗಿ ಮೊದಲು ಸವನೂರಸಂಸ್ಥಾನದ ದಿವಾಣೀ, ಫೌಜದಾರೀ ಕೆಲಸಗಳೆರಡು ಸರಕಾರದವರ ಕಡಿಗಿದ್ದವು. ಮುಂದೆ ಸರಕಾರದವರು ನವಾಬನ ಹೆಸರನ್ನು ಉತ್ತಮ ಪ್ರತಿಯ ಸರದಾರರೊಳಗೆ (೧ನೇ ಪ್ರತಿ ಸರದಾರರಲ್ಲಿ) ಎಣಿಸಿ ಕೆಲವು ದಿವಾಣೀ, ಫೌಜದಾರೀ ಅಧಿಕಾರಗಳನ್ನು ಕೊಟ್ಟರು.

ಮುನವರಖಾನನು ಸನ್೧೮೬೭ನೇ ಇಸವಿಯಲ್ಲಿಯ ಅಗಷ್ಟ ತಿಂಗಳ ೧೭ನೇ ತಾರೀಖಿಗೆ ಮೃತಪಟ್ಟನು. ಆಗ್ಗೆ ಖಾನನ ಪತ್ನಿಯು ಗರ್ಭಿಣಿ ಯಿದ್ದಳು. ತರುವಾಯ ಹೆತ್ತು ಹೆಂಗೂಸಾದ್ದರಿಂದ ಕೈಲಾಸವಾಸೀ ನವಾಬನ ಬಂಧುವಾದ ಅಬ್ದುಲ ದಲೇರಖಾನನನ್ನು ನವಾಬನಾಗಿ ಮಾಡಿದರು. ದಲೇಲಖಾನನು ಉತ್ತಮ ಶಿಕ್ಷಣದವನಿದ್ದು ಬುದ್ಧಿಯಿಂದ ಸ್ವಭಾವತಃ ತೀಕ್ಷ್ಣನಿದ್ದನು. ಈ ನವಾಬನ ಸ್ನೇಹವು ಯಾರಿಗೆಇತ್ತೋ ಅವರು ಇದುವರೆಗೂ ಇವನ ವರ್ಣನೆಯನ್ನು ಮಾಡುತ್ತಾರೆ. ಇವನು ತನ್ನ ಈ ಸಣ್ಣ ಸಂಸ್ಥಾನದ ಶೀಮೆಗಳ ವ್ಯವಸ್ಥೆಯನ್ನು ಬಹು ಉತ್ತಮತರದಿಂದ ಇಟ್ಟಿದ್ದರಿಂದ ಸರಕಾರದಿಂದ ಅವನಿಗೆ ಬಹಳ ಪ್ರಶಂಸೆಯು ದೊರೆಯಿತು. ಸನ್೧೮೫೭ನೇ ಇಸವಿಯಲ್ಲಿ ಕರ್ನಾಟಕದೇಶದಲ್ಲಿ ಭೀಮರಾವ ಮುಂಡರಗಿ ಮತ್ತು ಸ

ಶಿಗೊಂದಕರ ಈ ಉಭಯತರು ಬಂದುಮಾಡಿದರು. ಆಗ್ಯೆ ನವಾಬನು ಸ್ವಲ್ಪ್ವಾದರೂ ಅವರಲ್ಲಿ ಕೂಡವೆ ಬಹು ಸಾವಧತೆಯಿಂದ ತಾನೊಬ್ಬನೇ ಇದ್ದನು. ಆಗ್ಯೆ ಸಂನ ೧೮೫೭ನೇ ಇಸ್ವಿಯಲ್ಲಿ ಫೌಜದಾರಿಯ ಸರ್ವ ಅಧಿಕಾರವನ್ನು ಕೊಟ್ಟರು. ಹಾಗು ಸಂಸ್ಥಾನದಲ್ಲಿಯ ಖೂನೀಖಟ್ಲೆಯನ್ನು ಗೊತ್ತುಹಚ್ಚಿ ಶಿಕ್ಷೆಕೊಡುವ ಅಧಿಕಾರವನ್ನಾದರೂ ಕೊಟ್ಟರು. ಈ ಅಧಿಕಾರವನ್ನು ನವಾಬನು ಬಹು ಯೋಗ್ಯರೀತಿಯಿಂದ ನಡಿಸಿದ್ದರಿಂದ ಮುಂದೆ ೩ ವರ್ಷದಲ್ಲಿ ದಿವಾಣೀ ಸಂಬಂಧದ ಪೂರ್ಣ ಅಧಿಕಾರವನುಸಹ ಕೊಟ್ಟರು. ಸಂನ ೧೮೬೨ನೇ ಇಸವಿಯಲ್ಲಿ ಈ ದಲೇಲಖಾನನನ್ನು ಮುಂಬಯಿಯ ಕಾಯದೇ ಕೌನ್ಸಲಿನಲ್ಲಿ ಮೆಂಬರನಾಗಿ ನೇಮಿಸಿದರು. ಈ ಕಾಲಕ್ಕೆ ನವಾಬನಿಗೆ ಸುಮಾರು ೫೫ವರ್ಷಗಳಾಗಿದ್ದವು. ಈ ಪ್ರಕಾರ ಅವನು ಎಲ್ಲರಿಂದ ಎಲ್ಲತರದ ವ್ಯವಸ್ಥೆಯಿಂದ ಶಹಬಾಸವನ್ನು ಪಡೆದು, ತನ್ನ ಸಂಸ್ಥಾನದಲ್ಲಿ ದೊಡ್ಡ ಯೋಗ್ಯತೆಗೆಬಂದು ಸಂನ ೧೮೬೩ನೇ ಇಸವಿಯಲ್ಲಿ ಮರಣಹೊಂದಿದನು. ಇವನ ಹಿಂದೆ ಇವನ ಹಿರೇಮಗನಾದ ಅಬ್ದುಲ ಖೈರಖಾನನು ಗಾದಿಯ ಬಾಧ್ಯನಾದನು. ಇವನಲ್ಲಿ ತಂದೆಯ ಗುಣಗಳಿರಲಿಲ್ಲ. ಸರ್ವಕಾಲದಲ್ಲೂ ವ್ಯಸನದಲ್ಲಿದ್ದು ಸಂಸ್ಥಾನದ ವ್ಯವಸ್ಥೆಯನ್ನು ನೆಟ್ಟಗೆ ಇಡಲಿಲ್ಲ. ಮುಂದೆ ಅವನು ಸನ್ನ ೧೮೬೮ನೇ ಇಸವಿಯಲ್ಲಿ ತೀರಿಕೊಂಡನು. ಆಗ್ಯೆ ಚಿರಂಜೀವ ಅಬ್ದುಲ ದಲೇಲಖಾನ ಇವರು ೩ವರ್ಷದವರಿದ್ದರು. ಕಾರಣ ಇವರನ್ನು ಗಾದಿಯಮೇಲೆ ಮಾತ್ರ ಕೂಡಿಸಿ ಸಂಸ್ಥಾನದ ಸರ್ವಕಾರಭಾರದ ವ್ಯವಸ್ಥೆಯನ್ನು ಧಾರವಾಡ ಕಲೇಕ್ಟರ ದೊರೆಗಳಕಡೆಗೆ ಕೊಟ್ಟರು. ದಲೇಲಖಾನ ನವಾಬಸಾಹೇಬರನ್ನು ಮೊದಲು ಧಾರವಾಡದಲ್ಲಿ ವಿದ್ಯಾಭ್ಯಾಸ

ಪ್ರೊಫೆಸ್ಸರ ಇಟ್ಟಿದ್ದರು. ತರುವಾಯ ರಾಜಕೋಟೆಗೆ ರಾಜಕುಮಾರ ಕಾಲೇಜಕ್ಕೆ ಕಳುಹಿಸಿದರು. ಹಾಗು ಸಂಸ್ಥಾನದ ವ್ಯವಸ್ಥೆಗಾಗಿ ಒಬ್ಬ ದಿವಾಣನನ್ನು ನೇಮಿಸಿ, ಕೈಲಾಸವಾಸೀ ನವಾಬಸಾಹೇಬರ ಬಂಧುಗಳಿಗೆ ಮ್ಯಾಜಿಸ್ಟ್ರೇಟದ ಅಧಿಕಾರವನ್ನು ಕೊಟ್ಟರು.

ಅಬ್ದುಲಖಲೀಖಾನ ನವಾಬಸಾಹೇಬರು ಹಲವು ದಿವಸಗಳವರಿಗೆ ರಾಜಕುಮಾರ ಕಾಲೇಜದಲ್ಲಿದ್ದು ಚೆಂನಾಗಿ ಅಭ್ಯಾಸಮಾಡಿ ಜಾಗ್ರತೆಯನ್ನು ಹೊಂದಿ, ಹಲವು ಮಂದಿ ರಾಜಕುಮಾರರ ಸ್ನೇಹಗಳಿಸಿ ರಾಜಕಾರಭಾರದ ಸರ್ವ ಉಪಕ್ರಮವನ್ನೂ, ತಾರತಮ್ಯವನ್ನೂ ಮನವರಿಕೆ ಮಾಡಿಕೊಂಡು, ವರಿಷ್ಠಾಧಿಕಾರಿಗಳ ಅಂತಃಕರಣವನ್ನು ಸಂಪಾದಿಸಿ, ಸ್ವಂತಜ್ಞಾನ ವಿಚಾರದಿಂದ ನ್ಯಾಯಪಕ್ಷಪಾತ, ವಿದ್ಯಾಪಕ್ಷಪಾತ, ದೇಶಪಕ್ಷಪಾತ, ಮುಂತಾದ ರಾಜ್ಯರಕ್ಷಣ ಗುಣಾಂಗಗಳಿಂದ ಪರಿಪೂರ್ಣತ್ವವನ್ನು ಪಡೆದವರಾದರು.

ಈಗ್ಗೆ ದಲೀಲಖಾನ ನವಾಬಸಾಹೇಬರು ಅಧಿಕಾರವನ್ನು ಸಾಗಿಸುವಷ್ಟು ಸ್ವಂತಬುದ್ಧಿಗಳೂ, ಚತುರರೂ ಆದದ್ದನ್ನು ತಿಳಿದು, ಸರಕಾರದಲ್ಲಿ ನವಾಬಸಾಹೇಬರಿಗೆ ಅಧಿಕಾರ ಕೊಡಬೇಕೆಂಬ ವಿಷಯವಾಗಿ ಸ್ವಲ್ಪ ದಿವಸದಕೆಳಗೆ ವಿಚಾರನಡಿದು ಮೊನ್ನೆ ಸನ ೧೮೮೩ನೇ ಇಸವಿಯ ಜೂನತಿಂಗಳ ೧೩ನೇ ತಾರೀಖಿನಲ್ಲಿ ಈ ಬಗ್ಗೆ ಸಂಸ್ಥಾನದಲ್ಲಿ ಮಹಾಸಮಾರಂಭ ವಾಯಿತು. ಸಮಾರಂಭ ಸಾಂಗೋಪಾಂಗಕ್ಕಾಗಿ ಮೇಹರಬಾನ ಕ್ರಾಫರ್ಡ ಸಾಹೇಬ ದಕ್ಷಿಣಭಾಗ ಕಮಿಶನರ ಪ್ರಭುಗಳ ಹಾಗೂ ಜಿಲ್ಹಾಧಿಕಾರೀ ಮಿಡಲ್ಟನ್ನ ಕಲೇಕ್ಟರ ಧೊರೆಗಳವರ ಆಗಮನವಾಗಿತ್ತು. ಕಮಿಶನರ ಧೊರೆಗಳು ಆಗ್ಗೆ ಪ್ರಥಮತಃ;

ಸಂಸ್ಥಾನದ ಪ್ರಾಚೀನ, ಸಾಂಪ್ರತಸ್ಥಿತಿಯ ವಿಷಯದಲ್ಲೂ, ದಲೇಲಖಾನ ನವಾಬಸಾಹೇಬರ ಪೂರ್ವಜರ ಹಾಗೂ ಅವರ ಸ್ವಾತ್ಯರಾಜ ನಿಷ್ಠಾಗುಣ, ರಾಜ್ಯಪಾಲನ ಗುಣಮುಂತಾದ ಸ್ವಭಾವಗುಣಗಳ ವಿಷಯವಲ್ಲೂ ಸ್ವಲ್ಪದರಲ್ಲಿ ಮನೋಪೇಕ್ಷಕವರ ಸಂಭಾಷಣೆ ಮಾಡಿದರು. ಹಾಗು ಸಾಂಪ್ರತದ ಸಮಾರಂಭಕ್ಕೆ ಕಾರಣೀಭೂತರಾದ ದಲೇಲಖಾನ ನವಾಬಸಾಹೇಬರು ಸ್ವತಃ ದಕ್ಷರೂ ವಿಚಾರಿಗಳೂ, ಅಧಿಕಾರಗುಣಗಳೂ ಇದ್ದ ಸ್ವಬುದ್ಧಿಯಿಂದ ಪ್ರಜೆಗಳನ್ನು ನ್ಯಾಯದಿಂದ ಹಿತವಾಗಿ ಪರಿಪಾಲನೆ ಮಾಡುವಷ್ಟು ಪೂರ್ಣ ಅಂಗಸಾಮರ್ಥ್ಯ ಉಳ್ಳವರಾಗಿದ್ದಾರೆಂದು ನಮಗೆ ಪೂರ್ಣ ಖಾತ್ರಿಯಾದದ್ದರಿಂದ, ಬಹಳ ಸಂತೋಷದಿಂದ ನಾವು ಈಗ ಈ ಮಹತ್ವದ ಅಧಿಕಾರವನ್ನು ಅವರಿಗೆ ಒಪ್ಪಿಸಿದ್ದೇವೆ. ಇನ್ನು ಮುಂದೆ ಇದರಂತೆ ನವಾಬಸಾಹೇಬರು ಸರಕಾರನಿಷ್ಠೆಯಿಂದ, ಪ್ರಜಾಪ್ರೀತಿಯಿಂದ ಕಾರಭಾರವನ್ನು ನಡಿಸಿ, ಸರ್ವಮಾನ್ಯರಾಗಿ ಬೇಗನೇ ಒಳ್ಳೇ ಶಾಬಾಸವನ್ನು ಗಳಿಸಿ ಇನ್ನೂ ಮಹತ್ವದ ಯೋಗ್ಯತೆಯನ್ನು ಹೊಂದ್ಯಾರೆಂದು ನಮ್ಮ ಪೂರ್ಣ ಅಭಿಲಾಷೆಯಿದೆ. ಎಂದು ಪರಮಾದರದಿಂದ ಮುದ್ರೆಯ ಉಂಗರವನ್ನು ಇತ್ತವರಾದರು. ನವಾಬಸಾಹೇಬರಾದವರೂ ಬಹು ಆದರ ವಿನಯಗಳಿಂದ ಅಂದದ್ದು— ಸರಕಾರದವರ ಪೂರ್ಣ ಅಂತಃಕರಣದಿಂದ ಇಂದಿನ ಈ ಶುಭ ಕಾಲದಲ್ಲಿ ನನಗೆ ಈ ಅಧಿಕಾರವು ಪ್ರಾಪ್ತವಾಯಿತು. ಈ ಅಧಿಕಾರವು ಒಳ್ಳೇ ಮಹತ್ವದ್ದು, ಬಹು ಭಾರವಾದದ್ದೂ ಉಂಟು ಇದರೂ ಈಗಿನ ಈ ಶುಭ ಸಮಾರಂಭಕ್ಕೆ ಕಾರಣೀಭೂತರಾಗಿದ್ದ ಸರಕಾರದವರ ಹಾಗು ಧೊರೆಗಳ ಪೂರ್ಣ ಅಂತಃಕರಣ ಸಹಾಯಗಳಿಂದ ಇದು ನನಗೆ ಅಷ್ಟೊಂದು ಭಾರವಾಗಲಿಕ್ಕಿಲ್ಲ

ಇದುವರಿಗೆ ನಂನನ್ನು ಪ್ರೀತಿಯಿಂದ ರಕ್ಷಿಸಿ ಬೆಂಬಲವಾಗಿದ್ದ ಸರಕಾರವು ಮುಂದಾದರೂ ಬೆಂಬಲ ವಾಗುವದೆಂದು ನಂಬಿ ಆಶೆಯುಳ್ಳವನಾಗಿ ಬಹಳ ಧೈರ್ಯ ಸಂತೋಷಗಳಿಂದ ನಾನು ಇಂದಿನಿಂದ ಈ ಮಹತ್ವಾಧಿಕಾರವನ್ನು ವಹಿಸಿದ್ದೇನೆ. ಮತ್ತು ಧೊರೆಗಳವರ ಹಾಗು ಈ ಎಲ್ಲ ಸಭಾಸದರ ಪೂರ್ಣ ಆಭಾರಿ ಇದ್ದೇನೆ ಎಂದು ಸಂಭಾಷಣ ಮಾಡಿದರು.

ಸರಕಾರದವರು ಸಂಸ್ಥಾನದ ಕಾರಭಾರೀಕೆಲಸಕ್ಕಾಗಿ ರಾವಸಾ. ದಿನಕರಪಂತ ಕಾಳೆ ಇವರನ್ನು ನೇಮಿಸಿದ್ದಾರೆ. ಕಾಳೆ ಇವರು ಸುಸ್ವಭಾವಗುಣಗಳೂ, ದಕ್ಷರೂ, ರಾಜನಿಷ್ಠಗಳೂಉಂಟು. ನವಾಬಸಾಹೇಬರಾದರೂ ನ್ಯಾಯ ವಿದ್ಯಾದೇಶ ಪಕ್ಷಪಾತ್ರಗುಣಗಳೂ, ಕರುಣಾಶಾಲಿಗಳೂ, ದೇಶೋಪಕಾರಿಗಳೂ ಇದ್ದಾರೆ. ಮತ್ತು ಇವರು ಈ ಪ್ರಸಂಗೋಚಿತವಾದ ರಾಜಭಾಷಾಜ್ಞಾನ (ಇಂಗ್ಲಿಷ ಭಾಷೆ) ನಿಪುಣರಾದವರು ಇರುವರು. ನವಾಬಸಾಹೇಬರ ಹಾಗೂ ಕಾಳೆಇವರ ಐಕ್ಯತ್ವದಿಂದ, ಸದ್ಧರ್ಮದಿಂದ, ಸರಕಾರ ನಿಷ್ಠೆಯಿಂದ ಲೋಕಹಿತವಾಗುವಂತೆ ನ್ಯಾಯನೀತಿಯಿಂದ ರಾಜ್ಯಕಾರಭಾರವು ನಡೆದು ದೇಶವು ಊರ್ಜಿತ ಸ್ಥಿತಿಯನ್ನು ಹೊಂದಿ, ದೇಶವಾಸಿಗಳೆಲ್ಲರು ಚಿರಕಾಲ ಹಾದಿ ಹರಿಸುವಂತೆ ನವಾಬಸಾಹೇಬರ ಆಳುವಿಕೆಯು ಸ್ಥಿರವಾಗಲೆಂದು ದೇಶಾಭಿಮಾನಿಗಳಾದ ನಾವೆಲ್ಲರೂ ವಿಜಯಲಕ್ಷ್ಮೀಶನಿಗೆ ದಿನಾಲು ಇಷ್ಟೇ ಪ್ರಾರ್ಥಿಸತಕ್ಕದ್ದು.

ಧಾರವಾಡ ೪ನೇ ನಂಬರಶಾಳಾ } ತಿಮ್ಮಾನಂದ ಯಜ್ಞೇಶ್ವರ ವಾ
ತಾ. ೨೮।೬।೧೯೪೩ ಇಸ್ವಿ. } ಜಿಷೆ ದೇಶಾಭಿಮಾನಿ.

ಸಮಾಪ್ತ

— ೦ —

ಹಿಂಸ್ಪುರಿಗೆಯಲ್ಲಿ ಹೊಸ ಲಾಯಬ್ರರಿ ಸ್ಥಾಪನವಾದ ಸಂಬಂಧದಿಂದ ಗೋವಿಂದ ಗೋಪೀನಾಥ ಹೆಡ್ಡಮಾಸ್ತರ ಇವರು ಓದಿದನಿಬಂಧವು—

ವರ್ತಮಾನಪತ್ರಗಳನ್ನೂ, ಉಪಯುಕ್ತಗ್ರಂಥಗಳನ್ನೂ ಸಂಗ್ರಹಿಸಿಟ್ಟು, ಊರೊಳಗಿನ ಯಾವತ್ತು ಸಮಂಜಸ ಜನರಿಗೆ ಅಡ್ಡಿಇಲ್ಲದೇ ಬಂದು ಜ್ಞಾನವನ್ನು ಹೆಚ್ಚಿಸುವದಕ್ಕೆ ಗೊತ್ತು ಪಡಿಸಿದಸ್ಥಳಕ್ಕೆ ಲಾಯಬ್ರರಿ ಅನ್ನಬೇಕು. ಇಂಥಾ ಲಾಇಬ್ರರಿಗಳು ನಮ್ಮ ದೇಶದಲ್ಲಿ ಇರತಕ್ಕ ಅವಶ್ಯವಿರುತ್ತದೆ. ಪೂರ್ವದಲ್ಲಿ ನಮ್ಮ ದೇಶದೊಳಗೆ ಲಾಇಬ್ರರಿಯಂಥ ಸಾಧನಗಳು ಇದ್ದಿದ್ದಿಲ್ಲೆಂಬುವದಿಷ್ಟೇಅಲ್ಲ; ಆದರೆ ವರ್ತಮಾನ ಪತ್ರಗಳೆಂದರೇನು ಎಂಬುವದುಸಹ ನಮ್ಮ ಪ್ರಾಚೀನಜನರಿಗೆ ಗೊತ್ತಿದ್ದಿಲ್ಲ; ಸಂಸ್ಕೃತಭಾಷಾ ಭಾಂಡಾರದಲ್ಲಿ ಯಷ್ಟೋ ಉಪಯುಕ್ತಗ್ರಂಥಗಳಿದ್ದಾಗ್ಯೂ, ಅವುಗಳ ಉಪಯೋಗವು ನಮ್ಮ ಜನರ ಸ್ವಾರ್ಥಸಾಧಕ ಸ್ವಭಾವದಿಂದ ಆಗತಕ್ಕಷ್ಟು ಆಗಲಿಲ್ಲ; ನಮ್ಮ ದೇಶದಲ್ಲಿ ಹಲವರು ಅಪ್ರತಿಮ ಪಂಡಿತರು ಆಗಿಹೋದರು. ಮತ್ತು ಅವರಹತ್ತರ ಅನೇಕ ಉಪಯುಕ್ತಗ್ರಂಥಗಳ ಸಂಚಯವಾದದ್ದೂಇತ್ತು. ಆದರೆ ಅವುಗಳನ್ನು ತಾವೇಉಪಯೋಗಿಸಿದರೇಹೊರ್ತು, ಎರಡನೇಯವರ ದೃಷ್ಟಿಗೆಸಹಾ ಬೀಳಗೊಡಲಿಲ್ಲ; ಅವರ ಇಂಥಸ್ವಭಾವದಿಂದ ಜನರ ಉಪಯುಕ್ತಜ್ಞಾನವು ಹೆಚ್ಚಾಗಲಿಲ್ಲ. ಮತ್ತು ಶಾಸ್ತ್ರದಲ್ಲಿರುವ ಗೂಢವಿಷಯಗಳು ಜನರಿಗೆ ತಿಳಿಯಲಿಲ್ಲ; ಇದಲ್ಲದೇ ಬಹಳಮಹತ್ವವಾದ ಗ್ರಂಥಗಳು ನಾಶಹೋದವು, ಆದದರಿಂದ ನಮ್ಮ ಜನರಜ್ಞಾನವು ವೃದ್ಧಿಯಾಗದೇ ದಿನದಿನಕ್ಕೆ ಕಡಿಮೆಯಾಗುತ್ತಹೋಗಿ ಕ

ಇದುವರಿಗೆ ನಂನನ್ನು ಪ್ರೀತಿಯಿಂದ ರಕ್ಷಿಸಿ ಬೆಂಬಲವಾಗಿದ್ದ ಸರಕಾರವು ಮುಂದಾದರೂ ಬೆಂಬಲ ವಾಗುವದೆಂದು ನಂಬಿ ಆಶೆಯುಳ್ಳವನಾಗಿ ಒಳ್ಳೇ ಧೈರ್ಯ ಸಂತೋಷಗಳಿಂದ ನಾನು ಇಂದಿನಿಂದ ಈ ಮಹತ್ವಾಧಿಕಾರವನ್ನು ವಹಿಸಿದ್ದೇನೆ. ಮತ್ತು ಧೊರೆಗಳವರ ಹಾಗು ಈ ಎಲ್ಲ ಸಭಾಸದರ ಪೂರ್ಣ ಆಭಾರಿಯಿದ್ದೇನೆ ಎಂದು ಸಂಭಾಷಣ ಮಾಡಿದರು.

ಸರಕಾರದವರು ಸಂಸ್ಥಾನದ ಕಾರಭಾರೀಕೆಲಸಕ್ಕಾಗಿ ರಾವಸಾ. ದಿನಕರವಂತ ಕಾಳೆ ಇವರನ್ನು ನೇಮಿಸಿದ್ದಾರೆ. ಕಾಳೆ ಇವರು ಸುಸ್ವಭಾವಗುಣಗಳೂ, ದಕ್ಷರೂ, ರಾಜನಿಷ್ಠೆಗಳೂಉಂಟು. ನವಾಬಸಾಹೇಬರಾದರೂ ನ್ಯಾಯ ವಿದ್ಯಾದೇಶ ಪಕ್ಷಪಾತಗುಣಗಳೂ, ಕರುಣಾಶಾಲಿಗಳೂ, ದೇಶೋಪಕಾರಿಗಳೂ ಇದ್ದಾರೆ. ಮತ್ತು ಇವರು ಈ ಪ್ರಸಂಗೋಚಿತವಾದ ರಾಜಭಾಷಾಜ್ಞಾನ (ಇಂಗ್ಲಿಷಭಾಷೆ) ನಿಪುಣರಾದವರು ಇರುವರು. ನವಾಬಸಾಹೇಬರ ಹಾಗೂ ಕಾಳೆಇವರ ಐಕ್ಯತ್ವದಿಂದ, ಸದ್ಧರ್ಮದಿಂದ, ಸರಕಾರ ನಿಷ್ಠೆಯಿಂದ ಲೋಕಹಿತವಾಗುವಂತೆ ನ್ಯಾಯನೀತಿಯಿಂದ ರಾಜ್ಯಕಾರಭಾರವು ನಡಿದು ದೇಶವು ಊರ್ಜಿತ ಸ್ಥಿತಿಯನ್ನು ಹೊಂದಿ, ದೇಶವಾಸಿಗಳೆಲ್ಲರು ಚಿರಕಾಲ ಹಾಡಿ ಹರಿಸುವಂತೆ ನವಾಬಸಾಹೇಬರ ಆಳುವಿಕೆಯು ಸ್ಥಿರವಾಗಿರಲೆಂದು ದೇಶಾಭಿಮಾನಿಗಳಾದ ನಾವೆಲ್ಲರೂ ವಿಜಯಲಕ್ಷ್ಮೀಶನಿಗೆ ದಿನಾಲು ಇಷ್ಟೇ ಪ್ರಾರ್ಥಿಸತಕ್ಕದ್ದು.

ಧಾರವಾಡ ೪ನೇ ನಂಬರಶಾಳಾ } ಶಿವಾನಂದ ಯಜ್ಞೇಶ್ವರ ಮಾ
ತಾ. ೨೮|೬|೮೩ಇಸ್ವಿ. } ಜಿವೆ ದೇಶಾಭಿಮಾನಿ.

ಸಮಾಪ್ತ

— ೧ —

ಹಿಂಸ್ಕಾರಿಗೆಯಲ್ಲಿ ಹೊಸ ಲಾಯಬ್ರರಿ ಸ್ಥಾಪನಮಾಡಿದ
ಸಂಬಂಧದಿಂದ ಗೋವಿಂದ ಗೋಪೀನಾಥ ದೆ
ಡ್ಡಮಾಸ್ತರ ಇವರು ಓದಿದನಿಬಂಧವು—

ವರ್ತಮಾನಪತ್ರಗಳನ್ನೂ, ಉಪಯುಕ್ತಗ್ರಂಥಗಳನ್ನೂ ಸಂಗ್ರಹಿಸಿಟ್ಟು, ಊರೊಳಗಿನ ಯಾವತ್ತು ಸಮಂಜಸ ಜನರಿಗೆ ಅಡ್ಡಿಯಿಲ್ಲದೇ ಬಂದು ಜ್ಞಾನವನ್ನು ಹೆಚ್ಚಿಸುವದಕ್ಕೆ ಗೊತ್ತು ಪಡಿಸಿದಸ್ಥಳಕ್ಕೆ ಲಾಯಬ್ರರಿ ಅನ್ನಬೇಕು. ಇಂಥಾ ಲಾಇಬ್ರರಿಗಳು ನಮ್ಮ ದೇಶದಲ್ಲಿ ಇರತಕ್ಕ ಅವಶ್ಯವಿರುತ್ತದೆ. ಪೂರ್ವದಲ್ಲಿ ನಮ್ಮ ದೇಶದೊಳಗೆ ಲಾಇಬ್ರರಿಯಂಥ ಸಾಧನಗಳು ಇದ್ದಿದ್ದಿಲ್ಲೆಂಬುವದಿಷ್ಟೇಅಲ್ಲ; ಆದರೆ ವರ್ತಮಾನ ಪತ್ರಗಳಂದರೇನು ಎಂಬುವದುಸಹ ನಮ್ಮ ಪ್ರಾಚೀನಜನರಿಗೆ ಗೊತ್ತುಇದ್ದಿಲ್ಲ; ಸಂಸ್ಕೃತಭಾಷಾ ಭಾಂಡಾರದಲ್ಲಿ ಯೆಷ್ಟೋ ಉಪಯುಕ್ತಗ್ರಂಥಗಳಿದ್ದಾಗ್ಯೂ, ಅವುಗಳ ಉಪಯೋಗವು ನಮ್ಮ ಜನರ ಸ್ವಾರ್ಥ ಸಾಧಕ ಸ್ವಭಾವದಿಂದ ಆಗತಕ್ಕಷ್ಟು ಆಗಲಿಲ್ಲ; ನಮ್ಮ ದೇಶದಲ್ಲಿ ಹಲವರು ಅಪ್ರತಿಮ ಪಂಡಿತರು ಆಗಿಹೋದರು. ಮತ್ತು ಅವರಹತ್ತರ ಅನೇಕ ಉಪಯುಕ್ತಗ್ರಂಥಗಳ ಸಂಚಯಮಾದರೂಇತ್ತು. ಆದರೆ ಅವುಗಳನ್ನು ತಾವೇಉಪಯೋಗಿಸಿದರೇಹೊರ್ತು, ಎರಡನೇಯವರ ದೃಷ್ಟಿಗೆಸಹಾ ಬೀಳಗೊಡಲಿಲ್ಲ; ಅವರ ಇಂಥಸ್ವಭಾವದಿಂದ ಜನರ ಉಪಯುಕ್ತಜ್ಞಾನವು ಹೆಚ್ಚಾಗಲಿಲ್ಲ. ಮತ್ತು ಶಾಸ್ತ್ರದಲ್ಲಿರುವ ಗೂಢವಿಷಯಗಳು ಜನರಿಗೆ ತಿಳಿಯಲಿಲ್ಲ; ಇದಲ್ಲದೇ ಒಳ್ಳೇಮಹತ್ವವಾದ ಗ್ರಂಥಗಳು ಮಾಜಿಹೋದವು. ಆದದರಿಂದ ನಮ್ಮ ಜನರಜ್ಞಾನವು ವೃದ್ಧಿಯಾಗದೇ ದಿನದಿನಕ್ಕೆ ಕಡಿಮೆಯಾಗುತ್ತಹೋಗಿ ಕ

ಈಗ ಜನರಿಗೆ ಸಂಸ್ಕೃತಭಾಷೆಯುಸಹಾ ಅಜ್ಞಾತವಾಯಿತು.
ಆದುದರಿಂದ ನಮಗೆ ಈಗಿರುವ ನಿಕೃಷ್ಟಾವಸ್ಥೆ ಪ್ರಾಪ್ತವಾಯಿತೆಂ
ದು ಹೇಳಗೊಳ್ಳುತ್ತೇವೆ. ಇಂಗ್ಲಿಷಸರಕಾರದ ಆಳಿಕೆಯಲ್ಲಿ ಅ
ಲ್ಲಲ್ಲಿ ಲಾಯಬ್ರರಿಗಳೂ, ಶಾಲೆಗಳೂ, ಸ್ಥಾಪನವಾಗಿ ಮೆಲ್ಲಮೆ
ಲ್ಲನೇ ಜ್ಞಾನವು ಜನರಿಗೆ ಪ್ರಾಪ್ತಿಯಾಗುತ್ತನಡೆದದೆ. ಆದಾ
ಗ್ಯೂ ಇನ್ನೂ ನಮ್ಮ ಎಷ್ಟೋ ಹಳ್ಳಿಗಾಡಜನರಿಗೆ ಲಾಯಬ್ರರಿ
ಯೆಂದರೇನು? ಅದರ ಉಪಯೋಗವೇನು? ಮತ್ತು ವರ್ತಮಾ
ನಪತ್ರಗಳೆಂದರೇನು? ಅವುಗಳಉಪಯೋಗವೇನು? ಎಂಬುವ
ದು ಗೊತ್ತಿಲ್ಲದೇ ಇದ್ದದ್ದು ಸೋಜಿಗವಲ್ಲ; ವರ್ತಮಾನಪ
ತ್ರಗಳೆಂದರೆ — ದೇಶದೊಳಗೂ ಸರಕಾರದಲ್ಲಿಯೂ ನಡೆಯುವ
ಕೆಲಸವನ್ನು ತಿಳುಕೊಳ್ಳುವ ಸಾಧನವು. ಇದರಿಂದ ಯಾವದೇ
ಶದಲ್ಲಿ ಯೇನುಕಾರಖಾನೆಗಳುನಡೆಯುತ್ತವೆ. ವ್ಯಾಪಾರದಲ್ಲಿ
ಯೇನುಹೆಚ್ಚುಕಡಿಮೆಯಾಗುತ್ತಿರುತ್ತದೆ ಮತ್ತು ಯಾವದೇಶದಲ್ಲಿ
ಮಳೆ, ಬೆಳೆಹ್ಯಾಗೆಆಗಿರುತ್ತದೆ. ಈ ಮುಂತಾದಸಂಗತಿಗಳು ತ
ಪ್ಪದೇ ಗೊತ್ತುಪಡಿಸಿದವನು ಸಹಜವಾಗಿ ತಿಳಿಯುತ್ತದೆಂಬದ
ಷ್ಟೇಅಲ್ಲ; ಆದರೆ ಸರಕಾರದಲ್ಲಿ ಯಾವ ವಿಷಯದಮೇಲೆ ಚ
ರ್ಚನಡೆಯುತ್ತದೆಂಬುವದು ಸಹಾ ತಿಳಿಯುತ್ತದೆ. ಸರಕಾರದಲ್ಲಿ
ನಡೆದ ಕೆಲಸಗಳಲ್ಲಿ ರೈತಜನರ ಲಾಭನುಕಸಾನಗಳ ಸಂಬಂಧ
ವು ವಿಶೇಷವಿರುತ್ತದೆ. ಮತ್ತು ಅವುಗಳು ವರ್ತಮಾನಪತ್ರದ್ವಾ
ರದಿಂದಅಲ್ಲದೆ, ಎರಡನೇಬಗೆಯಿಂದ ತಿಳುಕೊಳ್ಳುವ ಸಾಧನ
ವಿಲ್ಲ; ಆದ್ದರಿಂದ ವರ್ತಮಾನಪತ್ರಗಳನ್ನು ಓದೋಣದರಿಂ
ದ ಎಷ್ಟು ಉಪಯೋಗವಸನೋಡಿರಿ! ಈ ವರ್ತಮಾನಪತ್ರದ
ಸಾಧನವಿಲ್ಲದಿದ್ದರೆ, ಮೇಲೆ ವಿವರಿಸಿದ ಜ್ಞಾನವು ಎಷ್ಟುಮಟ್ಟಿ
ಗೂ ಸಿಗುವ ಸಂಭವವಿಲ್ಲ; ನಮ್ಮ ಈ ಜಿಲ್ಹೆಯಲ್ಲಿ ವರ್ತಮಾ

ನಪತ್ರಗಳನ್ನು ಓದಿ, ಅದರೊಳಗಿನ ಉಪಯುಕ್ತವಿಷಯಗಳನ್ನು ತಿಳಿಕೊಳ್ಳುವ ತ್ರಾಣವಿಲ್ಲದ್ದರಿಂದ, ಸ್ವಲ್ಪ ದಿವಸಗಳಕೆಳಗೆ ಪುಣೇ ಸಾರ್ವಜನಿಕಸಭೆಯವರಕಡೆಯಿಂದ ಒಬ್ಬ ಸಭ್ಯಗೃಹಸ್ಥನು ಸ್ಥಾನಿಕಸ್ವರಾಜ್ಯ ಈ ವಿಷಯವನ್ನು ತಿಳಿಸಿಕೊಡುವದಕ್ಕೋಸ್ಕರವಾಗಿ ಈ ಜಿಲ್ಲೆಕ್ಕೆ ಬಂದಿದ್ದನು. ಅವನು ಈ ವಿಷಯವನ್ನು ಚನ್ನಾಗಿತಿಳಿಸಿಕೊಡುವ ಯತ್ನವನ್ನು ಮಾಡಿದಾಗ್ಯೂ ನಮ್ಮೊಳಗಿನ ಎಷ್ಟೋಜನರಿಗೆ ತಿಳಿಯದೇ ಹೋಯಿತು. ಇದು ಎಷ್ಟು ಕುಂದಿನಮಾತು ನೋಡಿರಿ! ಇನ್ನಾದರೂ, ನಮ್ಮಜನರು ಲಾಯಬ್ರರಿಮುಂತಾದ ಸಾಧನಗಳಿಂದ ತಮ್ಮ ಜ್ಞಾನವನ್ನು ಹೆಚ್ಚಿಸಿ, ಎರಡನೇಯವರ ಬಾಯಿಯಿಂದ ನೀರುಕುಡಿಯುವಂತೆ ಮಾಡ್ಯಾರೆಂದು ನನ್ನ ಕೋರಿಕೆಯುಂಟು. ಇದರಮೇಲಿಂದ ವರ್ತಮಾನಪತ್ರಗಳನ್ನು ಓದಿದರಾಯಿತು. ಲಾಯಬ್ರರಿಯಾತಕ್ಕೆ ಬೇಕು? ಅಂತಾ ಕೆಲವು ಜನರು ಅಂದಾರು. ಆದರೆ ಲಾಯಬ್ರರಿ ವಿಶೇಷ ಉಪಯುಕ್ತವಾದದ್ದು; ಯಾಕಂದರೆ — ಹತ್ತತ್ತರಕಲ್ಲಕಡ್ಡಿ ಒಬ್ಬನತಲೆಹೊರೆ ಎಂಬಗಾದಿಯಂತೆ ಪುಷ್ಕಳಜನರ ಸ್ವಲ್ಪ ಸಹಾಯದಿಂದ ಪುಷ್ಕಳ ವರ್ತಮಾನಪತ್ರಗಳನ್ನೂ, ಹಾಗೂ ಪುಸ್ತಕಗಳನ್ನೂ ತರಿಸುವದಕ್ಕೆ ಅನುಕೂಲವಾಗುತ್ತದೆ. ಒಬ್ಬನೇ ತರಿಸಬೇಕಾದರೆ ಅಸಾಧ್ಯವು. ಒಂದು ಸಾಧಾರಣಲಾಯಬ್ರರೀಅಂದರೆ ನೂರಾರು ಉಪಯುಕ್ತ ಗ್ರಂಥಗಳು ಬೇಕು. ಹಾಗೂ ಹತ್ತೂಹನ್ನೆರಡು ವರ್ತಮಾನಪತ್ರಗಳು ಬರುತ್ತಿರಬೇಕು. ಇಷ್ಟುಸಂಗ್ರಹ ಆಗಬೇಕಾದರೆ, ನಿದಾನವರ್ಷಕ್ಕೆ ನೂರು ರೂಪಾಯಿವೆಚ್ಚ ಬೇಕಾಗುವದು. ಇಷ್ಟು ಒಬ್ಬನೇಮಾಡುವ ಯೋಗ್ಯತೆಯು ಈಗಿರುವ ನಮ್ಮ ಹಳ್ಳಿಗಾಡಜನರ ಸ್ಥಿತಿಯಮೇಲಿಂದ ವಿಚಾರಮಾಡಿನೋಡಿದರೆ, ಅಸಾಧ್ಯವೆಂಬುವದು ಸಹ

ಮುಂತಾದ ದೇಶಗಳಲ್ಲಿ ನೂರಕ್ಕೆ ೬೦|೭೦|೮೦ ಪ್ರಮಾಣದಿಂದ ವಿದ್ಯಾಕಲಿತಜನರ ಸಂಖ್ಯೆಯು ಹೊರಡುತ್ತದೆ, ಆದರೆ ನಮ್ಮಲ್ಲಿ ಇದರಮಾನದಿಂದ ಹೊರಡುವದು ಅಪರೂಪ. ಅಂದಮೇಲೆ ನಮ್ಮ ಜನರಲ್ಲಿ ವಿದ್ಯೆಯು ಎಷ್ಟುಪಸರಿಸಿದೆ ಯೆಂಬದು ಮೇಲೆಯೇ ಕಾಣುತ್ತದೆ. ಇದಕ್ಕಾಗಿ ನಮ್ಮ ದಯಾಳು ಸರಕಾರದವರು ದೇಶದಲ್ಲಿ ವಿದ್ಯಾಪ್ರಸಾರವಾಗಬೇಕೆಂದು ಹಳ್ಳಿಹಳ್ಳಿಗಳಲ್ಲಿ ಸಹ ಶಾಲೆಗಳನ್ನು ಸ್ಥಾಪಿಸಿರುತ್ತಾರಷ್ಟೇ. ಆದರೆ ಜನರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳಿಸುವದಿಲ್ಲ. ಎಂಥ ಸುಧಾರಿಸಿದ ಶಾಲೆಯೊಳಗಾಗಲೀ, ಎಂಥ ಹುಷಾರ ಮಾಸ್ತರವಿದ್ದ ಶಾಲೆಯೊಳಗಾಗಲೀ, ಊರಜನರ ಸಂಖ್ಯೆಯಮಾನದಿಂದ ೫|೬|೭|೮ರ ಪ್ರಮಾಣಕ್ಕೆ ಸರಿಯಾಗಿರಬೇಕಾದರೆ ಬಹು ಪ್ರಯಾಸವು. ಇಷ್ಟು ಆಗಬೇಕಾದರೂ ಸಹ ನಮ್ಮ ದಯಾಳು ಅಧಿಕಾರಿಗಳೂ ಎಷ್ಟು ಶ್ರಮವನ್ನೂ, ಸಹಾಸವನ್ನೂ ಮಾಡುತ್ತಿದ್ದಾರೆ? ಮತ್ತು ನಮ್ಮ ಮಾಸ್ತರರು ಎಷ್ಟು ಮೇಹನತವನ್ನೂ, ಪ್ರಯತ್ನವನ್ನೂ ಮಾಡಿದ್ದಾರೆ, ವ ಮಾಡುತ್ತಿದ್ದಾರೆ? ನೋಡಿರಿ, ಇಷ್ಟಾದರೂ ನೆಲಗದೆ ಇಲ್ಲ. ಇನ್ನೂ ಎಷ್ಟೋ ಹಳ್ಳಿಗಳಲ್ಲಿ ವಿದ್ಯದ ಹೆಸರಿನಿಂದ ದೊಡ್ಡದೊಂದು ಬಂಡಿಗಾಲಿಯಂಥ ಪ್ರಾಚೀ ಇದ್ದು ಅಜ್ಞಾನಾಂಧಕಾರವು ಜನರನ್ನು ಮುಚ್ಚಿಕೊಂಡದೆ. ಈ ಜನರಿಗೆ ಎಲ್ಲಾ? ನಿಮ್ಮ ಮಕ್ಕಳನ್ನು ಶಾಲೆಗೆ ಕಳಿಸಿರಿ ವಿದ್ಯೆಯನ್ನು ಕಲಿಸಿ ಅದರಿಂದಾಗುವ ಲಾಭಗಳನ್ನು ಪಡಕೊಳ್ಳಿರಿ ಎಂದು ಹೇಳಿದರೆ ಅವರು — "ನಾವೇನು ಬಂದಿತ್ತರೋ? ನಮ್ಮ ಮಕ್ಕಳು ಏನು ಕಲಿತು ದೊಡ್ಡ ಹುದ್ದೆಗಳನ್ನು ಮಾಡುವರೋ? ನಮಗೇಕೆ ವಿದ್ಯೆ?" ಎಂದು ಅವಿಚಾರದ ಮಾತುಗಳನ್ನಾಡಿ ನಗುವರು. ಇಂಥಜನರಿಗೆ ಎಷ್ಟು ಬುದ್ಧಿವಾದಗಳನ್ನು ಹೇಳಿದರೂ ಕೇಳುವದಿಲ್ಲ. ಆ

ಯನ್ನು ಎಬ್ಬಿಸಿದರೇ? ಇದರಮೇಲಿಂದ ನಮ್ಮ ಜನರಲ್ಲಿ ಎಷ್ಟು
ಅಜ್ಞಾನವು ತುಂಬಿಕೊಂಡದೆನೋಡಿರಿ. ಈಗ ಕೆಲಕೆಲವು ಮು
ಖ್ಯತಾಲೂಕುಗಳ ಮುಖ್ಯಸ್ಥಳದಲ್ಲಿಯೂ, ಜಿಲ್ಲೆಯ ಮುಖ್ಯಸ್ಥಳ
ದಲ್ಲಿಯೂ ಜನರು ಎಷ್ಟೋಪಾಲಿಗೆ ಸುಧಾರಿಸಿದ್ದಾರೆ, ಮತ್ತು
ಸುಧಾರಿಸಹತ್ತಿದ್ದಾರೆ. ಇದೊಂದು ಸಂತೋಷಪಡತಕ್ಕ
ಸಂಗತಿಇರುತ್ತದೆ. ಇದರಂತೇ ಹಳ್ಳಿಗಳಲ್ಲಿಸಹ ಸುಧಾರಣೆ
ಯಾಗುವದು ಅವಶ್ಯವದೆ. ಈ ಸುಧಾರಣೆಯು ಬಹುಶಃ ನ
ಮ್ಮ ಬಾಂಧವರಿಂದ ಆಗಬಹುದಂತ ಕಾಣುತ್ತದೆ —— ಪ್ರತಿ
ಯೊಂದು ತಾಲೂಕಿನೊಳಗಿನ ನಮ್ಮ ಬಾಂಧವರೆಲ್ಲರೂ ಸೂ
ಟಿಯ ದಿವಸಗಳಲ್ಲಾಗಲೀ, ರವಿವಾರಗಳಲ್ಲಾಗಲೀ ತಮಗೆ ಸ
ಮೀಪಿರುವ ಹಳ್ಳಿಗಳಿಗೆಹೋಗಿ ಅಲ್ಲಿಯ ಮಾಸ್ತರರ ಸಹವಾಗಿ
ಗ್ರಾಮಸ್ಥರಸಹಾಯದಿಂದ ಊರವರನ್ನು ಕೂಡಿಸಿ ವಿದ್ಯೆಕಲಿ
ಸುವದರಿಂದಾಗುವ ಲಾಭಗಳನ್ನು ತಿಳಿಸಿದಲ್ಲಿ ಬಹುತರವಾಗಿ
ಶಿರೋಲೇಖದ ಬಯಕೆಯು ನೆರವೇರುವದು ಇದರಂತೆ ಎ
ಲ್ಲ ಬಾಂಧವರುಮಾತ್ರ ಹೀಗೆ ಮಾಡುವದರಕಡೆಗೆ ಲಕ್ಷಕೊಡ
ಬೇಕು. ಬಾಂಧವರು ವಿದ್ಯಾವೃದ್ಧಿಯಕಡೆಗೆ ಸದಾ ಕಂಕಣಬ
ದ್ಧರಾದವರೇ ಅಂದಮೇಲೆ ಆಗುವಂಥ ಸ್ವಲ್ಪ ಶ್ರಮದಕಡೆಗೆ
ಲಕ್ಷಕೊಡದೇ, ಹಿಂಜರಿಯದೆ ಲೋಕಕಲ್ಯಾಣಾರ್ಥವಾಗಿ ನ
ಡುಕಟ್ಟುವರೆಂದು ನನಗೆ ನಂಬಿಕೆಯುಂಟು. ಆದರೆ ಇವರು ಇಂ
ಥ ಸ್ತುತ್ಯಉದ್ಯೋಗದಸಲುವಾಗಿ ಊರಿಗೆಹೋದರೆ ಅಲ್ಲಿಯ
ಗ್ರಾಮಸ್ಥರು ಇವರಿಗೆ ಜನರನ್ನು ಕೂಡಿಸಿಕೊಡುವ ಮುಂತಾ
ದಕೆಲಸಗಳಿಗೆ ಸಹಾಯಮಾಡುವಂತೆ ರಾವಸಾ॰ ಡೆಪ್ಯುಟಿ ದೊ
ರೆಗಳಿಂದ ತಜವೀಜಾಗತಕ್ಕದ್ದು ಅಂದರೆ ಹಳ್ಳಿಪಳ್ಳಿಗಳಲ್ಲಿ ವಿ
ದ್ಯಾವೃದ್ಧಿಯಾಗುವದು. ದೇಶಹಿತಚಿಂತಕ

ತ್ತು ಔದಾರ್ಯಗುಣ ಮತ್ತು ಯಥಾರ್ಥನೀಯುವರಹಿತ ನಿಷ್ಕಪಟಿ ಈ ಮುಂತಾದಗುಣಗಳಲ್ಲಿ ಶ್ರೇಷ್ಠರು ಇರುವದರಿಂದ ತಂಮು ತಂಮು ಕೆಲಸಕ್ಕೆ ಯೋಗ್ಯರು ಇವರು ನಮ್ಮ ದೈವಕ್ಕೆ ಕಾರಣರೆಂದರಿಯುವರು ಇದನ್ನು ನಾವು ದಿನಂಪ್ರತಿಯಲ್ಲಿ ದೇವರನ್ನು ಸ್ತುತಿಸುತ್ತೇವೆ. ತಾರೀಖು ೩೩ ಮಾಹೆಯಪ್ರೀಲ ಸನ್ ೧೮೮೩.

ಕಲಾದಗಿ ಜಿಲ್ಲೆಯ ಒಬ್ಬ ಅಸಿಸ್ಟಾಂಟಮಾಸ್ತರನು.

— o — ಕ್ಷ

ಮಲಾಪಹಾರೀ ತೀರದಲ್ಲಿರುವ ಒಂದು ಮಾವಿನತೋಟದ ವರ್ಣನೆ.

||ಮಾವಿನತೋಟಬಹು ಛಂದ
	ಮನಕೀವದು ಅತ್ಯಾನಂದ		ಪ.	
	ಮಲಾಪಹಾರೀ ಸೊಬಗಿನ ತೀರಾ
	ಹರಿತಾವೆಮುಂಗ್ಯವನೀರಾ
	ದಂಡಿಮೇಲೆ ವರ್ಣ್ಯ ಸಹಕಾರಾ
	ಮನೋಹರಾ ವೃಕ್ಷಗಂಭೀರಾ
	ಯಲಿಗೊಂಡು ಗೊಂಚಲಿಡ ಭಾರಾ
	ಸುಸ್ವರಾಗ್ರೆಯ್ಯುವಪ್ರ ಕೀರಾ
	ಇಂಪುಕೋಕಿಲರವಮನೋಹರಾ
	ಬಳಿತಿವರ್ಣ ಮೆಂನಮನಪೂರಾ
	ಮರತೇಮನೀರು ಆಹಾರಾ
	ಕೆಳ್ಕಿಮಿಗಳು ದಣಿಯುವ್ರಜರಾ		೧	
	ಸಾಲ್ಯಂಗೊಳಿಸು ಮರನಾಲಾ
	ಘನನೆರಳು ಬಿದ್ದಿ ಕಡುಮೇಲಾ
	ಖರಇನಕಿರಣಗಳಜಾಲಾ

॥ತಡೆಯಿರ್ಪವು ಮೇಲಿಂದಮೇಲಾ ।
॥ಹಾಯಿಕಾರಗೆವೃಕ್ಷದಮೂಲಾ ।
॥ಸುಖಕೊಡುವದ-ಕೊಲಾಹಾಲಾ ।
॥ಮಂದಮಾರುತತೀಡುವನಲ್ಲಾ ।
॥ಬೇಸರಕಿಹರಿದುಹೋಯಿತಲ್ಲಾ ।
॥ತೊಟಿಗಾಯ್ತು ಸ್ವಾಮುರಿಯುಗುಲ್ಲಾ ।
॥ಕಾಯ್ತುರಿಪರ್ಕೇಳುವದಿಲ್ಲ ॥೨॥
॥ಮಧುಮಾಧವರಾಯನವಾಸಾ ।
॥ಕಿವಿಕಂಗಳಿಂಗೆಅತಿಖಾಸಾ ।
॥ಜನಮನಕೆಕೊಡುವದುಲ್ಲಾಸಾ ।
॥ದುಃಖವಿಲ್ಲಎಳ್ಳುಕಾಳಿನಿಸಾ ।
॥ಸುಖಸಾಗರದೊಳೆನಮನಸಾ ।
॥ಲೋಲ್ಯಾಡಿಸವನುಕನುಮೇಶಾ ।
॥ಕೊಂಡೂರಬನದಾಮೇತ್ರಾ ।
॥ತಾನೀಯುಲೆನಗೆಸೂಮನಸಾ ।
॥ಜನಬಾಲಕಪಾಲಕಶ್ರೀಶಾ ।
॥ಸಲೆಪ್ರೊರಿಯುಲೆಂಮುಅಹರ್ನಿಶಾ ॥೩॥

ಧಾರವಾಡ
ತಾ.೭।೫।೮೩ ಇಸ್ವಿ } ಶ್ರೀನಿವಾಸ ರಾಮಚಂದ್ರ ಸವದಿ.
ಇಂದುವಾಸರ

—೦—

ರಾ. ಸಾ. ಶಾಲಾಪತ್ರಕಕರ್ತ ಇವರಿಗೆ—

ವಿ. ವಿ. ಕೆಲವು ಪ್ರಾಚೀನ ನಡಾವಳಿಗಳು ಚಮತ್ಕಾರವಿದ್ದು ಅವುಗಳ ಮೂಲಕಾರಣ ಗೊತ್ತುಹತ್ತದೆ ಬಹಳ ಶಂಕಿತನಿದ್ದೇನೆ

ಯಾರಾದರೂ ನನ್ನ ಅಭಿಲಾಷೆ ದೂರಮಾಡುವರೆಂದು ಲೀಲಾಯುಕ್ತ ಶಾಲಾಪತ್ರಿಕದ ಮೂಲೆಯಲ್ಲಿ ಜೋಲುತ್ತೇನೆ ಅದರ ವಿವರಾ—

೧ ದೊಡ್ಡವರು ಬಾಯಿತೆರದು ಆಕಳಿಸುವಾಗ್ಗೆ ಬಟ್ಟಿನಿಂದ ಚಿಟಿಕಿಹೊಡಿಯುವ ಕಾರಣವೇನು?

೧ಹಲ್ಲಿ ಚಿಪ್‌ಚಿಪ್‌ಅಂದರೆ "ಕೃಷ್ಣಕೃಷ್ಣ"ಯಾಕೆಅಂನುತ್ತಾರೆ ವ ಅನ್ನಲಿಕ್ಕೇ ಬಲವತ್ತರಕಾರಣವಿದ್ದರೆ "ರಾಮರಾಮ" "ಶಿವಶಿವ" ಯಾಕಅನ್ನಬಾರದು?

೧ಬ್ರಾಹ್ಮಣರು ಭೋಜನಕ್ಕೆ ಕೂಡ್ರುವಾಗ್ಗೆ ಏಕೋವಿಷ್ಣು ಬಿಡರಿಅಂತಾ ಯಾಕೆಅನ್ನುತ್ತಾರೆ ಸಮರ್ಪಿಸರಿಅಂತಾ ಯಾಕೆಅನ್ನುವದಿಲ್ಲಾ ಅಥವಾ ಏಕೋಶಿವಬಿಡರಿ ಅಥವಾ ಅರ್ಪಿಸರಿಅಂತಾಯಾಕೆಅನ್ನುವದಿಲ್ಲಾ ಹಾಗೂ ವ.ಹಾಅದೃಷ್ಟ ತಪ್ರ ಪ್ರಥಕ್ ಭೂತಿಯಾಗಿ ತ್ರಯಲೋಕೀನನುಭುಂಜಸುತ್ತಾನೆ (ಪ್ರತ್ಯೇಕದ ಅರ್ಪಿಸಿ) ಪಂಕ್ತಿಸಾಗುತ್ತದೆ ಆದರೆ ಯದರ್ನೇ ಪಂಕ್ತಿಯವರಿಗೆ ಸಮರ್ಪಣ ಉದಕ ಬಿಡುವದಿಲ್ಲಾ ಅಂದಮೇಲೆ ಆ ಭೋಜನಮಾಡುವವರು ಯಾವ ಭೂತದವರು ವ ಆ ಅನ್ನ ಯಂಥಾದು?—

ಇಷ್ಟು ವಿಷಯಗಳ ಸಂಶಯಬಿಡವಲ್ಲದು, ಬಲ್ಲವರು ಕೇವಕನ ಆಶೆಪೂರೈಸಬೇಕು. ತಾ. ೨೨।೪।೯೩ಇಸ್ವಿ.

ಧವಳಗಿ ತಾ. ಮುದ್ದೆಬಿ } ರಾಮಚಂದ್ರ ಶ್ರೀನಿವಾಸ ವಿದ್ಯಾರ್ಥಿ:
ಡಾ॥ ಜಿಲ್ಲಾ ಕಲಾದಗಿ. } ಧವಳಗಿ.

—o—

ಶಾಲಾಪತ್ರಕವು.

ಪುಸ್ತಕ ೧೮] [ಸಂಚಿಕೆ ೭

ಜೂಲೈ. ೧೮೮೩

Education and Improvement.

ವಿದ್ಯಾಸುಧಾರಣಾಸಂಬಂಧವಾದ ಸಂಗತಿಗಳು.

—*o*—

ವಿಲಾಯತಿಯಲ್ಲಿ ಕೂಪರ್ಸ ಹಿಲ್ಲೆಂಬ ಗ್ರಾಮದಲ್ಲಿ ಒಂದು ದೊಡ್ಡ ಕಾಲೇಜ ಇರುತ್ತದೆ. ಆ ಕಾಲೇಜದಲ್ಲಿ ಮೂರು ವರ್ಷ ಕಲಿತು ಪರೀಕ್ಷೆಕೊಟ್ಟು ಯುರೋಪಿಯನ್ ಜನರು ಸಿವಿಲ್ ಸರ್ವೀಸದ (ಮುಲಕೀ ನೌಕರಿಯ) ಸನದು ಹಿಂದುಸ್ಥಾನಕ್ಕೆ ಯೋಗ್ಯರಾದರೆಂದು ನೌಕರಿಯ ಮೇಲೆ ಬರುತ್ತಾರೆ. ಹಿಂದುಸ್ಥಾನಕ್ಕೆ ಬರುವ ಸಿವಿಲಿಯನ್ ನೌಕರರ ಸಲುವಾಗಿಯೇ ಈ ಕಾಲೇಜವು ನಡೆಯುತ್ತಿರುವ ಕಾರಣ ಇದರ ವೆಚ್ಚವೆಲ್ಲ ಹಿಂದುಸ್ಥಾನದ ಹಣದಿಂದ ಸಾಗುತ್ತದೆ. ಈ ಕಾಲೇಜದಲ್ಲಿ ಒಬ್ಬ ವಿದ್ಯಾರ್ಥಿ ೩ ವರ್ಷ ಕಲಿತು ವಿದ್ಯಾಭ್ಯಾಸ ಮುಗಿಸುವ ವರೆಗೆ ಅವನಿಗಾಗಿ ೩೮೬೦ ರುಪಾಯಿಯ ರಕಮು ವೆಚ್ಚವಾಗುತ್ತದೆ.

—o—

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಕಲಕತ್ತೆಯಲ್ಲಿ ವೈದ್ಯಕೀಯ ಕಾಲೇಜದಲ್ಲಿ ಹೆಂಗಸರ ಕಲಿಕೊಳ್ಳಲಿಕ್ಕೆ ಸರಕಾರದವರು ಅಪ್ಪಣೆ ಕೊಟ್ಟಿದ್ದಾರೆ

—o—

ಸುಏಜ ಸಂಯೋಗಭೂಮಿಯು ಅರಸಾರು ಈಗ ಒಂದು ದೊಡ್ಡ ಕಾಲುವೆಯಾಗಿರುತ್ತದೆ. ಅದರೊಳಗಿಂದ ದೊಡ್ಡದೊಡ್ಡ ಹೊಗೆಹಡಗಗಳು ಸಾಗುತ್ತವೆ. ಆ ಕಾಲುವೆಯನ್ನು ಒಬ್ಬ ಫ್ರೆಂಚ ಇಂಜಿನೀಯರನು ೧೭ಕೋಟಿ ರುಪಾಯಿ ವೆಚ್ಚಮಾಡಿ ೧೦ ವರ್ಷದೊಳಗೆ ಮುಗಿಸಿದನು. ಆದರೆ ಈಗ ಇಂಗ್ಲಿಷ ಸರ್ಕಾರ ಅದೇ ಸಂಯೋಗಭೂಮಿಯಲ್ಲಿ ಮತ್ತೊಂದು ಕಾಲುವೆಯನ್ನು ಅಗಿಯುವ ಉದ್ಯೋಗ ನಡಿಸಿದ್ದಾರೆ. ಈ ಕಾಲುವೆಗೆ ೮ ಕೋಟಿ ರುಪಾಯಿ ವೆಚ್ಚವಾಗಿ ೫ವರ್ಷದೊಳಗೆ ಇದು ತಯಾರಾಗುವದೆಂದು ಅಂದಾಜು ಆಗಿರುತ್ತದೆ.

—o—

ಭೂಮಿಯಮೇಲೆಲ್ಲ ಕೂಡಿ ೩೯೮೫ ಕಾಗದ ಮಾಡುವ ಕಾರಖಾನೆಗಳು ನಡಿಯುತ್ತವೆ ಅವುಗಳಲ್ಲ ಕೂಡಿ ೯೫೯೦೦ ಟನ್ ಕಾಗದಗಳು ಒಂದು ವರ್ಷದೊಳಗೆ ತಯಾರಾಗುತ್ತವೆ.

—o—

ತಾಪೀನದಿಯು ಹ್ಯಾಂಚಲ್ಲಿ ಮಿತಿಮೀರಿ ನೀರು ಬಂದದ್ದರಿಂದ ಸೂರತ ಪಟ್ಟಣವು ಬಹುತರಯಾವತ್ತು ಹಾಳಾಗಿರುತ್ತದೆ. ಅಲ್ಲಿಯ ಅನಾಥ ಜನರಿಗಾಗಿ ಮುಂಬಯಿಯಲ್ಲಿ ಇದುವರೆಗೆ ೫೬ ಸಾವಿರ ರೂಪಾಯಿ ಜಮೆಯಾಗಿರುತ್ತವೆ. ಧಾರ್ಮಿಕ ಜನರು ತಮ್ಮ ಕೈಲಾದಮಟ್ಟಿಗೆ ಈ ಅನಾಥಜನರಿಗಾಗಿ ಹಣ ಕಳಿಸುವದು ಉಚಿತ ವಿರುತ್ತದೆ.

—o—

ಚೇಳು ಕಡಿಸಿದ್ದಕ್ಕೆ ಉಪಾಯು — ಕಡಿದ ಸ್ಥಳವನ್ನು ನು ಮ್ಮಾರು ೧ ತಾಸಿನವರೆಗೆ ಮೇಲಕ್ಕೆ ಮಾಡಿ ಹಿಡಿದರೆ ಚೇಳು ಇಳಿಯುತ್ತದೆ.

ಆಮ್‌ಸ್ಟರ್ಡಾಮ್ ಪಟ್ಟಣದೊಳಗೆ ಒಳಗಡೆಯಲ್ಲಿ ಆದದ್ದೊಂದು ಪ್ರದರ್ಶನಕ್ಕೆ ಒಬ್ಬ ಶಿಲ್ಪಿಗನು ಕಬ್ಬಿಣದ ಹಾಳಿಗಳಿಂದ ಕಟ್ಟಿದಂಥ ಮೂರು ಪುಸ್ತಕಗಳನ್ನು ಕಳಿಸಿದ್ದನು. ಅವುಗಳನ್ನು ಬಹು ಸುಂದರವಾಗಿ ಕಟ್ಟಿ, ಹಾಳಿಗಳು ಬೇರೆ ಬೇರೆ ಯಾಗಿ ಕಾಣಿಸುವಂತೆ ಕೌಶಲ್ಯದಿಂದ ಕೊಯಿಸಿದ್ದನು. ಒಂದು ಪುಸ್ತಕವು ೧೦ಇಂಚು ಅಂದರೆ ಸುಮಾರು ೧ಗೇಣು ದಪ್ಪವಿತ್ತು. ಆದರಲ್ಲಿ ೨೫ ಹಾಳಿಗಳಿದ್ದವು. ಇಂಥಾ ಶಿಲ್ಪಿಗಳು ನಮ್ಮ ದೇಶದಲ್ಲಿ ಸಾವಿರಾರು ಜನರು ಹೊರಡಬಹುದು. ಆದರೆ ಅವರಿಗೆ ಆಶ್ರಯವಲ್ಲಿಂದ ಬರಬೇಕು.

Notices.

ನೋಟೀಸು.

ನಂಬರು ೨೨೨

ಮುಂಬಯಿ ಕೋರ್ಟಿ — ತಾ. ೩ನೇ ಮೆ ೧೮೮೩

ವಿದ್ಯಾಖಾತೆಯ ಡಾಯರೆಕ್ಟರವರು ಸರಕಾರದವರ ೧೯೭೬ ನೇ ನಂಬರಿನ, ಕಳೆದ ನವಂಬರಿನ ೧೩ನೇ ತಾರೀಖಿನ ಠರಾವಿಗೆ ಪ್ರತ್ಯುತ್ತರವಾಗಿ ತಂಮ ಪತ್ರ ನಂಬರು ೨೭೨ ತಾ· ೧೮ ನೇ ಎಪ್ರೀಲ ೧೮೮೩ ಇದರ ಸಂಗಡ ಈಶಾನ್ಯಭಾಗದ ಇನ್‌ಸ್ಪೆಕ್ಟರರ ನಂಬರು ೯೨, ತಾ· ೫ನೇ ಎಪ್ರಿಲ ಸನ್ನಮಾಜಕೂರಿನ ಪತ್ರವನ್ನು ಕಳಿಸಿದ್ದಾರೆ — ಆ ಪತ್ರದ ಅಭಿಪ್ರಾಯ ಹ್ಯಾಗಂದರೆ — ಯಾವ ಮಾಸ್ತರರ ಶಾಲೆಗಳು ವಿದ್ಯಾರ್ಥಿಗಳಿಲ್ಲದ ಕಾರಣ ಬಂದ ಮಾಡಲ್ಪಡುತ್ತವೆಯೋ ಆ ಮಾಸ್ತರರ ಮೇಲೆ

ದೊಡ್ಡ ಅಪರಾಧದ ಆರೋಪವೇನು ಇರದಿದ್ದರೆ, ಅವರಿಗೆ ಬೇರೆ ಕಡೆಯಲ್ಲಿ ನೌಕರಿಯು ಕೊಡುವ ತಜವೀಜು ಆಗುತ್ತಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳ ಫೀಯನ್ನು ಮಾಸ್ತರರು ತಾವೇ ತಮ್ಮ ಕೈಯಿಂದ ಕೊಡಲಿಕ್ಕೆ ಕಾರಣವೇನು ಬಹುಶಃ ಇರುವದಿಲ್ಲ. ಇದಲ್ಲದೆ ಹಳ್ಳಿಗಳ ಮಾಸ್ತರರ ಸಂಬಳವು ಬಹಳ ಸ್ವಲ್ಪ ಇರುವಕಾರಣ ಹುಡುಗರ ಫೀಯನ್ನು ತಾವೇ ಕೊಡುವ ಚಟವು ಅವರಿಗೆ ಹತ್ತುವದು ಅಸಂಭಾವ್ಯವಿರುತ್ತದೆ. ಆದರೂ ಕೆಲವು ಉದಾಹರಣೆಗಳಲ್ಲಿ ಪ್ರಮುಖರಾದ ಗ್ರಾಮಸ್ಥರು ಮಾಸ್ತರ ಜನರನ್ನು ಬಹಳ ಅಡಚಣಿಯೊಳಗೆ ಹಾಕುತ್ತಾರೆಂಬುವದಕ್ಕೆ ಸಂಶಯವಿಲ್ಲ. ಆದರೆ ಹಳ್ಳಿಗಳ ಶಾಲೆಗಳಲ್ಲಿ ಹೆಚ್ಚಿನ ಇಯತ್ತೆಗಳು ನಡೆಯುವದಕ್ಕೆ ಮುಲಕೀ ಅಮಲದಾರರೂ ವಿದ್ಯಾಖಾತೆಯ ಅಧಿಕಾರಿಗಳೂ ಬಹಳ ಲಕ್ಷ್ಯಪೂರ್ವಕವಾಗಿ ಪ್ರಯಾಸ ಮಾಡುವದೇ ಮುಖ್ಯ ಉಪಾಯವಿರುತ್ತದೆ. ಹಗಲು ನಡೆಯುವ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳನ್ನು ರಾತ್ರಿಯ ಶಾಲೆಗಳಲ್ಲಿ ಪ್ರೌಢಜನರಂತೆ ಮಾಫಿಯಿಂದ ತಕೊಳ್ಳಲಿಕ್ಕೇಬೇಕು. ಯಾವತ್ತು ಹೆಣ್ಣು ಮಕ್ಕಳ ಶಾಲೆಗಳಲ್ಲಿ ಕಸೂತಿಯ ಕೆಲಸವನ್ನು ಕಲಿಸಲಿಕ್ಕೆ ಬೇಕು; ಮತ್ತು ಈ ಬಗ್ಗೆ ಅವರು (ಡಾಯರೆಕ್ಟರ ಧೋರೆಗಳು) ಇನಸ್ಪೆಕ್ಟರ ಜನರಿಗೆ ಸರ್ಕ್ಯುಲರುಗಳನ್ನು ಕಳಿಸಿದ್ದಾರೆ.

ಠರಾವು — ಮೇಲೆ ಉಲ್ಲೇಖಿಸಿದ ಠರಾವಿನ ಸಂಬಂಧದಿಂದ ಇದರ ನಕಲುಗಳನ್ನು ಮುಲಕೀಖಾತೆಯ ಅಮಲದಾರರಿಗೆ ಕಳಿಸಬೇಕು.

C. Gonne.

ಸರಕಾರದವರ ಮುಖ್ಯಸೆಕ್ರೆಟರಿ.

Divisions of Time.

ಕಾಲಮಾನ—ದಿನಮಾನ.

ಕಣ್ಣು ಎವೆ ಅಲ್ಲಾಡಿಸುವದಕ್ಕೆ ಸಾಕಾಗುವಷ್ಟು ಕಾಲಕ್ಕೆ ನಿಮೇಷವೆನ್ನುತ್ತಾರೆ. ಅದನ್ನೇ ಮೂಲಪ್ರಮಾಣವಾಗಿ ಹಿಡಿದು, ಶಾಸ್ತ್ರದಲ್ಲಿ ಹೇಳಿದ ಕಾಲಾವಯವಗಳ ಮಾನಗಳನ್ನು ಮುಂದೆ ಬರೆಯುತ್ತೇವೆ.

೧೫ ನಿಮೇಷ : ೧ ಕಾಷ್ಠಾ	೩೦ ಮುಹೂರ್ತ : ೧ ಅಹೋರಾತ್ರ
೩೦ ಕಾಷ್ಠಾ : ೧ ಕಲಾ	೧೫ ಅಹೋರಾತ್ರ : ೧ ಪಕ್ಷ
೩೦ ಕಲಾ : ೧ ಕ್ಷಣ	೨ ಪಕ್ಷ : ೧ ಮಾಸ
೬ ಕ್ಷಣ : ೧ ಗಳಿಗೆ	೨ ಮಾಸ : ೧ ಋತು
೨ ಗಳಿಗೆ : ೧ ಮುಹೂರ್ತ	೩ ಋತು : ೧ ಅಯನ
	೨ ಅಯನ : ೧ ಸಂವತ್ಸರ

ಸೂರ್ಯನ ಉದಯದಿಂದ ಅಸ್ತಮಾನದ ವರೆಗೆ ಕಾಲಕ್ಕೆ ಅಹ ಇಲ್ಲವೆ ದಿನ ಅನ್ನುತ್ತಾರೆ. ದಿನದ ಮಾನ ಅಂದರೆ, ಅದ ಕಾಲ, ದಿನಮಾನ ಅನಿಸುವದು. ಮೇಲಿನ ಕಾಲಾವಯವಗಳ ಕೋಷ್ಟಕವನ್ನು ನೋಡಲಾಗಿ, ದಿನಮಾನವು ಮೂವತ್ತು ಗಳಿಗೆ ಇರತಕ್ಕದ್ದೆಂದು ತೋರುವದು. ಆದರೆ ಪೃಥ್ವಿಯ ಯಾವತ್ತು ಭಾಗಗಳಲ್ಲಿ ದಿನಮಾನವು ಒಂದೇ ಸರಿಯಾಗಿ ಇರುವದಿಲ್ಲ. ಯಾಕಂದರೆ, ಸೂರ್ಯನು ದೃಶ್ಯಗತಿಯಲ್ಲಿ ಒಂದೇ ಸ್ಥಳದಲ್ಲಿ ಸ್ಥಿರವಿರುವದಿಲ್ಲ; ಕೆಲವು ದಿನ ಪೃಥ್ವಿಯ ಮಧ್ಯರೇಷೆಯಿಂದ ಉತ್ತರಕ್ಕೆ ಕೆಲವು ದಿನ ದಕ್ಷಿಣಕ್ಕೆ ಇರುತ್ತಾನೆ. ಆದ್ದರಿಂದ ಸಹಜವೇ ದಿನಮಾನದಲ್ಲಿ ಹೆಚ್ಚುಕಡಿಮೆ ಆಗುತ್ತದೆ.

ಸೂರ್ಯನು ಪೃಥ್ವಿಯ ಮಧ್ಯರೇಷೆಯ ಮೇಲೆ ಬಂದಾಗ ಉತ್ತರ ಗೋಲಾರ್ಧದಲ್ಲಿಯೂ, ದಕ್ಷಿಣ ಗೋಲಾರ್ಧದಲ್ಲಿ

ಯುತ್ತ, ದಿನಮಾನವು ಒಂದೇ ಸರಿಯಾಗಿ, ಅಂದರೆ, ಹನ್ನೆರಡು ತಾಸಿನದು ಆಗುವದು. ಅಲ್ಲಿಂದ ಅವನು ಉತ್ತರಕ್ಕೆ ಹೋದಂತೆ ಉತ್ತರಗೋಲಾರ್ಧದಲ್ಲಿ ದಿನಮಾನವು ಹೆಚ್ಚಾಗುತ್ತದೆ; ದಕ್ಷಿಣಗೋಲಾರ್ಧದಲ್ಲಿ ಕಡಿಮೆಯಾಗುತ್ತದೆ. ಅದೇ ರೀತಿ ಮಧ್ಯರೇಖೆಯಿಂದ ಸೂರ್ಯನು ದಕ್ಷಿಣಕ್ಕೆ ಹೋದನೆಂದರೆ, ದಕ್ಷಿಣಗೋಲಾರ್ಧದಲ್ಲಿ ದಿನಮಾನವು ಹೆಚ್ಚಾಗುತ್ತದೆ; ಉತ್ತರಗೋಲಾರ್ಧದಲ್ಲಿ ಕಡಿಮೆಯಾಗುತ್ತದೆ.

ಪ್ರತಿವರ್ಷ ಮಾರ್ಚ ತಿಂಗಳ ಇಪ್ಪತ್ತೊಂದನೇ ತೇದಿಗೆ ಸೂರ್ಯನು ಮಧ್ಯರೇಖೆಯ ಮೇಲೆ ಬರುತ್ತಾನೆ. ಅಂದಿನ ದಿನ ಎರಡೂ ಗೋಲಾರ್ಧಗಳಲ್ಲಿ ಸರಿಯಾಗಿ ಹನ್ನೆರಡು ತಾಸು ದಿನಮಾನವಿರುತ್ತದೆ. ಮುಂದೆ ಮಧ್ಯರೇಖೆಯಿಂದ ಉತ್ತರಕ್ಕೆ ಹೋಗುತ್ತಾ ಹೋಗುತ್ತಾ ಜೂನತಿಂಗಳ ಇಪ್ಪತ್ತೊಂದನೇ ತೇದಿಗೆ ಕರ್ಕವೃತ್ತವನ್ನು ಸೇರುತ್ತಾನೆ. ಆಗ ಉತ್ತರಗೋಲಾರ್ಧದಲ್ಲಿ ದಿನಮಾನ ಹೆಚ್ಚಾಗುವದೂ ದಕ್ಷಿಣಗೋಲಾರ್ಧದಲ್ಲಿ ದಿನಮಾನ ಕಡಿಮೆಯಾಗುವದೂ ಪರಮಾವಧಿ ಆಯಿತೆಂದು ತಿಳಿಯಬೇಕು.

ಸೂರ್ಯನು ಕರ್ಕವೃತ್ತದಿಂದ ಹಿಂದಿರುಗಿ ಸಪ್ಟಂಬರ ತಿಂಗಳ ಇಪ್ಪತ್ತುಮೂರನೇ ತೇದಿಗೆ ಮಧ್ಯರೇಖೆಯು ದಾಟಿ ಮುಂದಕ್ಕಾಗಿ ದಕ್ಷಿಣಕ್ಕೆ ಹೋಗುತ್ತಾನೆ. ಆಗ ದಕ್ಷಿಣಗೋಲಾರ್ಧದಲ್ಲಿ ದಿನಮಾನವು ಹೆಚ್ಚಾಗುತ್ತದೆ; ಉತ್ತರಗೋಲಾರ್ಧದಲ್ಲಿ ಕಡಿಮೆಯಾಗುತ್ತದೆ. ಸೂರ್ಯನು ದಕ್ಷಿಣಕ್ಕೆ ಹೋಗುತ್ತಾ ಹೋಗುತ್ತಾ, ಡಿಸೆಂಬರ ತಿಂಗಳ ಇಪ್ಪತ್ತೊಂದನೇ ತೇದಿಗೆ ಮಕರವೃತ್ತವನ್ನು ಸೇರುತ್ತಾನೆ. ಆಗ ದಕ್ಷಿಣಗೋಲಾರ್ಧದಲ್ಲಿ ದಿನಮಾನ ಹೆಚ್ಚಾಗುವದೂ, ಉತ್ತರಗೋಲಾರ್ಧದಲ್ಲಿ ಕಡಿಮೆ

ಕೆಂಬರ ತಿಂಗಳ ಇಪ್ಪತ್ತೊಂದನೇ ತೇದಿಗೆ ಮಕರವೃತ್ತವನ್ನು ಸೇರು ತ್ತಾನೆ. ಆಗ ದಕ್ಷಿಣಗೋಲಾರ್ಧದಲ್ಲಿ ದಿನಮಾನ ಹೆಚ್ಚಾಗುವುದೂ ಉತ್ತರಗೋಲಾರ್ಧದಲ್ಲಿ ಕಡಿಮೆಯಾಗುವುದೂ ಪರಮಾವಧಿಯಾಗುತ್ತದೆ. ಅಲ್ಲಿಂದ ಮತ್ತೆ ಹೊರಟು ಸೂರ್ಯನು ಮಾರ್ಚ ತಿಂಗಳ ೨೧ನೇ ತೇದಿಗೆ ತಿರುಗಿ ಮಧ್ಯರೇಖೆಯ ಮೇಲೆ ಬರುತ್ತಾನೆ.

ಈ ಮೇರೆಗೆ ಸೂರ್ಯನು ವರ್ಷದಲ್ಲಿ ೬ ತಿಂಗಳು, ಮಧ್ಯರೇಖೆಯ ಉತ್ತರಕ್ಕೆ, ೬ ತಿಂಗಳು ದಕ್ಷಿಣಕ್ಕೆ ಇರುತ್ತಾನೆ. ಅವನು ಮಕರವೃತ್ತಬಿಟ್ಟು ಕರ್ಕವೃತ್ತವನ್ನು ಸೇರುವವರೆಗೆ ೬ ತಿಂಗಳ ಅವಧಿಗೆ, ಉತ್ತರಾಯಣ ಅಂದರೆ ಉತ್ತರಕ್ಕೆ ಹೋಗೋಣ ಅನ್ನುತ್ತಾರೆ; ಕರ್ಕವೃತ್ತಬಿಟ್ಟು ತಿರುಗಿ ಮಕರವೃತ್ತವನ್ನು ಸೇರುವ ವರೆಗೆ ಆರು ತಿಂಗಳ ಅವಧಿಗೆ ದಕ್ಷಿಣಾಯನ ಅಂದರೆ ದಕ್ಷಿಣಕ್ಕೆ ಹೋಗೋಣ ಅನ್ನುತ್ತಾರೆ.

ಸೂರ್ಯನು ಮಧ್ಯರೇಖೆಯ ಮೇಲೇ ಇರಲಿ, ಇಲ್ಲವೆ ಅದರಿಂದ ಉತ್ತರಕ್ಕಾಗಲಿ, ದಕ್ಷಿಣಕ್ಕಾಗಲಿ ಇರಲಿ ಮಧ್ಯರೇಖೆಯ ಮೇಲೆಯೂ ವಾಗಲು ಹನ್ನೆರಡು ತಾಸು ಅಂದರೆ ಮೂವತ್ತು ಗಳಿಗೆ ದಿನಮಾನವಿರುತ್ತದೆ. ಅದರೊಳಗೆ ಎಂದೂ ಹೆಚ್ಚು ಕಡಿಮೆಯಾಗುವದಿಲ್ಲ. ಮಧ್ಯರೇಖೆಯಿಂದ ಎರಡೂ ಕಡೆಗೂ ಧ್ರುವವೃತ್ತದ ವರೆಗೆ ದಿನಮಾನವು ಇಪ್ಪತ್ತನಾಲ್ಕು ತಾಸು ಅಂದರೆ ೬೦ ಗಳಿಗೆ ತನಕ ಹೆಚ್ಚಾಗುತ್ತದೆ. ಧ್ರುವವೃತ್ತದಿಂದ ಧ್ರುವದವರೆಗೆ ದಿನಮಾನವು ಒಂದು ದಿವಸದಿಂದ ಆರು ತಿಂಗಳ ವರೆಗೆ ಅಭಿವೃದ್ಧಿಯಾಗುತ್ತದೆ. ಧ್ರುವಸ್ಥಾನದಲ್ಲಿ ಅಂತೂ ಆರು ತಿಂಗಳ ದಿನ ಆರು ತಿಂಗಳ ರಾತ್ರಿ ಆಗುವವು.

ಮೇಲೆ ದಿನಮಾನದ ವಿಷಯವಾಗಿ ಹೇಳಿರುತ್ತದೆ. ಅದರ ಮೇಲಿಂದ ಆಯಾ ಸ್ಥಳಗಳಲ್ಲೇ ರಾತ್ರಿಮಾನವನ್ನು ಸುಲಭದಲ್ಲಿ ತಿಳಿಕೊಳ್ಳಬಹುದು. ಅಹೋರಾತ್ರಿ ಕೂಡಿ ಅರವತ್ತು ಗಳಿಗೆ ಇರುವದರಿಂದ ದಿನಮಾನ ಕಳೆಯಲಾಗಿ ಉಳಿದದ್ದೇ ರಾ

ಯಾಗುತ್ತದೆ. ಸೂರ್ಯನು ದಕ್ಷಿಣಕ್ಕೆ ಹೋಗುತ್ತಾ ಹೋಗುತ್ತಾ ರಾತ್ರಿಮಾನವು ಒಂದು ಗೋಲಾರ್ಧದಲ್ಲಿ ದಿನಮಾನವು ಎರಡನೇ ಗೋಲಾರ್ಧದಲ್ಲಿ ರಾತ್ರಿಮಾನಕ್ಕೆ ಸರಿಯಿರುತ್ತವೆ. ಆದರೆ ಎರಡೂ ಸ್ಥಳಗಳ ಅಕ್ಷಾಂಶರೇಖಾಂಶಗಳು ಮಾತ್ರ ಸರಿಇರಲಿಕ್ಕೆಬೇಕು.

ಕಾಲಮಾನ – ೨ನೇ ಭಾಗ.

ಚಾಂದ್ರಮಾನವೆಂದರೆ, ಚಂದ್ರನ ಗತಿಯ ಅನುರೋಧದಿಂದ ನಿಶ್ಚಿಸಿದ ದಿನಗಳು ಚಾಂದ್ರಮಾನದ ಪ್ರಾರಂಭವು ಅಮಾವಾಸ್ಯೆಯು ಎಂದು ಆಗುವವೆಂಬ ಮಾತಿನ ಒಗ್ಗೆ ಎರಡು ಭಿನ್ನಮತಗಳು ಉಂಟು ಒಂದು ಪಕ್ಷದವರು ಶುಕ್ಲ ಪ್ರತಿಪದೆಯಿಂದ ಅಮಾವಾಸ್ಯೆಯ ವರೆಗೆ ಒಂದು ತಿಂಗಳು ಎಣಿಸುವರು. ಅದಕ್ಕೆ ಅಮಾಂತ ಮಾಸ ಅಂದರೆ ಅಮಾವಾಸ್ಯೆಯಲ್ಲಿ ಮುಗಿಯುವ ತಿಂಗಳು ಅನ್ನುವರು. ಮತ್ತೊಂದು ಪಕ್ಷದವರು ವದ್ಯಪ್ರತಿಪದೆಯಿಂದ ಶುಕ್ಲ ಪೌರ್ಣಿಮೆಯ ವರೆಗೆ ಒಂದು ತಿಂಗಳು ಎಣಿಸುವರು. ಅದಕ್ಕೆ ಪೌರ್ಣಿಮಾಂತ ಮಾಸ ಅಂದರೆ ಪೌರ್ಣಿಮೆಯಲ್ಲಿ ಮುಗಿಯುವ ತಿಂಗಳು ಅನ್ನುವರು ಅಮಾಂತ ಮಾಸದಲ್ಲಿ ಚಂದ್ರನು ಮೊದಲು ವೃದ್ಧಿ ಬಳಿಕ ಕ್ಷಯ ಆಗುವದು, ಪೌರ್ಣಿಮಾಂತ ಮಾಸದಲ್ಲಿ ಮೊದಲು ಕ್ಷಯ ಬಳಿಕ ವೃದ್ಧಿ ಆಗುವದು.

ಚಂದ್ರನು ದಿನಾಲು ಒಂದು ನಕ್ಷತ್ರವನ್ನು ದಾಟುತ್ತಾನೆ. ಒಂದು ತಿಂಗಳಲ್ಲಿ ಅವನು ಇಪ್ಪತ್ತರೊಂಬತ್ತೂ ಕಾಲೂ ನಕ್ಷತ್ರಗಳನ್ನು ಅತಿಕ್ರಮಿಸುತ್ತಾನೆ. ಆದದರಿಂದ ಚಾಂದ್ರಮಾಸದಲ್ಲಿ ಇಪ್ಪತ್ತೊಂಬತ್ತೂ ಕಾಲು ದಿವಸಗಳು ಆಗುತ್ತವೆ.

ನಕ್ಷತ್ರಗಳು ಇಪ್ಪತ್ತೇಳು ಉಂಟು ಅವು ಯಾವವೆಂದರೆ

೧ ಅಶ್ವಿನಿ	೧೦ ಮಘಾ	೧೯ ಮೂಳ
೨ ಭರಣಿ	೧೧ ಪೂರ್ವಾ	೨೦ ಪೂರ್ವಾಷಾಢಾ
೩ ಕೃತಿಕಾ	೧೨ ಉತ್ತರಾ	೨೧ ಉತ್ತರಾಷಾಢಾ
೪ ರೋಹಿಣಿ	೧೩ ಹಸ್ತ	೨೨ ಶ್ರವಣಾ
೫ ಮೃಗ	೧೪ ಚಿತ್ರಾ	೨೩ ಧನಿಷ್ಠಾ
೬ ಆರ್ದ್ರಾ	೧೫ ಸ್ವಾತಿ	೨೪ ಶತತಾರಕಾ
೭ ಪುನರ್ವಸು	೧೬ ವಿಶಾಖಾ	೨೫ ಪೂರ್ವಾ ಭಾದ್ರ.
೮ ಪುಷ್ಯ	೧೭ ಅನುರಾಧಾ	೨೬ ಉತ್ತರಾ ಭಾದ್ರ.
೯ ಆಶ್ಲೇಷಾ	೧೮ ಜ್ಯೇಷ್ಠಾ	೨೭ ರೇವತಿ

ಈ ಇಪ್ಪತ್ತೇಳು ನಕ್ಷತ್ರಗಳಲ್ಲಿ ಹನ್ನೆರಡು ನಕ್ಷತ್ರಗಳ ಮೇಲೆ ಚಂದ್ರನು ಪೂರ್ಣನಾಗುತ್ತಾನೆ. ಚಂದ್ರನು ಯಾವ ತಿಂಗಳಲ್ಲಿ ಯಾವ ನಕ್ಷತ್ರದ ಮೇಲೆ ಪೂರ್ಣನಾಗುತ್ತಾನೋ ಆ ತಿಂಗಳಿಗೆ ಆ ನಕ್ಷತ್ರದ ಹೆಸರು ಬರುವದು ಈ ರೀತಿಯಿಂದ ಹುಟ್ಟುವ ಚಾಂದ್ರಮಾಸಗಳು ಯಾವವೆಂದರೆ:—

ನಕ್ಷತ್ರದ ಹೆಸರು.	ತಿಂಗಳ ಹೆಸರು.
೧೪ ಚಿತ್ರಾ	೧ ಚೈತ್ರ
೧೬ ವಿಶಾಖಾ	೨ ವೈಶಾಖ
೧೮ ಜ್ಯೇಷ್ಠಾ	೩ ಜ್ಯೇಷ್ಠ
೨೧ ಉತ್ತರಾಷಾಢಾ	೪ ಆಷಾಢ
೨೨ ಶ್ರವಣಾ	೫ ಶ್ರಾವಣ
೨೫ ಪೂರ್ವಾಭಾದ್ರಪದಾ	೬ ಭಾದ್ರಪದ
೧ ಅಶ್ವಿನಿ	೭ ಆಶ್ವಿನ
೩ ಕೃತ್ತಿಕಾ	೮ ಕಾರ್ತಿಕ
೫ ಮೃಗಶೀರ್ಷ	೯ ಮಾರ್ಗಶೀರ್ಷ

೯ ಪುಷ್ಯ	೧೦ ಪೌಷ
೧೦ ಮಘಾ	೧೧ ಮಾಘ
೧೨ ಉತ್ತರಾಫಾಲ್ಗುನಿ	೧೨ ಫಾಲ್ಗುನಿ

ಹಿಂದುಸ್ಥಾನದಲ್ಲಿ ನರ್ಮದಾ ನದಿಯ ಉತ್ತರಕ್ಕೆ ಪೌರ್ಣಿಮಾಂತ ಮಾಸ ದಕ್ಷಿಣಕ್ಕೆ ಅಮಾಂತಮಾಸ ನಡೆಯುತ್ತದೆ. ಹನ್ನೆರಡು ಚಾಂದ್ರಮಾಸಗಳು ಅಂದರೆ ಒಂದು ಚಾಂದ್ರ ವರ್ಷವಾಗುವದು. ಒಂದು ವರ್ಷದಲ್ಲಿ ಮುನ್ನೂರ ಐವತ್ತನಾಲ್ಕು ದಿವಸ ಇರುವವು. ಚಾಂದ್ರ ವರ್ಷವು ಚೈತ್ರ ಶುದ್ಧ ಪ್ರತಿಪದೆಗೆ ಆರಂಭವಾಗುತ್ತದೆ

ಸೂರ್ಯನ ಗತಿಯ ಅನುರೋಧದಿಂದ ಕಲ್ಪಿಸಿದ ಮಾಸಗಳಿಗೆ ಸೌರಮಾಸಗಳು ಅನ್ನುತ್ತಾರೆ. ಕ್ರಾಂತಿ ವೃತ್ತದಲ್ಲಿ ಹನ್ನೆರಡು ಭಾಗಗಳನ್ನು ಕಲ್ಪಿಸಿ ಪ್ರತಿಯೊಂದು ಭಾಗಕ್ಕೆ ರಾಶಿಯೆಂಬ ಹೆಸರು ಕೊಟ್ಟಿರುತ್ತಾರೆ. ಒಟ್ಟು ರಾಶಿಗಳು ಹನ್ನೆರಡು. ಯಾವ್ಯಾವವೆಂದರೆ:—

೧ ಮೇಷ	೪ ಕರ್ಕ	೭ ತುಳ	೧೦ ಮಕರ
೨ ವೃಷಭ	೫ ಸಿಂಹ	೮ ವೃಶ್ಚಿಕ	೧೧ ಕುಂಭ
೩ ಮಿಥುನ	೬ ಕನ್ಯಾ	೯ ಧನು	೧೨ ಮೀನ

ರಾಶಿಗಳ ಹೆಸರುಗಳೇ ಸೌರಮಾಸಗಳ ಹೆಸರುಗಳು ಉದಾಹರಣೆ; ಮೇಷಮಾಸ ವೃಷಭಮಾಸ ಇತ್ಯಾದಿ.

ಒಂದು ವರ್ಷದಲ್ಲಿ ಸೂರ್ಯನು ಸಂಪೂರ್ಣ ಕ್ರಾಂತಿವೃತ್ತವನ್ನು ದಾಟುತ್ತಾನೆ. ಆದದರಿಂದ ಒಂದು ರಾಶಿ ಬಿಟ್ಟು ಎರಡನೇ ರಾಶಿಯಲ್ಲಿ ಆತನ ಪ್ರವೇಶವಾಗುವದಕ್ಕೆ ಸಂಕ್ರಾಂತಿ ಇಲ್ಲವೆ ಸಂಕ್ರಮಣ ಅನ್ನುತ್ತಾರೆ. ರಾಶಿಗಳ ಹೆಸರುಗಳೇ ಸೌರಮಾಸಗಳ ಹೆಸರುಗಳು ಮತ್ತು ಸಂಕ್ರಾಂತಿಗಳೇ

ಸೌರ ಮಾಸಗಳ ದಿವಸ ನಿಯಮಿತ ಇರುವದಿಲ್ಲ; ಹೆಚ್ಚು ಕಡಿಮೆ ಇರುತ್ತವೆ. ಕೆಲವು ಸೌರಮಾಸಗಳು ಮೂವತ್ತು ದಿವಸಗಳು; ಕೆಲವು ಮೂವತ್ತೊಂದು ದಿವಸಗಳು ಇರುತ್ತವೆ. ಹನ್ನೆರಡು ಸೌರಮಾಸಗಳೆಂದರೆ ಒಂದು ಸೌರವರ್ಷ ಆಗುತ್ತದೆ. ಸೌರ ವರ್ಷದ ದಿವಸ ಸುಮಾರು ಮುನ್ನೂರ ಅರವತ್ತೈದು ಆಗುತ್ತವೆ

—○—

The Ecliptic.

ಕ್ರಾಂತಿವೃತ್ತ—

ಬುಧನಮೇಲೆ ಸೂರ್ಯನ ತಾಪವು ಪೃಥ್ವಿಗಿಂತ ಏಳುಪಟ್ಟು ಹೆಚ್ಚಾಗುತ್ತದೆ. ಆದರೆ ಅವನ ಕೇಂದ್ರಚ್ಯುತಿಯು ಬಹು ಹೆಚ್ಚಾದ್ದರಿಂದ ಈ ಉಷ್ಣತೆಯು ಅವನು ಉಚ್ಚನಿದ್ದಾಗ್ಯೂ ಕಡಿಮೆ ಇದ್ದು ನೀಚಸ್ಥನಿದ್ದಾಗ್ಯೂ ಬಹಳವಾಗಿರಬೇಕು. ಗ್ರಹಮಾಲೆಯಲ್ಲಿ ಶುಕ್ರನು ಎರಡನೇಯವನು. ಬುಧಾದಿಗಳ ಕಕ್ಷೆಗಳ ನಡುವೆ ಅವನ ಕಕ್ಷೆಯು ಇದೆ. ಸೂರ್ಯನಿಂದ ಅವನ ಮಧ್ಯಮಾಂತರವು ೬೭ ಮೈಲುಗಳು. ಅವನ ಪ್ರದಕ್ಷಿಣಾ ಕಾಲವು ೨೨೪ ದಿವಸ ೧೬ ತಾಸು ೪೯ ಮಿನಿಟುಗಳು. ಬುಧನಂತೆ ಅವನನ್ನು ಸಹಿಸುವ ಉಪಗ್ರಹವು ಇಲ್ಲವಿಲ್ಲ. ಅವನ ವ್ಯಾಸವು ೭೬೦೦ ಮೈಲುಗಳಾಗಿದ್ದು ಅದು ಪೃಥ್ವಿಯ ವ್ಯಾಸಕ್ಕಿಂತ ೨೦೦ ಮೈಲುಗಳಷ್ಟು [illegible] ಅವನ [illegible] ಅವನ [illegible] [illegible] ಪೃಥ್ವಿ [illegible] ಅವನ [illegible] ಪೃಥ್ವಿಯು [illegible]

ವರಣವುಳ್ಳವನು. ಇವೆಲ್ಲ ಕಾರಣಗಳಮೇಲಿಂದ ಅವನು ಪೃಥ್ವಿಗೆ ಎಲ್ಲಪ್ರಕಾರದಿಂದ ಹೋಲುತ್ತಾನೆ. ಪೃಥ್ವಿಗಿಂತ ಅವನ ಮೇಲೆ ಉಷ್ಣತೆಯೂ ತೇಜವೂ ಇಮ್ಮಡಿಯಾಗಿರುತ್ತದೆ. ಶುಕ್ರನು ಬಹು ಸುಂದರವಾದ ಗ್ರಹನಾಗಿದ್ದು ಸೂರ್ಯನಿಂದ ದೂರಾದಮೂಲಕ ಅವನ ಪೂರ್ವದಲ್ಲಿದ್ದಾಗ್ಯೆ ಅವನು ಅಸ್ತದನಂತರ ಬಹು ಎತ್ತರವಾಗಿಯೂ ಬಹಳಹೊತ್ತು ಕ್ಷಿತಿಜದ ಮೇಲೆ ಇರುತ್ತಾನೆ. ಮತ್ತು ರವಿಯ ಪಶ್ಚಿಮದಲ್ಲಿದ್ದಾಗ್ಯೆ ಅವನ ಉದಯದ ಪೂರ್ವದಲ್ಲಿಯೇ ಮುಪ್ಪಳಹೊತ್ತು ಉದಯನಾಗುತ್ತಾನೆ. ಇದಲ್ಲದೆ ಅವನು ಎಲ್ಲಕಡೆಗೆ ಕಂಡುಬರುತ್ತಾನೆ. ಅವನಿಗೆ ಬೆಳಗಿನ ಮತ್ತು ಸಂಜೆಯ ನಕ್ಷತ್ರವೆಂಬ ಹೆಸರುಗಳನ್ನು ಯುರೋಪಿಯನ್ನರು ಕೊಟ್ಟಿದ್ದಾರೆ. ಅವನ ಪ್ರಕಾಶವು ಶ್ವೇತವಾದದ್ದಾಗಿ ಚಂದ್ರನ ಪ್ರಕಾಶದಿಂದ ಭಿನ್ನವಾದದ್ದು. ಅವನು ಬಹು ಸುಂದರವಾಗಿ ಕಂಡು ಬರುವದರಿಂದ ಅವನು ಸುಂದರತ್ವದ ಅಭಿಮಾನಿಯಾದ ದೇವತೆಯೆಂದು ಯುರೋಪದ ಪ್ರಾಚೀನಜನರು ತಿಳಿದಿದ್ದರು. ಶುಕ್ರನ ಕಕ್ಷೆಯು ಪೃಥ್ವಿಯ ಕಕ್ಷೆಯಂತೆ ಬಹುಥಾ ವರ್ತುಳವಾದದ್ದೇ ಅದರ ಕೇಂದ್ರಚ್ಯುತಿಯು ಮಾತ್ರ ಉಂಟು. ಅವನ ಕಕ್ಷದ ಪಾತಳಿಯು ಕ್ರಾಂತಿವೃತ್ತದ ಪಾತಳಿಗೆ ೩।೨೩।೨೯ಗಳ ಕೋನವನ್ನು ಮಾಡುತ್ತದೆ.

—o—

Correspondence.

ಪತ್ರವ್ಯವಹಾರವು.

ರಾ. ಸಾ. ಕನ್ನಡ ಶಾಳಾಪತ್ರಕದ ಎಡಿಟರ ಇವರಿಗೆ——

ವಿನಂತಿವಿಶೇಷ ಕೆಳಗೆಬರೆದ ನಾಲ್ಕು ಸಂಗ್ತಿಗಳಿಗೆ ಅಂದವಾದ

ತಮ್ಮ ಶಾಲಾಪತ್ರಿಕೆಯಲ್ಲಿ ದಾತೃಗಳ ಸಂಚಿಕೆಯಲ್ಲಿ ಸ್ಥಳ
ಕೊಡುವಿರೆಂಬುದಾಗಿ ಪೂರ್ಣವಾಗಿ ಆಶಿಸುತ್ತೇನೆ — ಸನ್
೧೮೮೩ನೇ ಇ. ಮೇತಿಂಗಳ ಶಾಲಾಪತ್ರಿಕೆಯ ಪುಟ ೧೧೩ಕ್ಕೆ
ಉತ್ತರವು — ಹುಬ್ಬಳ್ಳಿಯ ಪಶ್ಚಿಮ ದಿಕ್ಕಿನ ಮಾವಿನ ತೋಪಿ
ನಲ್ಲಿರುವ ಆರೂಢರವರ್ಣನೆಯ ಕವಿತೆಯನ್ನು ಕೆಳಗೆ ಸಹಿಮಾ
ಡಿದ ನಾನು ಮಾಡಿರಲು ಆ ಚೂತವನದಲ್ಲಿ ಆದ ಉತ್ಸವಕ್ಕೆ
ನೆರೆದ ಸಭಾಜನರು ಕವಿತೆಯನ್ನು ಓದಿಹೇಳಬೇಕೆಂದು ಆಗ್ರಹ
ಮಾಡಲು ಆಗ ನನ್ನ ಬುದ್ಧಿಗೆ ತಿಳಿದಷ್ಟು ಮಾಡಿದ್ದೇನೆಂದು ನೆ
ರೆದ ಪರೀಕ್ಷಕರಿಗೆ ಸೂಚಿಸಿ ಆ ಕವಿತೆಯನ್ನು ಸಂಗೀತದೊ
ಡನೆ ವಿದ್ಯಾರ್ಥಿಗಳಿಂದ ಹಾಡಿಸಿ ಅವುಗಳಅರ್ಥವನ್ನು ಹೇಳು
ವಕಾಲಕ್ಕೆ ಸ್ವಲ್ಪ ಅಸಮಾಧಾನದಲ್ಲಿ ಕೂತಂಥಾ ಮಹಾ ಪಂಡಿ
ತರಾದ ಹುಬ್ಬಳ್ಳಿ ೧೨ನೇ ತದ [?] ಚಂಶೆಯ್ಯನವರಿಗೆ [?] ಸಹಜವಾ
ಗದೆ ವಿರುದ್ಧಪ್ರಶ್ನೆಯನ್ನು ಮಾಡಿದರು ಹಾವದಂದರೆ [?] ಚೂತ
ವನಾಶ್ರಿತಮ್ಯಾತ್ರಸಿದ್ಧಾರೂಢ ಇದರಲ್ಲಿ ಚೂತವನಾಶ್ರಿತ ಎಂಬ
ಪದವನ್ನು ವಿಶೇಷಣಮಾಡದೇ ಚೂತವನಾಶ್ರಿತ ಎಂಬರ್ಥ ಮಂ
ಗಂಗೆ ಯಾಕೆ ಅರ್ಥಮಾಡಬಾರದೆಂದು ನೆರೆದ ಸಭೆಯಲ್ಲಿ ಇಂ
ಥಾ ಅಯೋಗ್ಯಪ್ರಶ್ನೆಯನ್ನು ಮಾಡಲು ಆಗನಾನು — ಒಂದು ಶ
ಬ್ದಕ್ಕೆ ಅನಂತ ಅರ್ಥಗಳಾದರೂ ಸಮಯಾನುಸಾರವಾಗಿ ಅನು
ಕೂಲವಾದ ಅರ್ಥವನ್ನು ತೆಗೆದುಕೊಳ್ಳಬೇಕೆಂದು ಹೇಳಿದಾಗ್ಯೂ
ದರು ಇಂಥಾ ಪ್ರಶ್ನಗಳನ್ನೇ ಪುನಃ ಮಾಡಲು ಚೂತವನಾಶ್ರಿತ
ಎಂಬ ಅರ್ಥವು ಮಂಗನಿಗೆ ಇಲ್ಲ ಮಾಡಬೇಕೆಂಬುದಾಗಿ ಪಂ
ಡಿತರು ಒಡಂಬಟ್ಟರೆ ಲೇಖಣಿಕೆಯನ್ನು ಹಿಡಿದು ಬರೆಯಲಿಕ್ಕಿ
ಲ್ಲವೆಂಬುದಾಗಿ ಪ್ರತಿಜ್ಞಾಮಾಡಿದ್ದು ಸತ್ಯವಿರುತ್ತದೆ ... ಆಗ ಅ
ಲ್ಲಿ ಹಳೆಗನ್ನಡಿನಲ್ಲಿ ವಿಚಾರವಂತರಾದ ರಾ· ಶಿವನಪ್ಪಗಾ

ಪ್ರಭುತ್ವಕ್ಕೆ ರಾಜ ಗದಗಿನ ಹಳಕಲ್ಲು ಗುರುಲಿಂಗಸ್ವಾಮಿಗಳು ಅವ ರು ಮೊದಲಾದ ಬಹು ಪಂಡಿತರು ವಿಚಾರಮಾಡಿ ಇಂಥಾ ಅನೇಕ ಪ್ರಶ್ನೆಗಳನ್ನು ಮಾಡಬಾರದೆಂದು ಹೇಳಲು ಆ ಐಯ್ಯನವರಿ ಗೆ ಸಭೆಯಲ್ಲಿ ಅಪಮಾನವಾಯ್ತೆಂದು ತಿಳಿದು ಮಾರನೆಯದಿನ ಎನಗೆ ತಮ್ಮ ಮಗನಾದ ಶಿಷ್ಯನನ್ನು ಕರೆದುಕೊಂಡು ಬರದಿಂ ದ ತಪ್ಪನಾಡುವನಿಗೆ ಶ್ರೀರಾಮ ವಿಷಯಾಗಿ ತೆಗೆದಂತೆಯೂ ಕು ರುಡನು ಕೈಯೊಳಗಿನ ಕಪ್ಪ ಬಿಡುವಂತೆಯೂ ಶಿಷ್ಯನ ಮುಂದಾ ಗಲು ನಾಗಿನ ಶರೀರದಂತೆಯೂ ನನ್ನ ಕವಿತೆಯಲ್ಲಿ ಇಲ್ಲದಂಥಾ ತ ಪ್ಪುಗಳು ಐಯ್ಯನವರಿಗೆ ತೋರಿದ್ದರಿಂದ ಆ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ ಅವರ ಪ್ರಶ್ನದ ತಪ್ಪುಗಳನ್ನೆಲ್ಲ ಕ್ರಮದಿಂದ ವಿ ಚಾರಮಾಡಿ ಬರೆದಿರುವ ಬರಹಗಳಾದ ವಿದ್ವಜ್ಜನರು ಲಕ್ಷ್ಯ ಗೊಟ್ಟು ತಿಳಿದುಕೊಂಡು ಬೇಡಿಕೊಳ್ಳುತ್ತೇನೆ.

॥ ಪದ ॥ ಪಾರ್ವತೀಶ ಶಿವ । ಪಾರ್ವತೀಶ ಶಿವ । ಪಾರ್ವತೀರಂಜ ನ ಶಂಕರನೆ ॥ ಇದರಲ್ಲಿ ನೀನು ಎಂಬ ಕರ್ತೃಪದವು ಕನ್ನಡ. ಅನೆ ಪಾರ್ವತಿ ಎಂಬ ಕ್ರಿಯಾಪದವು ಸಂಸ್ಕೃತವು ಹೀಗೆ ಇರಬಾರ ದು ತಪ್ಪು ಎಂಬುವದಕ್ಕೆ ಉತ್ತರ – ನೀನು ಎಂಬ ಪದವು ಕ ವಿತೆಯಲ್ಲಿ ಇಲ್ಲದಿಲ್ಲ ತಾವೆಕ್ಕೆಯಿಂದ ಹಾಕಬಾರದು ಹಾ ಕಿದ್ದಾರೆ ಇದಕ್ಕಾದರು ಉ. ಜೈಮಿನಿಯಲ್ಲಿ ಗಣೇಶಸಂಧಿ ೨೨ ನೇಪದ (ಜಯ ಚತುರ್ಮುಖಜನಕ) ಈ ಪದದಲ್ಲಿ ನೋಡತಕ್ಕ ದ್ದು । ೧ ॥ ಪದ ॥ ಭೂ ಲೋಕ ಜೋಡಪಾತ್ರಿ ತಪ್ಪಾಗಿ ನಿನ್ನ ರೂಪ ವರದಲ್ಲಿ ಆರಾಧರಿಗೆ ಜೋಡಪಾತ್ರಿ ತಪ್ಪಿಂಬ ವಿಶ್ವನಾಥ [illegible] [illegible] [illegible] [illegible] [illegible] ೧೦ [illegible]

...ತಾರ್ಥವನ್ನು ಹೇಳಿದಕ್ಕೆ ದಾತ್ರವಿಡವಾಂಚಕ ನಿತ್ರಯದಂತೆ
...ಪಂಡಿತರು ಅರ್ಥಮಾಡಿದಷ್ಟರಲ್ಲಿ ಅರ್ಥಜ್ಞಾನವು ದಾರ
ಇಲ್ಲವೆಂಬುವದನ್ನು ವಾಚಕರೆ ತಿಳಿದುಕೊಳ್ಳಬೇಕು ||೨||
ಜೀವನಾಶ್ರಯವು ಭೋಗಿಗಳಿಗಲ್ಲದೆ ಆರೂಢರಿಗೆ ಸಲ್ಲ
ತಕ್ಕದ್ದಲ್ಲವೆಂಬುವದಕ್ಕೆ ಉ. ಮನ್ಮಥನ ಸಹಾಯ ಪದಾರ್ಥಗ
ಳ್ಳ ಸ್ತ್ರೀ ಮೊದಲಾದ ಸುಂದರವಸ್ತುಗಳು ದೃಷ್ಟಿಗೆಬೀಳದೆ
...ತ ಗವಿ ಅರಣ್ಯಗಳಲ್ಲಿ ಮಾನಸಪೂಜಾಸಂಕ್ಷವು ಇಂದ್ರಿಯ
ವನ್ನು ಜೈಸುವದು ಆಶ್ಚರ್ಯವಲ್ಲ ಇದಕ್ಕೆ ಪ್ರಮಾಣ || ನಿ
ರ್ಗುಣ ಶಿವಯೋಗಿ ವಿರಚಿತ || ಪದ || ಸೋಜಿಗದಾತನ ನೀತ
ವನದೊಳಗೆ ಬಾಲೆಯರ ಶೃಂಗರವನು ಕಂಡು || ಇದರಂತೆ
ನ್ಮಥನಿಗೆ ಸಹಾಯ ಮಾದಂತಿರುವ ಜೀವನದಲ್ಲಿ ಮಾನಸಪೂಜೆಯು
...ರ್ಥರು ವಿಷಯಾದಿಗಳಿಗೆ ಸಿಲ್ಕಿದಂತಿದ್ದವೋಲ್ ಈ ಪರೀ
) ಅತಿ ಭಯಂಕರವಲ್ಲವೆ || ೩ || "ತಿರ್ಥ ಭಕ್ತ
ಶಂಕರನಿಗೆ ಸಲಹುಯಿಂದು ಕಪಾಲೀಹಾಕಿ ಕೊಟ್ಟದ್ದು
...ದು ಶೀಲಶಬ್ದವನ್ನು ಉಪಯೋಗಿಸಿದಕ್ಕೆ ಉ. || ಶಿವ ಭ
(ಶಿವನನ್ನು ಭಜಿಸುವದಕ್ಕೆ) ಜಂಗಮಯ್ಯನವ [illegible]
...ಯು ಮಾಡಲಿಯಿಂದು [illegible]
...ಗೂ ಕಪಾಲಿಹಾಕಿ ಕೊಟ್ಟದ್ದು ಈಗ ಅವರ್ಶಕರ ಅ
ಕಾರದರೆ ಜಂಗಮಯ್ಯನವರ ಪಾದದಮೇಲೆ ದಾರೂಕ್ಕೆ
ರಡಂತಲೂ ಅರಿಯದೆಹೋಪ್ಪರೆ [illegible] ಅ
ಬರಹದಿಂದಲೇ ಆಗ ತ್ರಯೋದಶಿ ಪ್ರದೋಷಿ, || ಮಂತ್ರ
ಗಳಲ್ಲಿ ಅಗ್ನಿಯನ್ನು ಸ್ಥಾಪಿಸಿ ಹವಿಸ್ಸನ್ನು ಕೊಡುವ
ಇಂದ್ರಾದಿದೇವತೆಗಳು [illegible]
[illegible] ಅವನಿಗೆ [illegible]

ಬ ವೇದಪ್ರಮಾಣವು ಅಪಸ್ಥವಾದರೆ ಶಂಕರನು ಆರೂಢರ
ಸ್ತ್ರೀರನ್ನು ಸಲಹುವೆಂಬುವದು ಅಸಿದ್ಧವಾಗಲಿ ।। ಮತ್ತು
ರುಷಿಸನ್ನು ಭಕ್ತಿಯಿಂದ ಪೂಜಿಸಿದಗುರುಭಕ್ತರಿಂದಾರಿ ಮೊ
ಲಾದಭಕ್ತರಿಗೆ ಹರನು ಪ್ರಸನ್ನನಾಗಿ ಸಲಹಿಂದಂಥಾ ಪು
ಣ್ಯಾಂತರ ಕಥೆಗಳನ್ನು ವೋದಿ ಕೇಳಿದವರು ಹೀಗೆಂದಿಗೂ
ರಿಯಲಾರರು ।। ೪ ।। ಪದ ।। ಈತನು ದೇವಾಂಶದಿಂದ ಜ
ಜನಾಗಿ ಚಿತ್ರರಥಗೆ ಸೀತಕಿರಣನಾದ ನಾಥಜಾತವಾಸುಹಂ
ಪರನ ।। ಜನನಮರಣರಹಿತವಾದ ಆರೂಢಪದಕ್ಕೆ ಉತ್ಪತ್ತಿಹ
ಳಬಾರದೆಂಬುವದಕ್ಕೆ ಉ. ।। ಆರೂಢರಾದಮೇಲೆಮಾತ್ರ ಜ
ಮರಣವಿಲ್ಲ ಇದುಸತ್ಯ ಆರೂಢರಾಗಬೇಕಾದರೆ ಮೊದಲು ದ
ಮಾಂಸಜಾತರಾಗದೆ ಆಗದ್ದಾರೆಹ್ಯಾಗೆ ಈಗ ನೋಡಿರಿ ಚರಂ
ಯ್ಯನವರು ಆಮೇಲೆ ಪುನ: ಜನಿಸಿ ಅವರೆ ಯೆಲ್ಲಿ ಆಗುತ್ತಾರ
ಮೊದಲು ದಾರಿಂದ ಆದರೂ ಹುಟ್ಟದೇ ಇದ್ದರೆ ಚರಂತಯ್ಯನ
ರು ಆಗುತ್ತಿದ್ದರೆಹ್ಯಾಗೆ ।। ೫ ।। ದೇವಾಂಶಜಾತ — ಅನಾಥಜಾ
ತನೆಂದು ಎರಡುಕಡೆಬರುದಕಾರಣ ಇದು ದ್ವಿರುಕ್ತಿದೋಷವೆಂ
ಬುವದಕ್ಕೆ ಉ. ।। ಅನಾಥಜಾತನೆಂಬಲ್ಲಿ ಕವಿತೆಯ ಅರ್ಥ
ಬ್ಬಾರೆ ಇದ್ದು ಎಗಡುಬ್ಯಾಳ್ಳ ಜಾತವೆಂಬುವದು ದ್ವಿರು
ಯುತೆಂಬದಾಗಿ ಬರೆದದ್ದು ಎಂಥಾತಿಳುವಳಿಕೆಯು ನೋಡಿ ।। ೬ ।।
ಪರಮಹಂಸರಲ್ಲಿ ಶ್ರೇಷ್ಠವೆಂದು ಆರೂಢರಿಗೆ ಹೇಳಬಾರದೆಂ
ಬ ವದಕ್ಕೆ ಪ್ರಮಾಣ ।। ಶ್ಲೋಕ ।। ಹಂಸೋನಿರ್ಲೋಭನ್ಯಸ್ತಶ
ಶಾರೀರ ಮರಣಾಂತರೆ ಹಯಭಿಸ ಯೋಗಿಭಿಸ ಮಂತ್ರಭೇದ
ವಿಮತ್ಸರೆ । ಪಂಚಮಾತ್ಮನಿ ವಿಶ್ವಾಚ ಶ್ರೇಷ್ಠರಾಜಾಧಿಪೂರ್ವಕ ಇ
ತಿಮೇಯಿಃ ।। — ಹಂಸಶಬ್ದವು ಇಂತಿಷ್ಟರಲ್ಲಿ ವರ್ತಿಸುತ್ತಿದ್ದ
ಕಾರಣ ಆರೂಢರಿಗೆ ಯಾವ [illegible]

ಕೊಂಡರೆ ಎಂಬ ಅರ್ಥವು ಅವರಿಗೆ ತಿಳಿದಿರಲಿಕ್ಕಿಲ್ಲ. ಹಿಂದು ವಾಕ್ಯಗಳಿಕ್ಕೆ ತಿಳಿದಿದ್ದರು ಅರ್ಥಗೋಚರವಾಗಲಿಕ್ಕಿಲ್ಲ ಗೋಚರ ವಾಗಿದ್ದರು ಅವರ ಕಲ್ಯಾಣಗುಣಗಳು ಅಷ್ಟೇ ಮಾಡುಬಹುದು; ಇದರಿಂದ ಪೂರ್ಣವಾದ ಕೋಶಜ್ಞಾನವು ದಾರಿಗಿಲ್ಲವೆಂಬುವದನ್ನು ವಾಚಕರೇ ತಿಳಿದುಕೊಳ್ಳಲಿ ॥ ೭ ॥ ವಾದ ॥ ಪರಮಾಸಿದ್ಧಾರೂಢ ಯತಿಯು ಯೆಂಬ ಪದದಲ್ಲಿ ಆಶ್ರಮಪದಕ್ಕೆ ಹೊಳಗಾದ ಯತಿಪದ ಹಿಟ್ಟಿದ್ದು ತಪ್ಪು ಎಂಬ ಪದಕ್ಕೆ ಉ॥ ಇದಕ್ಕೆ ॥ ಶ್ಲೋಕ ॥ ವಿಜಿತೇಂದ್ರಿಯ ಗ್ರಾಮಾಯತಿ ನೋಯತಿ ಯಶ್ಚತೇತ್ಯವ: ॥ ಯತಿಶಬ್ದಕ್ಕೆ ಅರ್ಥ ॥ ಯತ ಇಂದ್ರಿಯಸಂಯಮ: ಯಸ್ಯಾಸ್ತೀತಿಯತಿ: (ಯಥೇತಿ ಇಂದ್ರಿಯೇಭ್ಯ ಇತಿಯತಿ:) ಹೀಗೆ ಯತಿಶಬ್ದದ ಅರ್ಥವು ಗೊತ್ತಿಲ್ಲದೆ ಯತಿಯಾಶ್ರಮದಕಡೆಗೆ ಲಕ್ಷ್ಯಗೊಟ್ಟು ವಿಪರೀತಾರ್ಥವಾದಾದ್ದರೆ ಇಂಥಾ ವಿಷಯದ ಉದಾಹರಣಾರ್ಥವಾಗಿ ಆ ಚರಂತಯ್ಯನವರನ್ನೆ ತೆಗೆದುಕೊಳ್ಳುವ. ತಾವು ದ್ವಾದಶಮಾತಾಪ್ರಕ್ಷ ಚರಮೂರ್ತಿಗಳಿಂದು ಉಚತನವಲ್ಲ ಬರೆದಿದ್ದಾರಷ್ಟೆ। ನಮ್ಮ ಲಿಂಗಾಯತ ಧರ್ಮದಲ್ಲಿ ಚರಮೂರ್ತಿಗಳ ಆಶ್ರಮವಾವದು ಅವರು ಹ್ಯಾಗಿರಬೇಕೆಂಬಗ್ಗೆ ಮುಖ್ಯ ಮತಗ್ರಂಥಗಳ ಪ್ರಮಾಣವುಂಟು ಅವುಗಳನ್ನೆಲ್ಲಾ ಇಲ್ಲಿ ಬರೆದರೆ ಬಹಳ ವಾಡೀತೆಂದು ಅದರ ಅರ್ಥವನ್ನೆ ತಿಳಿಯುವಂತೆ ಸ್ವಲ್ಪದರಲ್ಲಿ ಬರೆಯುತ್ತೇನೆ "ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ ಕಾವಿಬಟ್ಟೆಯನ್ನು ಹೊದ್ದುಕೊಂಡು ಕೈಯಲ್ಲಿ ದಂಡವನ್ನು ಹಿಡಿದು ಇತರ ಪದಾರ್ಥಗಳ ಆಶೆಯಿಲ್ಲದೆ ಧರ್ಮೋಪದೇಶಮಾಡುತ್ತ ಚರಿಸುತ್ತಿರುವ ವಿರಕ್ತಮೂರ್ತಿಗಳ ಲಕ್ಷಣವು. ಚರಮೂರ್ತಿ ಈ ಶಬ್ದದ ಅರ್ಥವಾದರೂ ಹೀಗೆ ಆಗುತ್ತದೆ ಇಂಥಾ ಸ್ವಭಾವಲಕ್ಷಣಗಳನ್ನು ಬಿಟ್ಟು। ಕಾವಿಯ ಮಾಡಿಯನ್ನು

ಸುತ್ತುತಲಿಗೆ ಬಹು ಶುಭ್ರವಾದ ಜರತಾರಿಯ ರುಮಾಲವನ್ನು ಸುತ್ತಿ ಕಾವಿಯ ಕಫನಿಯನ್ನು ತೊಡಿಸಿ ಶರೀರದಲ್ಲಿ ಕಂಠ [illegible] ಸ್ವರ್ಣಾಂಗಗಳನ್ನು [illegible] ತೊಟ್ಟು ರತ್ನ ಕೀರ್ತಿಮಾಲೆಯನ್ನು ಧರಿಸುವ ಸ್ಕಂಧಾಗ್ರದಲ್ಲಿ ಕರವಸ್ತ್ರ [illegible] ಧೂತವನ್ನು ಹೊಂದಿಕೊಂಡು, ಕೌಪೀನವನ್ನು ಧರಿಸುವ [illegible] ಪಾದಗಳಿಗೆ [illegible] ವಸ್ತ್ರವನ್ನು ಕಟ್ಟಿಕೊಂಡು [illegible] ಹಾರಗಳನ್ನು, ಮೆಟ್ಟಿದ ಚರಣಗಳಲ್ಲಿ ಅತಿ ಚಿತ್ರವಾದ [illegible] ಕೈಗೆ [illegible] ಮೆಟ್ಟಿಕೊಂಡು ಕ್ರಿಯೆಯಲ್ಲಿ [illegible] ಭಕ್ತರಿಗೆ ಅನುಕೂಲವಾದ ಪದಾರ್ಥಗಳಲ್ಲಿ ಅತಿಯಾ ಶಯುಕ್ತರಾಗಿ, [illegible] ಇಂಥಾ ಲಕ್ಷ್ಮೀಕಟಾಕ್ಷವು [illegible] ಸಂಚರಿಸುವವು ಯಂಥಾ ಚರಣ [illegible] ಭಕ್ತಿಗೆ [illegible] ತವ್ಯ [illegible] ಗಳು [illegible] ಯತಿಗಳು ಎಂದು [illegible] ಗಳಿಗೆ [illegible] ಗಳನ್ನು [illegible] ಗಳೆಂದು ಕರೆಯುವ [illegible] ॥ ೫ ॥ [illegible] ಎಂಬ ವೃತ್ತದಲ್ಲಿ ॥ ಕತ್ತುರಿಯು [illegible] ಶ್ರೀ [illegible] ಶ್ರೀಗಂಧ [illegible] ॥ [illegible] ಸಜ್ಜನರು ಇದು ಕತ್ತುರಿ [illegible] ವಸಂತೋತ್ಸವ ಎಂಬ [illegible] ಸಜ್ಜನರು [illegible] ವಿಸರ್ಗವನ್ನು [illegible] ವಿಭಕ್ತಿಗಳನ್ನು [illegible] ॥ ೬ ॥ [illegible] ಸಂಗವಂತ [illegible] ಸಾಧಕರು [illegible]

ಬುಧದಕ್ಕೆ ಉ. | ಸುಧಾಮೋಕ್ಷಸುಧಾಪ್ರ್ಯತ್ರಾ ಇತಿವಿಶ್ವ : ಹೀಂ
ಗೆ ಕೋಶಾಧಾರವಿರಲಕ್ಕೆ ತನಗೆ ತಿಳಿಯದೆ ಅನ್ಯರು ಹೇಳಿದನ್ನು
ಕೇಳಿ ಹೀಗೆ ಬರೆದಮೇಲೆ ಅಯ್ಯನವರಲ್ಲಿ ಕೋಶಜ್ಞಾನವು
ಎಷ್ಟು ಶ್ರೇಷ್ಠವಾಯಿತು ನೋಡಿರಿ || ೧೦ || ಮೋಕ್ಷಸ್ತ್ರೀಶಬ್ದ
ಒದಗಿದ ಸಂಧಿ ಮಾರ್ಗಶಬ್ದವಿವರಣೆ ಬುಧದಕ್ಕೆ ಉ. ||
ಮೋಕ್ಷಮಾರ್ಗಯೆಂದರೆ ತನ್ನ ಗುತ್ತಿತ್ತು ಹಾಗೆಯೇ ಗಿಗಳು
ಅಂಗನಾಮಾರ್ಗ ಯೆಂಬ ಪ್ರಯೋಗವು ಅವರ ಕಂಠಕ್ಕೆ ಗೆ
ನಾಟಿದಂತೆ ತೋರಲಿಲ್ಲ ಸುಧಾಶಬ್ದ ಬೇರಿಡಾಡಿ ಅಂಗನಾಮಾ
ರ್ಗಶಬ್ದ ಬಿಟ್ಟುಮಾಡತಕ್ಕದನ್ನು ತಿಳಿಯದವರೆ ಇದನರ್ಥಗ
ಳ ಜ್ಞಾನವು ಹ್ಯಾಗಿ ಬಹುದು ನೋಡಿರಿ || ೧೧ | ಪತ್ನಿ
ಮೋಕ್ಷಸ್ತ್ರೀಸಂಗಮಾಡಿದವನೆಂದು ನಿಜಗವನ್ನು ಪ್ರಕಟಮಾಡಿ
ದಕ್ಕೆ ಉ. | ರಾಮಚಂದ್ರನು ಏಕಪತ್ನೀವ್ರತಸ್ಥನೆಂದು ಜಗ
ತ್ಪ್ರಸಿದ್ಧವಷ್ಟೆ | ಜ್ಯೈಮಿನಿಯ ೧ನೆಸಂಧಿ ೪ನೆಪದ್ಯ |
ಚಿಂತಾಲತಾಂಗಿಯು ಕೇಳ ಗೆಡೆಗೊಟ್ಟು ರಾಜೇಂದ್ರನಿರೆ ಕೇಳ್ಕ್ಷಿತಿ
ಪನಂದ || ಎಂಬಲ್ಲಿ ಅಯ್ಯನವರ ಅಭಿಪ್ರಾಯದಂತೆ ಅರ್ಥ
ಮಾಡಿದರೆ ರಾಮಚಂದ್ರನು ಪರಸ್ತ್ರೀಗಮನ ಮಾಡಿದಂತಾ
ಯಿತು ಇಂಥಾ ಅರ್ಥಮಾಡುವ ಜನರಿಗೆ ವಾಚಕಜನರು ಏನೆಂ
ದು ಕರೆಯುತ್ತೀರಿ || ೧೨ || || ಇದಲ್ಲದೆ || ಪ್ರಕರಣಾ
ಲಂಕಾರಸಂಬ ಕಂದಪದ್ಯದಲ್ಲಿ || ಕಿಂಕರ ಶಬ್ದವು ಸೇವಾ
ವಾಚಕವು ಬಿಟ್ಟು ಮಹಾಪುರುಷನಿಗೆ ಅನೇಕಜನರಿಂದ ಸೇವೆ
ಮಾಡುವವರಿರುತ್ತಾರೆ ಆದ್ದರಿಂದ ಗಂಗಾ ವೀರಭದ್ರ
ನೆಂಬುವರು ರಾಮ ಜನ್ಮಯಾತ್ರೆಗೆ ಹೋದರು ಗೋತ್ರಗಳಲ್ಲಿ ಮೆಂಬು
ದಕ್ಕೆ ಉ. | ಬನವಾಸಿದೇಶದಲ್ಲಿಯೂ, ಶಂಕರದಾಸಿಯ ಪುರಾ
ಣದಲ್ಲಿಯೂ, ಶಂಕರದಾಸಿಮಯ್ಯನ ಮಹಾತ್ಮ್ಯದ ಪದ್ಯ

ಪೂರುಷರು | ಹಗನಿಂದ ವ್ರತಿಗಳನ್ನು ಪಡೆದು ಲಿಂಗಧಾರಣಾದಿ ಲ್ಲದವರ ಮುಖವನ್ನು ನೋಡದೆ ಪರಮತವನ್ನೆಲ್ಲಾ ನಾಶಮಾಡಿದ್ದಾರೆಂದು ಪ್ರಸಿದ್ಧರಿರಲಾಗಿ ಅದನ್ನು ಒಡೆಕೇಳಿ ಶಂಕರ ದಾಸಿಮಯ್ಯಕಿಂಕರರು ದಾಸಜಾತಿಯವರೆಂಬುವರು ಗೋತ್ರಗಳಿಲ್ಲದು ಬರಿದಮೇಲೆ ಈ ಐಯ್ಯನವರು ಎಂಥಾಜಾತಿಯ ಗುಣದವರೆನಬೇಕಾಯ್ತು || ೧೩ || ಜಲರುಹಭವ ವಂಶಜಾತ ಇದು ವೈಶ್ಯರಿಗೆ ಆಗುತ್ತದೆ ವಿಶ್ವಕರ್ಮ ವಂಶಜರಿಗೆ ಅರ್ಥವಾಗುವುದಿಲ್ಲಂಬುವದಕ್ಕೆ ಉ. | ವೇದಮೂರ್ತಿ ರಾ॰ ವಾಸುದೇವ ಆತ್ಮಾರಾಮು ಇವರು ಮುಂಬಯಿಯಲ್ಲಿ ವ್ಯಾಸಪುರಾಣ ಮತ್ತು ವೇದಾದಿಗ್ರಂಥಗಳ ಮೇಲಿಂದ ಬ್ರಹ್ಮವಿಚಾರವೆಂಬ ಪುಸ್ತಕವನ್ನು ರಚಿಸಿ ಅದಕ್ಕೆ ಪ್ರಾಕೃತ ಟೀಕಾಮಾಡಿದ್ದಾರೆ ಅದರಪ್ರೈಕಿ ಇಲ್ಲಿ ಸ್ವಲ್ಪ ಬರೆಯುತ್ತೇನೆ ಸ್ಕಾಂದ |ನಾ| ಅ ೬ ||ಶ್ಲೋ|| ಆದಿಕರ್ತಾ ವಿಶ್ವಕರ್ತಾ ವಿಶ್ವಕರ್ಮಾ ಜಗದ್ಗುರು: | ಬ್ರಹ್ಮವಿಷ್ಣುಶ್ಚರುದ್ರಶ್ಚಈಶ್ವರಶ್ಚಸದಾಶಿವ : || ೧ || ಅ || ೨ || ಶಿ[illegible]ಕ : ಪಂಚವಕ್ತ್ರೋಜಟೋರ್ಧ್ವೇತಿಗುಣ್ಯೈರ್ಯಥಾ | ವಿಶ್ವಕರ್ಮಾಂಶಕಂಚೈವ ನಿರ್ಮಿತಂ ನಿರ್ಮಲಂಕ್ರಮಂ || ೨ || ಈ ವಿರಾಟ್ಪುರುಷನಿಂದಾಚೆ ಬ್ರಹ್ಮರು ಜನಿಸಿದಕಾರಣ ಮುಖವಾಸತಂಬೆ ವೇದಶಾಸ್ತ್ರವು ಅವನಿಂದಲೆ ಮನು| ಮಯ| ತ್ವಷ್ಟ| ಶಿಲ್ಪಿ | ದೈವಜ್ಞ ಈ ಪ್ರಕಾರ ಐದು ಭೇದಗಳಾದವು. ಅವನಿಂದಾದ ಬ್ರಹ್ಮ ವಿಷ್ಣು ರುದ್ರ ಸಂಭವದಿಂದ ಬ್ರಹ್ಮನಲ್ಲಿ ವಿಷ್ಣು ಜನಿಸಿ ಅಧೋಕ್ಷಜನಾದನು ವಿಷ್ಣುವಿನ ನಾಭೀಕಮಲದಲ್ಲಿ ಬ್ರಹ್ಮನುಜನಿಸಿ ಕಮಲಜನಾದನು. ಇಂಥಾ ಬ್ರಹ್ಮನು ವಿಶ್ವಕರ್ಮನಿಂದ ಜನಿಸಿದಮೇಲೆ ಮನುಮಯಾದಿಗಳು ವೈಶ್ಯರುಹ್ಯಾಗುವದು ಹೀಗೆ ವಿಪರೀತಅರ್ಥಗಳನ್ನು ಮಾಡುವ ಮಹಾ ಪಂ

ದಿಶರಾ ಪ್ರಾಂಬಿತ್ಯಕ್ಕೆ ಗಣನೆಯು ಇಲ್ಲವೆಂದು ತೋರುತ್ತದೆ.

ನವಿರಾಗಿ ಈ ಸದರಿ ನಿಬಂಧದ ೧೧೬ನೇ ಪುಟದಲ್ಲಿ ಹುಸ್ಸೆರದು ಮಠದ ಚರಂತೆಯ್ಯನವರು ಬರೆದ ೧೨ ಶೀರ್ಷಿಕೆಗಳು ಈ ವರ್ಗದ ಬರಹಗಳಮೇಲಿಂದ ದೋಷವು ಆಕ್ಷೇಪಿಸಿದ ಮೆಂಬುವದನ್ನು ವಿದ್ವಜ್ಜನರು ನಿರ್ಧರಿಸಿ ಸರ್ವರಿಗೂ ಸೂಚಿಸುವಿರೆಂಬದಾಗಿ ಬೇಡಿಕೊಳ್ಳುತ್ತೇನೆ —— ಮುದ್ರಾದಯಾಳುಗಳಾದ ಎಡಿಟರರ ಚಿತ್ರವಿಸ್ತಾರವಾದದಕ್ಕೆ ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ.

ರುಕ್ಕಾ ಮುಹ್ರಬ್ಬಳ್ಳಿ } ಚನ್ನವೀರ ಸಿದ್ಧಪ್ಪಯ್ಯಾ ಪುರಾಣೀಕರ
ತಾ. ೩೦|೬|೧೯೨೪. { ಲೋಕಲ್ ಸ್ಕೂಲ ನಂಬರ ೧ ಹುಬ್ಬಳ್ಳಿ.

—o—

ಶ್ರೀಮಲ್ಲಕ್ಷ್ಮೀಶಪ್ರಸಿದ
ವಿನಂತೀಪತ್ರವು

ಶ್ರೀಕರ್ಣಸ್ವರೂಪ ರಾ. ರಾ. ಸರ್ವ ಕರ್ನಾಟಕಸ್ಥ ವಿದ್ವಾಜ್ಞಾನಮಂದಿರ ಸುಗುಣಗಣಗಳ ಬಂಧುರ ಸೇವ್ಯ ಮುಖ್ಯಾಂಧಕರ ಮದ್ದೇಶಾಭಿಮಾನಕ್ಕೆ ಜನಸಾರಂಗ ಜಲಧರಅಂತಸ್ಥಿತಾಯನ ದೇಶಾಭಿಮಾನ ಗುಣನಿಧಾನ ಮಿತ್ರಜ ದೇಶಬಾಂಧವಾಯನರ (ವೃದ್ಧ ವೃದ್ಧ ಯೋಗ್ಯತೆಯು ಮಾನ್ಯರರ) ಸರಸ ಚರಣಾರವಿಂದದ್ವಂದ್ವಗಳ ಸನ್ನಿಧಿಗೆ——

ವಿಲಮುರಾಳಾಭ ಬಾಲಬಂಧು ಶಿವಾನಂದನ ವಿರಸಾಷ್ಟಾಂಗ ಣಾಮಂಗಳು ಭೂಷಣಾ ಅಲಂಕಾರವಾಗಿ ಪ್ರಕಾಶಿಸಲಿ. ಅದರಿಗಿ ಈ ಆಷಾಢವಸ್ಯಳ ಸೇವೆ ಮಾಡಿದ ವರಿಗೆ ಶ್ರೀದೇವಿಯುಲಕ್ಷ್ಮೀಶಾಪ್ರಾಶಿಷ ಕೃಪೆಯಿಂದಲೂ, ಆಯನರಾ ಶಿವಾಂತಃಕರುಣದಿಂದಲೂ, ಇದುವರೆಗೆ ಧಾರವಾ ನಗರದಲ್ಲಿ (ಧಾರ

ವಿದ್ಯಾ ಧನದಾನಿಗಳಾದ ಪ್ರಮುಖ ಮಾಸ್ತರರಿಂದಲೂ, ಆಗ್ಗೆ ಬ
ಹಳೇ ಉತ್ತಮ ಸ್ಥಿತಿಯಲ್ಲಿತ್ತು. ಇದರಿಂದ ಪಶ್ಚಾತಾಪಕ್ಕೆ
ಈಗ ಕಾರಣ ವಾಗಿಧೆ ಈಗಲಾದರೂ ಅಂಥಾ ಮಹದಾಶ್ರಯಿ
ಗಳೂ, ಪ್ರಮುಖಮಾಸ್ತರರೂ ಇಲ್ಲೇನು. ಉಂಟು. ನಾನು ಮೇ
ಲೆ ಬರೆದ ವಿಳಾಸಿಗೆ ಪೂರ್ವರಾದ ನನ್ನಯಜೇಷ್ಠಬಂಧು ಗ
ಳೆಂದರಿದ ತಾವೇ ಇರುವಿರಿ ಇದು ನನ್ನ ಮನದ ನಿಶ್ಚಯದ
ಮಾತು ಇನ್ನು ಮುಂದೆ ಈ ಕನ್ನಡ ಪತ್ರವು ಪೂರ್ವಸ್ಥಿತಿಗೆ
ಬರಬೇಕಾದರೆ ತಮ್ಮ ಸಹಾಯವು ಮುಖ್ಯವಲ್ಲದೆ ಇನ್ನೊಂದಿ
ಲ್ಲೆಂದು ತಿಳಿದು ಅಂತೇ ಇಂದಿನ ಈಸುದಿನದಲ್ಲಿ ನಾನು ತಮ್ಮೆ
ಲ್ಲರ ಸಂನಿಧಿಗೆ ಈ ವಿನಂತೀ ಪತ್ರವನ್ನು ಬರಕೊಂಡಿದ್ದೇನೆ
ಮನದಂತೆ ಬಂಧು ವಿನಂತಿಯನ್ನು ಲಾಲಿಸುವರೆಂದು ಲೋಲ
ನಾಗಿದ್ದೇನೆ. ತಾ. ೨೪।೭।೮೩ಇಸ್ವಿ

ಧಾರವಾಡ ವಿದ್ಯಾಮಂದಿರದಿಂದ } ಬಂಧು ಶಿವಾನಂದನು
ಆಜ್ಞಾಂಕಿತನು

ಮುಂದಕ್ಕೆ ಸಾಗುವದು.

—o—

ಶಾಲಾಪತ್ರಿಕೆ.

ಪುಸ್ತಕ ೧೮] [ಸಂಚಿಕೆ ೮

ಅಗಸ್ಟ, ೧೮೮೩

Education and Improvement.

ವಿದ್ಯಾಸುಧಾರಣಾಸಂಬಂಧವಾದ ಸಂಗತಿಗಳು.

—*○*—

ರಾಮೇಶ್ವರದಿಂದ ಸಿಂಹಲದ್ವೀಪದ ವರೆಗೆ ಸಮುದ್ರದೊಳ ಗೆ ದಿಣ್ಣೆಗಳು ನೀರಿನಮೇಲೆ ಕಾಣುತ್ತವೆ. ಅ ರಾಮನು ಲಂಕೆಗೆ ಹೋಗುವದಕ್ಕೋಸ್ಕರ ಕಟ್ಟಿದ ಸೇತುವೆ ಯು ಇವುಗಳೆಂದು ಕೆಲವರ ತರ್ಕವುಂಟು. ಆ ದಿಣ್ಣೆಗಳ ಸಮು ದ್ರ ನೀರು ಆಳವಿದ್ದಲ್ಲೆಲ್ಲ ಕಟ್ಟೆಗಳನ್ನು ಹಾಕಿ ಹಿಂದುಸ್ಥಾನದಿಂ ಸಿಂಹಲದ್ವೀಪಕ್ಕೆ ಹೋಗಲಿಕ್ಕೆ ಹಾಗು ಅಗಬಿನ ದಾರಿಯ ಸೇ ತುವನ್ನು ಮಾಡುವ ಕೆಲಸಕ್ಕೆ ವಿಲಾಯತಿಯ ಸರಕಾರದವರು ಅನುಮತಿಯನ್ನು ಕೊಟ್ಟಿದ್ದಾರೆ. ಈ ಕೆಲಸ ೫೦ ಲಕ್ಷ ರುಪಾಯಿ ವೆಚ್ಚವಾಗುವದಂತೆ.

—○—

ಎರಡು ವರ್ಷಗಳ ಹಿಂದೆ ಆದ ಖಾನೇಸುಮಾರಿಯಿಂದ ಹಿಂದುಸ್ಥಾನದ ನಿವಾಸಿಗಳ ಸಂಖ್ಯೆಗಳು ತಿಳಿದವು. ಹ್ಯಾಂಗಂದ ಹಿಮಾಲಯದಿಂದ ರಾಮೇಶ್ವರದವರೆಗೆ ಒಟ್ಟು ಜನಸಂ

ಪ್ರ ೩೫೪೮೯೯೬೧೬ ಇವರಲ್ಲಿ ಹಿಂದೂ ೧೮೭೯೩೭೪೫೦; ಮುಸಲ್ಮಾನರು ೫೦,೩೧೫೮೫; ಖ್ರಿಸ್ತೀ ೮೮೬,೩೬೩೪; ಬೌದ್ಧ ಮತದವರು ೩೪೧೮೮೪೪; ಜೈನರು ೧೨೨೧೮೯೬; ಸಿ ಖ್[ಪಂಜಾಬಿ] ೨೫೩೪೨೬; ಇತರ ಧರ್ಮದವರು ೬೪೨೬೫

—೦—

ಯುರೋಪದ ಬೇರೆಬೇರೆ ದೇಶಗಳಲ್ಲಿ ಸನ್ ೧೮೫೧ ೬೨ ಈ ವರ್ಷಗಳಲ್ಲಿ ಆದ ಪ್ರದರ್ಶನಗಳಿಂದ ಆ ಖಂಡ ಸಿಗಳು ಹಿಂದುಸ್ಥಾನದ ಜವಳಿಗಳನ್ನೂ ರತ್ನಗಂಬಳಿ ನೂ ಅರಿತುಕೊಂಡು, ಈಗ ಅವುಗಳನ್ನು ಬಹಳ ಕೊಳ್ಳು ದ್ದಾರೆ. ಇದೇ ಮೇರೆಗೆ ಸನ್ ೧೮೭೧, ೭೩ ಈ ವರ್ಷಗ ಆದ ಪ್ರದರ್ಶನಗಳ ಮೂಲಕವಾಗಿ ವಿಲಾಯತಿಯ ಜನರು ದುಸ್ಥಾನದ ಜವಾಹೀರುಗಳನ್ನು ಕೊಳ್ಳಹತ್ತಿದ್ದಾರೆ. ಪ್ರ ವಗಳಿಂದ ಆಗುವ ಲಾಭಗಳು ಇವೇ.

—೦—

ಮದ್ರಾಸಇಲಾಖೆಯಲ್ಲಿ ಬೀ. ಏ., ಎಫ್. ಏ. ಈ ಸ್ಸು ಮಾಡಿದವರು ಇದುವರೆಗೆ ಸರಕಾರೀ ನೌಕರಿಗಳನ್ನು ಸಾಧಿಸಲಿಕ್ಕೆ ಭಗೀರಥ ಪ್ರಯತ್ನ ಮಾಡಿದಾಗ್ಯೂ, ಅದು ಸಾ ವಾಗದ ಕಾರಣ ಈಗ ಸ್ವತಂತ್ರ ಉದ್ಯೋಗಗಳನ್ನು ಕೈಕೊ ಹತ್ತಿದ್ದಾರೆ. ಕೆಲವರು ಬೀ. ಏ. ಪದವಿಯುವರು ಬೆಂಗಳ ಲ್ಲಿ ಅರಿವೆ ಅಂಗಡಿಗಳನ್ನೂ, ಲಿಂಪಿಗಮುಂತಾದ ಹಸ್ತ ಕ ಲ್ಪದ ಅಂಗಡಿಗಳನ್ನೂ ಹಾಕಿಕೊಂಡು, ಉದರಂಭಣ ಡುತ್ತಾರೆ. ವಿದ್ಯಾ ಕಲಿತದ್ದರಿಂದ ಯಥಾರ್ಥವಾದ ಪ್ರಯೆ ಜನವು ಇದೇ—

ಪೋಲೀಸ ಅಮಲ್ದಾರರು ಪಾರಕ್ಷ್ಯಮ್ನ ರಿಪೋರ್ಟುಗ ಳನ್ನು ವರಿಷ್ಠಾಧಿಕಾರಿಗಳಿಗೆ ಕಳಿಸುತ್ತಿರುತ್ತಾರೆ. ಈ ಸಂಬಂ ಧದಲ್ಲಿ ಮದ್ರಾಸ ಇಲಾಖೆಯಲ್ಲಿ ಆ ಅಮಲದಾರರಿಗೆ ಹುಕು ಮು ಆದದ್ದು ಹ್ಯಾಂಗಂದರೆ_ ಅವರು ತಮ್ಮ ರಿಪೋರ್ಟುಗಳಲ್ಲಿ ಬರಿಯುತ್ತಿರುವ ಸಂಗತಿಗಳಲ್ಲದೆ, ತಾವು ನೋಡಿದಂಥ ಲೌಕಿಕ ಚಮತ್ಕಾರಗಳು, ದೈವಿಕ ಕೃತ್ಯಗಳು, ಬುನಾದಿಯಿಂ ದಿದು ಬಂದಂಥ ಕೌತುಕದ ನಡಾವಳಿಗಳು, ಧರ್ಮ ಮೂ ಲದ ಅತಿವಿಲಕ್ಷಣವಾದ ಸಾಂಪ್ರದಾಯಗಳು, ಮುಂತಾದ ವುಗಳನ್ನು ಬರಿಯುತ್ತಾ ಹೋಗಬೇಕು. ಬಗೆಬಗೆಯ ಮಾರ್ಗ ದಿಂದ ನಮ್ಮ ಸರಕಾರದವರು ಹೊಸಹೊಸ ಜ್ಞಾನವನ್ನು ಸಂ ಪಾದಿಸಲಿಕ್ಕೆ ಯಾವಾಗಲೂ ಯತ್ನಿಸುತ್ತಿರುತ್ತಾರೆ. ಅವರ ನೋಡಿ ನಾವು ನಾಚಬೇಕು. ಶಾಲಾಪತ್ರಕಕ್ಕೆ ಕಳಿಸುವ ಪ ತ್ರಗಳಲ್ಲಿ ಮೇಲೆಬರೆದಂಥ ಸಂಗತಿಗಳನ್ನು ಶೋಧಿಸಿ ಬರಿ ಯುತ್ತಾ ಹೋಗಬೇಕೆಂದು ನಾವು ನಮ್ಮ ಮಾಸ್ತರ ಜನರಿಗೆ ಹಲವಾರಿ ಸೂಚಿಸಿದಾಗ್ಯೂ, ಲೆಕ್ಕಗಳು, ಕವಿತ್ವಗಳು, ವಿ ದ್ಯಾರ್ಥಿಗಳನ್ನು ಮಾಸ್ತರರು ಪರೀಕ್ಷಿಸಿದ ಸಂಗತಿಗಳು, ಇಷ್ಟರ ಹೊರ್ತು ಬೇರೆಯೇನೂ ಬರಿಯತಕ್ಕಂಥ ವಿಷಯವು ಬಹು ರ ಯಾರಿಗೂ ತೋರುವದಿಲ್ಲೆಂಬುವದು ಬಹು ಖೇದದ ಸಂಗ ತಿಯುಂಟು.

—o—

ಕಾಲಕೂಟವು —— "ಡಾಯನಾಮಾಯಿಟ" ಎಂಬದೊಂ ದು ಅತಿಭಯಂಕರವಾದ ವಿಷವನ್ನು ರಸಾಯನ ಶಾಸ್ತ್ರಜ್ಞರು ಕೃತಿಯಿಂದ ಹುಟ್ಟಿಸುತ್ತಾರೆ_ ಇದನ್ನು ಸ್ಪರ್ಶಮಾಡಿದರೆ ತ ಲೆ ನೋಯಹತ್ತುತ್ತದೆ; ಅತಿಸೂಕ್ಷ್ಮ ಕಣವು ನಾಲಿಗೆಯ ಮೇ

ಲೆ ಬಿದ್ದರೆ, ಬೆನ್ನು ಹುರಿಯು ಬಿಚ್ಚುತ್ತದೆ; ಅಷ್ಟೇ ಕಣವು ಕ
ಳದ ಮೇಲೆ ಬಿದ್ದರೆ ತತ್ಕಾಲಕ್ಕೆ ಮರಣ ಬರುತ್ತದೆ. ಆದರೆ "
ಷ್ಟಿಯಂ" ಎಂಬ ಮದ್ದೊಂದು ಲೋಕದಲ್ಲಿ ಇದಕ್ಕೂ ಅತ್ಯಂ
ವಾದ ವಿಷವಿರುತ್ತದೆ. ಇದರದೊಂದು ಗುಂಜೆಗಿಂತ ಕಡಿಮೆ
ಯೊದಷ್ಟು ಕಣವು ೧೦೦ ಮನ ಹೊಳದಷ್ಟು ಹಪೆಯೊಳಗೆ ಕ
ಲಿದರೆ, ಆ ಹಪೆಯು ಮನುಷ್ಯರ ಪ್ರಾಣಕ್ಕೆ ಶಿಕಾರಕವಾದ ವ
ರಣಗಳನ್ನುಂಟುಮಾಡುತ್ತದೆಂದು ಒಬ್ಬ ಫ್ರೇಂಚ ರಸಾಯ
ನ ಶಾಸ್ತ್ರಿಯು ಹೇಳುತ್ತಾನೆ.

—o—

ರೈನ ನದಿಯ ತೀರದಲ್ಲಿ ಕೋಲೋನ್ ಎಂಬದೊಂದು ಹೆಸರ
ದ ಪಟ್ಟಣವಿರುತ್ತದೆ. ಕೋಲನ್ ವಾಟರ ಎಂಬ ಸುಗಂಧದ ನೀ
ರು ಬಹುಕಾಲದಿಂದ ಇದೇ ಪಟ್ಟಣದಲ್ಲಿ ಹುಟ್ಟುತ್ತದೆ. ಈ
ಪಟ್ಟಣದಲ್ಲಿ ಒಂದು ಅತಿಮನೋಹರವಾದ ಸಂಗಮರವರೀ
ಕಲ್ಲಿನ ದೇವಾಲಯವನ್ನು ಇಸವಿಸನ್ ೧೨೪೮ನೇ ವರ್ಷ-
ಟ್ಟಲಿಕ್ಕೆ ಆರಂಭ ಮಾಡಿದರು. ಅದರ ಕಾಮಗಾರಿಯು ಇನ್ನೂ
ನಡೆದದೆ! ೬೨೪ವರ್ಷ ನಡೆದಂಥ ಇಮಾರತಿನ ಸೌಂದರ್ಯ
ವನ್ನು ಎಷ್ಟಂತ ವರ್ಣಿಸಬಹುದು, ಈ ಗುಡಿಯ ಶಿಖರವು
೫೧೧ಫೂಟು ಎತ್ತರ ವಿರುತ್ತದೆ.

ಗಂಧರ್ವ ನಗರವು — ನ್ಯೂಚರವೆಂಬ ವರ್ತಮಾನಪತ್ರದ
ಲ್ಲಿ ಒಂದು ಆಶ್ಚರ್ಯಕರವಾದ ದರ್ಶನ ಚಮತ್ಕಾರವು ಪ್ರಸಿ
ದ್ಧವಾಗಿರುತ್ತದೆ. ಅದೇನಂದರೆ, ಸ್ವೀಡನ ದೇಶದಲ್ಲಿ ಜಾಲ
ಸ್ತಾ ಎಂಬ ಗ್ರಾಮದಲ್ಲಿ ಕಳೆದ ಎಪ್ರಿಲತಿಂಗಳಿನ ೧೦ನೇ ತಾ
ರೀಖಿನಲ್ಲಿ ಸಮುದ್ರದ ದಂಡೆಯಲ್ಲಿ ಆಕಾಶದೊಳಗೆ ಅತಿ ಮ
ನೋಹರವಾದ ನಗರಿಯು ಸುಮಾರು ೧ ತಾಸಿನವರೆಗೆ ಕಾಣ

ನುತಿತ್ತು. ಅದರಲ್ಲಿ ಬಹು ಭವ್ಯವಾದ ಗುಡಿಗಳೂ, ಗೋಪುರಗಳೂ, ಮನೆಗಳೂ ಕಾಣುತ್ತಿದ್ದವು. ಅದರ ಎಡಬದಿಗೆ ಒಂದು ರಮ್ಯವಾದ ವನವಿತ್ತು. ಅದರ ಮುಂಭಾಗದಲ್ಲಿ ಒಂದು ಹೊಗೆ ಬಂಡಿಯು ಸಾಲು ನಡೆಯಿತ್ತು. ಅಷ್ಟರಲ್ಲಿ ಹಿರಿದ ಕತ್ತಿಗಳನ್ನು ಹಿಡಕೊಂಡಂಥ ಶಿಪಾಯಿಗಳ ಸೈನ್ಯವೊಂದು ದೃಷ್ಟಿಗೋಚರವಾಯಿತು. ಇಷ್ಟರಲ್ಲಿ ಒಂದು ತೆರೆಯು ಕಾಣಿಸಿ ಅದೃಶ್ಯವಾಯಿತು.

ಮುಲಕೀ ಪರೀಕ್ಷೆಯು ಈ ತಿಂಗಳಿನ ೧೭ನೇ ತಾರೀಖಿನಲ್ಲಿ ಆರಂಭವಾಗುತ್ತದೆ.

ಮಿ. ರಸೆಲ್ ದೊರೆಗಳು ಬೆಳಗಾವಿಯಲ್ಲಿ ಇದ್ದಾರೆ.

—o—

Notices.

ನೋಟೀಸಗಳು.

जावकनंबर २१

अजम दक्षिणभागांतील सर्व शाळा मास्तर यांस— ए० के० इ० दक्षिणभाग यांजकडून कळविण्यांत येते कीं व्याकसीनेटर जेव्हां देवी काढण्याकरितां शाळेस येतात, तेव्हां मास्तरलोकांनीं त्यांना कोणत्या प्रकारची मदत केली पाहिजे याजबद्दल खालील पांच नियम केले आहेत. त्याप्रमाणें सर्व मास्तरलोकांनीं वागले पाहिजे.

१ व्याकसीनेटरांनी शाळेस येण्यापूर्वीं आठ दिवस अगोदर मास्तरलोकांस नोटीस द्यावी.

२ मास्तरांनी देवी काढलेल्या आपोआप आले·

ल्या व न काढलेल्या मुलांची याद करून ठेऊन न काढलेल्या मुलांच्या आईबापाची संमती घेऊन व्याकसीनेटर येण्याच्या दिवशीं तयार ठेवावी.

३ मास्तरांच्या यादींत नमूद असल्याखेरीज कांहीं मुलें देवी काढण्यास लायख असे व्याकसीनेटरच्या मतें ठरल्यास त्यांची नांवें मास्तरांस कळवावीं व मास्तरांनी त्यांच्या आईबापास विचारून दुसऱ्यामुदतीस तीं मुलें तयार ठेवावीं.

४ ज्यामुलांचे आईबाप आपल्या मुलांस देवी काढविण्याबद्दल संमती देणार नाहींत त्यांच्यावर जुलूम करूंनये. जरूर दिसल्यास त्यांचे आईबापास व्याकसीनेटर आल्यावेळीं बोलाऊन आणून दोघांनी त्यांना समजूत सांगावी.

५ शाळामास्तरांना पाटील कुलकर्णी लोकांइतका अधिकार नाहीं परंतु जितकें गावांत त्यांचे वजन असेल तें त्यांणी व्याकसीनेशनच्या कामाकरितां खर्च केलेंच पाहिजे.

W. A. Russell.

ए. इ. दाक्षिणभाग.

—o—

[illegible]

[illegible]

ಗಕಾಲೇಜದ ವಾರ್ಷಿಕ ಸರಟಿಫಿಕೇಟ ಪರೀಕ್ಷೆಯು ಬರುವ ಅಕ್ಟೋಬರ ತಿಂಗಳ ೧೬ನೇ ತಾರೀಖು ಮಂಗಳವಾರ ದಿವಸ ಪ್ರಾರಂಭವಾಗುವದು. ಕಾಲೇಜ ಕೋರ್ಸಿನ ೧೩ನೇ ಕಲಮಿಗನುಸಾರವಾಗಿ ಹೊರಗಿನಿಂದ ಪರೀಕ್ಷೆಗೆ ಬರಲಾಪೇಕ್ಷಿಸುವವರು ಮೊ. ಎ. ಇನಸ್ಪೇಕ್ಟರ ದಕ್ಷಿಣಭಾಗ ಇವರ ಅಪ್ಪಣೆಯನ್ನು ಪಡೆದು ನಾಲ್ಕುದಿವಸ ಪೂರ್ವದಲ್ಲಿಯೇ ಸದರೀಕಾಲೇಜದ ಪ್ರಿನ್ಸಿಪಾಲರಕಡೆಗೆ ಬಂದು ಹಾಜರಾದರೆ ಅವರ ಹೆಸರು ಪರೀಕ್ಷೆಯು ಲಿಷ್ಟಿನಲ್ಲಿ ದಾಖಲು ಮಾಡಲ್ಪಡುವವು.

ತಾ. ೨೭ಮಾಹೆಅಗಷ್ಟ ೧೮೮೩ } B· K. Hooligol.
ಟ್ರೇನಿಂಗಕಾಲೇಜ ಧಾರವಾಡ. } ಪ್ರಿನ್ಸಿಪಾಲ ಟ್ರೇನಿಂಗ ಕಾ.

—o—

ತಪ್ಪುತಿದ್ದಿದ್ದು.

ಹಿಂದಿನ ತಿಂಗಳಿನ ಶಾಲಾಪತ್ರಕದ ೧೪೭ನೇ ೧೪೮ನೇ ಪ್ರುಷ್ಠಗಳಲ್ಲಿ ಛಾಪಿಸಿದ ಸರಕಾರೀ ಠರಾವಿನ ತಲೆಯಮೇಲೆ ನಂಬರು ೨೨೨ ಇರುತ್ತದೆ. ಅದು ೭೭೭ ಇರತಕ್ಕದ್ದು. ಇದಲ್ಲದೆ ಅದೇ ಠರಾವಿನಲ್ಲಿ ೧೪೮ನೇ ಪುಟದ ೧೪ನೇ, ೧೫ನೇ, ೧೬ನೇ ಪಂಕ್ತಿಗಳಲ್ಲಿ "ಹಗಲು ನಡೆಯುವ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳನ್ನು ರಾತ್ರಿಯ ಶಾಲೆಗಳಲ್ಲಿ ಪ್ರೌಢಜನರಂತೆ ಮಾಫಿಯಿಂದ ತಕ್ಕೊಳ್ಳಲಕ್ಕೇಬೇಕು" ಎಂಬ ವಾಕ್ಯವಿರುತ್ತದೆ. ಅದರ ಮೊದಲಿನ ನಾಲ್ಕು ಶಬ್ದಗಳಿಗೆ ಬದಲಾಗಿ "**ಹಗಲು ಮನೆಕೆಲಸದಲ್ಲಿ ತೊಡಗಿರುವ**" ಎಂಬ ಶಬ್ದಗಳು ಇರುತ್ತವೆಂದು ತಿಳಿಯತಕ್ಕದ್ದು.

ಎಡಿಟರ ಶಾ. ಪ.

—o*o—

Improvement Of India.

ಹಿಂದುಸ್ಥಾನದ ಸುಧಾರಣೆ.

ಸ್ವದೇಶಾಭಿಮಾನವಿಲ್ಲದಂಥ ಮನುಷ್ಯನು ಬದುಕಿದ್ದರೂ ಸತ್ತಹಾಗೇ ಎಂದು ಎಣಿಸತಕ್ಕದ್ದು. ಮತ್ತು ಈ ನಿಯಮಕ್ಕೆ ಸಾಂಪ್ರತಕಾಲದಲ್ಲಿ ಹಿಂದು ಜನರಷ್ಟು ಎರಡನೆ ಯಾವ ಜನರೂ ಒಳಗಾಗಿಲ್ಲ, ಎಂದು ಹೇಳಬಹುದು. ಸೃಷ್ಟಿಯ ಮೇಲಿನ ಎಷ್ಟೋ ರಾಷ್ಟ್ರದವರು ಕಾಲಗತಿಯಿಂದ ಪರಕೀಯ ರಾಷ್ಟ್ರದವರ ಧೊರೆತನಕ್ಕೆ ಒಳಗಾಗಿ ತೀರ ಹಾಳಾಗಿ ಹೋಗಲಿಕ್ಕೆ ಬಂದಿದ್ದರು. ಆದಾಗ್ಯೂ ಕಡೆಯಲ್ಲಿ ಗತ್ಯಂತರ ಕಾಣದೇ ಹೋಗಿ, ತಮ್ಮ ಹಿರಿಯರ ಕಾಲದಿಂದ ನಡೆದು ಬಂದ ಶ್ರದ್ಧಾ ಜಾಡ್ಯವನ್ನು ಹಿತ್ತಟ್ಟಿಗೆ ಕಟ್ಟಿಟ್ಟು, ವಿದ್ಯಾಬಲದಿಂದಲೂ ಶೌರ್ಯದಿಂದಲೂ, ಪರಕೀಯರನ್ನು ಸೋಲಿಸಿ, ದೇಶದಿಂದ ಹೊರಡೆಯಕ್ಕೆ ಹಾಕಿ, ತಮ್ಮ ಜನ್ಮಭೂಮಿಗೆ ಪುನಃ ಸ್ವಾತಂತ್ರ್ಯವನ್ನು ಅನುಕೂಲಿಸಿದರು, ಎಂಬಬಗ್ಗೆ ಜಗತ್ತಿನ ಇತಿಹಾಸದಲ್ಲಿ ಉದಾಹರಣಗಳುಂಟು. ಆದರೆ ಈ ಪ್ರಕಾರದ ದೇಶಾಭಿಮಾನವು ಹಿಂದುಸ್ಥಾನದ ಜನರಲ್ಲಿ ಜಾಗೃತ ಉಂಟೇನು? ಇಲ್ಲ, ಎಷ್ಟು ಮಾತ್ರವಾದರೂ ಇಲ್ಲ. ಹಿಂದುಸ್ಥಾನದ ಜನರಿಗೆ ದಾಸ್ಯವು ತೀರಾ ಪ್ರಿಯವಾಗಿ ಹೋಗಿರುತ್ತದೆ. ಆದದರಿಂದ ಕನಸಿನಲ್ಲಿ ಸಹ ಅವರಿಗೆ ಸ್ವಾತಂತ್ರ್ಯದ ಕಲ್ಪನೆ ಬರುವದಿಲ್ಲ. ಇಷ್ಟಕ್ಕೆ ಆಗಲಿಲ್ಲ. ಅವರು ತಾವು ನಿಂದ್ಯವಾದ ಹಪ್ಪು ದಾಸ್ಯಸ್ಥಿತಿಯನ್ನೇ ಬಹಳ ಭೂಷಣವಾಗಿ ಮಾನಿಕೊಳ್ಳುತ್ತಾರೆ. ಒಕ್ಕಲತನ, ವ್ಯಾಪಾರ ಕೈಗಾರಿಕೆ ಮುಂತಾದ ಸ್ವತಂತ್ರ ಉದ್ಯೋಗಗಳನ್ನು ಅವರು ಅಲಕ್ಷ್ಯ ಮಾಡಿ ಬಹುತರ ಬಿಟ್ಟು ಕೊಟ್ಟಿದ್ದಾರೆ, ಇನ್ನು ದಾಸ್ಯದಲ್ಲಿ ಇದಕ್ಕೂ ಹೆ-

ಟ್ಟಿನ ಪ್ರಕ್ರಿಯೆಯು ಹ್ಯಾಗಿರತಕ್ಕದ್ದು? ಈ ಪ್ರಕಾರವಾಗಿ ಜನರು ದಾಸ್ಯತ್ವವನ್ನು ಆದರಿಸಿದ್ದರಿಂದ ದೇಶಕ್ಕೆ ಹೇಳಲಾಗದಂಥ ಹಾನಿಯು ಉಂಟಾಗಿಯದೆ. ಸ್ವಾಭಿಮಾನವೆಂಬ ಅಮೋಲಿಕ ಗುಣವು ನಮ್ಮ ಜನರೊಳಗಿಂದ ತೀರ ಇಲ್ಲದ ಹಾಗಾಗಿಯದೆ, ನಮ್ಮ ಜನರಿಗೆ ಎರಡನೆಯವರು ಬೇಕಾದಹಾಗೆ ಹಿಂಡಿದಲಿ, ಅಥವಾ ಬಲುಮೆಯಿಂದ ನಡಿಸಲಿ, ಅವರು ಕುರಿಗಳ ಹಾಗೆ ಸುಮ್ಮನೇ ತಡಕೊಂಡು ಹ್ಯೋಗುವರು. ಕಾರಣವು ಸ್ಪಷ್ಟವದೆ. ಸ್ವಾಭಿಮಾನದ ತರುವಾಯು ಸ್ವದೇಶಾಭಿಮಾನವು, ಬಹಳ ದೊಡ್ಡ, ಅಮೋಲಿಕ ಗುಣವೆಂಬ ಬಗ್ಗೆ ಸಂದೇಹವಿಲ್ಲ. ಅದು ಸಹ ನಮ್ಮ ಜನರೊಳಗೆ ಹೆಸರಿಗೆ ಸಹ ಉಳಿದಿಲ್ಲ, ಇನ್ನು ಇಲ್ಲಿಂದ ತಪ್ಪಿಗೆ ಲಕ್ಷ್ಯಕ್ಕೆ ಎಲ್ಲಾದರೂ ಒಬ್ಬ ಸ್ವದೇಶಾಭಿಮಾನಿ ಇದ್ದರೆ, ಅವನು ತನ್ನ ಮನಸ್ಸಿನಲ್ಲಿ ವನ್ನು ಒಬ್ಬನಿಂದೇನಾಗತಕ್ಕದ್ದದೆ? ನನಂತೆ ಸ್ವದೇಶಾಭಿಮಾನವನ್ನು ವಹಿಸುವರು ನಿದಾನ ನೂರಾರು ಜನರಾದರೂ ಒಕ್ಕಟ್ಟಾಗದ ವಿನಃ ದೇಶದ ಉದ್ಧಾರ ಆಗಲಿಕ್ಕೆ ಮಾರ್ಗವಿಲ್ಲ, ಎಂದು ಮನಸಿನಲ್ಲಿ ಆಲೋಚಿಸಿ, ಧೈರ್ಯಗುಂದಿ, ಅದರ ಹಾದಿಗೆ ಹೋಗುವದಿಲ್ಲ. ಇದು ಕೇವಲ ದೇಶದ ದುರ್ದೈವವೆಂದು ಹೇಳತಕ್ಕದ್ದು. ಒಬ್ಬೊಬ್ಬ ದೇಶಾಭಿಮಾನಿಯನ್ನೇ ಕೂಡಿಸಲಾಗಿ ದೇಶದೊಳಗೆ ಸಾವಿರಾರು ಇಲ್ಲದಿದ್ದಾಗ್ಯೂ, ನಿದಾನ ನೂರಾರಾದರೂ ದೇಶಾಭಿಮಾನಿಗಳು ಕೂಡುವರು, ಸಂದೇಹವಿಲ್ಲ. ಹನಿಹನಿ ಕೂಡಿದರೆ ಹಳ್ಳವಾಗುವದು ಎಂಬ ಗಾದೆಯನ್ನು ನಾವು ಯಾವಾಗಲೂ ಲಕ್ಷದಲ್ಲಿ ಇಡತಕ್ಕದ್ದು. ಜೋಳದ ಒಂದೊಂದು ತೆನಿಗೆ ಒಂದೊಂದು ಬೊಗಸಿ ಕಾಳು ಹೊರಟಾಗ್ಯೂ, ಅದರಿಂದ ಬೊಗಸಿ ಬೊಗಸಿ ಕಾಳು ಕೂಡಿ ಹಾರ

ಲಿನು ಆಗತಕ್ಕದ್ದಿದೆ ಎಂದು ಅಂದರೆ ಹುಟ್ಟುವದೋ? ಬೋಗನಿ ಬೋಗನಿ ಕೂಡಿಯೇ ಖಂಡಗವಾಗುವದು. ಅಸ್ತು. ಜಗನ್ನಿಯಾಮಕನಾದ ದೇವರ ಅಗಾಧ ಕರುಣೆಯಿಂದ ಹಿಂದುಸ್ಥಾನ ದೇಶವು ಸಾಂಪ್ರತಕಾಲದಲ್ಲಿ ಇಂಗ್ಲಿಶ ಸರಕಾರದವರ ಅಧೀಕಾರಕ್ಕೆ ಒಳಗಾಗಿಯದೆ. ಅವರ ಆಳ್ವಿಕೆಯಲ್ಲಿ ಜನರಿಗೆ ಎಷ್ಟೋ ಪರಿಯಿಂದ ಸ್ವರಾಜ್ಯದಲ್ಲಿಯಂತೆ ಸೌಖ್ಯವುಂಟು. ಆದದರಿಂದ ರಾಜ್ಯಸ್ಥಿತಿಯು ಸುಧಾರಣೆಯ ವಿಚಾರ ಮಾಡತಕ್ಕ ಕಾರಣ ತೋರುವದಿಲ್ಲ. ಕೇವಲ ಜನಸ್ಥಿತಿಯನ್ನು ತಿದ್ದಹೋದರೆ ಯಾವಯಾವ ಅನನುಕೂಲತೆಗಳು ಬರುವವೋ, ಅವುಗಳನ್ನು ಕುರಿತು ಸ್ವಲ್ಪದಲ್ಲಿ ವಿವರಿಸುವ.

ಹಿಂದುಜನರು ತಮ್ಮ ಸ್ಥಿತಿಯನ್ನು ತಿದ್ದಿ ಏರ್ಪಡಿಸುವದಕ್ಕಾಗಿ ಮಾಡತಕ್ಕ ಕೆಲಸಗಳಲ್ಲಿ, ತಮ್ಮಲ್ಲಿ ಬಹಳ ಪುರಾತನದಿಂದ ನಡೆದುಬಂದ ಅನೇಕತರದ ಶ್ರದ್ಧಾಜಾಡ್ಯಗಳನ್ನು ಬಿಟ್ಟುಬಿಡತಕ್ಕದ್ದು ಮೊದಲನೆಯದೆಂದು ಹೇಳಬಹುದು. ತಮ್ಮ ದೇಶದ ಮೇರೆಯನ್ನು ದಾಟಿ, ಪರನಾಡುಗಳಿಗೆ ಹೋಗುವದರಲ್ಲಿ ಬಹಳ ಪಾಪವುಂಟೆಂಬ ತಿಳುವಳಿಕೆಯನ್ನು ತಿದ್ದಲಿಕ್ಕೆ ಬೇಕು. ಇನ್ನು ಈ ಮಾತಿನ ಬಗ್ಗೆ ಶಾಸ್ತ್ರಗಳಲ್ಲಿ ಅನೇಕತರದ ನಿಷೇಧಕ ವಚನಗಳುಂಟೆಂದು ಕೆಲವರು ಪ್ರತಿಪಾದಿಸುವರು. ಅಂದರೆ ಅದಕ್ಕೆ ನಮ್ಮದಿಷ್ಟೇ ಉತ್ತರವಲ್ಲ, ಆ ವಚನಗಳನ್ನು ಯಾರು ಬರೆದರೋ ಅವರ ಕಾಲಕ್ಕೂ ದೇಶಮಾನಕ್ಕೂ ಆ ಮಾತು ಹೊಂದೊಪ್ಪುತ್ತ ಅನುಕೂಲವಿರಬಹುದು. ಆದರೆ ಅದೇ ಈಗಿನ ದೇಶಕಾಲಮಾನಕ್ಕೂ ಸರಿಯಾಗಿರಬೇಕೆಂದು ಹೇಳುವದು ಶುದ್ಧತಪ್ಪಲ್ಲವೋ? ಅದಕ್ಕೆ ಯಾರೂ ಒಪ್ಪಲಿಕ್ಕಿಲ್ಲ. ಪ್ರಾಚೀನ ಜನರು ಪರನಾಡುಗಳಿಗೆ ಹೋಗದೇ ಇರಲಿಕ್ಕೆ ಅನೇಕಕಾರಣಗಳ

ದ್ದವು. ಮೊದಲು ಏನೆಂದರೆ, ಪ್ರಾಚೀನ ಕಾಲದ ಹಿಂದೂಜನರು ವಿದ್ಯಾ ಕಲಾಕೌಶಲ್ಯ ಮುಂತಾದವುಗಳಲ್ಲಿ ಆಗಿನ ತಮ್ಮ ನೆರೆ ಹೊರೆಯವರಿಗಿಂತ ಮೇಲುಗೈಯಾಗಿದ್ದರು.

ಪ್ರಾಚೀನ ಕಾಲದ ಹಿಂದುಜನರು ವಿದ್ಯಾಕಲಾಕೌಶಲ್ಯ ಮುಂತಾದವುಗಳಲ್ಲಿ ತಮ್ಮ ನೆರೆಹೊರೆಯ ಜನರಿಗಿಂತ ಬಹಳೇ ಮೇಲುಗೈಯಾಗಿದ್ದರು. ಅದರಿಂದ ಅವರಿಗೆ ಬಹುಶಃ ತಮ್ಮ ದೇಶಬಿಟ್ಟು, ಪರನಾಡುಗಳಿಗೆ ಹೋಗುವರ ಪ್ರಸಂಗವೇ ಇದ್ದಿಲ್ಲ. ಇದಲ್ಲದೆ ಆಗ ದೇಶದೊಳಗೆ ಈಗಿನಂತೆ ಸುಸೂತ್ರ ಹಾದಿಬಟ್ಟೆಗಳು ಇದ್ದಿಲ್ಲ. ಇದ್ದಲ್ಲಿ ಕಳ್ಳರು ಸುಲಿದುಕೊಳ್ಳುವರೆಂಬ ಭಯ ಬಹಳವಿತ್ತು. ಆದರೆ ಈಗಿನ ಸ್ಥಿತಿಗೂ ಆಗಿನ ಸ್ಥಿತಿಗೂ ಬಹಳ ವೈಲಕ್ಷಣ್ಯವುಂಟು. ಈಗ ನಮ್ಮ ದೇಶವು ತೀರ ನಿಕೃಷ್ಟಾವಸ್ಥೆಗೆ ಬಂದದ್ದರಿಂದ, ಅದನ್ನು ತಿರುಗಿ ಮೊದಲಿನ ಹಾಗೆ ಘನತೆಗೆ ತರಬೇಕಾದರೆ, ನಮಗೆ ಇಂಗ್ಲಂಡವೇ ಮೊದಲಾದ ದೇಶಗಳಿಗೆ ಹೋಗಿ ತರತರದ ವಿದ್ಯಾಕಲಾಕೌಶಲ್ಯಗಳನ್ನು ಕಲಿಯತಕ್ಕದ್ದು ಅವಶ್ಯವಾಗಿದೆ. ಇದಲ್ಲದೆ ದೇಶದೊಳಗೆ ನಾಲ್ಕು ಕಡೆಯಲ್ಲಿಯೂ ಒಳ್ಳೆಯ ಮಾರ್ಗಗಳಾಗಿವೆ; ಕೆಲಕೆಲವು ಕಡೆಯಲ್ಲಿ ಲೋಹಮಾರ್ಗಗಳೂ ಉಂಟು. ಸಮುದ್ರದೊಳಗಿಂದ ಪ್ರವಾಸ ಮಾಡಬೇಕಾದರೆ, ಹೊಗೆಹಡಗಗಳಾಗಿವೆ. ಎಲ್ಲಕಡೆಯಲ್ಲಿಯೂ ಸರಕಾರದವರು ಪೋಲಿಸರನ್ನು ಇಟ್ಟು, ಜನರಿಗೆ ಪೀಡೆಯಾಗದಂತೆ ವ್ಯವಸ್ಥೆ ಇಟ್ಟಿರುತ್ತಾರೆ. ಆದುದರಿಂದ ಈಗಿನ ಕಾಲದಲ್ಲಿ ಬೇಕಾದತ್ತ ಪ್ರವಾಸ ಮಾಡಲಿಕ್ಕೆ ಪ್ರತಿಬಂಧವಿರಬಾರದು. ಸರ್ವದಾ ಮನೆ ಹಿಡಿದುಕೊಂಡು ಕೂಡುವ ಮನುಷ್ಯನಿಗೆ ಜ್ಞಾನವೂ ಜನರಲ್ಲಿ ಮಾನವೂ ಉಂಟಾಗುವದಿಲ್ಲ.

ಇದೇಪ್ರಕಾರ ತಮ್ಮದೇಶ ಬಿಟ್ಟು ನಾಲ್ಕು ದೇಶಗಳಲ್ಲಿ ಹೋಗಿ, ಅಲ್ಲೀ ಜನರ ವಿದ್ಯಾಸ್ಥಿತಿ ರೀತಿಗಳನ್ನು ವಿಚಾರಿಸದಂಥ ಜನರಿಗೆ ಮೇಲಾದ ಸ್ಥಿತಿ ಪ್ರಾಪ್ತವಾಗಲರಿಯದು.

ತಮ್ಮ ದೇಶವನ್ನು ಬಿಟ್ಟು ಪರನಾಡುಗಳಿಗೆ ನಿಃಶಂಕವಾಗಿ ಹೋಗಬರುವ ಜನರಸ್ಥಿತಿ ಹ್ಯಾಗೆ ಇರುತ್ತದೆ ನೋಡಿರಿ! ಸಾಧಾರಣೆಯಲ್ಲಿ ಅಗ್ರಗಣ್ಯರಾದ ಇಂಗ್ಲಿಶ ಜನರು ಹೋಗದಿದ್ದಂಥಾ ದೇಶ ಹಿಂದು ಸಹ ದೊರಿಯಲಿಕ್ಕಿಲ್ಲ. ಅವರು ನಾಲ್ಕುದೇಶಗಳಿಗೆ ಹೋಗುತ್ತಾರೆ; ಅಲ್ಲಿಯ ಹವೆಯ ಪ್ರಕಾರವನ್ನು ಹುಟ್ಟುವಳಿಗಳನ್ನು ತಿಳಿದು ಕೊಳ್ಳುತ್ತಾರೆ; ಆ ದೇಶದ ಜನರ ನಡತೆ ನಡಾವಳಿಗಳನ್ನು ವಿಚಾರಿಸಿ ಕೊಂಡು, ಅವುಗಳಲ್ಲಿ ತಕ್ಕವೆಂದು ಕಂಡು ಬಂದವುಗಳನ್ನು ಆಗಲೇ ಗ್ರಹಿಸುತ್ತಾರೆ, ಅಲ್ಲೀ ವ್ಯಾಪಾರದ ಪದಾರ್ಥಗಳನ್ನು ತಮ್ಮದೇಶಕ್ಕೆ ವೈಯ್ಯುತ್ತಾರೆ; ತಮ್ಮದೇಶದೊಳಗಿನ ವ್ಯಾಪಾರದ ಸರಕುಗಳನ್ನು ಪರನಾಡುಗಳಿಗೆ ಒಯಿದು ಮಾರಾಟ ಮಾಡಿ ದೊಡ್ಡ ಲಾಭವನ್ನು ಪಡಕೊಳ್ಳುತ್ತಾರೆ. ಇವೆಲ್ಲಾ ಮತ್ತೆ ಕೈಸಾಧಿಸಿದರೆ ಆ ದೇಶದೊಳಗಿನ ಜನರ ಜಗಳಗಳಲ್ಲಿ ಕೈಹಾಕಿ, ಕ್ರಮೇಣ ಅವರನ್ನು ಮೂಲೆಗೆಹಚ್ಚಿ ಅವರ ಕೈ ಅಧಿಕಾರವನ್ನು ಅವರ ಕೈಯಿಂದ ತಪ್ಪಿಸಿ, ಇಬ್ಬರ ನ್ಯಾಯದೊಳಗೆ ಮೂರನೆಯವನಿಗೆ ಆಯ ಎಂಬಗಾದೆಯಂತೆ, ತಾವೇ ರಾಜ್ಯಾಧಿಕಾರಿಗಳಾಗುತ್ತಾರೆ. ಹಿಂದುಸ್ಥಾನದಲ್ಲಿ ಈಗಿರುವ ಸಾಮ್ರಾಜ್ಯವನ್ನು ಇಂಗ್ಲಿಷರು ಇದೇಪ್ರಕಾರವಾಗಿ ಸಂಪಾದಿಸಿದ್ದಲ್ಲವೋ? ಆದರೆ ಅವರೂ ನಮ್ಮಂತೆಯೇ ತಮ್ಮ ದೇಶಬಿಟ್ಟು ಹೊರಗೆ ಬೀಳದೆ ಹೋಗಿದ್ದರೆ, ಅವರಿಗೆ ಇಂಥ ಪರಮ ವಿಸ್ತೀರ್ಣವಾದ ಸಾಮ್ರಾಜ್ಯ ಎಲ್ಲಿಂದ ದೊರೆಯುತ್ತಿತ್ತು? ಈಗಿನಷ್ಟು ತಿದ್ದುಪಾಟು ಎಲ್ಲಿಂ

ದಾಗುತ್ತಿತ್ತು?

ಹಾಗೆ ನಾವು ಯಾವನಾದರೊಂದು ಸ್ವಂತಕೆಲಸದ ಸಲುವಾಗಿ, ತಮ್ಮ ಮನೆಯಿಂದ ಎರಡನೆಯವರ ಮನೆಗೆ ಹೋಗುವೆವೋ, ಹಾಗೆಯೇ ತಮ್ಮ ದೇಶದಿಂದ ಪರದೇಶಕ್ಕೆ ಹೋಗಬಹುದೆಂದು ತಿಳಿಯಬೇಕು. ಇದಕ್ಕೂ ಹೆಚ್ಚಿನದೇನೂ ಅಭ್ಯಂತರ ನಮಗೆ ತೋರುವದಿಲ್ಲ. ಶಾಸ್ತ್ರಜ್ಞಾನವಾಗುವದಕ್ಕಾಗಿ ಸಂಸ್ಕೃತ ಕಲಿಯುತ್ತೇವೆ; ಅದರಂತೆಯೇ ಉಳಿದ ಕೆಲವು ಉಪಯುಕ್ತ ವಿದ್ಯೆಗಳ ಜ್ಞಾನವನ್ನು ಸಂಪಾದಿಸುವದಕ್ಕಾಗಿ ಇಂಗ್ಲಿಷ ಮುಂತಾದ ಪರಕೀಯ ಭಾಷೆಗಳ ಅಭ್ಯಾಸ ಮಾಡಬೇಕು. ಅದರಿಂದ ನಡೆನುಡಿ, ನಡೆನಡತೆ, ಮರ್ಯಾದೆ ಮುಂತಾದ್ದೇನಾದರೂ ಆಗುವದುಂಟೋ? ಅಂದಬಳಿಕ ಆ ಕೆಲಸ ಮಾಡಲಿಕ್ಕೆ ಪ್ರತ್ಯವಾಯವೇನು? ಏನೂ ಇಲ್ಲ. ಆದುದರಿಂದ ಬಲ್ಲವರಾದವರು ದುರಾಗ್ರಹಕ್ಕೆ ಬಿದ್ದು ಇಂಥ ಮಾತುಗಳನ್ನು ಎಂದೂ ವರ್ಜ ಮಾಡಬಾರದು; ಅವಶ್ಯ ಅಂಗೀಕರಿಸಬೇಕು.

— o —

The Desayi Of Kittore.

ಕಿತ್ತೂರ ಸಂಸ್ಥಾನವು.

(ಈಗ ಸರಕಾರಕ್ಕೆ ಸೇರಿದೆ.)

ಕಿತ್ತೂರಿನ ದೇಸಾಯರು ಲಿಂಗವಂತರು. ಈ ದೇಸಾಯರ ಮೂಲಪುರುಷರಾದ ಹಿರೇಮಲ್ಲಶೆಟ್ಟಿ, ಚಿಕ್ಕಮಲ್ಲಶೆಟ್ಟಿ ಯೆಂಬ ಇಬ್ಬರು ಅಣ್ಣತಮ್ಮಂದಿರು ಸಾಗರ ಪ್ರಾಂತದಲ್ಲಿ ಸಾವುಕಾರರಿದ್ದರು. ಅಲ್ಲಿಂದ ಇವರು ೧೬ನೇ ಶತಮಾನದ ಅಂತ್ಯದಲ್ಲಿ ವಿಜಾಪುರ ಸರಕಾರದ ಸೈನ್ಯದಕೂಡ ಇಲ್ಲಿಗೆ ಬಂದರು. ಮತ್ತು ಯುದ್ಧದಲ್ಲಿ ಒಳ್ಳೇ ಪರಾಕ್ರಮದಿಂದ ಹೆಸರಾಗಿ ಸರಕಾ

ರದಲ್ಲಿ ದೊಡ್ಡ ಯೋಗ್ಯತೆಗೆಬಂದು, ಹುಬ್ಬಳ್ಳೀ ಪ್ರಾಂತದ ಸರದೇಶಮುಖಿಯ ಹಕ್ಕನ್ನೂ, ಸಮಶೇರಜಂಗ ಬಹದ್ದೂರ ಎಂಬ ಪದವಿಯನ್ನೂ ದೊರಕಿಸಿದರು. ಇವರ ತರುವಾಯ ೫ನೇ ಪುರುಷನು ತನ್ನ ವಾಸ್ತವ್ಯವನ್ನು ಕಿತ್ತೂರಲ್ಲಿ ಮಾಡಿದನು. ಕಿತ್ತೂರಿಗೆ ಮೊದಲು ಗಜಗನಹಳ್ಳಿ ಯೆಂದೆನುತ್ತಿದ್ದರು. ಇವನ ಮುಂದಿನವನಾದ ಮುದಿಮಲ್ಲಪ್ಪ ದೇಸಾಯಿಯ ಕಾಲದಲ್ಲಿ ಸವನೂರಿನ ನವಾಬನ ಪ್ರದೇಶದಲ್ಲಿ ಕಿತ್ತೂರ ಸಂಸ್ಥಾನವು ಕೂಡಿಹೋಯಿತು. ಆದರೂ ನವಾಬನು ದೇಸಾಯಿಯಿಂದ ಕಪ್ಪವನ್ನು ತೆರದುಕೊಳ್ಳುವದಕ್ಕೆ ಒಡಂಬಟ್ಟು ಅವನ ಸಂಸ್ಥಾನವನ್ನು ಅವನಿಗೇ ವಹಿಸಿದನು.

ಮುಂದೆ ಅವರಂಗಜೇಬನು ವಿಜಾಪುರದ ರಾಜ್ಯವನ್ನು ರಸಾತಳಕ್ಕೆ [ಈಗ ಅದು ಹಾಳುಬಿದ್ದದೆ] ವೈದನಂತರ ಮಹಾರಾಷ್ಟ್ರರ ಅಧಿಕಾರವು ನಾಲ್ಕೂ ಕಡೆಗೆ ಬೆಳೆಯಹತ್ತಲು, ಆಗ್ಗೆ ದೇಸಾಯಿಯು ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳದವನಾದನು. ಈ ಸಲುವಾಗಿ ಮುಂದೆ ದೇಸಾಯಿಯು ಮಹಾರಾಷ್ಟ್ರ (ಪೇಶವೆಯರ) ಕ್ಕೆ ಕೆಳಗಿನ ಜಹಾಗೀರದಾರನಾಗಿ ಅವರಿಗೆ ೧, ೪೦, ೦೦೦ ರೂಪಾಯಿ ಕರವನ್ನು ಕೊಡುವದಕ್ಕೆ ಒಪ್ಪಿಕೊಂಡನು. ಈ ಕಾಣಿಕೆಯ ಹಣವನ್ನು ಮಹಾರಾಷ್ಟ್ರರು ಪಟವರ್ಧನ ಸಂಸ್ಥಾನಕ್ಕೆ ಹಚ್ಚಿಕೊಟ್ಟಿದ್ದರು. ಆದರೂ ಪೇಶವೆಯರು ಬಹು ದಿನಗಳವರೆಗೆ ಕಿತ್ತೂರಿನ ಅಧಿಕಾರದಲ್ಲಿ ಯಾವಪ್ರಕಾರದ ಹೆಚ್ಚು ಕಡಿಮೆಯನ್ನು ಸ್ವಲ್ಪಾದರೂ ಮಾಡಲಿಲ್ಲ. ಕಿತ್ತೂರ ಸಂಸ್ಥಾನವು ಕರ್ನಾಟಕ ಮತ್ತು ಮೈಸೂರ, ಈ ರಾಜ್ಯಗಳ ನಡುವಿನಲ್ಲಿದ್ದಕಾರಣ ಮಹಾರಾಷ್ಟ್ರರಿಗೂ, ಹೈದರನಿಗೂ ಆದಜಗಳದಿಂದ ಸಂಸ್ಥಾನಕ್ಕೆ ಬಹಳ ಉಪದ್ರವ ವಾಯಿತು. ಶೀ

ಪ್ರು ಸುಲತಾನನು ಖರಾವರ್ತಿ ಕಿತ್ತೂರನ್ನು ತೆಗೆದು ಕೊಂ
ನು. ಹಾಗು ಮತ್ತೊಂದು ಕಾಲಕ್ಕೆ ಮಲ್ಲಪ್ಪ ದೇಸಾಯಿಯ
ನು ಕೈಕೆರೆಯಾಗಮಾಡಿ ಮೈಸೂರಿಗೆ ಒಯ್ದನು; ಆದರೆ ಮ
ಪ್ಪ ದೇಸಾಯಿಯು ಸೆರೆಯಿಂದ ತಪ್ಪಿಸಿಕೊಂಡು ಓಡಿಬಂದ
ಮಹಾರಾಷ್ಟ್ರದ ದಕ್ಷಿಣದ ಸುಭೇದಾರನಾದ ಧೋಂಡೋಪ
ತಗೋಖಲೆ ಎಂಬವನ ಆಶ್ರಯದಲ್ಲಿ ಸೇರಿಕೊಂಡನು. ಈ ಗೋ
ಖಲೆಯು ಆ ಸುಲತಾನನಿಂದ ಕಿತ್ತೂರನ್ನು ತೆಗೆದುಕೊಂಡು
ಲ್ಲಿ ಒಬ್ಬ ಸುಭೇದಾರನನ್ನು ನೇಮಿಸಿದನು; ಹಾಗು ಆವನು
ತ್ತೂರನ್ನು ಧಾರವಾಡ ಸುಭೆಯ ತಾಲೂಕಾಗಿ ಮಾಡಿದನು. ಮ
ತ್ತು ದೇಸಾಯಿಗೆ ಬರೇ ಇಂತಿಷ್ಟು ಹಣವನ್ನು ಕೊಡಬೇಕೆಂ
ದಾಗಿ ನೇಮವನ್ನು ಮಾಡಿದನು. ಈ ವ್ಯವಸ್ಥೆಯು ಬಹಳ ದಿವ
ನಡಿಯಲಿಲ್ಲ. ಮಾಧವರಾವ ಪೇಶವೆಯು ತೀರಿಕೊಂಡ ಮೇ
ಪೇಶವೇ ಸರಕಾರದಲ್ಲಿ ಗದ್ದಲವಾಗಿ, ಕೈಕೆಳಗಿನ ಪ್ರಾಂತಗ
ಅಧಿಕಾರದಲ್ಲಿ ವ್ಯವಸ್ಥೆ ಇಲ್ಲದಂತಾಯಿತು. ಆಗ್ಗೆ ಮಲ್ಲಪ್ಪ
ದೇಸಾಯಿಯು ಇದೇ ಸಮಯವೆಂದು ತಿಳಿದು, ಕಿತ್ತೂರಿನಲ್ಲಿ
ದ್ದ ಸುಭೇದಾರನನ್ನು ಕಿತ್ತುಹಾಕಿ ಯೋಪತ್ತು ತನ್ನ ಸಂಸ್ಥಾ
ನವನ್ನು ತನ್ನ ವಶವಾಗಿ ಮಾಡಿಕೊಂಡನು.

ಧಾ. ೪ನೇ ನಂಬರಿನ ವಿದ್ಯಾಮಂದಿರದಿಂದ, ತಾ. ೩೩|೮|೮೩೪

ಶಿವಾನಂದ ಯಜ್ಞೇಶ್ವರ ವಾಜಪೆಯ.

Lust and Self Regard.

ಲೋಭವೂ, ಅಭಿಮಾನವೂ,

ನಾನು ಸಂಪನ್ನನೂ, ಕೀರ್ತಿವಂತನೂ ಎಂದೆನ್ನಿಸಿ ಕೊಳ್ಳ
ಬೇಕೆಂಬ ಇಚ್ಛೆಯು ಎಲ್ಲ ಮನುಷ್ಯ ಪ್ರಾಣಿಗಳಲ್ಲುಂಟು. ಇ

ರಕ್ಕೆ ಸ್ವಾರ್ಥ ಪರಾರ್ಥಗಳು ಮುಖ್ಯ ಕಾರಣಗಳಾಗಿವೆ. ಆದರೆ ಇವುಗಳು ನ್ಯಾಯಮಾರ್ಗದಿಂದಮಾತ್ರ ನಡೆಯತಕ್ಕದ್ದು. ಅಂದರೆ ಸ್ವಾರ್ಥದಿಂದ ಸಂಪತ್ತೂ, ಪರಾರ್ಥದಿಂದ ಕೀರ್ತಿಯೂ, ನಿಜವಾಗಿ ದೊರೆದು ತನ್ನ ಮನೋರಥವು ಸಿದ್ಧಿಗೆ ಹೋಗುವದು. ಈ ಗುಣಗಳು ಅಂಕುರಿಸುವದಕ್ಕೆ ಲೋಭವೂ, ಅಭಿಮಾನವೂ, ಅವಶ್ಯವಾಗಿರಬೇಕು. ಇವುಗಳಿರದಿದ್ದರೆ ,ಜಗತ್ತಿನಲ್ಲಿ ದೊಡ್ಡ ದೊಡ್ಡ ವ್ಯಾಪಾರಗಳು ಉದ್ಯೋಗಗಳು ನಡೆಯುತ್ತಿದ್ದಿಲ್ಲ. ಸುಂದರವಾದ ಮೇಲುಪ್ಪರಿಗೆಯ ಮನೆಗಳು ಕಟ್ಟಲ್ಪಡುತ್ತಿದ್ದಿಲ್ಲ. ನಾನು ವಿದ್ಯಾಸಂಪನ್ನನೂ, ಚತುರನೂ, ಆಗಬೇಕು; ಲೋಕವೆಲ್ಲ ನನ್ನನ್ನು ಮನ್ನಿಸಬೇಕು. ಹಾಗು ಭಾಗ್ಯಶಾಲಿಯಾಗಬೇಕು! ಎಂಬವಿಚಾರಗಳು ಸ್ವಪ್ನದಲ್ಲಿ ಸಹ ಬರುತ್ತಿದ್ದಿಲ್ಲ. ನನ್ನವರು, ತನ್ನವರು, ಆಪ್ತರು, ಇಷ್ಟರು, ಎಂಬಸಂಬಂಧವೇ ಉಳಿಯುತ್ತಿದ್ದಿಲ್ಲ. ಬಹಳೇನು, ಲೋಕದಲ್ಲಿ ಯಾವಪ್ರಕಾರದ ಸುಧಾರಣೆಯೂ, ಸೃಷ್ಟಿಕ್ರಮವೂ ನಡೆಯುತ್ತೇ ಇದ್ದಿಲ್ಲವು. ಆದಕಾರಣ ಸಂಸಾರಿಕಮನುಷ್ಯರಿಗೆ ಲೋಭವೂ, ಅಭಿಮಾನವೂ ಇರುವದು ಅತ್ಯವಶ್ಯವದೆ. ಆದರೆ ಇವುಗಳು ದುರ್ಗುಣರೂಪ ಹೊಂದಬಾರದು. ಅಂದರೆ ಮನುಷ್ಯನು ಎರಡನೇಯವರಿಗೆ ಕೆಡಕನ್ನು ಬಯಸದೆ ತಾನು ತನ್ನ ಸಂಪತ್ತನ್ನು ಬೆಳಿಸುವದಕ್ಕೆ ಇಚ್ಛಿಸಬೇಕು. ಇದಕ್ಕೆ ದುರ್ಗುಣ ವೆಂದೆನ್ನಲಾರೆವು. ಇದರಂತೆ ಇನ್ನೊಂದು ಮಾತನ್ನು ಲಕ್ಷ್ಯದಲ್ಲಿಡಬೇಕು. ಏನಂದರೆ— ತಾವು ದೊರಕಿಸುವ ಸಂಪತ್ತು ಸಂಚಯಕ್ಕಾಗಿಯೇ ಎಂದುಮಾತ್ರ ತಿಳಿಯಬಾರದು. ಆದರೆ ಅದು ಯೋಗ್ಯಕಾಲಕ್ಕೆ ಯೋಗ್ಯಕಾರ್ಯಕ್ಕೆ ಉಪಯೋಗಕ್ಕೆ ಬರಬೇಕೆಂದು ಕೂಡಹಾಕುತ್ತೇವೆ; ಹೀಗೆ ತಿಳಿಯಬೇಕು. ಇನ್ನು ಅಂಥಾ ಪ್ರಸಂಗಬಂದಾಗ ಬಹು

ಶ್ರಮದಿಂದ ಸಂಪಾದಿಸಿದ ಸಂಪದವನ್ನು ತೃಣದಂತೆ ವೆಚ್ಚ ಮಾಡಲಿಕ್ಕೆ ಸಂಪಾದಕರು ಸಿದ್ಧರಿರಬೇಕು. ಇಂಥವರ ಸಂಪಾದನೆಯು ಸ್ವಭಾವಕ್ಕೆ ದುರ್ಗುಣವೆನಿಸದೆ ಸದ್ಗುಣದ ಸ್ವಭಾವವೆಂದು ಜನರು ಒಪ್ಪಿಕೊಂಡಾರು ಈ ಸತ್ಯಮಾರ್ಗದಿಂದ ಮನುಷ್ಯನು ಎಂದಿಗಾದರೂ ಶ್ರೀಮಂತನಾಗಬಹುದು ಇದಕ್ಕೆ ಸಂದೇಹವಿಲ್ಲ. ಇನ್ನು ಮನುಷ್ಯನು, ಕೀರ್ತಿವಂತನೂ, ಮಾನಿಷ್ಠನೂ, ಆಗಬೇಕಾದರೆ ಅವನಲ್ಲಿ ಪರಿಶುದ್ಧ ಗುಣವಿರಬೇಕು; ಅಂದರೆ ದೇಶಾಭಿಮಾನಿಯೂ, ದೇಶಜನರ ಹಿತಚಿಂತಕನೂ, ಆಗಿರಬೇಕು. ಮನದಲ್ಲಿ ಸರಳತ್ವವೂ, ಸ್ವಚ್ಛತನವೂ ಇರಬೇಕು. ಶತ್ರುತ್ವ, ಮಾತ್ಸರ್ಯ ಗುಣಗಳು ಎಷ್ಟುಮಾತ್ರಕ್ಕೂ ಇರಕೂಡದು. ದೀರ್ಘದೃಷ್ಟಿಯು ವಿಚಾರದಿಂದ ಏನು ನೋಡಿದರೆ ಈ ಗುಣಗಳು ಬರಲಿಕ್ಕೆ ತಡವಿಲ್ಲವು. ಭೋಜರಾಜ ಮುಂತಾದ ವಿಖ್ಯಾತ ವಿದ್ವಾಂಸ ಭೂಪತಿಗಳು ದೇಶಾಭಿಮಾನ, ದೇಶಜನೋತ್ಕರ್ಷ ಗುಣಗಳಿಂದ ಜೀವಿಸಿದಂತೆ ಹೆಸರಾಗಿಯಿದ್ದರೂ, ಕೀರ್ತಿಯಿಂದ ಚಿರಾಯುಷ್ಯರಾಗಿ ಹೆಸರಾಗಿದ್ದಾರೆ. ತಮ್ಮ ತಮ್ಮ ಹಿತವನ್ನು ಸರ್ವ ಜಾತಿಪ್ರಾಣಿಗಳು ಸಹಜವಾಗಿ ಮಾಡಿಕೊಳ್ಳುತ್ತವೆ. ಇನ್ನು ಬುದ್ಧಿವಂತರಾದ ಮನುಷ್ಯಪ್ರಾಣಿಗಳು ನಾವು ನಮ್ಮ ಹಿತವನ್ನು ಸಾಧಿಸಿಕೊಳ್ಳುವದೇನು ಆಶ್ಚರ್ಯದಮಾತು? ನಮ್ಮ ಜ್ಞಾನದ ಸಾರ್ಥಕ್ಯವೇನು? ಮನುಷ್ಯ ಜನ್ಮವು ಸಫಲವಾಗಬೇಕಾದರೆ ಅವನು ನ್ಯಾಯದಿಂದ ತನ್ನ ಹಿತವನ್ನು ಸಾಧಿಸಿಕೊಂಡು, ಪರಹಿತ, ಬಡವರನ್ನು, ದೇಶದ ಜನತೆ ಮುಂತಾದ ದೇಶಾಭಿಮಾನದ ಕಾರ್ಯಗಳಿಗೆ ತನು, ಮನ, ಧನಗಳನ್ನು ದಾನಮಾಡಬೇಕು. ಇದರಿಂದ ಸ್ವಾರ್ಥಪರಾರ್ಥಗಳು ಸಾಧಿಸಲ್ಪಟ್ಟು, ಜನ್ಮವು ಸಫಲವಾಗುವದು. ಆಚಂದ್ರಾರ್ಕ ಕೀ

ಕೆಯೂ ಶಾಶ್ವತವಾಗುತ್ತದೆ. ಮೋಕ್ಷವು ಸಾಧಿಸುತ್ತದೆ. "ಪರೋಪಕಾರಾಯ ಇದಂ ಶರೀರಂ" ಎಂಬ ಸೂಕ್ಷ್ಮದರ್ಶಕಯಾತ್ರವೂ, ಯಾವಾಗಲೂ ನಮ್ಮೆಲ್ಲರ ಹತ್ತಿರ ಇರುವುದು. ಪೂರ್ವಸುಕೃತದ ಫಲದಿಂದ ನಮಗೆ ಈ ಶ್ರೇಷ್ಠತ್ವದ ಮನುಷ್ಯಜನ್ಮವು ಬಂದದೆ. ಇದರ ಸಾರ್ಥಕ್ಯವನ್ನು ಮಾಡಿಕೊಳ್ಳತಕ್ಕದ್ದು. ಇದಲ್ಲದೆ ಕೆಂಡವು ತೊಂಡೆಯ ಹಣ್ಣೆಂದು ಖಂಡಿಸಿ ಬಯಸುವ ಪತಂಗದಂತೆ ವ್ಯರ್ಥ ನಿಂದಿತವಾದ ಕಾಕವರ್ಗ, ಕುನಿಂದೆ, ಕುಭಾವಗಳಿಗೆ ಮೋಹಿಸಿ ಆತ್ಮವಧವನ್ನು ಮಾಡಿಕೊಳ್ಳುವದಲ್ಲ. ಆಕಾರಣ ಮನುಷ್ಯನಲ್ಲಿ ನ್ಯಾಯವಾದ ಲೋಭ, ಅಭಿಮಾನಗುಣಗಳು ಅತ್ಯವಶ್ಯವಾಗಿರತಕ್ಕದ್ದು. ತಾ. ೨೩|೮|೮೩ಇಸ್ವಿ.

ಧಾರವಾ ೪ನೇ ನಂಬರ ಶಾಲೆ) ಶಿವಾನಂದ ಯಜ್ಞೇಶ್ವರ ವಾದಿಂದ. } ಜಿಪೇಯ್.

—o—

Correspondence.

ಪತ್ರವ್ಯವಹಾರವು.

ಸಾಂಪ್ರತು ನಂಮಾಧಾರವಾದ ಜಿಲ್ಲೇದ ಮತಬೋಧಕರ ಕಾರ್ಯಕರ್ತೃತ್ವದ ಕಾರ್ಯಭೂತ ಪ್ರಭುಗಳಾದ ನ್ಯಾಯನಿಷ್ಠನಾತೀ "ರೊಡ್ಡ" ಸಾಹೇಬರವರ ಸತ್ಸಹಾಸದಿಂದ ವಿದ್ಯಾಭಿವೃದ್ಧಿಯ ಪ್ರಸಾರವು ದಿವದಿನೆ ಹೆಚ್ಚುತ್ತ ನಡೆದ ಸಂಗತಿಯಂತು ಜಗದ್ವಿಖ್ಯಾತವೇ ಸರಿ. ಆಪ್ರಕಾರ ಈ ಬಂಕಾಪೂರ ತಾಲೂಕ ಹಿರೇ ಬಾದಿಹಾಳ ಶಾಲೆಯ ಅಭ್ಯಾಸಿಯರ ಸಂಖ್ಯೆಯು ಬೆಳದದರಿಂದ ಹೆಂಣುಮಕ್ಕಳಿಗೂ, ಹೊಲೇಮಕ್ಕಳಿಗೂ, ಕೂಡ್ರಲಿಕ್ಕೆ ಪ್ರಸ್ತುತ ಸಾಲಿ ಹಾಕುವ ಆಶ್ರಮವಾನೆಯು (ಧರ್ಮಶಾಲೆಯು) ಸ್ಥಳ ಸಂಕೋಚವಾಗು

ವದುಂಟು. ಈ ಆಶ್ರುಖಾನೆಯು ಈ ಊರಲ್ಲಿರುವ ನಬೀಸಾಬ್ (ಪಿಂಜಾರ) ಎಂಬುವ ಒಬ್ಬ ಪರೋಪಕಾರಿಯುರಾದ ಪರವಾನಸ್ಥರ ಕರುಣಾಳುಗಳಿಂದ ಕಟ್ಟಲ್ಪಟ್ಟದ್ದಾಗಿದ್ದಂತೆ ಅವರು ಈ ಜಾಗೆಯನ್ನು ಬಾಡಗೀ ಮುಂತಾದ್ದನ್ನೂ ತೆಗೆದುಕೊಳ್ಳದೆ, ಕೇವಲ ಪರೋಪಕಾರಕ್ಕಾಗಿಯೇ ಮುಫತು ಸಾಲಿ ಹಾಕಲಿಕ್ಕೆ ಕೊಟ್ಟಿದ್ದಾರೆ. ಅದೇ ಸದ್ಗೃಹಸ್ಥರು ಈಗ ಇದರ ಮುಂಭಾಗಕ್ಕೆ ತಾವೊಬ್ಬರೇ ತಮ್ಮ ಪದರಿನ ಖರ್ಚಿನಿಂದ ಇಮಾಲಾ ಏಳಿಸಿ ಹಾಕಿಸಿಕೊಡುವದಕ್ಕೆ ಸಹಾ ಒಪ್ಪಿಕೊಂಡಿದ್ದಾರೆ.

ಈ ಕೋಮಲಾಂತಃಕರಣಿಯರು ಬಹು ಸುಶೀಲರೂ, ಸದಾಚಾರರೂ, ಸಭ್ಯ ಸ್ವಭಾವದವರೂ, ಇದ್ದು, ತಮ್ಮ ಜಾತಿಧರ್ಮದ ಪ್ರಕಾರ ಮುಂದರಾಗಿದ್ದಾರೆ. ಫಿನಾಲು ಫಕೀರ, ಜಂಗಮ ಮುಂತಾದ ಯಾವ ಜಾತಿಯ ಭಿಕ್ಷುಕರೇ ಆಗಲಿ, ಎಷ್ಟು ಮಂದಿ ಬಂದರೂ ಅವರಿಗೆ ಅಂನ ವಸ್ತ್ರ ಮುಂತಾದವುಗಳಿಂದ ಬಹು ಆದರ ತಿಥ್ಯ ಮಾಡುವರು. ಇದಲ್ಲದೆ, ಪ್ರತಿ ವರ್ಷ ರಮಜಾನ ತಿಂಗಳಲ್ಲಿ ಅಂನ ವಸ್ತ್ರ ಪಾತ್ರೆಗಳ ದಾನಧರ್ಮಕ್ಕಾಗಿ ೨೦೦।೩೦೦ ರೂಪಾಯಿ ವೆಚ್ಚ ಮಾಡುವರು. ಮತ್ತು ಲೋಕೋಪಯೋಗಕ್ಕಾಗಿ ಈಪ್ರಾರ ಸಮೀಪದಲ್ಲಿ ಒಂದು ಕೆರೆಯನ್ನು ಸಹಾ ಕಡಿಸಿದ್ದಾರೆ.

ದಾನದಲ್ಲಿ ದಾನ ಅಂನದಾನವೇ ಪ್ರಧಾನವೆಂದು ಸರ್ವಸಮ್ಮತ ಉಂಟು ದಾನವು ಅಕ್ಷಯದಾನಕ್ಕೂ, ಅಖಂಡಿತ ಲಕ್ಷ್ಮಿಗೂ, ಮರ್ಯಾದೆಗೂ ಸಾಧನಾಸ್ಪದವಾದದ್ದಲ್ಲವೋ! (ಹಾದಿಸ್ಸು) ಇಂಥಾ ಪರೋಪಕಾರದಲ್ಲಿ ಉದಾರ ಮನಸ್ಸಿನವರಾಗಿದ್ದಂಥಾ ಕರುಣಾಭರಿತ ಗೃಹಸ್ಥರ ಉಪಕಾರವನ್ನು ಕುರಿತು, ಈ ವಿದ್ಯಾಲಯದ ಅಭ್ಯಾಸಿಯರೂ, ಈ ಗ್ರಾ

ಮಹಾಶಿಗರೂ, ಕೃತಜ್ಞರಾಗಿ, ಅವರಿಗೂ, ಅವರ ಕುಟುಂಬದವರಿಗೂ ಚಿರಕಾಲ ಕಲ್ಯಾಣವಾಗಲೆಂದೂ, ಇಂಥಾ ಪರೋಪಕಾರ ಪುಣ್ಯವಾದ ಮನೋಭಾವಕ್ಕೆ ತಲೆಂದೂ, ಈಶನಂಲೇ ಸಾಗಿ ಬೇಡಿಕೊಳ್ಳುವದು ಅವರವರ ಧರ್ಮವೇ.

ಓ ದೇಶೋನ್ನತಿಯಾಭಿಮಾನಿಗಳೇ! ತಜ್ಞೋತಿಗರ ಕನಿಕರವುಳ್ಳವರೇ!! ದೇಶವಾಸಿಸ್ಥರ ಹೆಚ್ಚುಗೆಯ ಹಿತಾಪೇಕ್ಷಿತರೇ!!! ನೀವೆಲ್ಲರು ವಾತ್ಸಲ್ಯಭಾವವಿಲ್ಲದೆ ಇಂಥಾ ಲೋಕಹಿತಾರ್ಥವಾದ ಸಂಸ್ಕೃತ್ಯಗಳಿಗೆ ವಿತ್ತೋದ್ಧಾರವಾಗಿಯೂ, ಜ್ಞಾನೋದ್ಧಾರವಾಗಿಯೂ, ಆಶ್ರಯಭೂತರಾದರೆ, ದೇಶವೆಲ್ಲವು ಶಿಕ್ಷಿತರಾಗಬೇಕೆಂಬ ನಿಂಮೆಲ್ಲರ ಕೋರಿಕೆಗಳು ಕೈಗೂಡುವದು ಪರಮಾಶ್ಚರ್ಯವೋ? (ಅಲ್ಲವೇ ಅಲ್ಲ.)

ಹಿರೆಬೂದಿಹಾಳ ಶಾಲೆಯು ತಾ. ಬಂಕಾಪೂರ ಜಿ. ಧಾರವಾಡ ತಾ. ೧೩|೭|೮೩.	ಹನುಮಂತ ಭೀಮಲಿಂಗ [ಧಾರವಾಡ] ಹೆ. ಮಾ. ಶಾಲಾಮುಜಕೂರ.

——o——

ರಾ. ಸಾ. ಶುಭಪತ್ರದ ಎಡಿಟರ ಇವರಿಗೆ—

ವಿ. ವಿ. ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ಇದೇ ತಿಂಗಳದಲ್ಲಿ ತಮ್ಮ ಕರಕಮಲದೊಳಗೆ ಉಗ್ಗಡಿಸುವ ಸುಂದರವಾದ ಶಾಲಾಪತ್ರಿಕೆಯಲ್ಲಿ ಛಾಪಿಸಿ ಪ್ರಸಿದ್ಧಿಯನ್ನು ಮಾಡಿ ನಮ್ಮ ಮನಸು ಸಂತೋಷ ಪಡಿಸುವದು—

ನನ್ನ ಬಂಧುಗಳಾದ ಶಾಲಾಮಾಸ್ತರರ ಅಸಿಷ್ಟಂಟರೇ ಈ ವಿನಂತಿಗಳಿಗೆ ಸ್ವಲ್ಪ ಲಕ್ಷ ಕೊಡರಿ. ಆದಾಕಾರ: ವಿಶ್ವಾಸದಿಂದ ನಡಿಯುವವರಿಗೆ ಈಗಿನ ದಿನಮಾನದಿಂದ ನಿಶ್ಚಯವಾಗಿ ಕೇಡು ಬರುವದು. ಕದಾಚಿತ ಬರುವದಿಲ್ಲವೆಂದರೆ ನನಗೆ ಪ್ರಾ

ರ್ಶ ಅನುಭವ ಆಗಿರುತ್ತದೆ. ಅದು ಹ್ಯಾಗೆಂದರೆ ನಾನು ತಾ ಲೂಕ ಹುನಗುಂದ ಪೈಕಿ ಪೇಠಾ ಅಮೀನಗಡ ಸಾಲಿಯ ಹಿಂದ ನೇ ಅ|| ಜಾಗಾದಮೇಲೆ ಇದ್ದೆನು, ಅಲ್ಲಿ ಇರುವ ನಾರಾಯ ಣ ಶಿವಾಜಿ ದೇಶಪಾಂಡೆ ನರೇಂದ್ರ ಕೆದ್ದಮಾಸ್ತರ ಇವರ ಗುಣ ಗಳನ್ನು ಎಷ್ಟು ವರ್ಣನ ಮಾಡಿದರೂ ತೀರದು. ಆಹಾಹಾ; ನಂಬಿದವನನ್ನು ಕೊಲ್ಲುವದು ಆಶ್ಚರ್ಯವೇ ನಮ್ಮ ಗತಿಯು ಹಾಗೆಯೇ ಆಯಿತು ಏನಂದರೆ ಪೂರ್ಣ ವಿಶ್ವಾಸದಿಂದ ಸಾಲಿ ಯ ಕೆಲಸವನ್ನೂ ನದರಿ ಅವರ ಮನೆಯ ಕೆಲಸವನ್ನೂ ಭೇದಾ ಭೇದ ನೋಡದಲೆ ನದರಿಅವರ ಮನೆಮಂದಿಗೆ ಸಹ ನಾನೇ ನ ಡಿಸಿದೆನು ಈ ಪರಿಯ ವಿಶ್ವಾಸದಿಂದ ನಡೆಯುವಂಥವನಿಗೆ ಏನು; ಕಾರಣ ನಮ್ಮ ತಂದೆಗಳ ಕಡೆಗೆ ಸುಳ್ಳೇ ನಮ್ಮ ಗಿಲ್ಟೀದ ರಪೋ ರ್ಟ ಮಾಡಿ ನಮಗೆ ಕೊಡತಕ್ಕ ರುಪಾಯಿಗಳನ್ನು ಮುಳುಗಿಸಬಿ ಟ್ಟ ಇಷ್ಟು ಸಾಹಸವ್ರೋ ಅಯ್ಯಾ ಮಾಸ್ತರಜನರೇ ನಾನು ನಂ ಬಿ ಕೊಟ್ಟೆನು ನೀವಾದರು ಹೀಗೆ ನಡೆದರೆ ನಿಶ್ಚಯವಾಗಿ ಕೆಡು ವಿರಿ (ಈಗಿನ ದಿನಮಾನಕ್ಕೆ ಕದಡವು ತುರುಕಿಕೊಳ್ಳಬೇಕೆಂ ಬ ಗಾದಿಯಂತೆ ಮಾತ್ರ, ಸತ್ರ, ಬಿ.ಎ.ಪರೀಕ್ಷೆಕ್ಕೆ ಪ್ರಶ್ನ ನನ್ನು ಕೈಯಲ್ಲಿ ಹಿಡಿದಂತೆ) ಕಾರಣ ದಿನಮಾನದ ಕಡೆಗೆ ಲಕ್ಷ ಕೊಡರಿ. ಕರ್ಮಗಳಿಗೆ ಸಾಕ್ಷಿಭೂತರಾದ ಎಡೇಬರಾ ಯರೇ ನೀವಾದರು ವಿಚಾರ ಮಾಡಿ ನೋಡಿರಿ ಈ ಧರ್ಮವು ಪೂ ರ್ವದ ಕಾಲದಲ್ಲೋ ಅಥವಾ ಈಗ ಇರುವ ಕಲಿಧರ್ಮದಲ್ಲೋ ನ ಮಗಂತೂ ಸೂಚಿಸವಲ್ಲದು. ತಾವಾಗಲಿ ಅಥವಾ ನಮ್ಮ ಬಂ ಧುಗಳಾಗಲಿ ಇದು ಯಾವಕಾಲದ ಧರ್ಮವು ತಿಳಿಸಿದರೇ ತಿ ಳಿಯುವದು ಬಹುಶಃ ಕಲಿಧರ್ಮವೇ ಇರಬಹುದು ಅಹ ಹಾ: ಕಲಿಯೇ ನನಗೆ ಪೂರಾ ಪೆಟ್ಟು ಕೊಟ್ಟಿತು ಈ ಕಲಿಯ್ಗು

ಮೂರು ಲೋಕದಲ್ಲಿ ಬಿಡುವುದಿಲ್ಲೆಂಬಂತೆ ತಿಳಿಯುತ್ತದೆ ಇನ್ನು
ಇದರ ಮಹಿಮೆಯು ಏನೇನು ಅದೆಯೋ ಇದು ಸುಜ್ಞಾನಿಯಾ
ದ ದೇವರೇಬಲ್ಲ ತಾ. ೧೫|೮|೮೩ ಇ.

ಬಾಳಕೃಷ್ಣ ಮಹಾದೇವ ಪುರಾಣಿಕ
ಮಾಸ್ತರ ಅನಗವಾಡಿ.

—೦—

ರಾ. ಸಾ. ಶಾಳಾಪತ್ರಿಕೆ ಕರ್ತ ಇವರಿಗೆ.—

ವಿ. ವಿ. ತಪ್ಪುಕಂಕಣವಾಲೆದಲ್ಲಿ ಹುಟ್ಟುವ ಕನ್ನಡಶಾಲಾಪತ್ರಿ
ಕೆ ಪುಸ್ತಕ ೧೮ ಸಂಚಿಕೆ ೬ನೇದರಲ್ಲಿ ಪುಟ ೧೪೩ನೇದರೊಳ
ಗೆ ಕೆಲವು ಪುರಾತನ ನಡಾವಳಿಯ ವಿಷಯಕ್ಕೆ ಪ್ರಶ್ನಮಾಡಿ
ದಕ್ಕೆ ಉತ್ತರವು. ನನ್ನ ಅಲ್ಪಮತಿಗೆ ತಿಳಿದಷ್ಟು ಕೊಟ್ಟು
ತಪ್ಪುಕಡಿಗೆ ಈತಿಂಗಳದಲ್ಲಿ ಜನಿಸುವ ಶಾಲಾಪತ್ರಿಕೆಯಲ್ಲಿ
ಛಾಪಿಸಬೇಕೆಂದು ಕಳಿಹಿಸಿದ್ದೇನೆ. ಅದನ್ನು ದಯಮಾಡಿ ಮೂ
ಲಿಗೆ ಆಶ್ರಯಕೊಡದೆ ಪ್ರಗಟಿಸಬೇಕು.

೧ ದೊಡ್ಡವರು ಆಕಳಿಸುವಾಗ್ಗೆ ಚಿಟಿಗೆಹೊಡಿಯುವ ಕಾರ
ಣವೆಂದರೆ—ಪೂರ್ವದಲ್ಲಿ ಎಷ್ಟೋಜನರ ಪ್ರಾಣಗಳು ಆಕಳಿ
ಸುವಾಗ್ಗೆ, ಶೀತಕೂಡಲೆ, ಕೆಮ್ಮುತ್ತಿರುವಾಗ್ಗೆ, ಹೋಗಿದ್ದಾ
ವೆ ಮತ್ತು ಮುಂದಾದರೂ ಹೋಗುವ ಸಂಭವವುಂಟು ಅದ
ರಿಂದಾ ಮೇಲಿನ ಕಾರಣ ಜನಿಸಿದಾಗ್ಯೆ ಹುಷಾರಾಗಬೇಕೆಂ
ದು ಚಿಟಕಿಹೊಡಿಯುತ್ತಾರೆ. ಇದಲ್ಲದೇ ದೇವರನಾಮ, ಶಿವ
ಶಿವ, ರಾಮರಾಮ, ಕೃಷ್ಣಕೃಷ್ಣ, ಎಂದು ಸ್ಮರಿಸುತ್ತಾರೆ.

೨ ಹಲ್ಲಿ ಚಿಛ ಚಿಛಯೆಂತಾ ನುಡಿದಕೂಡ್ಲೆ ಹಲ್ಲಿಯು ಸು
ಷ್ಟ ಅಥವಾ ದುಷ್ಟಫಲಹೇಳಿದ್ದು ತಿಳಿಯುವದಿಲ್ಲ. ಆ ಶಬ್ದವು
ಸತ್ಫಲವಿದ್ದರೆ ಸಂತೋಷಪಡಬೇಕೆಂತಲೂ ದುಷ್ಫಲವಿದ್ದರೆ ಅದು

ನಾಶವಾಗಲೆಂತಲೂ ದೇವರನಾಮ, ಶಿವಶಿವ, ರಾಮ ರಾಮ, ಕೃಷ್ಣಕೃಷ್ಣ, ಎಂತ ಉಚ್ಚರಿಸುತ್ತಾರೆ. ಫಕ್ತ ಕೃಷ್ಣಕೃಷ್ಣ ಎಂತ ಸ್ಮರಿಸುವದರಿಂದೇ ಹರಿಯು ತಮ್ಮ ನಜರಿಗೆ ಕಂಡದ್ದು ನೋಡಿ ಅದೊಂದೇ ಎಂದು ತಿಳಿಯಬಾರದು ಶಿವ, ಶಿವ, ರಾಮ, ರಾಮ, ಎಂತಾ ಅನೇಕಜನರು ಅನ್ನುತ್ತಾರೆ.

೩ ಬ್ರಾಹ್ಮಣರು ಭೋಜನಕ್ಕೆ ಕೂತಾಗ್ಗೆ ಏಕೋ ವಿಷ್ಣು ಈ ಮಂತ್ರ ಅಂದು ಬ್ರಾಹ್ಮಣ ಭೋಜನಕ್ಕೆದ ಸಾಫಲ್ಯದಿಂದಾ ತಮ್ಮ ಇಷ್ಟದೇವತಾ ಪ್ರೀತಿಯಾಗಲೆಂದು ಸಂಕಲ್ಪ ಬೇಳನಬಿಡಬೇಕೆಂದು ಅನ್ನತಕ್ಕದ್ದು ಪರಂತು ಇದನ್ನೆಲ್ಲಾ ಅನ್ನದೆ ಫಕ್ತ ಸ್ಮರಣಾರ್ಥವಾಗಿ ಏಕೋವಿಷ್ಣು ಬಿಡಿರಿಯೆಂತ ಅನ್ನುತ್ತಾರೆ. ಸಂಕಲ್ಪಮಂತ್ರದಲ್ಲಿ ಏಕೋವಿಷ್ಣು ಎಂದು ಇದ್ದಕಾರಣ ಅನವೇಕಾಗುತ್ತದೆ. ಆ ಮಂತ್ರದಲ್ಲಿ ಏಕೋಶಿವ ಅಂತ ಇರುತಿದ್ದಲ್ಲಿ ಹಾಗೆಯೇ ಅನುತಿದ್ದರು ಆದರೆ ಹಾಗೆ ಇಲ್ಲದಕಾರಣ ಅನ್ನುವದಿಲ್ಲ. ಮತ್ತು ಈ ಸಂಕಲ್ಪವು ೧ನೇ ಪಂಗ್ತಿಯದರಿಂದಾ ಅಂತಯಾರು ಅನ್ನುತ್ತಾರೆ? ಅನ್ನುವದಿಲ್ಲ. ಆದರೆ ಅನ್ನುವದೇನಂದರೆ ಯಜಮಾನಮಾಡಿಸಿದ ಅನ್ನಭೋಜನಮಾಡಿದ ಬ್ರಾಹ್ಮಣರು ಸಂತೋಷವಾಗಲಿ ಮತ್ತು ಅವರು ಸಂತೋಷವಾದಫಲವು ತನ್ನ ಯಜಮಾನನ ಇಷ್ಟದೇವಿಗೆ ಮುಟ್ಟಿ ಅವನು ಪ್ರಸನ್ನವಾಗಲೆಂದು ಅನ್ನುತ್ತಾರೆ. ಮತ್ತು ಎರಡನೇ ಪಂಗ್ತಿವರಿಗೆ ಶೇಷಾನ್ನ ಇರುವಕಾರಣ ಮ ಯಾವತ್ತರದಶಿಂದಾ ಮೊದಲಿಗೇ ಸಂಕಲ್ಪ ಮಾಡಿದಕಾರಣ ಎರಡನೇ ಸರ್ತಿ ಸಂಕಲ್ಪಮಾಡುವಕಾರಣವಿಲ್ಲ. ಮತ್ತು ಸಾಧಾರಣವಾಗಿ ಪ್ರತ್ತಮ ಮಧ್ಯಮ ಕನಿಷ್ಠ ಪ್ರಕಾರ ಕ್ರಮವಾಗಿ ೧ನೇ ೨ನೇ ೩ನೇ ವರ್ಗದವರ ಪಂಗ್ತಿ ಭೋಜನವಾಗುತ್ತದೆ. ಆ ಎಲ್ಲರೂ

ದೇ ಪಂಗ್ತಿಗೆ ಕೂಡುವದೇ ಪ್ರಶ್ನವು ಹಗಂತು ಸ್ಥಳಸಂಕೋಚೈಯಿಂದಲೂ ಹಾಕಬಹುದಾದವರ ಸಂಖ್ಯೆ ಕಡಿಮೆ ಇರುವದರಿಂದಲೂ ೩ | ೪ ಪಂಗ್ತಿಗಳಾಗುತ್ತವೆ. ಅಂದಮೇಲೆ ೩ | ೪ ಪಂಗ್ತಿಗೆ ಕೂಡುವರು, ಇಂಥಾ ಭೂತದವರೆಂದು ಹ್ಯಾಗೆ ತಿಳೀಬೇಕು. ಮತ್ತು ಇದರಲ್ಲಿ ಏನಾದರೂ ಸಂಶಯಬಂದಲ್ಲಿ ಕೇಳಿದರೆ ತಿಳಿದಷ್ಟು ಹೇಳುವೆನು.

ಮತ್ತು ಈಗ ನನಗೆ ಒಂದು ಶ್ಲೋಕದ ಅರ್ಥ ತಿಳಿಯದಕಾರಣ ಕೆಳಗೆ ಬರೆದು ಕಳಿಸಿದ್ದೇನೆ ಬಲ್ಲವರು ತಿಳಿಸಿ ಚಿತ್ತಾನಂದ ಮಾಡಬೇಕೆಂದು ಆಶಿಗೊಂಡಿದ್ದೇನೆ.

|| ಶ್ಲೋಕ ||

ಯಾಮಾತಾ ಮಮತಾ ಮಾಯಾ ||
ಮಮರೋಕ್ಷ ಕ್ಷರೋಮಮ ||
ತಾರೋನೋಗಗನೋ ರೋತಾ ||
ಮಕ್ಷಗಕ್ಷ ಕ್ಷಗಕ್ಷಮ || ೧ ||

ಈ ಶ್ಲೋಕವು ಹ್ಯಾಗೆ ಓದಿದರೂ ಮೊದಲಿನಂತೇ ಪಾಠ್ಯವಾಗುತ್ತದೆ. ಕಾರಣ ಇದರ ಅರ್ಥ ಮಾಡಿದರೂ ಚಮತ್ಕಾರವಿದ್ದೀತೆಂದು ಪ್ರಗಟಿಸುತ್ತೇನೆ. ಎಡಿಟರಾಯರೇ ಪತ್ರವಿಸ್ತಾರವಾದದಕ್ಕೆ ಕ್ಷಮಿಸಬೇಕು. ಮಿ. ವಿ. ತಾ. ೨೮ | ೮ | ೮೪೪.

ರಾಮಜಿ ನೀಲಕಂಠರಾವ ಕುಲಕರ್ಣಿ ಮ
ಕ್ಕುಂದ ತಾ. ಸಂಪಗಾಂವ ಜಿ ಬೆಳಗಾಂವ.

ಶಾಲಾಪತ್ರಕವು.

ಪುಸ್ತಕ ೧೮] [ಸಂಚಿಕೆ ೯

ಸಪ್ಟಂಬರ. ೧೮೮೩

Education and Improvement.

ವಿದ್ಯಾಸುಧಾರಣಾಸಂಬಂಧವಾದ ಸಂಗತಿಗಳು.

—*○*—

ಲಂಡನ್ ಯುನಿವರ್ಸಿಟಿಯಲ್ಲಿ ವಿದ್ಯಾಭ್ಯಾಸಕ್ಕೋಸ್ಕರ ಹಿಂದುಸ್ತಾನ ಸರಕಾರದವರು ೩ಜನ ಹಿಂದೂವಿದ್ಯಾರ್ಥಿಗಳನ್ನು ಆರಿಸಿ ಕಳಿಸಿ ಕೊಟ್ಟು, ಒಬ್ಬೊಬ್ಬನಿಗೆ ವರ್ಷಕ್ಕೆ ೧೫೦ ರೂಪಾಯಿಯಂತೆ ಸ್ಕಾಲರಶಿಪ್ (ವಿದ್ಯಾರ್ಥಿಯ ಸಂಬಳ) ಕೊಡುತ್ತಿರುತ್ತಾರೆ. ಒಳಗಡೆಯಲ್ಲಿ ಸಿಂಹಲದ್ವೀಪದ ವಿದ್ಯಾರ್ಥಿಗಳಿಗೆಸಹ ಈ ಸಂಬಳ ಪಡೆಯುವ ಹಕ್ಕು ಕೊಡಬಹುದೆಂಬಾ ಠರಾವು ಆಗಿರುತ್ತದೆ.

—○—

ನ್ಯೂಝೀಲಂಡ ದ್ವೀಪದಲ್ಲಿ ಒಳಗಡೆಯಲ್ಲಿ ವಜ್ರದ ಹರಳುಗಳು ದೊರಿಯಹತ್ತಿದ ಸುದ್ದಿಯುಂಟು.

—○—

ಈ ದೇಶದಲ್ಲಿ ವಿದ್ಯಾಖಾತೆಯು ಸನ್ ೧೮೫೫ನೇ ವರ್ಷ

ಸ್ವತಂತ್ರವಾಗಿ ಆರಂಭವಾಯಿತು. ಆವರ್ಷ ಯೊವತ್ತು ದೇಶದಲ್ಲಿ ಶಾಲೆಗಳೂ ಕಾಲೇಜುಗಳೂ ಕೂಡಿ ೫೧೦೦೦ ಇದ್ದವು. ಅವುಗಳಲ್ಲಿ ೯೩೦೦೦೦ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಆದರೆ ಹೋದವರ್ಷ, ಅಂದರೆ ಸನ್ ೧೮೮೧-೮೨ ಇಸವಿಯಲ್ಲಿ ಶಾಲೆಗಳ ಸಂಖ್ಯವು ೧೧೬೦೦೦ ಇತ್ತು, ಮತ್ತು ಇವುಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯವು ೨೭೫೦೦೦೦ ಇತ್ತು. ಇದರಿಂದ ೨೦ವರ್ಷಗಳಲ್ಲಿ ಶಾಲೆಗಳ ಸಂಖ್ಯವು ೨ಪಾಲಿಗಿಂತ ಹೆಚ್ಚು, ವಿದ್ಯಾರ್ಥಿಗಳ ಸಂಖ್ಯವು ಸುಮಾರು ೩ಪಾಲು ಬೆಳೆದೆಂದು ಸಿದ್ಧವಾಗುತ್ತದೆ.

—o—

ಪ್ರಣೆಯ ಹಾಯಿಸ್ಕೂಲಿನೊಳಗಿನವನೊಬ್ಬ ಅಸಿಸ್ಟಂಟ್ ಮಾಸ್ತರನು ಕೆಲವು ವಿದ್ಯಾರ್ಥಿಗಳ ಹೆಸರುಗಳನ್ನು ರಜಿಸ್ಟರಿನಲ್ಲಿ ದಾಖಲುಮಾಡದೇ, ಅವರ ಫೀಯನ್ನು ಎಷ್ಟೋ ತಿಂಗಳು ತಾನೇ ನುಂಗುತ್ತಿದ್ದನು. ಆದರೆ ವಾರ್ಷಿಕ ಪರೀಕ್ಷೆಯಲ್ಲಿ ಈ ಕಪಟವು ಬೈಲಿಗೆ ಬಂದದ್ದರಿಂದ ಆ ಮಾಸ್ತರನನ್ನು ಬಡತರ್ಫ ಮಾಡಿದರು.

—o—

ಶಾಲಾಖಾತೆಯಲ್ಲಿ ಪೂರ್ವದಲ್ಲಿ ಸಂಸ್ಕೃತ ಶಿಕ್ಷಕನಾಗಿದ್ದ ರಘುನಾಥಶಾಸ್ತ್ರೀ ಶೇಂಡೆ ಯೆಂಬ ಗೃಹಸ್ಥನು ಧರ್ಮೋಪದೇಶ ಮಾಡುವದಕ್ಕೋಸ್ಕರ ಹಿಂದುಸ್ತಾನದಲ್ಲೆಲ್ಲ ಸಂಚರಿಸುವ ಕ್ರಮವನ್ನು ಆರಂಭ ಮಾಡಿದ್ದಾನೆ. ಅವನು ಇದುವರೆಗೆ ದಕ್ಷಿಣ ಹಿಂದುಸ್ಥಾನದಲ್ಲಿ ಸಂಚಾರಮಾಡಿ ಪ್ರಣೆಕ್ಕೆ ಬಂದಿದ್ದಾನೆ; ಇನ್ನು ಮುಂದೆ ಉತ್ತರ ಹಿಂದುಸ್ತಾನಕ್ಕೆ ತೆರಳತಕ್ಕವನಿದ್ದಾನೆ. ನಮ್ಮ ದೇಶದವರು ವಿಶೇಷವಾಗಿ ಸ್ವದೇಶ ಪರ್ಯಟ

ನವನ್ನು ಕೈಕೊಂಡದ್ದು ಇದೇ ಮೊದಲೆಂದು ಹೇಳಬಹುದು.

—o—

ಜಾವಾದ್ವೀಪದಲ್ಲಿ ಅತಿಭಯಂಕರವಾದ ಜ್ವಾಲಾಮುಖಿಯು ಸ್ಫೋಟನವಾದದ್ದರಿಂದ ಅಲ್ಲಿಯೂ ಸುಮಾತ್ರಾ ದ್ವೀಪದಲ್ಲಿಯೂ ಕೇವಲ ಅಗ್ನಿಪ್ರಳಯವಾದಂತೆ ಆಗಿದೆ. ಮೂರು ಸಣ್ಣ ದ್ವೀಪಗಳೂ, ಎರಡು ಪಟ್ಟಣಗಳು ಸಮೂಲವಾಗಿ ನಷ್ಟವಾದವಲ್ಲದೆ; ಲಕ್ಷಾವಧಿ ಮನುಷ್ಯರೂ ಅಸಂಖ್ಯಾತ ಪ್ರಾಣಿಗಳೂ ನೋಡನೋಡುತ್ತ ಮರಣಹೊಂದಿದರೆಂದು ತಿಳಿದಿದೆ.

—o—

ವಿಕ್ಟೋರಿಯಾ ಮಹಾರಾಣಿಯವರ ಅಧಿಕಾರಕ್ಕೆ ಕೆಳಗೆ ಬರಿದ ಭೂಪ್ರದೇಶಗಳು ಶೇರಿರುತ್ತವೆ—೧ ಮಹಾದ್ವೀಪ, ೧೦೦ ದ್ವೀಪಕಲ್ಪಗಳು, ೫೦೦ ಭೂಶಿರಗಳು, ೧೦೦೦ ಸರೋವರಗಳು, ೨೦೦೦ ನದಿಗಳು, ೩೦೦೦೦ ದ್ವೀಪಗಳು—ರಾಣಿಯವರು ಒಂದು ಕೈಯನ್ನು ಎತ್ತಿದಕೂಡಲೆ ೫ ಲಕ್ಷ ಭೂಸೇನೆಯೂ, ೧ ಲಕ್ಷ ಸಮುದ್ರಸೇನೆಯೂ ಯುದ್ಧಕ್ಕೆ ಸಿದ್ಧವಾಗಿರುತ್ತವೆ.

—o—

ಉತ್ತರ ಭಾಗದ ರೆಮಿನ್ಸ್ಯಾಕ್ಯುಶನರರ ವ್ಯಾಪಾರದಾರರು ಕನ್ನಡಿಗಳ ಸಹಾಯದಿಂದ ತಂತಿ ಟಪಾಲಿನಂಥಾದೊಂದು ಯಂತ್ರವನ್ನು ರಚಿಸಿದ್ದಾರೆ. ಅದರ ಸಹಾಯದಿಂದ, ತಂತಿ ಟಪಾಲಿನಂತೆ, ಒಂದು ಸ್ಥಳದಿಂದ ಮತ್ತೊಂದಕ್ಕೆ ವರ್ತಮಾನ ಕಳಿಸಲಿಕ್ಕೆ ಬರುತ್ತದೆ.

—o—

Friendship.

ಮೈತ್ರಿ.

ನಿಜವಾದ ಮಿತ್ರನು ಯಾವನಾದರೆ ತನ್ನ ಮಿತ್ರನು ಕೆಟ್ಟ ಕೆಲಸದಲ್ಲಿದ್ದರೆ, ಅವನನ್ನು ತಿರಿಗಿ ಸುಮಾರ್ಗಕ್ಕೆ ಹಚ್ಚುವನು. ಅವನ ಹಿತಮಾಡುವದಕ್ಕೆ ತನ್ನ ಕೈಲಾದಮಟ್ಟಿಗೆ ಪ್ರಯತ್ನ ಮಾಡುತ್ತಾನೆ. ಅವನ ಗುಪ್ತಾಲೋಚನೆಯನ್ನು ಮೂರನೆಯವರ ಕಿವಿಗೆ ಮುಟ್ಟಗೊಡದೆ, ಅವನಲ್ಲಿದ್ದ ಸದ್ಗುಣದ ಖ್ಯಾತಿಯನ್ನೇ ಮಾಡುತ್ತಾನೆ. ಅವನು ದುಃಖದಲ್ಲಿದ್ದರೆ ದುಃಖಪರಿಹಾರ ಮಾಡಿ, ಅವನಿಗೆ ದ್ರವ್ಯದ್ವಾಗಲಿ, ಎರಡನೆಯ ಯಾವದಾದರೊಂದು ಪದಾರ್ಥದ್ವಾಗಲಿ ಅಗತ್ಯವಿದ್ದ ಪ್ರಸಂಗದಲ್ಲಿ ಅವನಿಗೆ ಅದನ್ನು ಸಂಪಾದಿಸಿಕೊಡುತ್ತಾನೆ. ತನ್ನ ಮಿತ್ರನಿಗೆ ಆನಂದವಾದರೆ ತಾನೂ ಆನಂದ ಬಡುತ್ತಾನೆ. ಮಿತ್ರನಿಗೆ ದುಃಖವಾದರೆ, ತಾನೂ ಬಹಳದುಃಖಮಾಡುತ್ತಾನೆ. ಇದರ ಮೇಲಿಂದ ಸಂಕಟಕಾಲದಲ್ಲಿ ಸಹಾಯವಾಗುವನೇ ನಿಜವಾದ ಮಿತ್ರನೆಂದು ತಿಳಿಯಬೇಕು. ತನ್ನಲ್ಲಿ ಐಶ್ವರ್ಯವಿದ್ದರೆ ಯಾವ ಬೇಕಾದವನು ಕೆಲಸಕ್ಕೆ ಬೀಳುತ್ತಾನೆ. ಅಂದಮೇಲೆ ಮಿತ್ರನೆ ಯಾತಕ್ಕೆಬೇಕು. ತನ್ನಮೋರಿಯ ಮುಂದೆ ಅಷ್ಟುಸುಮಾತಾಡಿ ಬೆನ್ನಹಿಂದ ತನ್ನ ಹಾನಿಯನ್ನುಮಾಡುವಂಥ ಮಿತ್ರನನ್ನು ಬಿಟ್ಟು ಬಿಡಬೇಕು. ಯಾಕಂದರೆ ಅವರ ಮುಖದಲ್ಲಿ ಅಮೃತವಿದ್ದಾಗ್ಯೂ ಮನಸಿನಲ್ಲಿ ವಿಷವಿರುತ್ತದೆ.

ಒಬ್ಬರಿಗೊಬ್ಬರು ಕೂಡಿ ಇರುವದು ಸೇರದಂಥವರು ಈಜಗತ್ತಿನಲ್ಲಿ ಬಹಳ ಸ್ವಲ್ಪ ಜನರುಂಟು. ತನ್ನ ಹತ್ತರ ಸಂಪತ್ತಯಿರುವದರಿಂದ ಅಥವಾ ಮನಃಪೂರ್ವಕವಾಗಿ ಮಿತ್ರತ್ವದಿಂದ ನಡೆಯುವದು ಸೇರದಿರುವಂಥ ಜನರಿದೆ ಅರಣ್ಯದೊಳಕ್ಕಿ

ಏಕಾಂತವಾಗಿ ಗುಹೆಯೊಳಗೆ ಬಿದ್ದುಕೊಂಡಿರುವಂಥ ಕಾಡ ಪ್ರಾಣದ ಉಪಮೆಯನ್ನು ಕೊಟ್ಟರೆ ಚನ್ನಾಗಿ ಸಲ್ಲುವದು. ಹ್ಯಾಗೆ ಶರೀರದ ದುಃಖಗಳನ್ನು ದೂರಮಾಡುವದಕ್ಕಾಗಿ ಔಷಧವು ಉಪಯೋಗವಾಗುವದೋ ಹಾಗೆ ಮಾನಸಿಕದುಃಖಗಳನ್ನು ಶಾಂತಿಪಡಿಸುವದಕ್ಕೆ ಮಿತ್ರನ ಅವಶ್ಯಕತೆಯುಂಟು.

ಯಾವನಾದರೂ ದೊಡ್ಡಮಾತು ಒಬ್ಬ ಮನುಷ್ಯನ ಕೈಯಿಂದ ಆಗತಕ್ಕದಲ್ಲ. ಆದರೆ ಅದನ್ನೇ ಮಾಡಲಿಕ್ಕೆ ಮಿತ್ರನ ಸಹಾಯವಿದ್ದರೆ, ಸಾವಿರಾರು ತೊಂದರೆಗಳಿದ್ದಾಗ್ಯಾದರೂ ಅವನ ಮಾತು ಕಡೆಗಾಣುವದು ಎಂಬದಕ್ಕೆ ಸಂಶಯವಿಲ್ಲ. ಯಾವದೇಶದಲ್ಲಿ ಯಾವತ್ತುಜನರು ಸ್ನೇಹದಿಂದ ನಡೆದುಕೊಳ್ಳುತ್ತಾರೋ ಮತ್ತು ಯಾವದೇಶದಲ್ಲಿ ಎಲ್ಲಾಜನರು ಒಕ್ಕಟ್ಟಿನಿಂದ ಇರುತ್ತಾರೋ, ಆ ದೇಶದಲ್ಲಿ ಆಳುವವನು ಪ್ರಜೆಗಳ ಮೇಲೆ ಜುಲುಮಿಯು ಮಾಡಿದರೆ ಅಥವಾ ಹಾನಿಮಾಡುವಂಥ ಕರಗಳನ್ನು ಕೂಡಿಸಿದರೆ, ಅವರಿಗೆ ಒಕ್ಕಟ್ಟಿನಿಂದ ಆ ರಾಜನನ್ನು ಹಗುರಾಗಿ ಪರಜೀತ ಮಾಡುವದಾಗುವದು. ಇದೇಯೋಗದಿಂದ ಉತ್ತರ ಅಮೇರಿಕದೊಳಗಿನ ಯುನೈಟೇಡ್ ಸ್ಟೇಟ್ಸ ಅಂದರೆ ಸ್ವತಂತ್ರ ಸಂಸ್ಥಾನಗಳು ಎಂಬ ದೇಶದ ಜನರು ಇಂಗ್ಲಿಶರಕೂಡ ೧೭೭೬ದರಲ್ಲಿ ಯುದ್ಧಮಾಡಿ ಜಯಹೊಂದಿ ಸ್ವತಂತ್ರತನವನ್ನು ಪಡಕೊಂಡಿದ್ದಾರೆ. ಹಾಗೇ ಯಾವಜನರು ತಮ್ಮ ಮೇಲೆ ರಾಜ್ಯಾಧಿಕಾರ ನಡಿಸುತ್ತಾರೆ ಅವರು ಒಕ್ಕಟ್ಟುಳ್ಳವರೂ, ಸ್ನೇಹಭಾವದಿಂದ ನಡೆಯುವವರು ಆಗಿರುವಕಾರಣ ಅವರ ರಾಜ್ಯದಲ್ಲಿ ಜನರಿಗೆ ಸುಖವೂ ಶಾಂತಿಯೂ ಉಂಟು. ಇಲ್ಲದಿದ್ದರೆ ಹಿಂದುಸ್ಥಾನದೊಳಗಿನ ಧಾಳೀಮಾಡುವ ಪುಂಡಜನರು ಸುಲಿಗೆಮಾಡಿ ಜನರಿಗೆ ತ್ರಾಸಪಡಿಸುವಂಥ ವೇ

ಕೆ ಚೆನ್ನಾಗಿ ದೊರೆಯುದು. ಒಕ್ಕಟ್ಟಿನ ಅಭಾವವೇ ಮಹಾರಾಷ್ಟ್ರ ಜನರ ರಾಜ್ಯವು ನಷ್ಟವಾಗಲಿಕ್ಕೆ ಕಾರಣವಾಯಿತು. ತಾತ್ಪರ್ಯವೇನಂದರೆ ಸ್ನೇಹವಿದ್ದ ಅರಸರೊಳಗಿಂದ ಒಕ್ಕಟ್ಟಾದರೆ ಯಾವತ್ತೂ ಘಾತಗಳು ಅನುಕೂಲವಾಗುತ್ತವೆ. ಇಲ್ಲದೆ ಹೋದರೆ ಸಾಧ್ಯವಿದ್ದದ್ದು ಸಹ ಅಸಾಧ್ಯವಾಗುವದು.

ಕೆಟ್ಟ ಜನರ ಕೂಡ ಸ್ನೇಹ ಮಾಡೋಣದರಿಂದ ದೊಡ್ಡದೊಡ್ಡ ಅರಸರು ತಮ್ಮ ರಾಜ್ಯಾಧಿಕಾರಕ್ಕೆ ಎರವಾಗಿದ್ದ ಅನೇಕ ಉದಾಹರಣೆಗಳುಂಟು. ಎರಡನೇ ಬಾಜೀರಾಯ ಪೇಶವೆಯ ರಾಜ್ಯವು ಯಾಕೆಹೋಯಿತೆಂಬುವದು ಎಲ್ಲರು ಬಲ್ಲರು, ಹೇಳಬೇಕು ಹಿಂಗೇನು ಇಲ್ಲ. ಅಂದಮೇಲೆ ಬಡವರಪಾಡೇನು? ಇದರ ಉದಾಹರಣೆಗಳು ಇತಿಹಾಸದಲ್ಲಿ ಎಷ್ಟೋ ಕಂಡುಬರುತ್ತವೆ. ಇಂಗ್ಲಂಡ ದೇಶದ ಎರಡನೆ ಎಡವರ್ಡನ ಕಥೆಯು ಹೇಳುವ ಅವನರಾಜದಲ್ಲಿ ಅವನಿಗೂ ಮಂತ್ರಿಗಳಿಗೂ ದ್ವೇಷಬೀಳುವದಕ್ಕೆ ಅವರಿಂದ ಮುಂದೆ ರಾಜರೊಳಗೆಲ್ಲ ಅಪ್ರಸ್ನೆಯಾಗಲಿಕ್ಕೆ ಅವನ ದುರ್ಗುಣಗಳಾದ ಇಬ್ಬರು ಮಿತ್ರರೇ ಕಾರಣರಾದರು. ಅರಸನು ಅವರು ಹೇಳಿದಂತೆ ನಡೆದು ರಾಜಕಾರಭಾರದಲ್ಲಿ ಅಲಕ್ಷ್ಯ ಮಾಡಹತ್ತಿದನು. ಆಗ ಯಾವತ್ತು ಮುತ್ಸದ್ದಿ ಜನರು ಅವನಿಗೆ ಅಡ್ಡ ಬಂದರು. ಅವರು ಅವನಿಗೆ ವಸ್ತ್ರ ಉಣ್ಣೆ ಮುಂತಾದ ವ್ಯಾಪಾರದ ಸರಕಿನ ಮೇಲಿನ ಕರ ಗೊತ್ತುಮಾಡುವದಕ್ಕಾಗಿ ಹೇಳಿಕೊಂಡರು ಆಪ್ರಕಾರ ಅವನಿಗೆ ಮಾಡಬೇಕಾಯಿತು. ಈ ಯಾವತ್ತು ಅನರ್ಥವು ಬರದು ಒಕ್ಕಟ್ಟು ಇಲ್ಲದೇ ಇರುವದರಿಂದ ಹೋಯಿತು. ಈಶ್ವರನು ಯಾವತ್ತು ಜೀವಿಗಳಲ್ಲಿ ಸ್ವಾಭಾವಿಕ ಪ್ರೀತಿಯನ್ನು ಉತ್ಪನ್ನಮಾಡಿದ್ದಾನೆ. ಅದಕ್ಕನುಸರಿಸಿ ಪಶುಪಕ್ಷಿಮುಂತಾದ್ದುಗಳು ಸಹ ತಮ್ಮ ಬಳಗದವರ ಕೂಡ ಸ್ನೇಹದಿಂದ ನಡೆಕೊಳ್ಳು

ತ್ತವೆ. ಮನುಷ್ಯರಾದರು ಹಾಗೆಯೆ ನಡೆಕೊಳ್ಳುತ್ತಾರೆ, ಎಂದು ಹೇಳಿದರೆ ಅದರಲ್ಲಿ ಆಶ್ಚರ್ಯವೇನು. ಈ ಪ್ರಕಾರ ಮಿತ್ರತ್ವದ ವಿಷಯದಲ್ಲಿ ಎಲ್ಲರಿಗೂ ಗೊತ್ತಾದೆಂದು ತಿಳಿದು ಅದರ ವಿಷಯದಲ್ಲಿ ನಾವು ಹೆಚ್ಚಿಗೆ ಹೇಳುವದಿಲ್ಲ.

ಯಾವ ವಸ್ತುಗಳನ್ನು ಸಂಪಾದಿಸಲಿಕ್ಕೆ ಅಥವಾ ಸಂಪಾದಿಸಿಕೊಡಲಿಕ್ಕೆ ಮನುಷ್ಯನಿಗೆ ಹೆಚ್ಚಾಗಲಿ ಕಡಿಮೆಯಾಗಲಿ ಸ್ನೇಹ ಮಾಡಬೇಕಾಗುತ್ತದೆಯೋ ಅವರಿಂದ ಮಿತ್ರತ್ವ ಇಲ್ಲವೆ ಶತ್ರುತ್ವ ಉತ್ಪನ್ನವಾಗುತ್ತದೆ. ಯಾರ ಉದ್ಯೋಗಬಂದೇ ಅಥವಾ ಎರಡನೇಯವರ ಉದ್ಯೋಗಕ್ಕೆ ಅಡ್ಡಿಯಾಗಲಿಕ್ಕಿಲ್ಲ ಇಂಥಾ ಜನರ ಸ್ನೇಹ ಬೆಳೆಯುತ್ತದೆ. ಇವೆರಡು ಮಾತುಗಳನ್ನು ನಾವು ಮೇಲೆ ಹೇಳಿದೆವು. ಆದರೆ ಇವುಗಳಿಗೆ ಬಿಮ್ಮೊತ್ತು ಬಾಧಬಂಧವುಂಟು. ಯಾರು ಸಂಸಾರವನ್ನೇ ಮಾಡುವದಿಲ್ಲ, ಅಥವಾ ತಮಗೆ ಯಾರಸಂಗಡ ಮಿತ್ರತ್ವವೂ ಅಗತ್ಯವಿಲ್ಲ, ಯಾರಕೂಡ ಸ್ನೇಹವೂ ಕಾರಣವಿಲ್ಲ, ಎಂದು ಹೇಳಿದರೆ ಆದು ಸರಿಯಾಗಲಾರದು. ಕಸ್ತಿಮಾಡಲಾದ ಸಾಧಾರಣ ಆಟಗಳನ್ನಾಡುವ ಕಾಲಕ್ಕಾದರು ಪರಸ್ಪರರಲ್ಲಿ ವೈರವು ತಾನಾಗಿಯೆ ಹುಟ್ಟುವದುಂಟು. ಇಷ್ಟೇ ಅಲ್ಲ ಒಂದುವೇಳೆ ಒಬ್ಬ ಮನುಷ್ಯನು ಸುಮ್ಮನೆ ಮತ್ತೊಬ್ಬನ ಹಾಸ್ಯಮಾಡಿದರೆ ಸಾಕು ಇಲ್ಲವೆ ಕ್ಷುದ್ರವನ್ನು ಬಹಿರಂಗಕ್ಕೆ ತಂದು ಹಾಕಿದರೆಸಾಕು, ಅದರೊಳಗಿದ್ದ ಮೊದಲಿನ ಸ್ನೇಹ ಸಹ ಇಲ್ಲದ ಹಾಗಾಗುತ್ತದೆ. ಹೊಸ ಸ್ನೇಹಮಾಡೀತೆಂಬ ಮಾತೇಬೇಡ. ಇದರಂತೆ ಎರಡನೇ ಪ್ರಕಾರದ ಸರಕಿನ ಅಂಗಡಿಗಳು ಸಮೀಪವಿದ್ದರೆ ಒಂದು ಅಂಗಡಿಯಲ್ಲಿ ಬಂದ ಗಿರಾಯಿಕೆಯನ್ನು ಎರಡನೆ ಅಂಗಡಿಕಾರನು ತನ್ನ ಅಂಗಡಿಗೆ ಕರೆದರೆ ಸಾಕು, ತಾತ್ಕಾಲ

ಆವರಿಬ್ಬರಲ್ಲಿ ದ್ವೇಷಭಾವವು ಉತ್ಪನ್ನವಾಗುತ್ತದೆ. ಮೇಲೆ ಹೇಳಿದ ಕಾರಣಗಳ ಮೇಲಿಂದ ಹೀಗೆ ಸ್ಪಷ್ಟವಾಗುವದೇನಂದರೆ ಮಿತ್ರತ್ವದಿಂದ ಬಹಳ ಸೌಖ್ಯವೂ ಲಾಭವೂ ಉಂಟು. ಆದಕಾರಣ ಅದನ್ನು ಸಂಪಾದಿಸುವದಕ್ಕೆ ಜಗಳದಕಾರಣ ಕಳೆದು ಪರಸ್ಪರಂಕೂಡ ಮಿತ್ರತ್ವದಿಂದ ನಡೆಯುವ ಯತ್ನಮಾಡಬೇಕು.

—o—

A Suggestion to the Local Committees of Village Schools.

ಹಳ್ಳಿಸಾಲೀಬಗ್ಗೆ ಬರುವ ಸ್ಥಾನೀಕ ಕಮೇಟಿಗೆ ಸೂಚನೆ.

" गोमाजीगणेश पितळेचादरवजा "

ನಮಸ್ಕಾರ! ನಮಸ್ಕಾರ!! ರಾಯರೇ ಖುಶಾಲಿಇದ್ದೀರೋ ಇದೇಹಿಳ್ಳೇದು ತಮ್ಮ ಛೆಟ್ಟಿ ಘಟ್ಟಿಯಾಗಿ ಬಿಟ್ಟದ್ದ ಗಟ್ಟಮಟ್ಟ ಮುಟ್ಟತಪ್ಪಿ ತಮ್ಮ ಕಟ್ಟಿಮುಟ್ಟದ್ದೇನ ರಟ್ಟೇಸತ್ರಮಿಗೆ ಅಟ್ಟಹಾಸದಲಿಟ್ಟು ಮುಟ್ಟಬಾರದು—

ಪೂರ್ವಕಾಲದಲ್ಲಿ ಒಬ್ಬ ಬಹು ಚತುರನಾದ ಗೋಮಾಜಿರಾಯನು ವಿಜಾಪೂರದ ಪಾದಶಹನ ದರ್ಬಾರದಲ್ಲಿ ನೌಕರಿ ಆಶೆಗಾಗಿ ಹೋದನು. ಅಲ್ಲಿ ಆರು ತಿಂಗಳವರೆಗೂ ಇವರಿಗೆ ಅರಕಿಲ್ಲೆಯಲ್ಲಿ ಪ್ರವೇಶವೇ ಆಗಲಿಲ್ಲ. ಆಮೇಲೆ ಹಿಮ್ಮಗೆ ಬಕರ್ಹೋಕ್ಕು ದರ್ಬಾರಕ್ಕೆ ಹೋಗಹತ್ತಿದರು ಅಲ್ಲಿ ಇಂಥಾ ಆಶ್ಚರ್ಯ ಇತ್ತಲ್ಲಾ ಇಂಥ ದರ್ಬಾರಿಗೆ ಹೋಗಿ ಜಾಬ ಜವಾಬು ಬರಹ ಮಾಕ'ಚಾತುರ್ಯ ಸುಕ್ಷ್ಮದಿ ಮಾಡಿನ ಹೋಗಾಕ್ಷಣಕ್ಕೆ "ಅಬಿತು ಕೋನಹ್ಯ, ಕುಡಲುಬನೇಕು ಆತ್ತೇಹ್ಯ, ಅಂದರ ಮತ್ತಾವ" ಹೀಗೆ ಮೂಗನಾಯಿಕರೇ ಅನ್ನುತ್ತಿದ್ದರಿಂದ ಅತ್ತಿ

ತ್ತ ಸಂಗಿತಿಕೊತು ತಿರಿಗಿ ಬರುತ್ತಿದ್ದರಲ್ಲದೆ, ಪಾತ್ ಶಹನಭೆಟ್ಟಿ
ಆಗವಲ್ಲದು. ಹೀಗೆ ಒಂದು ವರ್ಷವಾಯಿತು; ಆಮೇಲೆ ಶೀರ
ಸಿರಾಶಿಗರಾಗಿ, ಯೇನು ದಿಕ್ಕಿಲ್ಲದ ರಾಜದರ್ಬಾರವಿದು? ಎಂ
ದು ಆಶ್ಚರ್ಯ ಹಾಗೂ ಖಿನ್ನನಾಗಿ ಊರ ಪೂರ್ವದ ಅಗಶಿಗೆ ಬಂ
ದು, ನಿಟ್ಟುಸುರಿಟ್ಟು ಕೂತುಕೊಂಡು ಆಲೋಚನೆ ತೆಗೆಯುತ್ತಾ
ಯೇನಾದರೂ ಮಾಡಬಾರದು; ಮಾಡಿದರೆ ಈ ದಿಕ್ಕಿಲ್ಲದ ದ
ರ್ಬಾರದಲ್ಲಿ ಗೊತ್ತಂತೂ ಹತ್ತೋದೇ ಇಲ್ಲಾ. ಉದರಪೋಷ
ಣೆಯೂ ಆಗುವದು ಅಂತಾ ಸ್ಥಿರಾಲೋಚನೆಮಾಡಿ ಕುಂತಿರಲು
ಒಬ್ಬ ಮನುಷ್ಯನು ಊರೊಳಗಿಂದ ಕಾಗದ ಹಿಡಕೊಂಡು ಬಂದ
ನು. ಆಗ್ಗೆ ಈ ರಾಯರು— ಎಲಾ? ಅದೇನೋ? ರಾಮರಾಮ ಕಾ
ವಂದರು ಸನದು; ಇಲ್ಲತಾ? ವಗ ಅಧೇಚರುಪಾಯಿ. ಅಂಬೋ
ಣಾ ಅವನು ಇದೂ ಒಂದು ಇಲ್ಲ ಕೊಡುವಿಕೆ ಅದೆಪನೋ, ತಿ
ಳಿದು ದಕ್ಷಿಣೆಕೊಟ್ಟು ಸಹಿಮಾಡಿಕೊಂಡು ಪಾರಾದನು. ಹೀ
ಗೇ ಧೈರ್ಯದಿಂದ ಕಾರ್ಯ ನಡಿಶಿದಾಗ ಪ್ರಭಾತ ಹೆಚ್ಚಾಗಿ ದಿ
ನದಿನೆ ಫೀ ದರಾ ಅನಿವಾರ ಏರಿಶಿದರು ಮುಂದೆ ಇವರ ಸಹಿ ಇ
ಲ್ಲದ ಸನದು ಗ್ರಾಮಸ್ಥರು ಹಿಡಿಯದೆ ತಿರಿಗಿ ತಂದು ಬೆಡಿದಷ್ಟು
ಹಣಾಕೊಟ್ಟು ಸಹಿ ತಕೊಳ್ಳಹತ್ತಿದರು. ಆಗ್ಗೆ ಈ ರಾಯರು
ದೊಡ್ಡ ಕಚೇರೀನೇ ಕಟ್ಟಿ ಶಿ ಲೇಖನಗಾರ, ಬಾರದಾರ, ಹವಲದಾ
ರ, ಪಟ್ಟೇದಾರ, ಖಿಜಮುತಗಾರರನ್ನು ಇಟ್ಟರು. ಮುಂದೆ ಮೂರು
ವರ್ಷದನಂತರಾ ಒಂದು ಸನದುತಪ್ಪಿ ಪಾತ್ಶಾಗೆ ಮುಟ್ಟಿತು.
ಅದು ತಿರಿಗಿ ತರಿಶಿನೋಡುವಲ್ಲಿ ಭವ್ಯತಿಕ್ಕೆ ದಪ್ಪಸಹಿಕಂಡು ವಿ
ಸ್ಮಯಪಟ್ಟು ಶೋಧಿಸಲು, ವಿಶಾಲವಾದ ಮಶಾಲನೊಡನೆ ಖು
ಶಾಲವಿದ್ದ ಹಾಶಿಲಕೇಳಿ, ಹಿಡತಾಲಿಕ್ಕೆ ಪಾತಶಹನ ಅಪ್ಪಣೆ
ಆಯಿತು. ಬಂದ ಅಮಲ್ದಾರಿಗೆ ಚಂದಾಗಿ ಚಂದಗಿಹ್ರೋಯಿಸಿ ಸಂ

ದೇಶ ದೊಳಗೆ ತನ್ನ ಜನಸಹವಾಗಿ ದರ್ಬಾರಕ್ಕೆ ಹೋಗಿ ದೊಗ್ಗಾಲೂರಿ ಸಲಾಮುಹಾಕಿ ಖಾವಂದರೇ ಎರಡವರುಷ, ಪಗಾರ ತಕ್ಕೊಂಡು ಸೇವಕನು ಸೇವೆಮಾಡಬೇಕೆಂದು ಎರಡುವರ್ಷ ದುಡಿಸಿದರೂ ದೊರೀಲಿಲ್ಲ. ಆದ್ದರಿಂದ ಪಗಾರವಿಲ್ಲದೆ ಸೇವೆಮಾಡಿ ೧೦೦ಜನರನ್ನು ರಕ್ಷಿಸಿ ಎಂದು ಸಾವಿರ ರೂಪಾಯಿ ನಜರು ತಂದಿದ್ದೇನೆಂದು ಸುರಿವಿಸಿದನು. ಪಾತಶಹಾ ಸಂತುಷ್ಟನಾಗಿ ಬಿಳ್ಳೇಜಾನನಿದ್ದು ನೀನು ಇದೇಕೆಲಸ ನಡಿಸು ಅಂತ ಉಂಬಳಿ ಗೊತ್ತುಮಾಡಿ ಕಳಿಸಲು ಗೋಮಾಜಿ ಸಂತೋಷಿಯಾಗಿ ಇರಹತ್ತಿದನು. ಇದೇವೇಳಿಗೆ ನಮ್ಮ ಶಾಲಾಖಾತೇದಲ್ಲೀನು ಆಸೆ. ಗೋಮಾಜಿಗೆ ೫೦ವರ್ಷ ವಯಗೆ ಅವನ ನಾಲ್ಕು ಮುದಿ ಹೆಚ್ಚು ಇಷ್ಟೆ ಅಭ್ಯಂತರ ಆದ ವಿವರ—

ಹುಡುಗರನ್ನು ಕೂಡಿಸೋಣಿಗ್ಗೆ ಶಾಸ್ತ್ರಮೇಲೆ ವಿತಿವಿಶಾರಿ ಸಕ್ತಿ ಆಗಿ ಕೆಲವರಿಗೆ ಬಡತರ್ಫು, ಕವಿ, ಕಮ್ಮಗಾರ, ಶಸ್ತ್ರಕರ ದೊಡ್ಡ ನಗಾರರವರು ಶಿಕ್ಷಕಿಕೆಲಸಕ್ಕೆ ಸಹಾ ಹಾಕಲ್ಪಟ್ಟಿತು. ಈಗ್ಯೂ ಅದೇಮಾರ್ಗ ಕಾಯುವದು ಹ್ಯೊತರ್ಗ ಗ್ರಾಮದಜನರು ಶಾಲೆಗೆ ಹುಡುಗರನ್ನು ಯಾಕ ಕಳಸುವದಿಲ್ಲಾ! ವಿದ್ಯಾಭ್ಯಾಸ ಮಾಡಿಸಬೇಕೆಂಬುವ ತಿಳುವಳಿಕೆ ಜನರಲ್ಲಿ ಅದೆಯೋ ಇಲ್ಲೋ! ಇಲ್ಲದಿದ್ದರೆ ಕಾರಣವೇನು? ತಿಳುವಳಿಕೆ ಇದ್ದವರಾದರೂ ಕಳಸದಿರುವ ಕಾರಣವೇನು? ಏನಾದರೂ ತೊಂದರೆಉಂಟೆ ಹ್ಯಾಗೆ? ಇದ್ದರೆ ಆ ಕಾರಣ ಯಾವದು? ಶಾಲೆಗೆ ಕಳಿಸಿ ನಿರೀಕ್ಷೆ ಜನರಲ್ಲಿ ಯಾಕೆ ಹುಟ್ಟುತ್ತದೆ? ನಮ್ಮ ವಿದ್ಯಾ ಅವರಿಗೆ ಪ್ರೀತ್ಯಾಸ್ಪದ ಆದೀತೆ ಇಲ್ಲೆ! ಲೋಕಲ್ಬೋರ್ಡಿನ ಜನರಕಡೆಯಿಂದಾ ತಗೊಂಡು ಜನರ ಮತದಾರಿಧ್ಯವೇ? ಸರಕಾರದ ಮತದಾರಿಧ್ಯವೋ! ಜನರಿಗೆ ವಿದ್ಯಾ ಅನುಕೂಲ ಆಗಬೇಕಾದರೆ ಅವರ ಅಭಿಪ್ರಾಯ

ಬಿಟ್ಟು ಮಾಸ್ತರಮೇಲೆ ಸಕ್ತೀ ನಡಿಸುವದು ನ್ಯಾಯವ್ರೋ? ಅನ್ಯಾಯವ್ರೋ? ಜನರು ಫೀ ಕೊಡತಾರೋ ಇಲ್ಲೋ! ಜನರ ಅನಾಸ್ಥೆಮೇರಿಗೆ ಫೀ ನಿಲ್ಲುವದೋ ಇಲ್ಲೋ? ಫೀ ನಿಂತದ್ದು ಮಾಸ್ತರನೂ ಪಾಲುಗಾರನೇಕ್ಯಾಗ? ಫೀ ಸರಕಾರಿ ಹಣಾ ಹೌದಲ್ಲ? ಅದಕ್ಕೆ ಸರಕಾರ ಪತ್ತಾಸೆ ಇರತಕ್ಕದ್ದೇ ಇಲ್ಲ? ಮಾಸ್ತರಗೌರವವು ಜನರಮೇಲೆ ಸಾಗೀತೆ ಹ್ಯಾಗೆ? ಹುಡುಗರು ಪಾಸಾಗದೆ ಇದ್ದದೋಷವು ಮಾಸ್ತರರಿಗೆ ಅಥವಾ ಹುಡುಗರ ಗೈರಹಾಜರೀ ಕಡಿಗೆ! ಹುಡುಗರ ಹಾಜರೀ ಹತ್ತಿಗೂ ಕೂಡುವಿಕೆಗಾಗಿ ಮಾಸ್ತರಮೇಲೆ ಬಲವತ್ತರ ನೀತಿ; ಇದು ವಶವೀರಿರುವ ಕಾರಣ ಸಂರಕ್ಷಣೆಗಾಗಿ ಕೆಲವು ಮಾಸ್ತರರಿಗೆ ಕಂಭರತಿ ಕೆಲಸಕ್ಕೆ ಹುಕುಮಿನ ಬಲವತ್ತ್ವವೇ ಕಾರಣ ವಾಯಿತೆ ಇಲ್ಲೆ? ಈ ಯಾವತ್ತು ವಿಚಾರಿಸತಕ್ಕ ಮುಖ್ಯ ಮುಖ್ಯ ಪ್ರಶ್ನೆಗಳಿದ್ದು ಒಂದು ಮುದ್ದೆಯಾದರೂ ವಿಚಾರಾಂಶಕ್ಕೆ ಒದಗವಲ್ಲದು. ಈ ಪ್ರಶ್ನೆಗಳ ವಿಚಾರವು ನಡಿಯದಿದ್ದರೆ; ವಿದ್ಯಾವೃದ್ಧಿಗಾಗಿ ದೇಶಸುಧಾರಣೆ ಎಂದೆಂದಿಗೂ ಆಗೋದಿಲ್ಲಾ —

ಒಳ್ಳೇದು ಮೇಲಿನ ಮುದ್ದೆಗಳಬಗ್ಗೆ ದಕ್ಷಿಣಭಾಗವಕುರಿತು ವಿಚಾರಮಾಡುವಾ ದೊಡ್ಡ ಶಹರದ ಹೊರತು ಹಳ್ಳೀಗ್ರಾಮಗಳಲ್ಲಿ ಶೇಕಡಾ ೫ ಹುಡುಗರು ಕೂಡುವದಕ್ಕೆ ಬಹು ಯತ್ನಮಾಡಿದಾಗ್ಯೂ ಕೈಗೂಡವಲ್ಲದು; ಇದರ ಕಾರಣವು ಗ್ರಾಮದ ಜನರು ತೀರೆ ಬಿಕ್ಕಡರು ತಿನ್ನಾನ್ನಭಕ್ಷಕರು ಇದ್ದಾರೆ. ಈಗತಿ ಆಗಲಿಕ್ಕೆ ಕಾರಣವು ಸರಕಾರದ ತೆರಿಗೆ, ತೆರಿಗೆಸಕ್ತಿ(ಗಾಗಿ ಸಾವ್ಕಾರರ (ಗರಜಕು ಅಕ್ಕಲಿನ್ವೆ) ಬಾಗಲಿಗೆ ಬೀಳುತ್ತಾರೆ. ಮುಂದೆ ಗಂಟು ಎರಡುಪಟ್ಟು ಆಗುವದಕ್ಕೂ ಮತ್ತು ತೆರಿಗೆಬಿಡುಗುವದಕ್ಕೂ ದೇಶದ ಹಣವೆಲ್ಲ ಪರದೇಶಕ್ಕೆ ಹೋಗಿ ದೇಶದಲ್ಲಿ ಉದ್ದಿಮೆ ಇಲ್ಲ

ದಾಗಿ ತೀರಬಡಸ್ಥಿತೀಗೆ ಬಿದಗಿದ್ದಾರೆ. ದೇಶದ ಹಣವು ದೇಶ
ಲ್ಲೇ ಅದಲು ಬದಲು ಆಗುತ್ತಿದ್ದರೆ ಈ ಕ್ಲೇಶವು ಪಡಗುತ್ತಿದ್ದಿ
ತೀರ ಕ್ಷುಲ್ಲಕ ಕೆಲಸವಾದ ಬೀಜದ ಕಡ್ಡಿಗಾಗಿ ಹಿಂದುಸ್ಥಾನ
ದ ಆರು ಕೋಟಿ ರೂಪಾಯಿ ಪರದೇಶಕ್ಕೆ ಹೋಗುತ್ತದೆ. ಇದ
ಮೇಲಿಂದ ಉಳಿದತರದಹಣವು ಎಷ್ಟು ಹೋಗುವದು ವಾ
ಚಕರೇ ವಿಚಾರಮಾಡಬೇಕು. ಇದರಿಂದ ಈ ಹಿಂದುಸರಕಾ
ಕ್ಕೆ (೯೩) ಕೋಟಿ ರೂಪಾಯಿ ಸಾಲ ಆಗಿದೆ. ನಾನಾತರದಿಂ
ರೊಕ್ಕ ಹರಣ ವಾಗುತ್ತಿರುವದ್ದರಿಂದ ಜನರಸ್ಥಿತಿ ಬಹಳ ಹೀ
ನವಾಗಿದೆ ಆದ್ದರಿಂದ ಈ ಜನರಿಗೆ ಅತಿಕ್ಷೀಣವಾದ ಕೂಲಿಯಿಂ
ದ ಜೀವಿಸುವದರೊಳಗೆ ಕಾಲಗತಿ ಆಗುತ್ತದೆ. ಬಾಕಿ ಜನರಲ್ಲಿ
ಅಂದರೆ ಸುಮಾರು ಶೇಕಡಾ ೫ರಂತೆ ಸುಖೀಜನರು ಹಾಗೂ ಶೇ
ಕಡಾ ೧೫ರಂತೆ ವರುಷೊರುಷ ಗ್ರಾಸದ ಸುಖಸ್ಥರು ಹೊರಡ
ತ್ತಾರೆ. ಸುಖೀಜನರಿಗೆ ವಿದ್ಯದ ಅಪೇಕ್ಷೆ ಚನ್ನಾಗಿಯುಂಟು ಸಾ
ಧಾರಣ ಸುಖಸ್ಥರಿಗೆ ವಿದ್ಯದ ರುಚಿ ಪಂಧ್ಯಾಹತ್ತಾಂಶಯುಂಟು ಆ
ದಾಗ್ಯೂ ಎಲ್ಲರಿಗೂ ಓದೋಣ, ಬರಿಯೋಣ, ಲೆಖ್ಖ ಮೂರೇ
ವಿಷಯದ ಪ್ರೀತಿಇದ್ದು ಸಂಕಾರದಿಂದ ಇತಿಹಾಸ, ಭೂಗೋ
ಲ ಕವಿತೆ, ವ್ಯಾಕರಣ ಮುಂತಾದ್ದು ಇಟ್ಟದ್ದು ಅವರಿಗೆ ಏನೇನು
ಉಪಯೋಗವಿಲ್ಲಾ. ಅವರು ಅನ್ನುತ್ತಾರಲ್ಲಾ ಈ ವಿಕ್ಯಾದ
ವಿಷಯುಕಲಿತು ನಮಗೆ ಪಂಡಿತತ್ವ ಯಾ ಶಾಸ್ತ್ರ ಯಾ ನಿಬಂಧೀ
ಕ ಯಾ ರೋಜಗಾರ ಮಾಡುವದದೆ? ಇವು ನಮಗೆ ಒಂದೂ ಕೆಲ
ಸದವಲ್ಲ. ಅಂತವೇಳ್ಯವೇಳ್ಯಕ್ಕೆ ಸಮೂಹದಲ್ಲ ಕೂತಾಗ ಹ
ಳಿಯುತ್ತಾರೆ. ಅವರಿಗೆ ಊರಸಾಲೀ ಅಭ್ಯಾಸದ ಪ್ರೀತಿಬಹಳೇ
ಆನಂದಕರವಾಗಿದೆ. ಅವರಿಗೆ ಖರ್ಚಿಗೆ ತಕಷ್ಟು ಇಲ್ಲದಮೂಲಾ
ಕೆಲವು ಸಂಕಾರೀ ಸಾಲಇದ್ದ ಹಳ್ಳೀಯಲ್ಲ ಅನಾಸ್ಥೆಯಿಂದಾ

ತಿಳಿದಾಗ ಕಲಿತಿದರು. ಬೇಕಾದಾಗ ಇಲ್ಲಾ. ಆದರೆ ಸುಖಸ್ತರು ಹೆಚ್ಚಾಗಿ ಇದ್ದ ಗ್ರಾಮದಲ್ಲಿ ಸರಕಾರಿ ಸಾಲಿ ಇದ್ದಾಗ್ಯೂ ಊರಸಾಲಿ ಇದ್ದೇ ಅದೆ. ಈ ಕಡಿಮೆ ತರದ ಅಭ್ಯಾಸದವರ ತಿಳುವಳಿಕೆ ಬಳ್ಳೇ ಸರಿಯಾದದ್ದು. ಯಾಕಂದರೆ ಭೂಗೋಲ ಮುಂತಾದ್ದು ನಾಲ್ಕು ಐದು ವರ್ಷ ಕಲಿತು ಸಾಲಿ ಬಿಟ್ಟಾಕ್ಷಣವೇ ಸಲ್ಲೇಕಾಯುಷ್ಟು ಪ್ರಾಜಿ. ಕಡೆಗೆ ಪತ್ರ ಓದಲಿಕ್ಕೆ ಬರಿಯಲಿಕ್ಕೆ ಚನ್ನಾಗಿ ಬರುತ್ತಿದ್ದರೆ ಮಾತ್ರ ಆದಷ್ಟು ನಿಲ್ಲುತ್ತದೆ. ಈ ಹತ್ತೆಂಟು ತರಹ ಕಲಿಸುವಲ್ಲಿ ಎಲ್ಲಾ ಅಭ್ಯಾಸದಷ್ಟೇ ಇದೂ ಅಪೂರ್ಣವೇ ಇರುತ್ತದೆ. ಬುಕ್ಕ ಸ್ಲೇಟು ಪೇನ, ಫೀ ಕೂಡಿ ವರ್ಷಕ್ಕೆ ನಾಲ್ಕೈದು ರೂಪಾಯಿ ಖರ್ಚು ಆಗೇನೂ ಹ್ಯಾಗೆ ಹ್ಯಾಗಿದ್ದನೂ ಹಾಗೇ ಬೆಳದು ನಿಂದರುತ್ತಾನೆ. ಇವರಿಗೆ ವ್ಯಾಕರ್ಣ ಬೇಕಾಗಿಲ್ಲಾ ಯಾಕಂದರೆ ಎಂಥಾ ಮೂರ್ಖನಾದರೂ ಅವನು ಬಂದಳು ಕುದುರೆ ಬಂದಾಳ್ಳಿ ಮ್ಮಿ ಹೋದನು ಅಂತ ಒಬ್ಬನೂ ಅನ್ನುವದಿಲ್ಲಾ ಕಾರಣ ಜನ್ಮಭಾಷಾನೇ ಇರುತ್ತದೆ. ಕವಿತೆಯಿಂದ ಪಂಡಿತತ್ವದ ಜರೂರ ಇಲ್ಲಾ. ಇತಿಹಾಸದಿಂದ ರಾಜಕಾರ್ಯ ಮಾಡುವದಿಲ್ಲಾ. ಈ ಎಲ್ಲಾ ವಿಷಯ ಬೇಕಾದರೆ ಮೇಲ್ತರದ ವಿದ್ಯಾಲಯದಲ್ಲಿ ಇಟ್ಟರೆ ಬೇಕಾದವರು ಅಲ್ಲಿ ಕಲಿಯುವರು, ಹೊರ್ತು ಹೆಚ್ಚಿನ ವಿಷಯ ಇಟ್ಟದ್ದರಿಂದ ಹೊಲಕ್ಕೆ ಸೀದಿದ ಜನರ ಅಲ್ಪಸ್ವಲ್ಪ ಇಚ್ಛೆ ದೂರಾಗಿ ಊರಸಾಲಿಯಲ್ಲಿ ಮೂರೇ ವಿಷಯ ನಡಿಯುತ್ತಿದ್ದು ಅಷ್ಟೇ ವಿಷಯ ಇವರಿಗೆ ಜರೂರ ಇದ್ದು ಅದೇ ಸಾಲಿ ಅಪೇಕ್ಷೆ ಉಂಟು. ಹಾಗೂ ಒಬ್ಬ ಹುಡುಗನು ತನ್ನ ಮನಿ ಅನ್ನಾ ಉಂಡು ಊರಸಾಲೀ ಕಲಿಯುವದಕ್ಕಿಂತಾ ಸರಕಾರ ಸಾಲೀಯಲ್ಲಿ ಹೆಚ್ಚು ಖರ್ಚ ಆಗುತ್ತದೆ. ಮೇಲಾಗಿ ಲೋಕಲಫಂಡ ಹೋಗುತ್ತದೆ. ಜಮಾಕದಿಂದಾ ಲೋಕಲಫಂಡ ಹಣಾ ತಕ್ಕೊಂಡು ಅ

ವರಿಗೆ ಹೆಚ್ಚಿನ ವಿಷಯ ಬೇಕಾಗದೇ ಇದ್ದಾಗೂ ಅಪಾರ್ಥವು ಬ ಜಗಮಾಡಿ ನಿಲ್ಲಗಡೆ ವಿದ್ಯಾರ್ಥಿಗಳಿಲ್ಲ, ಮನೆಕೆಲಸಕ್ಕೂ ಇಲ್ಲ ಹೀಗೆ ಆಗದು.

—c—

Correspondence.

ಪತ್ರವ್ಯವಹಾರವು.

ರಾ. ಸಾ. ಕನ್ನಡ ಶಾಲಾಪತ್ರಿಕೆಯ ಎಡಿಟರ ಅವರ ಚರಣಸನ್ನಿಧಿಗೆ—

ವಿ. ವಿ. ತಮ್ಮ ಜ್ಞಾನಕಾಂತಿಯಿಂದ್ಬೆಳಗುವ ಸರಸವಾದ ಶಾಲಾಪತ್ರಿಕೆಯ ಇದೇ ಅಂಕದಲ್ಲಿ ಕೆಳಗೆ ಬರೆದ ನಾಲ್ಕು ಸಾಲುಗಳಿಗೆ ಆಸರಾಶ್ರಯವು ದೊರೆದು ಪ್ರಸಿದ್ಧ ಪಡಿಸುವದಾಗುವಂತೆ ಆಶಿಸಿದ್ದೇನೆ.

ಬಂಧುಗಳೇ—ನಾವೆಲ್ಲರೂ ಜಗದೀಶನ ಇಚ್ಛಾನುಸಾರವಾದ ಸಂಸಾರವೆಂಬ ಮನೋರಥವನ್ನು ಸ್ತ್ರೀ ಪುರುಷರೆಂಬ ಸಜ್ಞಾನದ ಸಮಬಲವುಳ್ಳ ಎರಡೆತ್ತುಗಳಿಂದ ಸಾಗಿಸತಕ್ಕವರಾಗಿದ್ದೇವೆ. ಇವುಗಳು ಜ್ಞಾನದಿಂದ ಸಮಬಲವುಳ್ಳವುಗಳಾಗಿದ್ದರೆ ಆ ರಥವು ಸರಿಯಾಗಿ ನಡೆದು ಬಗೆಬಗೆಯ ಸುಖಗಳು ನಮಗೆ ಕೈಗೂಡಿ ಬರುತ್ತವೆ. ಹೀಗಿರದೆ ಜ್ಞಾನಾಂತರದಿಂದ ಹೆಚ್ಚು ಕಡಿಮೆ ಬಲವುಳ್ಳವುಗಳಾದರೆ, ರಥವು ಸರಿಯಾಗಿ ಸಾಗದೆ ಅರ್ಧವಾ ನಡುವೇ ಉಳಿಬಿದ್ದು, ಅದರಿಂದ ಆಗತಕ್ಕ ಸುಖವನ್ನು ದೂರ ಮಾಡಿಕೊಳ್ಳುತ್ತೇವೆ. ಮತ್ತು ದೇವರ ಸಂಕೇತವನ್ನು ಮೀರಿದ ಅನಂತಃಕರಣಕ್ಕೆ ಈಡಾಗುತ್ತೇವೆ. ಕಾರಣ ಸ್ತ್ರೀ ಪುರುಷರಿಬ್ಬರೂ ಶಿಕ್ಷಣವುಳ್ಳವರಾಗಿರುವದು ಅತ್ಯವಶ್ಯವಾದ ನಮ್ಮ ಕರ್ತವ್ಯಕರ್ಮವುಂಟು. ಇಂತು ಧರ್ಮಶಾಸ್ತ್ರದ ಪ್ರ

ಕಾರ ಗಂಡಹೆಂಡರ ಸಮಭಾಗಗಳಾದರು ಕೂಡಿ ಒಂದೇ ದೇಹವೆಂದೆನಿಸಿಕೊಳ್ಳುತ್ತವೆ. ಇದರಿಂದ ಹೆಂಡತಿಗೆ "ಅರ್ಧಾಂಗಿ" ಎಂಬ ಸರಿಯಾದ ಹೆಸರು ಬಂದಿರುವದು. ಕಾರಣ ಅರ್ಧ ಶರೀರಿಯಾದ ಪುರುಷನು ಶಿಕ್ಷಣದಿಂದ ಜ್ಞಾನಕಾಂತಿಯುಳ್ಳವನಾಗಿದ್ದು, ಉಳಿದ ಅರ್ಧ ಶರೀರಿಯಾದ ಸ್ತ್ರೀಯು ಶಿಕ್ಷಣವಿಲ್ಲದೆ, ಅಜ್ಞಾನಾಂಧಕಾರದಿಂದ ಮುಸುಕಿರುವದು ಬಹು ಅಯೋಗ್ಯವಾದ ಮಾತಾಯಿತು. ಇದು ಎಂಥಾ ನ್ಯಾಯವು! ಇದರಿಂದ ನಾವು ಸಂಸಾರಸುಖಕ್ಕೆ ಎರವಾಗಿ ಅನೇಕ ದುಃಖಕ್ಕೊಳಗಾಗುತ್ತೇವೆ. ಆದ್ದರಿಂದ ಉಭಯ ಶಿಕ್ಷಣವು ನಮ್ಮ ಅವಶ್ಯ ಕರ್ತವ್ಯವುಂಟು. ಇದನ್ನು ಪುರುಷಶಿಕ್ಷಣವು ಯಾವಾಗಲೂ ನಡೆದೇ ಇದೆ. ಸ್ತ್ರೀ ಶಿಕ್ಷಣವಾದರೂ ಪ್ರಾಚೀನ ಕಾಲದಲ್ಲಿ ನಡೆಯುತ್ತಿತ್ತೆಂದು, ಆ ಕಾಲದ ಸ್ತ್ರೀ ಚರಿತ್ರಗಳಿಂದ ನಿಸ್ಸಂಶಯವಾಗಿ ಕಂಡುಬರುತ್ತದೆ. ಮಧ್ಯಕಾಲದಲ್ಲಿ ಮಾತ್ರ ಈ ಶಿಕ್ಷಣವು ಆ ಕಾಲದ ಜನರ ವಿಚಾರದಿಂದ ಗೊತ್ತಿಲ್ಲದಂತೆ ಆಗಿಹೋಗಿತು. ಆದರೆ ಸಾಂಪ್ರತದಲ್ಲಿ ಪುನಃ ಇದು ನಮ್ಮ ತಾಯಿಗಳಾದ ಮಕ್ಕಳಲ್ಲಿ ಸಮಾಂತಃಕರಣವುಳ್ಳ ಇಂಡಿಯಾ ಚಕ್ರವರ್ತಿನಿ ವಿಕ್ಟೋರಿಯಾ ಧೊರೆಗಳವರ ಹಿತದೀರ್ಘತೆಯಿಂದಲೂ, ಅಂತಃಕರಣದಿಂದಲೂ, ಆರಂಭಿಸಿರುವದು. ಇದೇ ಕಾಲಕ್ಕೆ ನಾವು ಇದರ ಫಲವನ್ನು ಪಡೆಕೊಳ್ಳಬೇಕು. ಧೊರೆಗಳವರ ಈ ಸುವಿಚಾರವು ಉತ್ತರೋತ್ತರ ವಾಗುವಂತೆ ದೇವರು ಧೊರೆಗಳಿಗೆ ಚಿರಾಯುಷ್ಯ ಸುಖವನ್ನು ಪಾಲಿಸಲಿ ಈಗಿನ ನಮ್ಮ ಉದ್ದೇಶದ ಕಡೆ ತೆರಳುವಾ.

ಈ ಸ್ತ್ರೀ ಶಿಕ್ಷಣವು ಈಗ ಬಹಳವಾಗಿ ಎಲ್ಲ ಹಿಂದುಸ್ಥಾನದಲ್ಲಿ ನಡೆಯುತ್ತದೆ. ಇದು ಮೊದಲು ದಕ್ಷಿಣಪ್ರಾಂತದ ಜಿಲ್ಲೆ

ಯಿಸಿದೆ ಈ ನಮ್ಮ ಧಾರವಾಡದಲ್ಲಿ ಸಾಧಾರಣವಾಗಿ ನಡೆದಿತ್ತು. ಆದರೆ ಅದು ಈಗ ಸಾಂಪ್ರತದ ರಾವಸಾ. ಡಿ. ಎ. ಇನಸ್ಪೆಕ್ಟರ ಆ. ಡಿ. ಎ. ಇನಸ್ಪೆಕ್ಟರವರ ಬಹು ಸಹಾಸದಿಂದಲೂ, ಊರ ಸಭ್ಯಜನರ ಸಹಾಯದಿಂದಲೂ ಬಹು ಉತ್ತಮಪ್ರಕಾರವಾಗಿ ನಡೆದದೆ. ಇದಕ್ಕೆ ಹೋದವರುಷದಲ್ಲಿ ಕಲಿಯುತ್ತಿದ್ದ ಹೆಣ್ಣುಮಕ್ಕಳ ಸಂಖೆಗಿಂತ, ಈ ವರುಷದಲ್ಲಿ ಕಲಿಯುತ್ತಿರುವ ಹೆಣ್ಣುಮಕ್ಕಳ ಸಂಖೆಯು ೧,೮೦೦ರಿಂದ ಹೆಚ್ಚಿರುವದೇ ಸತ್ಯ ದೃಷ್ಟಾಂತವು ಈ ಜಿಲ್ಲೆಯ ಪ್ರತಿಗ್ರಾಮಗಳಲ್ಲಿ ಬಹಳವಾಗಿ ಸಾಲಿಗಳುಂಟೇಉಂಟು. ಹಾಗು ಸಾಧಾರಣ ನೇಮದಿಂದ ಎಲ್ಲಕಡೆಯಲ್ಲಿಯೂ ೩ನೇ ೪ನೇ ಮರ್ಯಾದೆಗಳಂತೆ ಅಭ್ಯಾಸವು ನಡೆಯುವದುಂಟೇಉಂಟು. ಅವುಗಳಲ್ಲಿ ಈ ಧಾರವಾಡದ ಹೆಣ್ಣುಮಕ್ಕಳ ಸಾಲೀಸ್ಥಿತಿಯೂ, ಅಭ್ಯಾಸವೂ, ಬಹು ಉತ್ತಮ ಪ್ರಕಾರದ್ದುಂಟು. ಇನ್ನೊಂದು ಇಲ್ಲಿಯ ಹೆಚ್ಚಿನ ಸುಧಾರಣೆಯೆನೆಂದರೆ– ಇಲ್ಲಿಯ ಸಾಲಿಯಲ್ಲಿ ೫ಮಂದಿ ಹೆಣ್ಣುಮಕ್ಕಳು ೬ನೇ ಮರ್ಯಾದೆಯಂತೆ ಅಭ್ಯಾಸ ಮಾಡುತ್ತಿರುವರು. ಈ ಬಾಲಿಕೆಯರು ಶುದ್ಧವಾದ ಸುಂದರ ಬರಹದಲ್ಲಿ, ಓದುವದರಲ್ಲಿ, ಗಣಿತದಲ್ಲಿ ಹಾಗು ಉಳಿದ ಎರಡನೇತರದ ವಿಷಯದಲ್ಲಿ ಗಂಡುಮಕ್ಕಳಂತೆ ಒಳ್ಳೇ ಜ್ಞಾನವುಳ್ಳವರಾಗಿದ್ದಾರೆ. ಇದು ಮುಂದಿನ ಹಿತದ ಒಳ್ಳೇ ಸಾಧನವೆಂದು ನಾವು ಅವಶ್ಯ ತಿಳಿಕ್ಕೇಬೇಕು. ಈ ಶಿಕ್ಷಣವು ನಮ್ಮ ಧಾರಾಪುರದಲ್ಲಿ ಇಲ್ಲಿವರಿಗೆ ನಡೆದದ್ದಕ್ಕೆ ಮೇಲಾಧಿಕಾರಿಗಳ, ಸಭ್ಯಜನರಾದ ಕಮಾವಿದಾರರ, ಶ್ರೀಮಂತರ, ಜ್ಞಾನಿಗಳಾದ ಅಧಿಕಾರಿಗಳ ಹಾಗು ಸಭ್ಯಮಾಸ್ತರರ ಅನಿಯಮಿತ ಶ್ರಮವೂ, ಉತ್ತೇಜನವು ಅಲ್ಲದೆ ಅನ್ಯಕಾರಣ ವಿಲ್ಲೇಇಲ್ಲವು. ನಮ್ಮ ಡೆಪ್ಯುಟಿ ಸಾಹೇಬಧೊರೆ

ಗಳೂ, ಅಶಿಷ್ಟಂಟ ಡಿಪ್ಯುಟಿಧೊರೆಗಳೂ, ಸಂಭಾವಿತ ಸಜ್ಜ
ಶಾಲೆಯ ಪಂಚರೂ ಬಹು ತಾರತಮ್ಯದಿಂದಲೂ; ಮರ್ಯಾದೆ
ಯಿಂದಲೂ, ಸುಶಿಕ್ಷಣರೀತಿಯಾಗಿ ನಡೆಯುವಂತೆ ಬಹು ಶ್ರ
ಮ ಸಾಹಸಗಳನ್ನು ತೆಗೆದುಕೊಳ್ಳುತ್ತಾರೆ. ಇನ್ನು ಬೇರೆ ಕರಾ
ದ ಈ ಶಾಲೆಯ ಮಾಸ್ತರರಾದರೂ ಪ್ರಾರಬ್ಧವದಿಂದ, ಸಂಭಾ
ವಿತರೂ, ಸ್ತ್ರೀಶಿಕ್ಷಣಕ್ಕೆ ಬೇಕಾಗುವ ಸದ್ಗುಣವುಳ್ಳವರೂ,
ಜ್ಞಾನರೂ, ಕಲಿಸುವಲ್ಲಿ ಒಂದೇ ಮನಸ್ಸಿನಿಂದ ಶ್ರಮತೆಗೆದು
ಕೊಳ್ಳುವವರೂ ಉಂಟು. ಈ ಪ್ರಕಾರ ಒಂದೇ ಮನದಿಂದ ಲೋ
ಕೋಪಕಾರದ ಈ ಶಿಕ್ಷಣಕ್ಕೆ ಶ್ರಮವನ್ನು ತೆಗೆದುಕೊಳ್ಳುವ ನ
ಮ್ಮ ಬಂಧುಗಳಾದ ಮಾಸ್ತರರಿಗೆ ಶ್ರಮದ ಫಲವು ದೊರೆದು ಬ
ಳ್ಳೆ ಕಲ್ಯಾಣವಾಗುವಂತೆ ಲೋಕಪಾಲಕನು ಮೇಲಾಧಿಕಾರಿ
ಗಳ ಮನಸ್ಸಿನಲ್ಲಿ ಹುಟ್ಟಿಸಲೆಂದು ಬೇಡುತ್ತೇವೆ. ಇಲ್ಲಿಯ
ಶಾಲೆಯ ಪಂಚರು ಶಾಲೆಯ ಶಿಕ್ಷಣ ವಿಷಯದಲ್ಲಿಯೂ, ಉ
ತ್ತೇಜನದ ವಿಷಯದಲ್ಲಿಯೂ, ಪ್ರತಿಯೊಂದು ತರದ ಸಹಾಯ
ದಲ್ಲಿಯೂ, ತಮ್ಮ ಕರ್ತವ್ಯಕ್ಕಿಂತ ಹೆಚ್ಚು ಶ್ರಮವನ್ನು ತೆಗೆದು
ಕೊಳ್ಳುತ್ತಾರೆ. ಇದನ್ನು ಕಂಡು ನಮಗೆ ಬಹು ಆನಂದವಾಗು
ತ್ತದೆ. ಯಾರಿಗಾಗದು? ಇದಕ್ಕೆ ಒಂದೆರಡು ಉದಾಹರಣೆಗಳು —

ಮ. ರಾ. ರಾ. ಚನಮಲ್ಲಪ್ಪ ಅಂಗಡಿ ತೆಂಗಿನಕಾಯಿ
ಸ್ಕೂಲ ಕಮಿಟಿದಾರ ಇವರು ತಾರೀಖ. ೧೨ನೇ ಮಾಹೆ ಸಪ್ಟಂ
ಬರ ದಿವಸದಲ್ಲಿ ರಾವಸಾ. ಆ. ಡಿ. ಎ. ಇ. ಧೊರೆಗಳಾದ ಬೀ
ಳಗಿಯವರನ್ನು ಕೂಡಿಕೊಂಡು ಬಂದು, ೬ನೇ ಮರ್ಯಾದೆಯ
ಬಾಲಕಿಯರನ್ನು ಆರೋಗ್ಯಶಾಸ್ತ್ರದಲ್ಲಿ ನಿರೀಕ್ಷಿಸಿ, ಉತ್ತಮ
ತರದಿಂದ ಪಾಸಾದ ೧ನೇ ೨ನೇ ನಂಬರಿನ ಇಬ್ಬರು ಹೆಂಣುಮ
ಕ್ಕಳಿಗೆ ಒಂದೊಂದು ಖಣವನ್ನು ಉಚಿತವಾಗಿತ್ತರು. ಹಾಗು ಇದ

ರಂತೆ ಎಲ್ಲ ಬಾಲಕಿಯರ ಅಭ್ಯಾಸವನ್ನು ನೋಡಿ ಬಹು ಸಂತುಷ್ಟರಾಗಿ, ಉತ್ತೇಜನಾರ್ಥವಾಗಿ ಎಲ್ಲರಿಗೂ ಬೆಂಡು, ಬತ್ತಾಸಗಳನ್ನು ಹಂಚಿದರು. ಹಾಗು ಇದರಂತೆ ನಾನು ಕಾಲಕಾಲಕ್ಕೆ ಬಂದು ಎಲ್ಲ ಹುಡುಗಿಯರ ಅಭ್ಯಾಸದ ಪರೀಕ್ಷೆಯನ್ನು ಮಾಡಿ ಪಾಸಾದವರೆಲ್ಲರಿಗೆ ಇನಾಮು ಕೊಡುವದಕ್ಕೆ ಸಿದ್ಧನಿದ್ದೇನೆಂಬ ಉತ್ತೇಜನದ ಮಾತುಗಳನ್ನು ಬಿಂಬಿಸುವಂತೆ ಆಡಿತೋರಿಸಿದರು ಇದು ಸಾಮಾನ್ಯ ಭಾಷೆಯೋ? ಸಾಧಾರಣ ಉತ್ತೇಜನವೋ? ಸಾಧಾರಣ ಧೈರ್ಯವೋ? ಇವರಂತೆ ಇನ್ನೊಬ್ಬ ಇಲ್ಲಿಯ ಸ್ಕೂಲ ಕಮಿಟಿದಾರರಾದ ಗೋವಿಂದ ವೆಂಕಟೇಶ ವಕೀಲ ಇವರು ಬಹು ಶಿಕ್ಷಣೋತ್ಸುಕಿಗಳೂ, ಸಾಹಸಿಗಳೂ, ದೇಶಹಿತಚಿಂತಕರೂ, ಪರಮೌದಾರ್ಯದ ದಯಾಳುಗಳೂ ಉಂಟು. ವಿದ್ಯಾಭ್ಯಾಸದ ವಿಷಯದಲ್ಲಿ ಇವರಿಗಿದ್ದ ಉತ್ಕಂಠವು ಬಹು ಅಪೂರ್ವವಾದದ್ದುಂಟು. ಇದೇ ಸ್ತುತ್ಯವಾಗಿರಲಿ ತಾರೀಖು ೨೨ನೇ ಮಾಹೆ ಸಪ್ಟಂಬರದ ದಿವಸ ಶ್ರೀಮಂತ ಭೀಮರಾವ ರಾಮರಾವ ಇನಾಮದಾರ ದೇಸಾಯಿ ಧಾರವಾಡ ಇವರು ಸ್ವತಃ ತಾವು ಇಲ್ಲಿಯ ಸ್ತ್ರೀಶಿಕ್ಷಣವನ್ನು ನೋಡಬೇಕೆಂಬ ಮನಸ್ಸಿನ ಹಿಚ್ಛೇ ಕುತೂಹಲದಿಂದ ರಾವಸಾಹೇಬ ಶ್ರೀನಿವಾಸರಾವ ರೊದ್ದ (ಡಿ. ಎ. ಇನಸ್ಪೆಕ್ಟರ) ರಾವಸಾಹೇಬ ಸೀಗಿ (ಅ. ಡಿ. ಎ. ಇನಸ್ಪೆಕ್ಟರ) ರಾ. ಮಹೇಂದ್ರರಾವ (ಡಿ. ಅಕೌಂಟಂಟ) ರಾವಸಾಹೇಬ ಪ್ರಭಾಕರಪಂತ (ಅ. ಡಿ. ಎ. ಇನಸ್ಪೆಕ್ಟರ) ಪ್ರೊ. ರಾ. ರಾ. ಅಣ್ಣಾಶಾಸ್ತ್ರೀ ಅಟ್ಟೆಲೇಕರ (ಕಾಲೇಜ ಸಂಸ್ಕೃತಗುರು) ಪ್ರೊ. ರಾ. ರಾ. ಚನ್ನಮಲ್ಲಪ್ಪಾ ಅಣ್ಣಾ ತೆಂಗಿನಕಾಯಿ (ಸ್ಕೂಲಕಮಿಟಿವಾಲಾ) ಮುಂತಾದವರಿಂದ ಒಡಗೂಡಿಬಂದು, ೬ನೇ ವರ್ಗದವರೆಗಿನ ಬಾಲಕಿಯರನ್ನು ಎಲ್ಲ ವಿಷಯಗಳಲ್ಲಿ ಪರೀಕ್ಷಿ

ಸಿದರು. ಅದರಂತೆ ಬಾಲಿಕೆಯರು ವಿಷಯಗಳಲ್ಲಿ ತಮ್ಮ ಜಾಣ
ತನವನ್ನು ತೋರಿಸಿದರು. ಅದರಲ್ಲಿ ಶಿಷ್ಟಾಂತ, ಆರೋಗ್ಯ ವಿ
ಷ್ಯಗಳನ್ನು ಪರೀಕ್ಷಿಸುವವರಿಗೆ ಆನಂದವೂ, ಆಶ್ಚರ್ಯವೂ ಆಗು
ವಂತೆ ಅಪೂರ್ವರೀತಿಯಿಂದ ಮಾಡಿದರು. ಮತ್ತು ಹೇಳಿದರು
ಆನಂತರ ಆ ಬಾಲೆಯರಿಂದ ಕವಿತೆಯನ್ನು ಅನ್ನಿಸಿ, ಹಾಡಿ
ಯರ ಈ ಅಭ್ಯಾಸದ ಕೌತುಕವನ್ನೂ, ಈ ಶಾಲೆಯ ಉತ್ತ
ಸ್ಥಿತಿಯನ್ನೂ, ಮಾಸ್ತರರ, ಮೇಲಾಧಿಕಾರಿಗಳ, ಕಮಿಟಿ
ದಾರರ, ಒಳ್ಳೇ ಪ್ರಯತ್ನವನ್ನೂ, ವ್ಯವಸ್ಥೆಯನ್ನೂ ನೋಡಿ ಬ
ರು ಆನಂದಹೊಂದಿ, ಜನೇ ಮರ್ಯಾದೆಯು ಎಲ್ಲ ಬಾಲೆಯ
ಗೆ ಒಂದೊಂದು ಖಣವನ್ನು ಉಚಿತವಾಗಿತ್ತು, ಎಲ್ಲ ಬಾಲೆಯ
ಗೆ ಉತ್ತೇಜನಾರ್ಥವಾಗಿ ಚೆಂಡು, ಭತ್ತ್ಯಾಸಗಳನ್ನು ಹಂಚಿದ
ರು. ಇದಲ್ಲದೆ ವಿದ್ಯಾವಿಕೆಗಾಗಿಯೂ, ವ್ಯವಹಾರೋಪಯೋಗವಾ
ಯೂ, "ಚಂದ್ರೋದಯ" ವರ್ತಮಾನಪತ್ರವನ್ನು ಚಿರಕಾ
ಲ ಈ ಶಾಲೆಗೆಸಲ್ಲುವಂತೆ ಸಲ್ಲಿಸಿದರು. ಈ ಶ್ರೀಮಂತರ ಸ್ತ್ರೀ
ಶಿಕ್ಷಣದ ಉತ್ತೇಜನವು ಇಷ್ಟೆಂದು ಕಲ್ಪಿಸಲಿಕ್ಕೆ ಬಾರದಂತೆ ಇ
ಲ್ಲ. ಶ್ರೀಮಂತ ಸಾಹೇಬರು ಲೋಕಾಶ್ರಯಿಗಳೂ, ಸ್ತ್ರೀಶಿಕ್ಷ
ಣದ ಉತ್ಸಾಹವುಳ್ಳವರೂ, ಜ್ಞಾನ ದಯಾಳುಗಳು ಉಂಟು.
ಇಂಥಾ ಅಪೂರ್ವ ಜನ್ಮವು ಸಕ್ಕರೆಯಂತೆ ರುಚಿಯಾಗಿ ಬಹು
ಕಾಲ ಬಾಳಲಿ. ಹಾಗುವನ್ನು ಬಾಲೆಯರು ಪಾಡಲಿ.

ಬಂಧುಗಳೇ—ತಾವೆಲ್ಲರೂ ನಮ್ಮ ಊರ ಸಭ್ಯಸದ್ಗೃಹಸ್ಥರ,
ಹಾಗು ಕಮಿಟಿದಾರರ ಮುಂದೆ ಈ ಉತ್ತಮತರದ ಶಿಕ್ಷಣದ
ಸ್ಥಿತಿಯನ್ನೂ, ಇದರಿಂದಾಗುವ ಲಾಭಗಳನ್ನೂ, ಹಾಗು ಸ್ತ್ರೀ
ಲ ಕಮಿಟಿದಾರರ ಅಚುಂಬಿತ ಸಹಾಯವನ್ನೂ ಉತ್ತೇಜನವ
ನ್ನೂ, ಬಿಂಬಿಸುವಂತೆ ಉಪದೇಶಿಸಿ, ಈ ಶಿಕ್ಷಣದ ಪ್ರಬಲವನ್ನು

ಬೆಳೆಸಿ, ಸಂಸಾರದಲ್ಲೊದಗುವ ಆತಂಕಗಳನ್ನು ದೂರಮಾಡಿ ಸೌಖ್ಯದ ಹಾದಿಯನ್ನು ತೋರಿಸಿ ಕೊಡುವ ಪರಮೋಪಕಾರವು ತಂಪಿನಿಂದ ಲೋಕದಮೇಲೆ ಆಗಬೇಕೆಂದೂ, ಅದರಂತೆ ತಮಗೆ ಯೋಗ್ಯಫಲ ದೊರೆಯಬೇಕೆಂದೂ ಬಹು ಆಶಾಭರಿತನಾಗಿದ್ದೇನೆ. ಎಂದಿಗೆ ನನ್ನ ನಯನಗಳು ಇಂಥಾ ಶುಭವನ್ನು ನೋಡುವವೋ ಅದೇ ಮಂಗಲದಿನವು

ರಾವಸಾಹೆಬ ಡಿ. ಬಿ. ಇನಸ್ಪೆಕ್ಟರ, ಅ. ಡಿ. ಎ. ಇನಸ್ಪೆಕ್ಟರ ಧೊರೆಗಳು ಬಹು ವಿದ್ಯಾವರ್ಧನದ ಸಾಹಸಿಗಳೂ, ಸ್ತ್ರೀಶಿಕ್ಷಣೋತ್ಸುಕಿಗಳೂ, ನಿಷ್ಠಾಧಿಕಾರಿಗಳೂ, ವಿದ್ಯಾನಿಷ್ಣಾತರೂ, ಕಲ್ಯಾಣಗುಣಗಳೂ, ಪರಮದಯಾಳುಗಳೂ ಸರ್ವಪ್ರಿಯರೂ ಉಂಟು. ಶ್ರೀವಿಜಯಲಕ್ಷ್ಮೀಕಾಂತನು ಧೊರೆಗಳವರ ಈ ತರದ ಸುಬುದ್ಧಿಗೆ ಸಬಲವಾದ ಜ್ಞಾನವನ್ನೂ, ಸುಖದ ಚಿರಾಯುಷ್ಯವನ್ನೂ, ಕಲ್ಯಾಣದಿಂದ ಪಾಲಿಸಲಿ.

ಧಾರವಾಡ
ತಾ. ೨೩|೯|೧೯೩೩ಇಸವಿ.

ಶಿವಾನಂದ ಯಜ್ಞೇಶ್ವರ ಖಾಜಿಷೆ.
[ಬಾಲಿಕಾಶಿಕ್ಷಣೋತ್ಕಂಠಿಯು.]

—o—

ರಾ. ಸಾ. ಶಾಲಾಪತ್ರದ ಎಡಿಟರ ಇವರ ಚರಣದ್ವಯಗಳಿಗೆ —

ಕೆಳಗಬರೆದ ಬಹುಸೋಜಿಗವಾದ ಸಂಗತಿಯನ್ನು ತಮ್ಮ ಕರಕಮಲದಲ್ಲಿ ಜನಿಸು ಇದೇ ತಿಂಗಳ ಪತ್ರಿಕೆಯಲ್ಲಿ ಪ್ರಗಟಿಸುವಿರೆಂದು ಆಶೆಯುಂಟಾಗಿದೆ. ಅಯ್ಯಾ ಮತಪತ್ರಕರ್ತರೇ ಹಿಂದಕ್ಕೆ ಹಿಂದುಸಾರೆ ತಮ್ಮ ಭೇಟ್ಟಿಯಾಗಿತ್ತು ಈಗ ಪುನಃ ರಮ್ಮಭೇಟಿಯ ಅಪೇಕ್ಷೆಯಾಗಿದೆ. ರಾಣೆಬೆನ್ನೂರ ತಾಲೂಕ ಚಟ್ಟಗೇರಿಯಲ್ಲಿ ಹಿಂದು ಬಹುಸೋಜಿಗವಾದ ಸಂಗತಿಯನ್ನು

ಕಂಡೆನು. ಅದೇನಂದರೆ ತಾ. ೨೫ನೇ ಅಗಸ್ಟ ೧೮೮೩೩. ಶನಿವಾರದಿವಸ ಈ ಊರ ಶ್ರೀಪ್ರಾಣದೇವರ ಪಲಕ್ಕಿಸೇವೆಯು ಮಾಡುವದಕ್ಕೋಸ್ಕರ ಊರಯಾವತ್ತೂ ಪ್ರಮುಖಜನರು ಕೂಡಿದ್ದರು. ನಾನೂಹೋಗಿದ್ದೆ ಆ ಸಮಯದಲ್ಲಿ ಒಬ್ಬ ಬೇಡರ ಪೋರನು ಸುಮಾರು ೨೦, ೨೪ ವರ್ಷದವನು ಇದ್ದನು. ಆವನು ಒಮ್ಮಿಂದೊಮ್ಮೆ ಅರ್ಭಟಿಸಿ ಮುಸಗುತ್ತ ಮನಸಾಇಛ್ಛಿ ಕುಣಿಯಲಿಕ್ಕೆ ಹತ್ತಿದನು. ಆವೇಳ್ಯೆಯಲ್ಲಿ ನನಗೆ ಇದುಭೂತಚೇಷ್ಟೆಯೋ, ಅಥವಾ ಸನ್ನಿಪಾತವೋ ಅಥವಾ ಇವನು ಸುರಾಪಾನಿಯೋ, ಎಂಬಂತೆ ಅನುಮಾನವಾಯಿತು. ಆದರೆ ನನ್ನ ಅನುಮಾನವು ತಾತ್ಕಾಲವೇ ಮುಂದೆ ನಡೆದ ಸಂಗತ್ತಿಯಿಂದಾ ಪರಿಹಾರವಾಯಿತು. ಅಹಹಾ, (ಮೂಢಾಂಧಕಾರವು ಮುಸುಕಿಕೊಂಡದೆ) ಆ ಬೇಡರಪೋರನು ಕೈಯಲ್ಲಿ ಬೆತ್ತದ ಕೋಲು ತೆಗೆದುಕೊಂಡು ಆದರಿಂದ ಅಲ್ಲಿ ಇದ್ದ ದಾಸರಿಗೂ ಮುಖ್ಯವಾಗಿ ಸೂಳೆಯರಿಗೂ ಶಿಕ್ಷಿಸಹತ್ತಿದನು. ಆಗ್ಗೆ ಅಲ್ಲಿನೇಮದ ಯಾವತ್ತೂ ಕೆಂಚರು ದೇವರುಬಂತು ದೇವರುಬಂತು; ಅಂತಾ ಸಾಷ್ಟಾಂಗಪ್ರಣಾಮ ಮಾಡಿದರು ಇವರಮೂರ್ಖತ್ವವು ವರ್ಣಿಸಲಳವಲ್ಲ. ಮುಂದೆ ಭೂತನ ಶೇಷಿಅಂತಾ ಆಯಿತು ಅದರಲ್ಲಿ ಸೂಳೆಯರೂ ದಾಸರೂ ಒಂಟಿಗಾಲಲೇ ಕುಣಿಯಬೇಕು. ಅಂತಾ ದೇವರು ಬಂದ ತಕ್ಕನು ಕಟ್ಟುಮಾಡಿದನು. ಹಾಗೂ ಅಲ್ಲಿಬಾರದ ಸೂಳೆರನ್ನೆಲ್ಲ ದೇವರುಸ್ವಥಾ: ಅವರವರ ಮನೆಗೆಹೋಗಿ ಯಳತಂದು ತನ್ನ ಆಜ್ಞೆಯಕ್ಕೆ ಒಳಮಾಡಿದನು. ಆ ಕೋಮಲಾಂಗಿಯರು ಜನಮಾಂತರದಲ್ಲಿ ಸಹಾ ಇಂಥಾ ಪೆಟ್ಟು ತಿಂದಿರಲಿಕ್ಕೇಇಲ್ಲ. ಬಂಧೂಗಳರಾ ಇನ್ನೂ ಬಹಳಬಹಳ ಚಮತ್ಕಾರಗಳು ನಡದವು ಅವುಗಳನ್ನು

ಇಲ್ಲಿ ವರ್ಣಿಸಲಿಕ್ಕೆ ಸ್ಥಳಸಾಲದು ಕಾರಣದಿಂದ ಮುಖ್ಯ ಒಂದು ಸಂಗತಿಹೇಳಿ ಇದನ್ನು ಮುಗಿಸುತ್ತೇನೆ. ಹೀಗೆ ಅದ್ಭುತ ನಡೆದಿರುವ ಸಮಯದಲ್ಲಿ ಒಬ್ಬ ಷಟ್ಟಿಗ ಪುರುಷನ [ಅಲ್ಲಿ ಇದ್ದ ಸೂಳಿಯ ಅಣ್ಣನು] ತನ್ನ ತಂಗಿಯನ್ನು ಆ ದೇವರಬಂಧನದಿಂದಾ ಬಿಡಿಸಿ ಮನೆಗೆ ಕರದೊಯ್ಯುವ ಸಮಯಲ್ಲಿ ಇದು ದೇವರಿಗೆ ಸಮ್ಮತವಲ್ಲಾ ಅಂತಾ ಅಲ್ಲಿ ಇದ್ದ ಕುಚಾಳಿಜನರು ನುಡಿಯಲು ದೇವರಬಂದಾತನಿಗೆ ನಾನು ಮಾಡಿದ್ದು ಯಾವತ್ತೂ ಜನರ ಮನಸಿಗೆ ಬಂತು ಅಂತಾ ತಿಳಿದು. ಆ ಸೂಳಿಯ ಅಣ್ಣನ ಮೈಮೇಲೆ ಹೋಗಿ ಬೆತ್ತದಕೋಲಿನಿಂದಾ ಹೊಡದು ಅವನನ್ನು ಘಟ್ಟಿಯಾಗಿ ಹಿಡದನು ಆ ವೇಳ್ಯೆಯಲ್ಲಿ ದೇವರಿಗೂ ಸೂಳಿಯ ಅಣ್ಣನಿಗೂ ಚನ್ನಾಗಿ ರಪಾಟಾಪಟಿಯಾಯಿತು. ದೇವರು ಬಂದವನು ತ್ರಾಣಗುಂದಿ ನೆಲಕ್ಕೆ ಬಿದನು. ಸೂಳಿಯ ಅಣ್ಣನು ದೇವರ ಕುತ್ತಿಗಿಯನ್ನು ಘಟ್ಟಿಯಾಗಿ ಹಿಡದದ್ದರಿಂದಾ ದೇವರ ಶ್ವಾಸೋಶ್ವಾಸ ಬಂದವಾಯಿತು. ಮರಚಿಟ್ಟಿಗಳನ್ನು ಕೇಳಲೊಲ್ಲವನ ಶ್ವಾಸೋಶ್ವಾಸ ಯಾಕೆನಿಂತಿತು? ಮುಂದೆ ಅಲ್ಲಿನಿಂದ ಜನರು ನ್ಯಾಯಾಡುಜನರಿಗೆ ಬಿಡಿಸುವಂತೆ ಅವರಿಬ್ಬರಿಗೂ ಬೇರೆ ಮಾಡಿದರು (ಮರ್ಧನಂ ಗುಣವರ್ಧನಂ) ಹೀಗಾದಬಳಿಕ ದೇವರು ಬಂದ [illegible]ನಿಮಿಷದಲ್ಲೆ ತಣ್ಣಗಾದನು ಇಂಥಾ ದುಷ್ಟಾಚಾರದ ಬಂದೋಬಸ್ತು ನಮ್ಮ ಪ್ರಭುಗಳು ಇಡುವರೆಂದು ಇಚ್ಛಿಸುತ್ತೇನೆ. ಎಡಿಟರರಾಯರೇ ತಮಗೆ ಬಹು ಶ್ರಮವಾಯಿತು ಕ್ಷಮಿಸಬೇಕು. ತಾ. ೧ನೇ ಸಪ್ಟಂಬರ ಸನ್ ೧೮೮೩ಇಸವಿ.

ಸ್ಕೂಲಮಾಸ್ತರ ಚಿಕಸೇರಿ

—○*○—

(ಹಿಂದಿನ ಪುಟದಿಂದ ಮುಂದಕ್ಕೆ ಸಾಗಿದ್ದು.)

ಪಾರ್ವತಿ ಪರಮೇಶ್ವರರ ಸಂವಾದವು.

ಟೀ. ಎಲೋ? ಚತುರನೇ ಕೇಳು ನೀನು ಲಕ್ಷಣರಹಿತವಾದ ವಸ್ತುಗಳನ್ನು ನನ್ನ ಹತ್ತಿರ ಅನ್ನಬೇಡ. ಧ್ಯಾನಿಸಿ ತಿಳಿದರೆ ಭೂಕ್ಷಿಜ (ಭೂ=ಭೂಮಿಯ, ಕ್ಷಿ=ಹೊಟ್ಟೆಯಲ್ಲಿ, ಜ=ಹುಟ್ಟಿದ (ಸ್ಥಾಣು '(ಮರಗಳು)' ಮಾತಾಡುವುದುಂಟೇ? ಪಿ ಕ ಪಾರ್ವತಿಯೇ ನಡೆಯುಂದಳು. || ೮ ||

ರಾಗ|| ಮು|| ಆ|| ಕಾಂತೆ ಸದ್ಗುಣವಂತೆ ಕೇಳು ನಿ|ಶ್ಚಿಂತೆಯಿಂ ದೋರಂತೆ ಕರೆವರು | ಕಂತುರಿಪು ಹರಿಕಂಠನೆಂದರಿ | ನಿಂತ ಸ್ಥಾಪರನಲ್ಲ ಕಡಬಿಸು| ಅಂದರಹಿತೇ|| ನೀನಸ್ವ|| ತಂತ್ರ ಚರಿತೇ | ೯ |

ಟೀಕು.— ಪಾ| ಪಿ ಬಿಳ್ಳೆಗುಣವುಳ್ಳ ಸ್ತ್ರೀಯಾದ ಪಾರ್ವತಿಯೇ "ದ ಕೇಳು. ಎಲ್ಲಾ ಜನರು ಚಿಂತಾರಹಿತರಾಗಿ ಸ್ಮರವೈರಿಯಾ ನಿಂದಿ ಹರಿಕಂಠ,, (ನೀಲಕಂಠ) ಎಂದೆನ್ನುತ್ತಾರೆ. ನಾನು ನಿಂದಿ ರುವ ವೃಕ್ಷವೇ ಮುಂತಾದ ಸ್ಥಾವರನಲ್ಲ. ಕಾರಣ ಬಾಗಿಲ ಪನ್ನುತೆಗೆ? ನೀನೆಂಥವಳೆಂದರೆ; ಮರಣರಹಿತಳು. ಮತ್ತು ಸ್ವತಂತ್ರ ಚರಿತ್ರಳು. ಎಂದನು. || ೯ ||

ರಾಗ|| ಕಾಂ|| ಏ|| ಕಂದುಗೊರಲ ನೆನ್ನುವಾ|ನಹಿಲಾಪ|ರಿಂದೆ ಪೋಗಿಯೆಮೇರವಾ ಸ್ಕಂದನನಿಳಿಪೇಮು|ಯುದೋರಪ್ರ ತಶಿರು| ಯಂ ದು ಪೇಳಿದಳ ಗಜೇ || ೧೦ ||

ಟೀಕು| ಪಾ| ಎಲೋ? ನೀನು ಕಂದುಗೊರಲ (ಕಂದು=ಕಪ್ಪು ಗೊರಲ=ಕುತ್ತಿಗೆ)ಯುಳ್ಳ ನೀಲಕಂಠನೆಂಬ ನಿಮಿಲಾಪರೆ; ಈ ಹೊತ್ತೇ ಹೋಗಿ, ಸ್ಕಂದನ (ಸುಬ್ರಹ್ಮಣ್ಯನ)ಬಳಿಯಲ್ಲಿ "ಇಳಿ ಪು," ಎಂಬಶಬ್ದಗ್ರಿತ್ತು ಇರು. ನಡೆಯಂದಳು. || ೧೧ ||

ರಾಗ|| ಮು|| ಆ|| ತರುಣೀವದರಮಿಕಿರಣಾನಿಸರನಿಪ| ಚರಣಾವಿಲುರಾಹಿ

ಸಂಹರಣಿನ ಖಿಲೆಂ|ದರಿಯದಿರು ಪಶುಪತಿಯು ಯೆಂಬರು|ತ್ವ
ರಿತದಿಂದ್ಸೈ ಕಂಚುಕದಬಿಡು|| ಸ್ಫುರಿಪರದನೇ|| ಶರಣಹೃತ್ ಶರ
ಜಸದನೇ || ೧೧ ||

ಟೀಕು.—ಏ.—ಏ ಯವ್ವನಸ್ಥಳಾದಂಥ ಶ್ರೇಷ್ಠನಾದ ಸೂರ್ಯನ ಕಿರಣದಂತೆ ಪ್ರಕಾಶಿತಳಾದಂಥ, ಮತ್ತು ಕಮಲದೋಪಾದಿಹತಪಗಳುಳ್ಳಂಥ, ಹಾಗು ದುರ್ಜನರನ್ನು ನಾಶನಪಡಿಸುವಂಥ, ಪಾರ್ವತಿಯೇ ಕೇಳು ನಾನು ನೀಲಕಂಠನಾದ ನವಿಲೆಂದು ತಿಳಕೊಳ್ಳಬೇಡ. ನನಗೆ ಪಶುಪತಿಯೆಂದು ಹೇಳುವರಾದ್ದರಿಂದ ಲಗು ಬಂದು ಬಾಗಿಲವನ್ನು ತೆಗಿ? ನೀನೆಂಥವಳೆಂದರೆ, ಸ್ಫುರಿಪರದನೆ (ಸ್ಫುರಿಪ= ಹೊಳೆಯುವ, ರದನೆ= ಹಲ್ಲುಳ್ಳವಳು) ಮತ್ತು, ಶರಣಹೃತ್ ಶರಜಸದನೆ (ಶರಣ=ಭಕ್ತರ, ಹೃತ್= ಹೃದಯೆಂಬ, ಶರಜ = ಕಮಲವೇ, ಸದನೆ = ಮನೆಯಾಗಿಯುಳ್ಳವಳು,) ಅಂದರೆ ಭಕ್ತರ ಹೃದಯಕಮಲವೇ ನಿನಗೆ ವಾಸಮಾಡು ಗೃಹವೆಂಬ ಅರ್ಥ || ೧೧ ||

ರಾಗ||ಕಾಂ||ಯೇ||ಪಶುಪತಿ ಯೆಂಬೆನೀನು ತಲೆಯಮೇಲೆ|ಯಶ
ಪಶೃಂಗಕಾಣಿನೂ ಪುತಿಯನಾಡುತನಿಂದು ಬಸವಳಿಯದೆ ಪೋ
ಗು|| ಹಸನಾಗಿಪೇಳಿಗೆನೂ || ೧೨ ||

ತಾ. ೧೩|೮|೮೩ನೇ ಇ. { ನಾರಾಯಣ ಸುಬ್ಬರಾವ ಗೋಕರಣ
ಕರ ಸ್ಕೂ. ಹೆ. ಮಾ. ಕಡತೋಕಾ.

(ಮುಂದಕ್ಕೆ ಸಾಗುವದು.)

—o✕o—

ಶಾಲಾ ... ಸಿದ್ಧನಾಥ ವಾಚನ ಮಂದಿರ.
ಪೂರಬ. ಚಿ ದ. ...

ಪುಸ್ತಕ ೧೮] [ಸಂಚಿಕೆ ೧೧
ಅಗಟಂಬರ. ೧೮೮೩

Education and Improvement.

ವಿದ್ಯಾಸುಧಾರಣೆಗೆ ಸಂಬಂಧವಾದ ಸಂಗತಿಗಳು.

—✳ ೦ ✳—

ಹೆಣ್ಣುಮಕ್ಕಳ ಬಕ್ಷೀಸಿನ ಸಮಾರಂಭವು.

ಈ ಪಟ್ಟಣಸ್ಥರಾದ ಹೆಣ್ಣುಮಕ್ಕಳ ವಾರ್ಷಿಕ ಪರೀಕ್ಷಾಸಮಾರಂಭವು ಈ ತಿಂಗಳಿನಲ್ಲಿ ಆಯಿತು. ಇದರ ಸಾದ್ಯಂತ ವೃತ್ತಾಂತವನ್ನು ತಿಳಿಸುವದೊಂದು ಪತ್ರವು ಈ ಅಂಕದಲ್ಲಿ ಪ್ರಸಿದ್ಧವಾಗಿರುತ್ತದೆ. ಅದನ್ನು ಶಾಸ್ತ್ರಜನರು ಅವಶ್ಯವಾಗಿ ಓದಬೇಕೆಂದು ನಾವು ಸೂಚಿಸುತ್ತೇವೆ. ಹೋದವರ್ಷಕ್ಕಿಂತ ಈ ವರ್ಷದ ಸಮಾರಂಭದಲ್ಲಿ ವಿಶೇಷ ವೇನೆಂದರೆ— ಒಬ್ಬ ಬಾಲಿಕೆಯು ಯುಕ್ಲಿಡ ೧ನೇ ಪುಸ್ತಕದ ೫ನೇ ಸಿದ್ಧಾಂತವನ್ನು ಸಭೆಯಲ್ಲಿ ಬರೆದು, ತಪ್ಪದೆ ಸಿದ್ಧಮಾಡಿದಳು. ಇದರಿಂದ ಸ್ತ್ರೀ ಶಿಕ್ಷಣದ ಅಭಿವೃದ್ಧಿಯು ವ್ಯಕ್ತವಾಗುತ್ತದೆ. ಈ ವರ್ಷದ ಸಮಾರಂಭಕ್ಕೆ ಎಳೆಂಟುಜನ ಯುರೋಪಿಯನ್ ಸ್ತ್ರೀಯರು ಬಂದಿದ್ದರು, ಮತ್ತು ಹಿಂದೂ ಸಭ್ಯಸ್ತ್ರೀಯರು ಹೋದವರ್ಷಕ್ಕಿಂತ ಹೆಚ್ಚು ಜನ, ಅಂದರೆ ೧೫,೧೬ ಮಂದಿ ಬಂದಿದ್ದರು. ಪರೀಕ್ಷೆಯ ಇಳಿದಂಥ ಹೆಣ್ಣುಮಕ್ಕಳಿಗೆ ಶೀರೆ, ಖಣ, ಪುಸ್ತಕಗಳ್ಲಿ ೫ ಚಿನ್ನದ ಹೂಗಳನ್ನು ಇನಾಮು ಕೊಟ್ಟರು.

ಈ ಸಮಾರಂಭ ಪ್ರವರ್ತಕರಾದ ರಾ. ಸಾ. ರೊದ್ದ ಶ್ರೀನಿವಾಸ ರಾಯರು ಸಭೆಗೆ ತಿಳಿಸಿದ ವೃತ್ತಾಂತದಿಂದ ಈ ಜಿಲ್ಲೆಯಲ್ಲಿ ವಿದ್ಯೆ ಕಲಿಯುವ ಹೆಣ್ಣುಮಕ್ಕಳ ಸಂಖ್ಯೆಯು ಹೋದ ವರ್ಷ ೨೨೭೩ ಇದ್ದದ್ದು ಈ ವರ್ಷ ೪೦೨೫ರ ವರೆಗೆ ಬೆಳೆದದೆಂತಲೂ, ಧಾರವಾಡದಲ್ಲಿ ಕಲಿಯುವ ಬಾಲಿಕೆಯರ ಸಂಖ್ಯೆಯು ಹೋದವರ್ಷ ೨೨೦ ಇದ್ದದ್ದು ಈ ವರ್ಷ ೩೧೪ ಆಗಿರುತ್ತದೆಂತಲೂ ತಿಳಿಯಬಂತು. ಸದರೀ ರಾವಸಾಹೇಬರು ಸ್ತ್ರೀಶಿಕ್ಷಣವನ್ನು ಬೆಳಿಸುವ ಕೆಲಸದಲ್ಲಿ ಮಾಡುವ ಅನಿವಾರ್ಯವಾದ ಪರಿಶ್ರಮವನ್ನು ನೋಡಿ ನಮಗಾಗುವಂತೆ ಯಾವತ್ತು ದೇಶಬಾಂಧವರಿಗೆ ಅತ್ಯಾನಂದ ವಾಗುವದೆಂಬದಕ್ಕೆ ಸಂದೇಹವಿಲ್ಲ.

—*—

ನಾವು ಹಿಂದಕ್ಕೊಮ್ಮೆ ತಿಳಿಸಿದಂತೆ ಮುಂಬಯಿಯಲ್ಲಿ "ಕನ್ನಡ" ಸುವಾರ್ತೆ ಯೆಂಬ ಕನ್ನಡ ವರ್ತಮಾನಪತ್ರವು ಈ ತಿಂಗಳಲ್ಲಿ ಆರಂಭವಾಗಿರುತ್ತದೆ. ಈ ಪತ್ರದ ಎಡಿಟರರು ನಮಗೆ ಕಳಿಸಿದ ಮೊದಲಿನ ಎರಡು ಅಂಕಗಳನ್ನು ನಾವು ಆದರ ಪೂರ್ವಕವಾಗಿ ಸ್ವೀಕರಿಸುತ್ತೇವೆ. ಪತ್ರದೊಳಗಿನ ವಿಷಯಗಳ ಗೌರವವೂ, ವೃತ್ತಾಂತಗಳ ಕ್ರಮವೂ, ಭಾಷೆಯ ಸರಣಿಯೂ ವರ್ಣಿಸತಕ್ಕಂಥವಿರುತ್ತವೆ ನಮ್ಮ ಇಲಾಖೆಯಲ್ಲಿ ಮೊಳೆಛಾಪೆಯಿಂದ ಹೊರಡುವ ಕನ್ನಡ ವರ್ತಮಾನಪತ್ರವು ಇದೇ ಮೊದಲನೇದಿರುವದರಿಂದ ಯಾವತ್ತು ಕರ್ನಾಟಕಾಭಿಮಾನಿಗಳಾದ ಜನರು, ವಿಶೇಷವಾಗಿ ಮಾಸ್ತರ ಜನರು, ಔದಾರ್ಯದಿಂದ ಈ ಪತ್ರಕ್ಕೆ ಆಶ್ರಯಕೊಟ್ಟು, ಇದನ್ನು ಚಿರಂಜೀವಿಯನ್ನು ಮಾಡುವರೆಂದು ಮನಃಪೂರ್ವಕವಾಗಿ ಕೋರುತ್ತೇವೆ

ಪತ್ರವು ಧಾರವಾಡ ವೃತ್ತದಷ್ಟೇ ದೊಡ್ಡದು ಇರುತ್ತದೆ. ಅಕ್ಷರಗಳು ಸುವಾಚ್ಯವುಂಟು. ಇದರ ಕ್ರಯ ವರ್ಷಕ್ಕೆ ಮುಂಗಡ ೩||. ರೂಪಾಯಿ. ಹಿಂದಿನಿಂದ ೪ ರೂಪಾಯಿ; ಟಪಾಲಹಾಸಲು ಸಹಿತ. ಮುಂಬಯಿಯಲ್ಲಿ "ಕರ್ನಾಟಕ ಛಾಪಖಾನೆಯ" ಮ್ಯಾನೇಜರರಿಗೆ ಬರೆದರೆ ಪತ್ರವು ದೊರೆಯುವದು.

—o—

ಆರೋಗ್ಯ ಸೂತ್ರ ಸಂಗ್ರಹ— ಈ ಪುಸ್ತಕದ ಕರ್ತರು ಇದರದೊಂದು ಪ್ರತಿಯನ್ನು ನಮಗೆ ಕಳಿಸಿದ್ದಾರೆ. ಅದನ್ನು ನಾವು ಸಂತೋಷದಿಂದ ಸ್ವೀಕರಿಸುತ್ತೇವೆ. ಇದರಲ್ಲಿ ಆರೋಗ್ಯ ರಕ್ಷಣದ ಉಪಾಯಗಳು ಅತಿಸುಲಭವಾದ ಭಾಷೆಯಿಂದ ವಿವರಿಸಲ್ಪಟ್ಟಿವೆ. ಆರೋಗ್ಯದ ಬೆಲೆಯನ್ನು ಅರಿತಂಥ ಜನರು ಇದನ್ನು ಅವಶ್ಯವಾಗಿ ಓದತಕ್ಕದ್ದು. ಕ್ರಯ ೧೦ ಆಣೆ; ಟಪಾಲಹಾಸಲು ೩ ಆಣೆ. ಪ್ರತಿಗಳು ಧಾರವಾಡದಲ್ಲಿ ಜ್ಞಾನವರ್ಧಕ ಛಾಪಖಾನೆಯಲ್ಲಿ ದೊರೆಯುತ್ತವೆ.

—c—

ಕಳೆದ ಆಗಸ್ಟ ತಿಂಗಳಿನ ಶಾಲಾಪತ್ರಕದ ೧೮೫ನೇ ಪುಟದಲ್ಲಿ ಬಾಳಕೃಷ್ಣ ಮಹಾದೇವ ಮುರಾಳೀಕ ಎಂಬ ಸಹಿಯ ಪತ್ರವು ಪ್ರಸಿದ್ಧವಾಗಿರುತ್ತದೆ. ಈ ಅವಿವೇಕಿಯಾದ ಮುರಾಳೀಕನು ತನ್ನ ಖಾಸಗೀ ದ್ವೇಷವನ್ನು ತೀರಿಸಿಕೊಳ್ಳುವ ಕಾಂಕ್ಷೆಯಿಂದ ತನ್ನ ಮುಖ್ಯಾಧಿಕಾರಿಯನ್ನು ಬರಿದು ಅವಾಚ್ಯಶಬ್ದಗಳಿಂದ ಬರೆದ ಪತ್ರಕ್ಕೆ ಶಾಲಾಪತ್ರಕದಲ್ಲಿ ನಮ್ಮ ದುರ್ಲಕ್ಷ್ಯಮೂಲಕವಾಗಿ ಸ್ಥಳದೊರೆತೆಂದು ನೋಡಿ ನಾವು ಅತ್ಯಂತ ಖೇದಪಡುತ್ತೇವೆ. ವಿದ್ಯಾಭಿವೃದ್ಧಿಗೆ ಸಂಬಂಧವಾದ ವಿಷಯಗಳಷ್ಟೇ ಶಾಲಾಪತ್ರಕದಲ್ಲಿ ಬರತಕ್ಕವಲ್ಲದೆ ದುರುಕ್ತಿಗಳಿಗೂ ಪ

ಕಂಪನಿಗಳಿಗೂ ಈ ಪತ್ರಕದ ಆಶ್ರಯವು ಎಷ್ಟುಮಾತ್ರವೂ ದೊರೆಯಲಿಕ್ಕಿಲ್ಲೆಂಬುದನ್ನು ಯಾವತ್ತು ಮಾಸ್ತರಜನರು ಪೂರಾ ನೆನಪಿನಲ್ಲಿ ಇಡತಕ್ಕದ್ದು. ಇನ್ನು ಮುಂದೆ ಯಾರಾದರೂ ಮಾಸ್ತರರಾಗಲೀ ವಿದ್ಯಾರ್ಥಿಗಳಾಗಲೀ ಇಂಥಾ ಪತ್ರಗಳನ್ನು ನಮ್ಮ ಕಡೆಗೆ ಕಳಿಸಿದರೆ, ಅವರಿಗೆ ಯೋಗ್ಯಶಾಸನವಾಗುವದಕ್ಕೋಸ್ಕರ ಆವರ ಪತ್ರಗಳನ್ನು ನಾವು ಅವರ ಪರೀಕ್ಷಾಧಿಕಾರಿಗಳಾದ ಡೆಪ್ಯುಟೀ ಇನ್ಸ್ಪೆಕ್ಟರರ ಕಡೆಗೆ ರವಾನಿಸುವೆವು.

ಎ. ಶಾ. ಪ.

——*o*——

ಎಜುಕೇಶನ್ ಕಮಿಶನ್ನಿನವರ ರಿಪೋರ್ಟು ಇಷ್ಟರೊಳಗೆ ಇಂಡಿಯಾಸರಕಾರಕ್ಕೆ ಹೋಗಿರಬಹುದು. ಈ ರಿಪೋರ್ಟಿನ ಮೂಲಕವಾಗಿ ವಿದ್ಯಾಖಾತೆಯಲ್ಲಿ ಬಹಳ ದೊಡ್ಡ ಹೆಚ್ಚುಕಡಿಮೆಗಳು ಬೇಗ ಆಗತಕ್ಕವುಗಳಿರುತ್ತವೆಂದು ಸರ್ವತೋಮುಖವಾಗಿ ಕೇಳುತ್ತೇವೆ.

——o——

ಈ ದೇಶದ ಶಿಲ್ಪಗಳಿಗೂ ಕಾರಖಾನೆಗಳಿಗೂ ಆಶ್ರಯಕೊಡುವ ಉದ್ದಿಶ್ಯ ಇಂಡಿಯಾಸರಕಾರದವರು ಆಗಾಗ್ಗೆ ಹೊಸಹೊಸ ಠರಾವುಗಳನ್ನು ಮಾಡುತ್ತಲಿದ್ದಾರೆ. ಆ ಪ್ರಕಾರ ಖಾಸಗೀ ಛಾಪಖಾನೆಗಳಿಗೆ ಆಶ್ರಯಕೊಡುವ ಉದ್ದಿಶ್ಯ ಸರಕಾರೀ ಬುಕ್ ಡೀಪೋಗಳನ್ನು ತೆಗಿಯುವ ಆಲೋಚನೆಯು ಸರಕಾರದಲ್ಲಿ ಬಹುದಿವಸದಿಂದ ನಡಿದದೆಂದು ಕೇಳುತ್ತೇವೆ. ಸದ್ಯಕ್ಕೆ ಮುಂಬಯಿ ಬುಕ್ ಡೀಪೋವನ್ನು ಬರುವ ಜನವರಿಯ ೧ನೇ ತಾರೀಖಿನಿಂದ ತೆಗಿಯುವ ಬಗ್ಗೆ ಸರಕಾರೀ ಠರಾವು ಆಗಿರುತ್ತದೆಂದು ವರ್ತಮಾನ ಪತ್ರಿಕೆಗಳಿಂದ ತಿಳಿಯುತ್ತದೆ.

ಚೀನೀಜನರು ಬತ್ತದಗೊಳಲು ಸುಟ್ಟು ಅದರ ಬೂದಿಯನ್ನು ನೀರೊಳಗೆ ಕಲಿಸಿ ಆ ನೀರಿನಲ್ಲಿ ಅನ್ನ ಮಾಡಿ ಉಣ್ಣುತ್ತಾರೆ. ಆ ಬೂದಿಯಲ್ಲಿ ಶರೀರದೊಳಗಿನ ಮಜ್ಜಾ, ಸ್ನಾಯು, ಶುಕ್ರ ಮುಂತಾದ ಧಾತುಗಳಿಗೆ ಬಲ ಕೊಡುವ ಫಾಸ್ಫರವೆಂಬ ಪದಾರ್ಥವು ವಿಶಾಲವಾಗಿ ಇರುವದರಿಂದ ಚೀನೀಜನರ ಮೈಯಲ್ಲಿ ನಮ್ಮ ದೇಶದ ಅನ್ನ ಉಂಣ್ಣುವ ಜನರಿಗಿಂತ ಬಹಳ ಹೆಚ್ಚು ಬಲವಿರುತ್ತದೆ.

—o—

ಮೆಹರ್ಬಾನ ಡಾಯರೆಕ್ಟರ ಧೊರೆಗಳವರು ಎರಡುವರ್ಷದ ಫರ್ಲೊರಜೆ ತಕ್ಕೊಂಡು ವಿಲಾಯತಿಗೆ ಹೋಗತಕ್ಕವರಿದ್ದಾರೆಂದು ಕೇಳುತ್ತೇವೆ.

—o—

ಮೆಹರ್ಬಾನ ರಸೆಲ್ ಧೊರೆಗಳವರು ಈ ತಿಂಗಳಲ್ಲಿ ಇಲ್ಲಿಗೆ ಬಂದು ಹಾಯಸ್ಕೂಲಿನ ಪರೀಕ್ಷೆಯನ್ನು ತೀರಿಸಿಕೊಂಡು ಮರಳಿ ಬೆಳಗಾವಿಗೆ ಹೋದರು. ಈ ವರ್ಷ ಧೊರೆಗಳವರು ಕಲಾದಗಿ ಜಿಲ್ಲೆಯಲ್ಲಿ ಸಂಚಾರಕ್ಕೆ ಬೇಗ ಹೊರಡತಕ್ಕವರಿದ್ದಾರೆಂದು ಕೇಳುತ್ತೇವೆ.

—o—

Notices.
ನೋಟೀಸುಗಳು.

ದಕ್ಷಿಣ ಭಾಗದೊಳಗಿನ ಸ್ಕೂಲ ಡಿಪುಟಿಗಳಿಗೂ ಮಾಸ್ತರರುಗಳಿಗೂ ತಿಳಿಸುವದೇನಂದರೆ— ೧ನೇ ಇ ಯತ್ತೆ ಶುಲಭವಾದಲ್ಲಿಟ್ಟಿರುವದರಿಂದ ಓದರುವ ಪ್ರಾಯವುಳ್ಳ ಹುಡುಗರಿದೆ ಶಿವರುವದಲಿ ೧ನೇ ಇ ಯತ್ತೆ [illegible]

ಕರೆ ಬಿನ್ನ ಇಯತ್ತೆಯಲ್ಲಿ ಓದುವ ಹಾಗೂ ಹೆಚ್ಚು ಗ್ರಾಯದ ಹುಡುಗರಿಗೆ ಗಣಿತಕ್ಕಿಂತ ಹೆಚ್ಚು ಪುರ್ದ್ದೆನವಾದಗಳು ಇಷ್ಟರೆ ಆ ಮಾಸ್ತರರ ಕಲಿಸುವ ಪದ್ಧತಿಯು ಹಾಗೂ ಸಾಲೆ ನಡೆಸುವ ಕ್ರಮವು ಒಳ್ಳೆದಲ್ಲೆಂದು ತಿಳಿಯಲಾಗುವದು. ಈ ವಿಷಯದ ಕಡೆಗೆ ಡೆಪ್ಯುಟಿ ಇನಸ್ಪೆಕ್ಟರರು ಲಕ್ಷ್ಯಗೊಡಬೇಕಲ್ಲದೆ ವಾರ್ಷಿಕ ರಿಪೋರ್ಟಗಳೊಡನೆ ಕಳಿಸುವ ಪರೀಕ್ಷೆ ಪತ್ರಿಕೆಗಳಲ್ಲಿ ಸಾಲ ಆಖೇರ ರಜಿಸ್ಟರಕ್ಕೆ ದಾಖಲು ಹುಡುಗರು, ಅವರಲ್ಲಿ ಪರೀಕ್ಷಿಸಲ್ಪಟ್ಟವರು, ಪಾಸಾದವರು, ಎಂಬ ಸಂಗತಿಗಳನ್ನು ನಮೂದಿಸಬೇಕು. ತಾ. ೩ನೇ ಅಕ್ಟೋಬರ ಸನ್ನ ೧೮೮೩ನೇ ಇ.

W. A. Russell
ಎ. ಇನಸ್ಪೆಕ್ಟರ ದಕ್ಷಿಣ ಭಾಗ.

—o—

ಜಾವಕ ನಂಬರು ೧೭೮೨

ಮೊಹಬ್ಬಾನ–ಕನ್ನಡ ಟ್ರಾನ್ಸ್ಲೇಟರ ಎ. ಡಿ. ಧಾರವಾಡ ಇವರಕಡೆಗೆ —

ಧಾರವಾಡ ಜಿಲ್ಲೆಯ ಡೆಪ್ಯುಟಿ ಇನಸ್ಪೆಕ್ಟರರ ಕಡಿಂದಾಕಲ್ಪ–ಕೆಳಗೆ ಬರದ ಮುಚ್ಚಳಿರು ನಡೆಯುವ ತಂಗಳ ಶಾಲಾಪತ್ರಿಕೆದಲ್ಲಿ ದಯಮಾಡಿ ಛಾಪಿಸುವ ಮೆ. ಆಗಬೇಕೆಂತ ಅಪೇಕ್ಷಿಸುತ್ತೇನೆ.

ಧಾರವಾಡ ಜಿಲ್ಲಾ ರಾಣೇಬೆನ್ನೂರ ತಾ. ಹುಲಗೇರಿ ಮಾಸ್ತರರಾದ ಮಲತಾರಂದಲಿಂಗೋ ಇವರ ಸರ್ಟಿಫಿಕೇಟ ೧೭೮೨ ಹಾಳಾಗಿದ್ದು ಇದ್ದದ್ದು ಗೊತ್ತಾಗಿರುವದು ಮಾಡಿರುತ್ತದೆ. ತಿಳಿಯುವದು.

ತಾ. ೨೮।೯।೮೩ S. K. Rodda.
ಡಿ. ಎ. ಇನಸ್ಪೆಕ್ಟರ ಜಿಲ್ಲಾ ಧಾರವಾಡ.

—o—

The Desayi Of Kittore.

ಕಿತ್ತೂರ ಸಂಸ್ಥಾನವು.

[೧೭೩ನೇ ಪುಟದಿಂದಾ ಮುಂದೆ ನಡೆದದ್ದು.]

ಸನ ೧೮೦೩ನೇ ವರ್ಷದಲ್ಲಿ ಕರ್ನಲ ವೆಲಸಲೀಸಾಹೇಬನು, ಶ್ರೀಮಂತ ಬಾಜೀರಾವ ಪೇಶವೆಯನ್ನು ಪಟ್ಟದಮೇಲೆ ಕೂಡಿಸುವದಕ್ಕಾಗಿ ಮೈಸೂರಿನಿಂದ ಹೊರಟಾಗ್ಗೆ, ಕಿತ್ತೂರದೇಸಾಯಿಯು, ೧೦೦ ಮಂದಿ ರಾವುತರಿಂದ ಹೋಗಿ ಅವನನ್ನು ಕೂಡಿಕೊಂಡನು. ಈ ರಾವುತರ ಉಪಯೋಗವು ವಿಶೇಷವಾಗ ಅಲ್ಲ. ಕಾರಣವೇನಂದರೆ—ರಾವುತರಸಂಗಡ ಏನೂ ಸಾಹಿತ್ಯವಿಲ್ಲದ್ದರಿಂದ ಆಗಾಗ್ಗೆ ಅವರಿಗೆ ಹಣವನ್ನು ಕೊಡಬೇಕಾಯಿತು. ಆದರೂ ಕಂಪನಿಸರಕಾರದವರು ದೇಸಾಯಿಯು ಮಾಡಿದ ಸಹಾಯವನ್ನು ಮರೆಯಲಿಲ್ಲ. ಬಾಜೀರಾವಸಾಹೇಬನು, ಯಾವಯಾವ ಸರದಾರರ ಜಹಾಗೀರವನ್ನು ಜಪ್ತಿಯಾಗಿಮಾಡಬೇಕೆಂದು ವೆಲಸಲೀಸಾಹೇಬನ ಕಡೆ ಪತ್ರಿಕೆಯನ್ನು ಬರದಿದ್ದನೋ ಆದರಲ್ಲಿ ಕಿತ್ತೂರ ದೇಸಾಯಿಯ ಹೆಸರಾದರೂ ಇತ್ತು; ಆದರೂ ವೆಲಸಲೀಸಾಹೇಬನು ತಾನು, ಪುಣೆಗೆಹೋಗುವಕಾಲಕ್ಕೆ ದೇಸಾಯಿಯು ತನಗೆ ತನ್ನ ಶಕ್ತಿಪ್ರಕಾರ ಸಹಾಯವನ್ನು ಮಾಡಿದನು; ಇದನ್ನು ಮನಸ್ಸಿನಲ್ಲಿ ತಂದು ಅವನ ಶೀಮೆಯನ್ನು ಜಪ್ತಿಮಾಡ ಬೇಕೆಂಬದನ್ನು ಪತ್ತಿಟ್ಟಿಗೆ ಇಟ್ಟು, ದೇಸಾಯಿಯ ಕಷ್ಟವನ್ನು ಕಡಿಮೆ ಮಾಡಬೇಕೆಂಬದಾಗಿ ಮಾತನ್ನು ಪೇಶವೆಯ ಮುಂದೆ ತೆಗೆದನು. ಈ ಕಾರಣದಿಂದ ಪೇಶವೆಯು ದೇಸಾಯಿಯ ಜಹಾಗೀರವನ್ನು ತೆಗೆದುಕೊಳ್ಳಬೇಕೆಂಬ ಯತ್ನವನ್ನು ತೀರಾ ಬಿಟ್ಟುಬಿಟ್ಟನು. ಧಾರವಾಡದ ಪೇಶವೆಯ ಸರಸುಭೆದಾರನಾದ ಗೋಖಲೆಯು, ದೇಸಾಯಿಯ ಕಪ್ಪವನ್ನು ಕೊಡಬೇಕೆಂದು

ಬಿಟ್ಟಿದನು. ಹಾಗೆಯೇ ಕಿತ್ತೂರ ಸೀಮೆಯನ್ನು ಸ್ವಾಧೀನಮಾಡಿ
ಕೊಳ್ಳುವ ವಿಷಯದಲ್ಲಿ ಬಹು ಯತ್ನವನ್ನು ನಡಿಸಿದನು. ಮುಂ
ದ ವೆಲಸಲೀಸಾಹೇಬನು ಮದ್ರಾಸಿಗೆ ಹೋಗುವಾಗ್ಯೆ ಪೇಶ
ವೆಗೆ, ದೇಸಾಯಿಯ ವಿಷಯದಲ್ಲಿ ಯಾವ ವ್ಯವಸ್ಥೆಯನ್ನು ಮಾಡಿ
ದಿರಿ? ಎಂದು ಕೇಳಿದನು. ಹಾಗೆ ನೀವು ದೇಸಾಯಿಯಿಂದ ಕಪ್ಪವನ್ನು
ತೆಗೆದುಕೊಂಡು ಅವನ ಸೀಮೆಯನ್ನು ಅವನಿಗೆ ನಡಸಿಕೊಡಬೇಕೆಂಬ
ದಾಗಿ ಗೊತ್ತುಮಾಡಿದನು. ಸನ ೧೮೦೫ನೇ ಇಸವಿಯಲ್ಲಿ ಪಂ
ತಪ್ರಧಾನ ಪೇಶವೆಯು, ಬಳ್ಳಾರಿಗೆ ಯಾತ್ರೆಯ ದೆಸೆಯಿಂದ ಹೋ
ಗುವಾಗ್ಯೆ ದೇಸಾಯಿಯನ್ನು ತನ್ನ ಸಂಗಡ ಕರೆದುಕೊಂಡುಹೋದ
ನು. ಹಾಗು ಅಲ್ಲಿಂದ ಮುಂದ ದೇಸಾಯಿಯನ್ನು ಪ್ರಣತಿಸಿ ಬಿಟ್ಟ
ದನು. ಆಮೇಲೆ ದೇಸಾಯಿಗೆ ಹೋಗುವದಕ್ಕೆ ಬೇಗನೆ ಅಪ್ಪ
ಣತಿ ಯಾಗವಲ್ಲದು. ಆಗ್ಯೆ ದೇಸಾಯಿಯು ಸರಕಾರಕ್ಕೆ ಉ
ಪಕ್ರಕೊಟ್ಟು ಪೇಶವೆಯ ಕಡೆಯಿಂದ “ ಪ್ರತಾಪರಾವ ” ಎಂ
ಬ ಬಿರುದನ್ನು ಹೊರಿಸಿದನು. ಮತ್ತು ವರ್ಷಕ್ಕೆ ೧,೭೫,೦೦೦
ರೂಪಾಯಿಗಳ ಕಾಣಿಕೆಯನ್ನು ಕೊಡುವದಕ್ಕೆ ಒಪ್ಪಿಕೊಂಡನು,
ಸನ ೧೮೦೯ನೇ ವರ್ಷದಲ್ಲಿ ಮಲ್ಲಸರ್ಜ ದೇಸಾಯಿಯು, ಕಿ
ತ್ತೂರತಾಲೂಕನ್ನು ತನ್ನ ಅಧಿಕಾರದಲ್ಲಿ ತೆಗೆದುಕೊಂಡನು.
ನಂದಗಡದಲ್ಲಿ ದೇಸಾಯಿಯು ಯಾವಕೋಟೆಯನ್ನು ಕಟ್ಟಿಸಿದ್ದ
ನೋ, ಅದಕ್ಕೆ ಅವನು ಪ್ರತಾಪಗಡವೆಂಬ ಹೆಸರನ್ನು ಕೊಟ್ಟನು,
ನಾನಾಸ್ಥಳದಿಂದ ವ್ಯಾಪಾರಗಾರರನ್ನು ತಂದು ಅವರಿಗೆ ಕೌಲನ್ನು
ಕೊಟ್ಟು ನಂದಗಡವನ್ನು ವ್ಯಾಪಾರಸ್ಥಳವಾಗಿಮಾಡಿ ದೊಡ್ಡ ಶ
ಹರವನ್ನು ಮಾಡಿದನು, ಮತ್ತು ದೇಸಾಯಿಯು ಕಿತ್ತೂರಲ್ಲಿ ಒಂ
ದು ಕಿಲ್ಲೆಯನ್ನು ಕಟ್ಟಿಸಿದನು. ಮಲ್ಲಸರ್ಜ ದೇಸಾಯಿಯು
ಸನ ೧೭೮೨ನೇ ವರ್ಷದಲ್ಲಿ ದೇಸಾಯಿಯಾಗಿ ಸನ ೧೮೧೬

ನೇ ವರ್ಷದಲ್ಲಿ ಮರಣ ಹೊಂದಿದನು.

ಧಾರವಾಡ ೪ನೇ ನಂಬರ	ಶಿವಾನಂದ ವಾಜಿಮೀಯಾ
ಶಾಲೆಯಿಂದ ೨೪|೯|೮೩	೪ನೇ ನಂಬರ

(ಮುಂದಕ್ಕೆ ಸಾಗುವದು.)

Distribution of Prizes to girls at Dharwar.

ಧಾರವಾಡ ಹೆಣ್ಣುಮಕ್ಕಳ ಬಕ್ಷೀಸಿನ ಸಮಾರಂಭವೂ ಜಾರ್ಡನ್ನ ಪ್ರಾಂಜವೂ.

ಈ ಮಹಾ ಬಕ್ಷೀಸಿನ ಸಮಾರಂಭವು ರಾ. ಸಾ. ಡಿ. ಎ. ಇನಸ್ಪೆಕ್ಟರ ಧೊರೆಗಳವರ ಅವರ್ಣನೀಯ ಕ್ರಮದಿಂದಲೂ, ಉತ್ತೇಜನದ ಬುದ್ಧಿಯಿಂದಲೂ, ಇಲ್ಲಿಯ ಮರಾಠೀ ಶಾಲೆಯಲ್ಲಿ ತಾರೀಖು ೨೩ನೇ ಅಕಟೋಬರ ೧೮೮೩ನೇ ಸೋಮವಾರ ದಿವಸದಲ್ಲಾಯಿತು. ಸಭಾಸ್ಥಾನವು ಬಹು ರಮಣೀಯವಾಗಿಯೂ, ಮನೋಲ್ಲಾಸವಾಗಿಯೂ ಇತ್ತು. ಈ ಸಮಾರಂಭದ ಸದಾಕಾಂಕ್ಷೆಯನ್ನು ನೆರವೇರಿಸುವದಕ್ಕಾಗಿ ಮೆಹರ್ಬಾನ ಮಿಶಲ್ಲನ್ನು ರಾ. ಕಲೆಕ್ಟರ ಮೆ. ವಾಟಸಾ. ಜಜ್ಜ ಮೆ. ಚಾರ್ಲಸಸಾ. ಅಂಕಲೇಕ್ಟರ ಮೆ. ಬೆನ್‌ಬ್ರಿಕ್‌ಸಾ. ಡಾಕ್ಟರ ಮೆ. ಜಿಗ್ಲರಸಾ. ಮಿಶನರೀ, ಇತ್ಯಾದಿ ಕೆಲವು ಅಂಗ್ಲ ರಾಜಾಧಿಕಾರಿಗಳೂ, ಅಂಗ್ಲ ರಾಜರಾಣಿಗಳೂ ಬಹುಉತ್ಸುಕತೆಯಿಂದ ಬಂದಿದ್ದರು. ಇದಲ್ಲದೆ ಶ್ರೀಮಂತ ಮಹಾರಾಜ ರಾ. ದೇಸಾಯಿ ಸಾ. ಕೌಜಲಗಿ, ರಾವಬಹದ್ದೂರ ಬಾಬಾಜೀರಾವ ಸಬಜಡ್ಜ, ಗುರುಸಿದ್ದಪ್ಪಾ ಅಣ್ಣಾ ಡೆ. ಡಿ. ಕಲೇಕ್ಟರ, ರಾವಸಾ. ಭುಜಂಗರಾವ ಪ್ರಿನ್ಸಿಪಾಲ, ಕನ್ನಡ ತ್ರಾನ್ಸಲೇಟರ, ಕೇಶವರಾವ ಹಾಯಸ್ಕೂಲ ಮಾಸ್ತರ, ಅಣ್ಣಾ ರಾಮಪ್ಪಾ,

ಯಾಸಮಿಸ್ಸಿಪಾಲ, ಕೃಷ್ಣರಾವವಕೀಲ ಇತ್ಯಾದಿ ಹಲವು ಸುಜ್ಞ ದಯಾಳು ದೇಶಾಧಿಕಾರಿಗಳೂ, ಶ್ರೀಮಂತ ಶೆಟ್ಟಿ ಸಾವಕಾರ ಮುಂತಾದ ದೇಶಾಭಿಮಾನಿಗಳೂ ಬಂದಿದ್ದರು. ಇನ್ನೊಂದು ಗೇಶರಿಂತದ ಶುಭಚಿನ್ಹದ ಸಂತೋಷದ ಕಾರಣವೇನಂದರೆ ಹಲವು ಸಭ್ಯ ಮಾನಿಷ್ಠ ಗೃಹಸ್ಥರ ಸ್ತ್ರೀಯರು ಈ ಸಭೆಗೆ ಬಹು ಸಂತೋಷದಿಂದ ಬಂದಿದ್ದರು. ಹಾಗೂ ಸಮಾರಂಭಕ್ಕೆ ಮೂಲ ಕಾರಣೀಭೂತರಾದ ಇಲ್ಲಿಯ ಎಲ್ಲ ಹೆಣ್ಣುಮಕ್ಕಳ ಸಾಲಿಯ ಬಾಲಿಯರು ಬಹು ಉತ್ಸಾಹದಿಂದ ಪೂರ್ವದ ಸೂಚನೇಪ್ರಕಾರ ನೇಮಿತ ಸ್ಥಳದಲ್ಲಿ ವಿದ್ಯುದಿಂದ ನವ್ಯ ಕಾಂತಿಯುಳ್ಳ ಗೊಂಬೆಗಳಂತೆ ಬಹು ಭೂಷಣ ಉಳ್ಳವರಾಗಿ ಸಾಲುಸಾಲಾಗಿ ನೆರೆದಿದ್ದರು. ಹೀಗೆ ಸಮಾರಂಭಸ್ಥಾನವು ಚಂದ್ರನಿಂದಲೂ, ನಕ್ಷತ್ರಗಳಿಂದಲೂ, ಶೋಭಿಸಲ್ಪಟ್ಟ ಗಗನಮಂಡಲದಂತೆ ಬಹು ಭೂಷಣಾಧಾರವಾಗಿತ್ತು. ಜಗುಮಾಯ ಅಧ್ಯಕ್ಷಸ್ಥಾನದಲ್ಲಿ ಕಲೆಕ್ಟರ ದೊರೆಗಳವರು ವಿರಾಜಮಾನರಾದರು.

ಆ ಮೇಲೆ ರಾ. ಸಾ. ಡಿ. ಎ. ಇ. ದೊರೆಗಳು, ಸ್ತ್ರೀಶಿಕ್ಷಣದ ಪೂರ್ವದಸ್ಥಿತಿಯ ವಿಷಯದಲ್ಲಿಯೂ, ಸಾಂಪ್ರತ ಸ್ಥಿತಿಯ ವಿಷಯದಲ್ಲಿಯೂ, ಸಾಂಪ್ರತದ ಉತ್ತಮಸ್ಥಿತಿಗೆ ಯೋಗ್ಯರಾದ ದೇಶಾಭಿಮಾನಿ ದೇಶಾಧಿಕಾರಿಗಳ ಉತ್ತೇಜನದ ವಿಷಯದಲ್ಲಿಯೂ ಸ್ವಲ್ಪಸಂಭಾಷಣವನ್ನು ರಸಭರಿತವಾಗಿ ರಂಜನೀಯವಾಗುವಂತೆ ಸಂಭಾಷಿಸಿದರು. ಆ ಮೇಲೆ ರಾ. ಸಾ. ಶಾಲಾಧಿಕಾರಿಗಳು ೬ನೇ ಯತ್ತೆಯ(೧ನೇ ವರ್ಗದ) ಹೆಣ್ಣುಮಗಳಿಂದ ಬಹುಕಠಿಣವಾ ೩ನೇ ಸಿದ್ಧಾಂತವನ್ನು ಸಿದ್ಧಮಾಡಿಸಿದರು. ಆ ಬಾಲೆಯೂ ೭ ಹುಅಪಾಲ್ಯ ಸ್ವಬುದ್ಧಿಯಿಂದ ಸಭಾ ಸಮೂಹಕ್ಕೆ ಅತಿಸೋಜಿಗವಾಗುವಂತೆ ಸಿದ್ಧಮಾಡಿದಳು. ನಂತರ ಎಲ್ಲ ೧ನೇ

ರ್ಗದ ಹೆಣ್ಣುಮಕ್ಕಳಿಗೆ ಇತಿಹಾಸ, ಭೂಗೋಲ ಪ್ರಶ್ನೆಗಳನ್ನು ಮಾಡಿದರು. ಅದರಂತೆ ಆ ಬಾಲೆಯರು ಬಹು ಸಮರ್ಪಕವಾಗಿ ಉತ್ತರಕೊಟ್ಟು ಬಹು ಆನಂದಗೊಳಿಸಿದರು. ಈ ೩ನೇ ಮರ್ಯಾದೆಯು ಬಾಲೆಯರ ಬುದ್ಧಿ ಚಾತುರ್ಯದ ವಿಷಯಕ್ಕೆ. ನಮ್ಮ ಬಂಧುಗಳಿಗೆ ಹಿಂದಕ್ಕೊಮ್ಮೆ ಅರಿಕೆ ಮಾಡಿಕೊಂಡಿದ್ದೇನೆ, ಈ ವಿಷಯಕ್ಕೆ ಮತ್ತು ವರ್ಣಿಸಬೇಕೆಂಬುವಂತೆ ಇಲ್ಲ. ಇರಲಿ. ಬಳಿಕ ೧ನೇ ನಂಬರಶಾಲೆಯು ೧ನೇ ೩ನೇ ವರ್ಗದ ಇಮ್ಮಡಿ ಹೆಣ್ಣುಮಕ್ಕಳು ಸ್ತ್ರೀ ಶಿಕ್ಷಣದ ವಿಷಯದಲ್ಲಿ ಸಭಾಸಮೂಹಕ್ಕೆ ಒಳ್ಳೇ ಬಿಂಬಿಸಿ ಉತ್ತೇಜನಕೊಟ್ಟುವಂತೆ, ಅತ್ಯಾಶ್ಚರ್ಯವೂ, ಆನಂದವೂ ಆಗುವಂತೆ ಬಹಳ ಸರಸವಾಗಿ ಮಾತಾಡಿದರು. ತರುವಾಯ ಕೆಲವು ಹೆಣ್ಣುಮಕ್ಕಳು ತಮ್ಮ ಮಧುರವಾದ ಕಂಠದಿಂದಲೂ, ನಯದಿಂದಲೂ ಅಂದವಾಗಿ ಕವಿತೆಯನ್ನು ಅಂದು ಸಭಾರಂಜಿಸಿದರು. ಇಷ್ಟಾದ ಬಳಿಕ ಅಧ್ಯಕ್ಷ ಧೋರೆಗಳು— ಈ ಮಹಾಸಮಾರಂಭವನ್ನು ನೋಡಿ ನಾವೆಲ್ಲರೂ ಬಹು ಆನಂದವುಳ್ಳವರಾಗಿದ್ದೇವೆ. ಈ ಪ್ರಕಾರ ದೇಶಕ್ಕೆ ಕಲ್ಯಾಣವುಳ್ಳ ಸ್ತ್ರೀಶಿಕ್ಷಣವು, ಶಾಲಾಧಿಕಾರಿಗಳ ಬಹು ಶ್ರಮದಿಂದ, ದೇಶಹಿತದ ಪರೋಪಕಾರದ ಲವಲವಿಕೆ ಬುದ್ಧಿಯಿಂದ ಇಷ್ಟೊಂದು ಒಳ್ಳೇ ನೆಲೆಗೊಂಡದ್ದನ್ನು ನೋಡಿ ನಮಗೆ ಅತ್ಯಾಶ್ಚರ್ಯವೂ, ಆನಂದವೂ ಆಗುತ್ತದೆ. ಇದರಂತೆ ಈ ಸಭಾಸಮಾರಂಭವು ವರ್ಷ ವರ್ಷಕ್ಕೆ ಬಹು ಸಂಭ್ರಮದಿಂದ ನಡೆದು ಸ್ತ್ರೀಶಿಕ್ಷಣವು ಒಳ್ಳೇ ಉರ್ಜಿತ ಸ್ಥಿತಿಯನ್ನು ಹೊಂದುವಂತೆ ನಾವು, ದೇಶಾಭಿಮಾನಿಗಳನಿಸಿಕೊಳ್ಳುವ ಸಭಾ ಸಜ್ಜನರಾದ ತಾವು, ಒಳ್ಳೇ ಉತ್ತೇಜನದ ಆಶ್ರಯ ಕೊಡುವದು ನಮ್ಮೆಲ್ಲರಿಗೆ ಒಳ್ಳೇ ಹಿತವು, ಭೂಷಣವು ಅದೆ ಆವಶ್ಯಕರ್ತವ್ಯವಾದ ಹಾಗು ಇದುವರದ ಬಹು ಪರೋಪಕಾರಬು

ದ್ಧಿಯಿಂದ, ಉದಾರತನದಿಂದ ಯೋಗ್ಯ ಉತ್ತೇಜನ ಕೊಡುವ
ರೆಲ್ಲರ ಆಭಾರವನ್ನು ನಾವು ಬಹು ನೆನಿಸತಕ್ಕದ್ದು. ಈ ಪ್ರಕಾರ
ಸರ್ವರ ಮನದಲ್ಲಿ ಬಿಂಬಿಸುವಂತೆ ರಸಭರಿತವಾಗಿ ಸಂಭಾಷಿಸಿ
ಪುನಃ ಅಧ್ಯಕ್ಷಸ್ಥಾನದಲ್ಲಿ ವಿರಮಿಸುವವರಾದರು. ಆಮೇಲೆ ಅ
ಧ್ಯಕ್ಷದೊರೆಗಳು ಅಂತಃಕರಣದಿಂದ ಸ್ವಹಸ್ತದಿಂದ ೬ನೇ
ಇಯತ್ತೆಯಲ್ಲಿ ಪಾಸಾದ (ಈ ವರ್ಷ ಶಾಲೆಯೊಳಗೆ ಒಂದೊಂದು
ಭಂಗಾರದ ಕಾವನ್ನೂ, ಜರತಾರಿಯ ಖಣವನ್ನೂ, ಯೋಗ್ಯವಾದ ಪು
ಸ್ತಕಗಳನ್ನೂ ಉಚಿತವಾಗಿತ್ತರು. ಈ ವರ್ಷದಲ್ಲಿ ಸಹ ಒಬ್ಬ ಬಾ
ಲೆಯು ೫ನೇ ಮರ್ಯಾದೆಯಂತೆ ಅಭ್ಯಾಸಮಾಡಿ ೧ ನೇ ನಂಬ
ರು ಪಾಸಾಗಿ ಜಹಗೀರ್ದಾರ ದೊರೆಗಳವರ ಪ್ರೀತಿ ಸಂಪಾದಿಸಿದ್ದಳು.
ಉಳಿದವರಿಬ್ಬರು ೫ನೇ ಇಯತ್ತೆಯ ಬಾಲೆಯರೂ ಸಹ ೪ನೇ
ಇಯತ್ತೆಯಲ್ಲಿ ಪಾಸಾಗಿದ್ದರು. ಆ ಬಾಲೆಯರಲ್ಲಿ ಜಹಗೀರ್ದಾರರ ಪ್ರೀ
ತಿ ಸಂಪಾದಿಸಿದವಳಿಗೆ ನೇಮದ ಪ್ರಕಾರ ೨೦ ರೂಪಾಯಿ ಬೆಲೆ
ಯುಳ್ಳ ಸೀರೆಯೂ, ಖಣವೂ, ಬುಕ್ಕು ಇನಾಮವಾಗಿ ಸಿಕ್ಕಿತು. ಇದ
ಲ್ಲದೆ ಆಕೆಗೆ ೫ ರೂಪಾಯಿ ಸ್ಪೆಶಲ್ ಪ್ರೈಜು ದೊರೆಯಿತು. ಉ
ಳಿದ ೪ನೇ ಇಯತ್ತೆಯ ಬಾಲೆಯರಿಬ್ಬರಿಗೆ ಅನುಕ್ರಮದಿಂದ ೧೫
೧೨ ರೂಪಾಯಿ ಬೆಲೆಯುಳ್ಳ ಸೀರೆಯೂ ಖಣವೂ, ಬುಕ್ಕು ಇ
ನಾಮವಾಗಿ ದೊರೆಯಿತು. ಉಳಿದ ಹೆಣ್ಣುಮಕ್ಕಳಿಗೆಲ್ಲ ಖಣವೂ,
ಬುಕ್ಕುಗಳೂ ಇನಾಮವಾಗಿ ದೊರೆತವು. ತರುವಾಯ ನೆರೆದ ಸಭಾ
ಸಮೂಹಕ್ಕೆಲ್ಲಾ ಪುಷ್ಪಮಾಲೆಗಳನ್ನೂ, ಸುಗಂಧದ್ರವ್ಯವೆನಿಸಿಕೊ
ಳ್ಳುವ ಅತ್ತರ, ಗುಲಾಬನೀರನ್ನೂ ಉಚಿತವಾಗಿ ಹಂಚಿದರು. ತ
ರುವಾಯ ಶಾಲಾಧಿಕಾರಿಗಳಾದ ದೊರೆಗಳು ನೆರೆದ ಸಭಾ ಸಮೂ
ಹಕ್ಕೂ ಅಧ್ಯಕ್ಷದೊರೆಗಳಿಗೂ ಬಹು ವಿನಯದಿಂದ ಪ್ರಾರ್ಥಿಸಿಕೊಂ
ಡು ಬಹು ಆಭಾರವನ್ನು ಮಾನಿಸಿದರು. ಇಷ್ಟಾದಬಳಿಕ ಸಭಾವಿಸರ್ಜ

ನವಾಯಿತು. ಸಭಾಸಮೂಹದವರ ಆನಂದವನ್ನೂ, ಪ್ರತಿವರ್ಷಕ್ಕೆ ಬಹು ಸಂಭ್ರಮದಿಂದ ಹೆಚ್ಚುತ್ತಿರುವ ಈ ಶಿಕ್ಷಣದ ಸಂಭ್ರಮವನ್ನೂ ವರ್ಣಿಸಲಿಕ್ಕೆ ನನಗೆ ಶಬ್ದಗಳೇ ಸಿಗಲೊಲ್ಲವು. ಇನ್ನು ಈ ವಿಷಯಕ್ಕೆ ನಾನು ಈಗ ನನ್ನ ಬಂಧುಗಳಿಗೆ ಬಹು ವಿನಯದಿಂದ ಬೇಡಿಕೊಳ್ಳುವದೇನಂದರೆ– ಈ ಸಮಾರಂಭದ ವರದಿಯನ್ನೂ ಉಳಿದ ವಿಶೇಷ ಕೌತುಕವನ್ನೂ, ಇಲ್ಲಿಯ ಹೆಣ್ಣು ಮಕ್ಕಳ ಶಿಕ್ಷಣದ ಊರ್ಜಿತ ಸ್ಥಿತಿಯನ್ನೂ, ನಮ್ಮ ಧುರೀಣರಾದ ಡಿ. ಎ. ಆನಸ್ಟೈಕ್ಸರವರ ಅ. ಬಿ. ಧೋರೆಗಳ ಬಹು ಅಮೌಲ್ಯವಾದ ಶ್ರಮ ಸಾಹಸವನ್ನೂ, ಉದಾರಬುದ್ಧಿಯನ್ನೂ, ಸಭೆಯಲ್ಲಿ ಬಾಲಿಕೆಯರು ಮಾತಾಡಿದ ತಾತ್ಪರ್ಯದ ನಿಬಂಧವನ್ನೂ ವಂದಿಸ್ಯ ಪತ್ರಿಕೆಯಲ್ಲಿ ಪ್ರಕಟಿಸಬೇಕು. ಆದರೆ ೬ನೇ ೪ನೇ ಯತ್ತೆಯಲ್ಲಿ ಪಾಸಾಗಿ ಉತ್ತಮ ಪ್ರತಿಯ ಮೂಲಕ ಇನಾಮು ಪಡೆದ ಬಾಲಿಕೆಯರ ನಾಮಗಳನ್ನು ಕೆಳಗೆ ವಿವರಿಸಿದ್ದೇನೆ. ನಮ್ಮ ಬಂಧುಗಳು ಬಹಳ ಅಕ್ಕರೆಯಿಂದ ಆ ಬಾಲಿಯರ ಹಸ್ತಾಕ್ಷರಗಳನ್ನು ಕಂಡಾಕ್ಷಣಕ್ಕೇ ತಮ್ಮ ಮಕ್ಕಳಾದ ಬಾಲೆಯರನ್ನು ಕಂಡಂತೆ ಪ್ರೀತಿಪಟ್ಟು ಅವರ ಈ ಉದಾಹರಣೆಯಿಂದ ಸ್ತ್ರೀ ಶಿಕ್ಷಣದ ಲಾಭವನ್ನೂ, ಹಿತವನ್ನೂ, ಉತ್ತಮಸ್ಥಿತಿಯನ್ನೂ ವರ್ಣಿಸಿ, ಸ್ತ್ರೀ ಶಿಕ್ಷಣವನ್ನು ತಮ್ಮಿಂದಾದಷ್ಟು ಹೆಚ್ಚಿಸಿ ದೇಶೋಪಕಾರಮಾಡಬೇಕೆಂದು ನಂಬಿ ಈ ವಿಷಯವನ್ನು ಇಷ್ಟಕ್ಕೇ ಇವತ್ತೆ ಮುಗಿಸುತ್ತೇನೆ.

೬ನೇ ಯತ್ತೆಯ ಬಾಲಿಯರ ಹೆಸರುಗಳು.

೧ ಬಾಳಬಾಯಿ ಪುರೋಹಿತ   ೪ ಮಲ್ಲಪ್ಪಾ ತೆಂಗಿನಕಾಯಿ
೨ ರಾಜವ್ವಾ ಸಪ್ಪರಿಗಿ   ೫ ವೀರವ್ವಾ ಬಿಂಕ್ಷವರ
೩ ಭೀಮವ್ವಾ ಕುಂಬಾರ

೪ನೇ ಇಯತ್ತೆಯಲ್ಲಿ ಪಾಸಾದ ಬಾಲಿಕೆಯರು

೧ ನರಸೂಬಾಯಿ ಬೆಳಗಾವಿ (೩೮ ರೂ. ಬಾಪಣ್ಣ ಪ್ರೈಜು ಪಡೆದವಳು
೨ ತುಳಸಾಬಾಯಿ ಜಹಾಗೀರದಾರ (೧೫ ರೂ. ಸ್ಕಾಲರ್ ಪ್ರೈಜ
೩ ಚಂದ್ರಾಬಾಯಿ ಪಿ ತ್ರಿಕೋಟಿ (೧೨ ರೂ. ಸ್ಕಾ. ಪ್ರಾ.
೪ ಚಂದವ್ವಾ ವಿದ್ಯಾಮಂದಿರದಿಂದ } ಶಿವಾನಂದಾಚಾರ್ಯ ಪಾಠಶಾಲೆಯ
೫ ... ೩೪|೧೦|೬೩ ...

ಮುಂದೆ ಸಾಗುವದು

—o—

Correspondence.

ಪತ್ರವ್ಯವಹಾರವು.

ರಾವಸಾಹೇಬ ಕಂನಡ ಶಾಲಾಪತ್ರಿಕದ ಎಡಿಟರ ಸಾಹೇಬರವರ ಸಂನಿಧಿಗೆ———

ವಿನಂತಿ ವಿಶೇಷ— ಅಯ್ಯಾ? ಪ್ರಿಯ ಬಂಧುಗಳೇ! ಜ್ಞಾನ ಸಂಪಾದನೆಯು ಎಲ್ಲ ಸಾಧನೆಗಳಲ್ಲಿ ಒಡ, ಒಡೆಯುವ ಉಪಾಯಗಳು ಮುಖ್ಯವಾದವುಗಳೆಂದು, ವಿದ್ವಾಂಸರು ಒಪ್ಪಿಕೊಳ್ಳಬಹುದು. ಈ ಸಾಧನೆಗಳನ್ನು ಪಡೆದುಕೊಳ್ಳುವದಕ್ಕೂ, ಕನ್ನಡ ಭಾಷೆಯನ್ನು ತಿದ್ದುವದಕ್ಕೂ, ನಮ್ಮ ಶಾಲಾಭ್ಯಾಸಗಳಲ್ಲಿ ವ್ಯಾಕರಣ ವಿಷಯವು ಮುಖ್ಯವಾದದ್ದಾಗಿರುತ್ತದೆ. ಈ ವ್ಯಾಕರಣ ಶಾಸ್ತ್ರವನ್ನು ಉದಾಹರಣೆಗಳಿಂದಲೇ ವಿದ್ಯಾರ್ಥಿಗಳಿಗೆ ಕಲಿಸತಕ್ಕದ್ದು ಮೇಲಾದ ಪದ್ಧತಿಯೆಂ ಎಣಿಸಲ್ಪಡುತ್ತದೆ.

ಗ್ರಂಥದ ಮೇಲಿಂದ ವ್ಯಾಕರಣವನ್ನು ಮಾಡಿಸುವ

ಗಿನ ಮಾದರಿಯು ಬಹಳ ದಿವಸಗಳಿಂದ ನಡೆಯುತ್ತಿದ್ದವು. ಈ ರೀತಿಯಿಂದ ವಿದ್ಯಾರ್ಥಿಗಳಿಗೆ ಶಾಲಾವ್ಯಾಕರಣದ ಮೊದಲಿಗಿರುವ ಒಂದೆರಡು ಖಂಡಗಳ ತಿಳುವಳಿಕೆಯಾದರೂ, ನೆಟ್ಟಗಾಗದೆ, ಬರೆಯುವ ಕೆಲಸಕ್ಕೆ ಅವಶ್ಯವಾದ ವಾಕ್ಯಖಂಡದ ಜ್ಞಾನವು ಎಷ್ಟು ಮಟ್ಟಿಗೂ ಗೊತ್ತಾಗುತ್ತಿಲ್ಲ. ಈಗಿನ ಪದ್ಧತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆಯನ್ನು ಮಾಡಿ, ವಾಕ್ಯಖಂಡದಲ್ಲಿರುವ ನಿಯಮಗಳನ್ನು ಹೆಚ್ಚಿಗೆ ಉಪಯೋಗ ಮಾಡುವದರಿಂದ ಶಾಲಾ ವ್ಯಾಕರಣದ ನಿಯಮಗಳು ಮನಸ್ಸಿನಲ್ಲಿ ಚೆನ್ನಾಗಿ ಬಿಂಬಿಸಿ, ವ್ಯಾಕರಣ ಕಲಿಸುವ ಸಕಲ ಹೇತುಗಳು ಕೊನೆಗಾಣುವವೆಂಬ ಆಶೆಯಿಂದ ಕೆಳಗೆ ಉಲ್ಲೇಖಿಸಿದ ವಾಕ್ಯಪಾಠಗಳನ್ನು ತಮ್ಮ ಸನ್ನಿಧಿಗೆ ಅರ್ಪಿಸಿದ್ದೇನೆ. ಅವುಗಳನ್ನು ಸ್ವೀಕರಿಸುವದೂ, ಇಲ್ಲವೆ ತಿರಸ್ಕರಿಸುವದೂ, ಪ್ರಭುಗಳ ಚಿತ್ತಾಧೀನವು.

ಶಬ್ದ ವ್ಯುತ್ಪತ್ತಿ ವಿಷಯವು ಈಗಿನ ವ್ಯಾಕರಣ ಮಾದರಿ ಪದ್ಧತಿಯಲ್ಲಿ ಬೇರೆ ವಿಷಯವೆಂದು ಎಣಿಸಲ್ಪಟ್ಟಿದೆ. ನಾನು ಆ ಶಬ್ದ ವ್ಯುತ್ಪತ್ತಿ ವಿಷಯವನ್ನು ವ್ಯಾಕರಣ ಮಾಡಕ್ಕೆ ಹೊಸ ಮಾದರಿಯಲ್ಲಿಯೇ ಸೇರಿಸಿಕೊಂಡಿದ್ದೇನೆ.

“ದಶಮುಖನು ಒಂದೊಂದು ವರುಷದ ಕಡೇದಿನದಲ್ಲಿ ತನ್ನ ಒಂದೊಂದು ತಲೆಯನ್ನು ಕಡಿದು, ಅಗ್ನಿಯಲ್ಲಿ ಹೋಮವನ್ನು ಮಾಡುತ್ತ, ಹೀಗೆ ಒಂಭತ್ತು ತಲೆಗಳನ್ನು ಕಡಿದು, ಅಗ್ನಿಯಲ್ಲಿ ಒಂಭತ್ತು ವರುಷ ಹೋಮವನ್ನು ಮಾಡಿ, ಹತ್ತನೇ ವರುಷದ ಕಡೆಯಲ್ಲಿ ಹತ್ತನೇ ತಲೆಯನ್ನು ಕಡಿಯುವದಕ್ಕೆ ಪ್ರಯತ್ನವನ್ನು ಮಾಡಲು, ಅವನ ಬಳಿಗೆ ಬ್ರಹ್ಮದೇವನು ಬಂದನು.”

೩ನೇ ದರ್ಜೆಯಲ್ಲಿ ಪಾಸಾದ ಬಾಲಿಕೆಯರು

೧ ನರಸೂಬಾಯಿ ಬೆಳಗಾವಿ (ಫೀ. ರೂ. ಜಾನರ್ನ್ ಪ್ರಾಯಿ ಜಸದೇಶಕ
೨ ಹ ಳಸಾಬಾಯಿ ಜಮಖಂಡಿ (೧೫ರೂ. ಸ್ಕಾಲರ್ ಶಿಪ್ ಪ್ರಾಯಿ
೩ ಚಂದ್ರಾಬಾಯಿ ಪಿ ತ್ರಿಕೋಟಿ (೧೦ರೂ. ಸ್ಟೈ. ಪ್ರಾ.
೪ ಸರಮಾಬಾ ವಿದ್ಯಾಮಂದಿರಯಂ) ಶಿವಾನಂದಾಚಾರ್ಯ ಪಾಜಪೇಂ
ತಾ. ೨೫|೧೦|೧೯೩೩ ಸವಿ (

ಮುಂದೆ ಸಾಗುವದು

— o —

Correspondence.
ಪತ್ರ ವ್ಯವಹಾರವು.

ರಾವಸಾಹೇಬ ಕಂನಡ ಶಾಲಾಪತ್ರಿಕದ ಸಂಪಾ
ಸಾಹೇಬರವರ ಸಂನಿಧಿಗೆ———

ವಿನಂತಿ ವಿಶೇಷ— ಅಯ್ಯಾ? ಪ್ರಯತ್ನ ಫಲಗಳೇ! ಜ್ಞಾನ ಸಂಪಾದನೆಯ ಎಲ್ಲ ಸಾಧನೆಗಳಲ್ಲಿ ಓದು, ಬರೆಯು ಉಪಾಯಗಳು ಮುಖ್ಯವಾದವುಗಳೆಂದು, ವಿದ್ವಾಂಸರು ಒಪ್ಪಿಕೊಳ್ಳಬಹುದು. ಈ ಸಾಧನೆಗಳನ್ನು ಪಡೆದುಕೊಳ್ಳುವದಕ್ಕೂ ಕನ್ನಡ ಭಾಷೆಯನ್ನು ತಿದ್ದುವದಕ್ಕೂ, ನಮ್ಮ ಶಾಲಾಭ್ಯಾಸಗಳಲ್ಲಿ ವ್ಯಾಕರಣ ವಿಷಯವು ಮುಖ್ಯವಾದದ್ದಾಗಿರುತ್ತದೆ ಈ ವ್ಯಾಕರಣ ಶಾಸ್ತ್ರವನ್ನು ಉದಾಹರಣೆಗಳಿಂದಲೇ ವಿದ್ಯಾರ್ಥಿಗಳಿಗೆ ಕಲಿಸತಕ್ಕದ್ದು ಮೇಲಾದ ಪದ್ಧತಿ ಯೆಂದು ಎಣಿಸಲ್ಪಡುತ್ತದೆ.

ಗ್ರಂಥದ ಮೇಲಿಂದ ವ್ಯಾಕರಣವನ್ನು ಮಾಡಿಸುವ

...ನ ಮಾದರಿಯು ಬಹು ದಿವಸಗಳಿಂದ ನಡೆಯುತ್ತ ಬಂದಿದ್ದರೂ, ಈ ರೀತಿಯಿಂದ ವಿದ್ಯಾರ್ಥಿಗಳಿಗೆ ಶಾಲಾವ್ಯಾಕರಣದ ಮೊದಲಿಗಿರುವ ಒಂದೆರಡು ಖಂಡಗಳ ತಿಳುವಳಿಕೆಯಾದರೂ, ನೆಟ್ಟಗಾಗವು, ಬರಿಯುವ ಕೆಲಸಕ್ಕೆ ಅವಶ್ಯವಾದ ವಾಕ್ಯಖಂಡದ ಜ್ಞಾನವು ಎಷ್ಟು ಮಟ್ಟಿಗೂ ಗೊತ್ತಾಗುವದಿಲ್ಲ. ಈಗಿನ ಪದ್ಧತಿಯಲ್ಲಿ ಸ್ವಲ್ಪ ಕೆಟ್ಟ ಕಡೆಯನ್ನು ಮಾಡಿ, ವಾಕ್ಯಖಂಡದಲ್ಲಿರುವ ನಿಯಮಗಳನ್ನು ಹೆಚ್ಚಿಗೆ ಉಪಯೋಗ ಮಾಡುವದರಿಂದ ಶಾಲಾ ವ್ಯಾಕರಣದ ನೇಮಗಳು ಮನಸ್ಸಿನಲ್ಲಿ ಚನ್ನಾಗಿ ಬಿಂಬಿಸಿ, ವ್ಯಾಕರಣ ಕಲಿಸುವ ಸಕಲ ಹೇತುಗಳು ಕೊನೆಗಾಣುವವೆಂಬ ಆಶಯದಿಂದ ಕೆಳಗೆ ಉಲ್ಲೇಖಿಸಿದ ವಾಕ್ಯಖಂಡಗಳನ್ನು ತಮ್ಮ ಸನ್ನಿಧಿಗೆ ಅರ್ಪಿಸಿದ್ದೇನೆ. ಅವುಗಳನ್ನು ಸ್ವೀಕರಿಸುವದೂ, ಇಲ್ಲವೆ ತಿರಸ್ಕರಿಸುವದೂ, ಪ್ರಭುಗಳ ಚಿತ್ತಾಧೀನವು.

ಶಬ್ದ ವ್ಯುತ್ಪತ್ತಿ ವಿಷಯವು ಈಗಿನ ವ್ಯಾಕರಣ ಮಾದರಿಯ ಪದ್ಧತಿಯಲ್ಲಿ ಬೇರೆ ವಿಷಯವೆಂದು ಎಣಿಸಲ್ಪಟ್ಟಿದೆ. ನಾನು ಆ ಶಬ್ದ ವ್ಯುತ್ಪತ್ತಿ ವಿಷಯವನ್ನು ವ್ಯಾಕರಣ ಮಾದಕ್ಕೆ ಹೊಸ ಮಾದರಿಯಲ್ಲಿಯೇ ಸೇರಿಸಿಕೊಂಡಿದ್ದೇನೆ.

“ದಶಮುಖನು ಒಂದೊಂದು ವರುಷದ ಕಡೇದಿವಸದಲ್ಲಿ ತನ್ನ ಒಂದೊಂದು ತಲೆಯನ್ನು ಕಡಿದು, ಅಗ್ನಿಯಲ್ಲಿ ಹೋಮವನ್ನು ಮಾಡುತ್ತಾ, ಹೀಗೆ ಒಂಭತ್ತು ತಲೆಗಳನ್ನು ಕಡಿದು, ಅಗ್ನಿಯಲ್ಲಿ ಒಂಭತ್ತು ವರುಷ ಹೋಮವನ್ನು ಮಾಡಿ, ಹತ್ತನೇ ವರುಷದ ಕಡೆಯಲ್ಲಿ ಹತ್ತನೇ ತಲೆಯನ್ನು ಕಡಿಯುವದಕ್ಕೆ ಪ್ರಯತ್ನವನ್ನು ಮಾಡಲು, ಅವನ ಬಳಿಗೆ ಬ್ರಹ್ಮದೇವನು ಬಂದನು.”

ಈ ಮೇಲಿನ ವಾಕ್ಯದಲ್ಲಿ "ದಶಮುಖನು ಒಂದೊಂದು ವರುಷದ ಕಡೇ ದಿನದಲ್ಲಿ ತನ್ನ ಒಂದೊಂದು ತಲೆಯನ್ನು ಕಡಿದು," ಎಂಬುದೂ, "ಅಗ್ನಿಯಲ್ಲಿ ಹೋಮವನ್ನು ಮಾಡುತ್ತಾ," ಎಂಬುದೂ, "ಹೀಗೆ ಒಂಭತ್ತು ತಲೆಗಳನ್ನು ಕಡಿದು," ಎಂಬುದೂ, "ಅಗ್ನಿಯಲ್ಲಿ ಒಂಭತ್ತು ವರುಷ ಹೋಮವನ್ನು ಮಾಡಿ," ಎಂಬುದೂ, "ಹತ್ತನೇ ವರುಷದ ಕಡೆಯಲ್ಲಿ ಹತ್ತನೇ ತಲೆಯನ್ನು ಕಡಿಯುವದಕ್ಕೆ ಪ್ರಯತ್ನವನ್ನು ಮಾಡಲು" ಎಂಬುದೂ, ಇವು ಐದು ಆತನ ಬಳಿಗೆ ಬ್ರಹ್ಮದೇವನು ಬಂದನು. ಎಂಬೀ ಪ್ರಧಾನ ವಾಕ್ಯಕ್ಕೆ ಅಪೂರ್ಣ ಉಪವಾಕ್ಯಗಳು.

ಈ ಪ್ರಧಾನ ವಾಕ್ಯದಲ್ಲಿ ಬ್ರಹ್ಮನು "ಕರ್ತೃ" ಬಂದನು "ಕ್ರಿಯಾಪದ" ಅಕರ್ಮಕ ಕರ್ತರೀಪ್ರಯೋಗ.

"ದಶಮುಖನು ಒಂದೊಂದು ವರುಷದ ಕಡೆಯಿನದಲ್ಲಿ ತನ್ನ ಒಂದೊಂದು ತಲೆಯನ್ನು ಕಡಿದು."

ಈ ಅಪೂರ್ಣ ಉಪವಾಕ್ಯದಲ್ಲಿ ಕಡಿದು ಎಂಬ ಕ್ರಿಯೆಗೆ ದಶಮುಖನು "ಕರ್ತೃ" ವೂ, ತಲೆಯನ್ನು "ಕರ್ಮವೂ" ಆಗಿ, ಸಕರ್ಮಕ ಕರ್ತರಿಪ್ರಯೋಗ ವಾಗುತ್ತದೆ.

ದಶಮುಖನು— ದಶಮುಖ, ಪೂರ್ವಪದ ಎರಡೂ ಶಬ್ದಗಳು ತತ್ಸಮಶಬ್ದ ಜಾತೀಭೇದದಿಂದ ಪೂರ್ಣ ಸಮಾಸ, ಸಮಾಸಿಕರೂಪ ಅನ್ಯಪದ ಪ್ರಾಧಾನ್ಯ ವಿಗ್ರಹಕಾರಣ ಬಹುವ್ರಿಹೀ ಸಮಾಸ, ಸಮಾಸಿಕನಾಮ, ಅಕಾರಾಂತ, ಪುಲ್ಲಿಂಗ, ಪ್ರಥಮೆಯ, ಏಕವಚನ, ಪ್ರಥಮಾ ವಿಭಕ್ತಿಯ ಕಾರಕಾರ್ಥ ಕರ್ತೃ, ಕಡಿದು ಈ ಸಕರ್ಮ

ಈ ಧಾತುವಿನ ಕರ್ತೃ, "ದಶಮಾಂಖ" ಪ್ರಕೃತಿ "ಉ" ಪ್ರತ್ಯಯ "ಅನ್" ಆಗಮ——

ಒಂದೊಂದು—— ಸಂಖ್ಯಾವಾಚಕ, ಸಮಾನಾರ್ಥಕ, ಸಮಾಸಿಕ, ಸರ್ವನಾಮ, ನಾಮ. ಸಮ. ಭಿಂಠಾರ, ಒಂದು + ಒಂದು = ಒಂದೊಂದು. ಕನ್ನಡ ಸ್ವರಸಂಧಿ ಇದರ ವಿಶೇಷ ಮರುಷ, ಅಥವಾ ಇದು ಮುಂಪದ ವಿಶೇಷಣ.

ವರುಷದ—— ವರ್ಷ ಈ ತತ್ಸಮಶಬ್ದದಿಂದ ಹುಟ್ಟಿದ ತದ್ಭವಶಬ್ದ, (ವೃಷ್) ಈ ಧಾತು ವಿನಿಂದ ಸಾಧಿತರೂಪ, ಕಾಲವಾಚಿನಾಮ, ಅಕಾರಾಂತ ನಪುಂಸಕಲಿಂಗ, ಷಷ್ಠೀ ಏಕವಚನ, ಈ ವಿಭಕ್ತಿಯು ಕಾಲಕಾರ್ಥ ಸಂಬಂಧ. ಇದು ಸಂಬಂಧ ಕಡೇದಿನದಲ್ಲಿ ಇದರ ಕಡೆಗೆ, ವರುಷ ಪ್ರಕೃತಿ ಅ ಪ್ರತ್ಯಯ ದಕಾರಾಗಮ.

ಕಡೇದಿನದಲ್ಲಿ —— ಕಡೇದಿನ—ಕಡೇ ದೇಶಿಶಬ್ದ, ದಿನ ತತ್ಸಮಶಬ್ದ, ಜಾತಿಭೇದದಿಂದ ಅರಿಸಮಾಸ, ಪೂರ್ವಪದ ಪ್ರಾಧಾನ್ಯ ಆಗಲಾಗಿ ಅವ್ಯಯೀಭಾವಸಮಾಸ, ಸಮಾಸಿಕನಾಮ, ಅಕಾರಾಂತ ನಪುಂಸಕ ಲಿಂಗ, ಸಪ್ತಮೀ ಏಕವಚನ, ಇದರ ಕಾರಕಾರ್ಥ ಸ್ಥಾನ ಕಡದು ಈ ಕ್ರಿಯಾವ್ಯಾಪಾರದ ಸ್ಥಾನ, ಕಡೇದಿನ + ದ + ಅಲ್ಲಿ = ಕಡೇದಿನದಲ್ಲಿ.

ತನ್ನ—— ತಾನು, ದೇಶಿಶಬ್ದ, ಸಿದ್ಧರೂಪ, ಆತ್ಮಾರ್ಥ

ಕೆ ಸರ್ವನಾಮ, ಪುಲ್ಲಿಂಗ, ಷಷ್ಠೀ ಏಕವಚನ ಇದರ ಕಾರಕಾರ್ಥ ಸಂಬಂಧ, ಇದರ ಸಂಬಂಧ ತಿಳಿಯಕೂಡಗೆ, ತಾನು ಇದರ ಮೇಲೆ ಷಷ್ಠೀ ವಿಭಕ್ತಿಯು ಅ ಪ್ರತ್ಯಯ ಬಂದಿರಲು, ತನ್ ಆಗಿ ಅ ಪ್ರತ್ಯಯ ಕೂಡಿ ತನ್ನ ಆಯಿತು.

ಹಿಂಗೋಣ್ದು —— ಎರಡನೇ ಶಬ್ದದಂತೆ—

ತಲೆಯನ್ನು —— ತಲೆ ಎಂಬ ಶಬ್ದ, ಸಿದ್ಧರೂಪ, ರೂಢನಾಮ, ಏಕಾರಾಂತ, ನಪುಂಸಕಲಿಂಗ, ದ್ವಿತೀಯಾ, ಏಕವಚನ, ಈ ವಿಭಕ್ತಿಯು ಕಾರಕಾರ್ಥ ಕರ್ಮ. ತಲೆ+ಯ್+ಅನ್ನು = ತಲೆಯನ್ನು.

ಕಡಿದು —— ಕಡಿ ಈ ಸಕರ್ಮಕ ಧಾತುವಿನ ಭೂತನ್ಯೂನ, ಕಡಿ ಈ ಸಕರ್ಮಕ ಇಕಾರಾಂತ ಧಾತುವಿನ ಮೇಲೆ ಭೂತನ್ಯೂನದ "ದು" ಪ್ರತ್ಯಯ ಹತ್ತಿ ಕಡಿದು ಭೂತನ್ಯೂನವಾಯಿತು.

(ಮುಂದಕ್ಕೆ ಸಾಗವದು)

ಹುಬ್ಬಳ್ಳಿ ತಾಲೂಕ	ಪಿಟ್ಟಲ ರಾಮಚಂದ್ರ ಬೆಟಗೇರಿ
ಸುಸ್ತ್ರೂ	ಸ. ಅ. ಮಾಸ್ತರ ಶಾಲಾ ನಂ.
ತಾ. ೧೦।೧೦।೧೮೮೩	ರಂಗೋ ಕೃಷ್ಣ ಕಳಸಕರ ಹ.
	ಮು. ಹುಬ್ಬಳ್ಳಿ ತಾ. ನೂ.

"ಶಾಲಾಸಂಬಂಧ ಪಹಸ್ತಪ್ರಳ್ಳ ಸಂಗತಿಗಳು."

ಬಂಕಾಪುರ ತಾಲೂಕಿನೊಳಗೆ ಬಂಕಾಪುರದಿಂದ ಎಂಭತ್ತು ಇ
ಪ್ಪ ಮೈಲಿನಮೇಲೆ ಹುಲಗೂರವೆಂಬದೊಂದು ಗ್ರಾಮವುಂಟು ಇ
ಲ್ಲಿ ಪ್ರತಿವರ್ಷ ಮಾಘಬಹುಳ ಪೌರ್ಣಿಮೆಯಂದು ಐದಾರುಸಾವಿರಕ್ಕೆ
ಹಜರತಶಹಾ ಖಾದರಿಯವರ ಜಾತ್ರೆಯಾಗುತ್ತದೆ. ಮಹೋ
ತ್ಸವಕ್ಕೆ ಬಹಳಜನರು ಕೂಡುವರಲ್ಲದೆ ವ್ಯಾಪಾರವು ಅತಿ
ಶಯವೇ ಆಗುತ್ತದೆ. ಈ ಸ್ವಾಮಿಯವರ ಸಂಬಂಧ ಇತಿಹಾ
ಸದ ಸಂಗತಿಗಳು ಸಹಾಪಿಸ್ವಾರ ಪೂರ್ವಕ ಉಂಟು. ಈ ವಿ
ಷಯವನ್ನು ಅನುಕೂಲದಂತೆ ಎರಡನೇ ಸಾರೆ ಭೆಟ್ಟಿಯಾಗು
ವೆನು.

ಈ ಊರಲ್ಲಿ ಸರಕಾರಿ ಶಾಲೆಯು ಸ್ಥಾಪನವಾಗಿ ಹದಿನಂ
ವರ್ಷಗಳಾದವು ಇಷ್ಟುಕಾಲಾಂತರದಿಂದ ಎಷ್ಟೋಮಂದಿ
ಮಾಸ್ತರರು ಆಗಿಹೋದರು. ಆದರೆ ಈಗಿನ ಹಾಗೆ ಯಾರಕಾ
ಲಕ್ಕೂ ಈ ರೀತಿ ಶಾಲೆಯು ಊರ್ಜಿತಸ್ಥಿತಿಗೆ ಬಂದಿದ್ದಿಲ್ಲ
ದಿನದಿನಕ್ಕೆ ಹುಡುಗರ ಸಂಖ್ಯೆಯೂ ಅಭ್ಯಾಸವೂ ವೃದ್ಧಿಸುತ್ತ ನ
ಡದದೆ. ಇದು ವಿದ್ಯಾಖಾತೆಯ ಮೇಲಾಧಿಕಾರಿಗಳಿಗೂ ಸಾಂ
ಪ್ರತ ಕಾಲದ ಮುಖ್ಯೋಪಾಧ್ಯಾಯರಾದ ಸಂತೆಗೆರಾಯರಿಗೂ ಸ್ತು
ತ್ಯಸ್ತುತವಾದ ಸಂಗತಿಯೇ ನಮ್ಮ ಊರಿಗೆ ಇಂಥ ಸಹಾಸವು ಕ್ಕ
ಮಾಸ್ತರನ್ನು ನೇಮಿಸಿದ ಕಾರಣ ನಾವು ಈ ಗ್ರಾಮವಾಸಿಕ
ರು ಸರಕಾರದವರ ಉಪಕಾರದಲ್ಲಿ ಸ್ಥಿತರಾಗಿದ್ದೇವೆ.
ಶಾಲೆಯು ಊರ್ಜಿತಸ್ಥಿತಿಯು ವಿಷಯವಾಗಿ ಇನ್ನು ಎಷ್ಟೋ
ಗತಿಗಳುಂಟು. ಅವುಗಳನೆಲ್ಲಾ ವಿಸ್ತರಿಸಿದರೆ ಪಾಠ ಮತಿ
ರಿಯಾಂತೆ ಕಾಣುವದು. ಕಾರಣ ಮಸ್ತುವಾಗ ನಿರೀಕ್ಷೆದ ವಿ
ದ್ಯಾರ್ಥಿಗಳೂ ವಿದ್ಯಾಲಯದ ಸ್ಥಳ ಸಂಕೋಚಕ್ಕೆ ಅಸ್ತ್ರಯ

ಕೊಟ್ಟ ಉದಾರ ಗೃಹಸ್ಥರ ವಿಷಯವು ಸ್ವಲ್ಪದರಲ್ಲಿ ಬರೆಯುತ್ತೇನೆ. ಈ ಸಂತಿಂಗರಾಯರು ಬಂದಂದಿನಿಂದ ಪಾಠಶಾಲಾ ವಾರ್ಷಿಕ ಪರೀಕ್ಷೆಯು ಅತ್ಯುತ್ತಮವಾಗುವದಲ್ಲದೆ ಶಾಲೆನೋಡಲಿಕ್ಕೆ ಬಂದಂಥಾ ಅಧಿಕಾರಿಗಳು ವ್ಹಿಜಿಟರ್ಸ ಬುಕ್ಕಿನಲ್ಲಿ ಒಳ್ಳೇ ಶರಾಗಳನ್ನು ಬರೆದಿದ್ದಾರೆ. ಇದರಂತೆ ಈ ವರ್ಷದ ಪರೀಕ್ಷೆಯಾದರೂ ಚನ್ನಾಗಿ ಆಯಿತು. ಪರೀಕ್ಷೆಯು ಮುಗಿದಬಳಿಕ್ಕೆ ಆನಂದ ಭರಿತರಾಗಿ ಗ್ರಾಮಸ್ಥರು ಪಾಸಾದ ಅಭ್ಯಾಸಿಗಳಿಗೆ ಇನಾಮು ರೂಪವಾಗಿ ಪುಸ್ತಕಗಳನ್ನೂ ಎಲ್ಲರಿಗೂ ಮಿಠಾಯಿಗಳನ್ನೂ ಕೊಟ್ಟರು. ಸಾಂಪ್ರತ ಅಭ್ಯಾಸಿಗಳ ಸಂಖ್ಯೆಯು ಅತಿಶಯವೇ ಬೆಳೆದದರಿಂದ ಕೂಡ್ರಲಿಕ್ಕೆ ಜಾಗೆ ಸಾಲುವದು ಇಲ್ಲ. ಸರಕಾರದಿಂದ ಕಟ್ಟಲ್ಪಟ್ಟ ಇಮಾರತಿಯಲ್ಲಿಯೂ ಬೇರೆ ಎರಡೂ ಗುಡಿಗಳಲ್ಲಿಯೂ ಶಾಲೆ ಹಾಕುವದುಂಟು. ತಾ. ೯।೩।೮೩ ಇಸವಿ ದಿವಸ ರಾವಸಾಹೇಬ ಸಾಹಸ ಸಾಗರ ಗೋವಿಂದರಾವ ಬಾಳಾಜಿ ಗೋಖಲೆ ಮಾಮಲೇದಾರ ತಾಲೂಕ ಬಂಕಾಪೂರ ಇವರ ಸ್ವಾರಿ ಈ ಊರಿಗೆ ಬಂದಾಗ್ಗೆ ಗ್ರಾಮಸ್ಥರು ಮೇಲೆ ವಿಧಿಸಲ್ಪಟ್ಟ ಸ್ಥಳಸಂಕೋಚ ಮೂಲಕ ಆಗುವ ತೊಂದರೆಗಳನ್ನು ಕುರಿತು ವಿನಂತಿಪಡಿಸಲಾಗಿ.

ಮಾಮಲೇದಾರ ಸಾಹೇಬರು ತತ್ಕ್ಷಣ ಎಲ್ಲಾ ಸ್ಕೂಲಕಮೀಟಿ ಮೆಂಬರರನ್ನೂ ಗ್ರಾಮಸ್ಥರನ್ನೂ ಬೇರೆ ಕೆಲವು ಗೃಹಸ್ಥರನ್ನೂ ಕರೆಸಿಕೊಂಡು ವಿಚಾರಿಸಲು ಸ್ಕೂಲಕಮೀಟಿ ಮೆಂಬರರಲ್ಲಿ ಒಬ್ಬ ಉದಾರ ಸದ್ಗೃಹಸ್ಥರಾದ ರುದ್ರಪ್ಪ ಅಣ್ಣಪ್ಪ (ಅತ್ತಿಗೇರಿ) ಇವರನಾಲು ಎದಭಾಗಸ್ಥರು ತಮ್ಮ ಸ್ವಜಾಗೆ ದಕ್ಷಿಣೋತ್ತರ ಮಾಳ (೧೬) ಪೂರ್ವ ಪಶ್ಚಿಮ ಮಾಳಾ (೨೪)

...ತುಚ್ಚಾರಸಮುಳ (೩೮೪) ಇಷ್ಟು ಸಾಲಿ ಹಾಗೆ ಇಮಾರತು ಬೇ
ಕಾದಕ್ಕೆ ತಮ್ಮ ಸ್ವಸಂತೋಷದಿಂದ ಕೊಟ್ಟ ಬಗ್ಗೆ ಮಾಮಲೇದಾ
ಸಾ. ರವರ ಸಮಕ್ಷ ಲೇಖಿ ಕಬುಲಾಯತಿ ಬರಕೊಟ್ಟಿ
ದ್ದಾರೆ. ಇವರು ಈ ದೇಶದ ಬಾಂಧವರ ಹಿತಾಪೇಕ್ಷಿತ ಉ
ದಾರತ್ವದ ಬಗ್ಗೆ ಈ ಗ್ರಾಮವಾಸಿಕರೂ, ಈ ಮಠ ಅಭ್ಯಾಸಿ
ಳೂ ವಿದ್ಯಾಖಾತೆ ಅಧಿಕಾರಸ್ಥರೂ ಅವರ ಉಪಕಾರದ ಬಗ್ಗೆ
ಅವರ ಕಲ್ಯಾಣಕ್ಕೋಸ್ಕರವಾಗಿ ಈಶನಂ ಲೇಖಾಗಿ ಪ್ರಾರ್ಥಿಸುವ
ರು ಸಮರ್ಥರಾಗಲಿ. ಮೇಲೆ ವಿವರಿಸಲ್ಪಟ್ಟ ಸ್ಥಳದಲ್ಲಿ ಇಮಾರ
ತು ಬೆಳಿಸುವ ಖರ್ಚಿಗಾಗಿ ಇದೇ ವರ್ಷದ ಎಪ್ರೀಲ ತಿಂಗಳ
ಲ್ಲಿ ನಡಿಯುವ ಎರಡನೇ ಹಪ್ತೇದಕಾಲಕ್ಕೆ ವರ ಬಂದು ಇಸ
ವಿ.ನಿಂದ ಡೀಡಅರ್ಜಿಯಂತೆ ವರ್ಗಣೀ ವಸೂಲು ಮಾಡಲಿಕ್ಕೆ ರಾ.
ಸಾ. ರವರು ಗ್ರಾಮಸ್ಥರಿಗೆ ತಾಕೀದು ಕೊಟ್ಟಿದ್ದಾರೆ. ಈ ಮೋ
ರಿಗೆ ಎಲ್ಲಾ ಮಾಮಲೇದಾರರು ಮಾಸ್ತರಸಾಹೇಬರವರು ಕಮಿಟಿ
ಟ ಮೆಂಬರಸಾಹೇಬರವರೂ ಪೇರೆಸದ್ಗೃಹಸ್ಥರೂ ಎತ್ತೆತ್ತಿ
ವಿದ್ಯಾಭ್ಯುಗಿಗೆ ತುಂಬಾ ಇಂಬಾದ ಹಂಬಲವನ್ನು ಹಿಂಬಾಲಿ
ಸುವ ಮನಸ್ಸು ಎಲ್ಲರಿಗೂ ಮಾಡಿ ಈ ಶಿಕ್ಷಣಕ್ಕೆ ಕಾಲಾ
ನುಕಾಲದಲ್ಲಿಯೂ ಪ್ರಾರ್ಥಿಸುತ್ತೇನೆ. ಮ.ರಾ. ಕ್ಷೇ. ಇ. ವಿ.

ಮುಕ್ಕಾಂ ಹುಲಗೂರ ತಾ.	ಶಿವಾಜಿ ಲಿಂಗೋ ದೇವಗಿರಿ ತಾ
ಬಂಕಾಪೂರ ಜಿ. ಧಾರವಾಡ	ಲಾವುಜಕೂರ ಕಮಿಟಿದಾರ.

—o—

ರಾ. ಸಾ. ಕನ್ನಡ ಶಾಲಾಪತ್ರಿಕದ ಎಡೀಟರವರಸನ್ನಿಧಿಗೆ.
ವಿ. ವಿ. ಅಯ್ಯಾ ಎಡೀಟರ ಮಹಾರಾಯರೇ ಕೆಳಗೆ ಬ
ರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಕರಕಮಲದಲ್ಲರ್ಪಿ
ಸುವ ಸರಸವಾದ ಶಾಲಾಪತ್ರಿಕದಲ್ಲಿ ಬಿಟ್ಟು ಹಾಕಿ ಪ್ರಸಿದ್ಧ

ಕೊಟ್ಟ ಉದಾರ ಗೃಹಸ್ಥರ ವಿಷಯವೂ ಸ್ವಲ್ಪದರಲ್ಲಿ ತಿಳಿಸುತ್ತೇನೆ. ಈ ನರಸಿಂಗರಾಯರು ಬಂದಂದಿನಿಂದ ವರ್ಷ ವರ್ಷ ವಾರ್ಷಿಕ ಪರೀಕ್ಷೆಯು ಅತ್ಯುತ್ತಮವಾಗುವದಲ್ಲದೆ ಶಾಲೆನೋಡಲಿಕ್ಕೆ ಬಂದಂಥಾ ಅಧಿಕಾರಿಗಳು ವ್ಹಿಜಿಟರ್ಸ ಬುಕ್ಕಿನಲ್ಲಿ ಒಳ್ಳೇ ಶೇರಾಗಳನ್ನು ಬರೆದಿದ್ದಾರೆ. ಇದರಂತೆ ಈ ವರ್ಷದ ಪರೀಕ್ಷೆಯಾದರೂ ಚನ್ನಾಗಿ ಆಯಿತು. ಪರೀಕ್ಷೆಯು ಸಮಾಪ್ತಿಕ್ಕೆ ಆನಂದ ಭರಿತರಾಗಿ ಗ್ರಾಮಸ್ಥರು ಪಾಸಾದ ಅಭ್ಯಾಸಿಗಳಿಗೆ ಹದಿನೈದು ರೂಪಾಯಿದ ಪುಸ್ತಕಗಳನ್ನೂ ಎಲ್ಲರಿಗೂ ಮಿಠಾಯಿಗಳನ್ನೂ ಕೊಟ್ಟರು. ಸಾಂಪ್ರತ ಅಭ್ಯಾಸಿಗಳ ಸಂಖ್ಯೆಯು ಅತಿಶಯವೇ ಬೆಳೆದದರಿಂದ ಕೂಡ್ರಲಿಕ್ಕೆ ಜಾಗೆ ಸಾಲುವದು ಇಲ್ಲ. ಸರಕಾರದಿಂದ ಕಟ್ಟಲ್ಪಟ್ಟ ಇಮಾರತಿಯಲ್ಲಿಯೂ ಬೇರೆ ಎರಡೂ ಗುಡಿಗಳಲ್ಲಿಯೂ ಶಾಲೆಯು ನಡೆಯುವದುಂಟು. ತಾ. ೯|೩|೪೩ ಇಸವಿ ದಿವಸ ರಾವಸಾಹೇಬ ಸಾಹುಕಾರ ಗೋವಿಂದರಾವ ಬಾಳಾಜಿ (ಗೋಖಲೆ) ಹಾವೇರಿಯವರ ತಾಲೂಕ ಬಂಕಾಪೂರ ಇವರ ಸವಾರಿ ಈ ಊರಿಗೆ ಬಂದಾಗ್ಯೂ ಮಾಸ್ತರರು ಮೇಲೆ ವಿಧಿಸಲ್ಪಟ್ಟ ಸ್ಥಳ ಸಂಕೋಚದ ಮೂಲಕ ಆಗುವ ತೊಂದರೆಗಳನ್ನು ಕುರಿತು ವಿದಿತಪಡಿಸಲಾಗಿ.

ಮುನಸೂಫ ಸಾಹೇಬರು ತತ್ಕ್ಷಣ ಎಲ್ಲಾ ಸ್ಕೂಲಕಮೀಟಿದಾರರನ್ನೂ ಗ್ರಾಮಸ್ಥರನ್ನೂ ಬೇರೆ ಕೆಲವು ಗೃಹಸ್ಥರನ್ನೂ ಕರಿಸಿಕೊಂಡು ವಿಚಾರಿಸಲು ಸ್ಕೂಲಕಮೀಟಿ ಮೆಂಬರಲ್ಲಿ ಒಬ್ಬ ಉದಾರ ಸದ್ಗೃಹಸ್ಥರಾದ ರುದ್ರಪ್ಪ ಅಣ್ಣಾ (ಅತ್ತಿಗೇರಿ) ಇವರಸಾಲಿ ಎಡಭಾಗಕ್ಕಿರುವ ತಮ್ಮ ಪಡಸಾಲಿ ದಕ್ಷಿಣೋತ್ತರ ಮೊಳ (೧೬) ಪೂರ್ವ ಪಶ್ಚಿಮ ಮೊಳಾ (೨೪

ಶುಚ್ಚಾರಸಮುಳ (೩೮೪) ಇಷ್ಟು ಸಾಲಿ ಜಾಗೆ ಇಮಾರತು ಬೇ
ಸುವದಕ್ಕೆ ತಮ್ಮ ಸ್ವಸಂತೋಷದಿಂದ ಕೊಟ್ಟುಬಗ್ಗೆ ಮಾಮಲೇದಾ
ಸಾ, ರವರ ಸಮಕ್ಷ ಲೇಖಿ ಕಬುಲಾಯಿತಿ ಬರಕೊಟ್ಟಿ
ರೆ. ಇವರು ಈ ದೇಶದ ಬಾಂಧವರ ಹಿತಾಪೇಕ್ಷಿತ ಉ
ರತ್ವದ ಬಗ್ಗೆ ಈ ಗ್ರಾಮವಾಸಿಕರೂ, ಈ ಮಠ ಅಭ್ಯಾಸಿ
ಳೂ ವಿದ್ಯಾಖಾತೆ ಅಧಿಕಾರಸ್ಥರೂ ಇವರ ಉಪಕಾರದ ಬಗ್ಗೆ
ವರ ಕಲ್ಯಾಣಕ್ಕೋಸ್ಕರವಾಗಿ ಈಶನು ಲೇಶಾಗಿ ಪ್ರಾರ್ಥಿಸುವ
ು ಸರ್ವರಧರ್ಮವು. ಮೇಲೆ ವಿವರಿಸಲ್ಪಟ್ಟ ಸ್ಥಳದಲ್ಲಿ ಇಮಾರ
ು ಬೆಳಿಸುವ ಖರ್ಚಿಗಾಗಿ ಇದೇವರ್ಷದ ಏಪ್ರೀಲ ತಿಂಗಳ
ಲ್ಲಿ ನಡಿಯುವ ಲಾಡನೇ ಜಪ್ತೇದಕಾಲಕ್ಕೆ ಬರ ಹಿಂದು ಇಸ
ಮಿನಿಂದ ದೇಣಿಗಿಯಂತೆ ವರ್ಗಣಿವಸೂಲು ಮಾಡಲಿಕ್ಕೆ ರಾ.
ಸಾ. ರವರು ಗ್ರಾಮಸ್ಥರಿಗೆ ತಾಕೀದಿ ಕೊಟ್ಟಿದ್ದಾರೆ. ಈ ಮೋ
ರಿಗೆ ಎಲ್ಲಾ ಮಾಮಲೇದಾರರು ಮಾಸ್ತರಸಾಹೇಬರವರು ಕಮಿಶ
ಟ ಮೆಂಬರಸಾಹೇಬರವರೂ ಜೇರಸದ್ದ ಹಸ್ತರೂ ಎತ್ತೈಸಿ
ವಿದ್ಯಾಹಬ್ಬುಗಿಗೆ ತುಂಬಾ ಇಂಬಾದ ಹಂಬಲವನ್ನು ಹಿಂಬಾಲಿ
ಸುವ ಮನಸ್ಸು ಎಲ್ಲರಿಗೂ ಪಾಡಾಗಿ ಈ ತೇರಿನ ಸಂದರ್ಭಕ್ಕೆ ಕಾಲಾ
ನು ಕಾಲದಲ್ಲಿಯೂ ಪ್ರಾರ್ಥಿಸುತ್ತೇನೆ. ಪತ್ರವಿ. ಕ್ಷ. ಇ. ವಿ.

ಮುಕ್ಕಾಂ ಹುಲಗೂರ ತಾ.	ಶಿವಾಜಿ ಲಿಂಗೋ ದೇವಗಿರಿ ಶಾ
ಬಂಕಾಪೂರ ಜಿ. ಧಾರವಾಡ	ಲಾಮುಜಕೂರ ಕಮಿಟಿದಾರ.

—o—

ರಾ. ಸಾ. ಕನ್ನಡ ಶಾಲಾಪತ್ರಿಕದ ಎಡಿಟರವರಸನ್ನಿಧಿಗೆ.

ವಿ. ವಿ. ಅಯ್ಯಾ ಎಡೀಟರ ಮಹಾರಾಯರೇ ಕೆಳಗೆ ಬ
ರೆದ ನಾಲ್ಕು ಪಂಕ್ತಿಗಳನ್ನು ತಾವು ಕರಕಮಲದಲ್ಲಿಟ್ಟು ವಿ
ಸುವ ಸರಸವಾದ ಶಾಲಾಪತ್ರಿಕದಲ್ಲಿ ಅಚ್ಚು ಹಾಕಿ ಪ್ರಸಿದ್ಧ

ಹರಿಸಬೇಕೆಂದು ಅಪೇಕ್ಷಿಸುತ್ತೇನೆ.—

ವರಿಯೋಗವರ್ಗ ಅಂದರೆ ಶಕೆ ೧೮೮೫ ಸುಭಾನುನಾಮ ಸಂವತ್ಸರದ ಚೈತ್ರವದ್ಯ ೩೦ ದಿವಸಾ ಬಂದು ಆಶ್ಚರ್ಯಕಾರಕವಾದ ಸಂಗತಿಯು ಘಡಾಯಿಸಿತು. ಅದು ಕೆಳಗೆ ಬರೆದ ಪ್ರಕಾರಾ——

ಜ್ಯೋತಿಷ್ಯದ ಶ್ಲೋಕವು.

|| ರಾಜ್ಯಭಂಗಾಖ್ಯಯೋಗ || ಯದಿಭವತಿಕದಾಚಿ
|| ಚ್ಛತಿನೀಸಪ್ತ ಚಂದ್ರಾ ಶನಿರವಿಕುಜವಾರೆ ಸ್ವಾತಿರಾ
|| ಯುಷ್ಮಯೋಗೆ || ಗಗನಚರಪಶೂನಾಂಜಂಗಮ
|| ಸ್ಥಾವರಾಣಾಂ ನೃಪತಿಜನವಿನಾಶೋ ರಾಜ್ಯಭಂಗ
|| ಸ್ತುಚೋಕ್ತ: || ೧ ||

ಅರ್ಥ ಕದಾಚಿತ ಶನಿ, ರವಿ, ಭೌಮ, ಈ ವಾರಗಳಲ್ಲಿ ಅಮಾವಾಸಿಯು ಅಶ್ವಿನಿ ಅಥವಾ ಸ್ವಾತಿ ಈ ನಕ್ಷತ್ರಗಳೂ ಆಯುಷ್ಮಾನ್ ಈ ಹೆಸರಿನ ಯೋಗವು ಈ ಪ್ರಕಾರ ಬಂದರೆ ಪಕ್ಷಿ, ಪಶು, ಜಂಗಮ, ಸ್ಥಾವರ ವ ರಾಜ್ಯ, ಈ ಪ್ರಕಾರಾ ನಾಶವು, ಮತ್ತು ರಾಜ್ಯ ಭಂಗವಾಗುತ್ತದೆ---

ಮೇಲೆ ಬರೆದ ಪ್ರಕಾರಾ ಈ ಸಂವತ್ಸರದ ಚೈತ್ರ ವ|| ೩೦ ದಿವಸಾ ಕೂಡಿದ್ದರಿಂದಾ ಮುಂದೆ ಶ್ರೀ ದೇವರು ಏನು ಮಾಡುತ್ತಾರೋ ತಿಳಿಯಲು, ಶ್ರೀ ಸೃಷ್ಟಿಕರ್ತನ ದಯವು ತಪ್ಪಿದರೆ ಸುಪ್ತನಾಶಗಳೆಲ್ಲ ದುಷ್ಕಾಲವಾಗುತ್ತವೆ. ಶ್ರೀಸ್ವಾಮಿಯ ಕೃಪೆ ಆದರೆ ವಿಪರೀತಕ್ಕೆ ಸುಪರೀತ ವಾಗುತ್ತವೆ.—

ಈಗ ಸೂರ್ಯ ಮಹಾರಾಜನ ತೇಜವು, ಹಸರವರ್ಣ ವಾಗಿ ಕಿರಣಗಳಲ್ಲಿ ಸಹಿತ ಹಸರು ತೋರುತ್ತದೆ. ಹಾಗ

ಗು ಸೂರ್ಯನು ಅಸ್ತವಾದಕೂಡಲೆ ಪಶ್ಚಿಮದಿಕ್ಕಿಗೆ ಆಕಾಶವು ಕೆಂಪಗಾಗಿ ಆ ಪ್ರಕಾಶವು ಬಂದು ತಾಸಿನವರಿಗೆ ಇರುತ್ತದೆ. ಮ ಅದೇ ವೇಳ್ಯಕ್ಕೆ ಪೂರ್ವದಿಕ್ಕಿನ ಆಕಾಶವೆಲ್ಲ ಕಪ್ಪಗಾಗುತ್ತದೆ. ಅದು ಸದರಿ ಪ್ರಕಾರ ಬಂದು ತಾಸಿನವರೆಗೆ ಇರುತ್ತದೆ. ಈ ಪ್ರಕಾರ ಚಿನ್ಹಗಳು ಏನುಕಾರಣ ಹಾಗುತ್ತವೋ ತಿಳಿಯದು. ಈಗ ಮೇಘರಾಜನ ಕೃಪೆಯು ಥೋಡೆ ಮಂದವಾಗಿರುತ್ತದೆ. ಈ ಯಾವತ್ತು ಕಾರಣವನ್ನು ನಮ್ಮ ಬಾಂಧವರಾದ ಶಾಸ್ತ್ರಜ್ಞರಾಗಲೀ ಬೇರೆ ವಿದ್ವಜ್ಜನರಾಗಲೀ ಶೋಧಿಸಿ ನೋಡಿ ತಿಳುಹಿಸಿದಲ್ಲಿ ಯಾವತ್ತರಿಗೂ ಸಂತೋಷವಾಗುವದು. ನಮ್ಮ ಮಂದಮತಿಗಳಿಗೆ ಚಂದವಾಗಿ ಬಂದೂ ತಿಳಿಯದರಿಂದಾ ಇಂದು ಇದನ್ನು ತಮ್ಮ ಕಡಿಗೆ ಬರೆದು ತಿಳುಹಿಸಿರುತ್ತೇವೆ ಇಗೇ ತಿಂಗಳ ವರ್ತಪತ್ರಿಕೆಯಲ್ಲಿ ಮುದ್ರಿಸುವಿರೆಂದು ಅಪೇಕ್ಷಿಸುತ್ತೇವೆ. ಆಯ್ಯಾ ಎಡಿಟರರಾಯರೇ ಪತ್ರವಿಸ್ತಾರಕ್ಕೆ ಕ್ಷಮೆಯಾಗಿ ಇದರಲ್ಲಿದ್ದ ನ್ಯೂನತೆಗಳನ್ನು ತಿದ್ದಿ ಮುದ್ರಿಸಬೇಕು ಇಂತ ಬಿನ್ನಹ:—

ತಾ. ೨೫|೯|೮೩ ಇಂ.	ಅಣ್ಣಾಜಿ ನರಸಿಂಹ ಗು. ನಾ. ಪ.
ಮು. ಐಹೊಳ್ಳಿ ತಾ. ಹು	ರಾಘವೇಂದ್ರ ಹಣಮಂತ ದೇಶ
ನಗುಂದ ಜಿ. ಕಲಾದಗಿ	ಪಾಂಡೆ ಸ್ಕೂಲ ಮಾಸ್ತರ.

ಎಲ್ಲ ಗ್ರಂಥಾಧಿಕಾರಿಗಳಿಗೇ— ಲ ಪ್ರಾತಃಸ್ಮರಣೀಯರು ಕಾಕಂಜೋಷ್ಟವ, ಕಂಚಾಪ್ರನಂತಶಾ, ಕಳೆನೆಯ ದಿಂದ್ಯಾಶರ ಪ. ವ ಭೂಕರಾರೋಬಿಯಿಂ, ಪ್ರಜ್ಞಲಪಾಸತ್ರನಯೋರ ಹಾಕಯ, ಪ್ರಕಾಶಾಗಮನದಿಂ, ವಿಶಿಷ್ಟದೇಶವೋಳ್ಮಾಡಿಸಿ, ವಿದ್ವಜ್ಜನರ್ಕ್ಕು

ತ್ರ ರಜವರಳ್ಳಿ, ವಿಪುಳಾನಂದಾತಿಶದಿಂ, ಕೂಡಿನಲಿದಾಡುವದಕ್ಕಾತಿಶಯುವಾಸ್ಪದವಾದ, ಸುಧಾಂಶಂಶದಿಂದೊಪ್ಪುವ, ಸ್ಥೂಲವೇಷಠವೆಂಬ, ಸೂರ್ಯೋದಯವಂ, ಸಾನಿತ್ರ ರಾಜಶೇಖರವಿಲಾಸಪ್ರಬಂಧದೊಳ್ರಂಜಿಸುವ, ಯೇಕಾದಶಾಸ್ವಾಸದ—೧೭೩ನೇ ಶ್ಲೋಕವನ್ನೂ, ತಸ್ಯಾವ್ಯದೊಳ್ಳಿಲ್ಲದಬೇರೊಂದುಗ್ರಂಥವನ್ನೂ, ಪ್ರಿಂಟಿಶಿ, ಪ್ರಕಟಂಗೈದು, ತತ್ಪ್ರಭಾಭಾವಾನುಸುರವಂ ತೋರಿಶಿ .ಮತ್ರ್ಯ ೧೦ ಪದ್ಯ ವಿಸ್ತರಿಸುವರಾಗಿಮಾಡಿ, ಮತ್ತ ಸಾನಂದವಂ, ಗೊಳಿಸಿ, ಮಹೋತ್ಸಾಭಿಮಾನಾಯುಕ್ತನಾಗವಂತೆ ಮಾಡುವಿರೆಂದು—ಅತ್ಯಾದರದಿಂದಾಂ, ಆನಂದಮಯದಿಂ, ವಿನಯಾತ್ಮನುತಿಸುವೆನು.

(೧) ಶ್ಲೋಕ ರಾಜ್ಞೀನಸಾದೃತೇಸರ್ಗಂ, । ಮತೇನ
ಶ್ರೀಯತೇಮುಹುಃ ॥ ಆಸಾರೇಕ್ರೀಡತೆಹಂಸಃ ।
ಕವಿಶೇಷೇಷಿಮದ್ಯತಂ ॥ ೧ ॥

(೨) ಶ್ಲೋಕ ಸ್ಪೃಷ್ಟ್ವಾತ್ಸಭಿಭರಾಶ್ಚಿತ್ತಿತಿಭ್ರುದಾ
ರಂಧನುಭ್ರಾತ್ಪರಸ್ಪುತರ್ಯಯುಗ್ರಕ್ತ್ರಭ್ರಾತ್ರ
ತ್ವದ್ರತೇಜಃಸ್ತ್ರ ಮಥವರಿಪ್ರದಭ್ರಾದ್ವತ್ತಾ
ರಾಟ್ಪುರದ್ದಿಷ್ಟಭೃದ್ವಿದ್ವಿಗ್ಯದಾವಿದ್ರೇಷ್ಟಪಿತರು
ದರಿಭಿದಾತ್ವದ್ರದೈತೇಕ್ಷಣಂ, ತ್ರಿದ್ವಿತ್ರೇಟೋತ್ರೀ
ದೃಜಿಟಾಭ್ಯಕ್ಷ್ಯನಭ್ಯ ದಿನಭೃ ಪಾರ್ಥ್ವದೋಸ್ತ್ರೇಸ್ಪ
ಕ್ಷೋಭವಃ ॥ ೧ ॥

ಶಾಲಾಪತ್ರಕವು.

ಪುಸ್ತಕ ೧೮]   [ಸಂಚಿಕೆ ೧೧

ನವಂಬರ. ೧೮೮೯

Education and Improvement.

ವಿದ್ಯಾಸುಧಾರಣಾಸಂಬಂಧವಾದ ಸಂಗತಿಗಳು.

ಈ ತಿಂಗಳಿನ ೨೧ನೇ ತಾರೀಖಿನಲ್ಲಿ ಚಕ್ರವರ್ತಿನಿ ವಿಕ್ಟೋರಿಯಾ ರಾಜ್ಞಿಯವರ ಮೂರನೇ ಮಗನಾದ ಡ್ಯೂಕ ಆಫ್ ಕಾನಾಟ ಎಂಬ ರಾಜಪುತ್ರರು ಮುಂಬಯಿಗೆ ಬಂದಿದ್ದರಿಂದ ಆ ಪಟ್ಟಣದಲ್ಲಿ ಎರಡುದಿವಸ ದೀಪೋತ್ಸವ, ಮದ್ದು, ಜಾತ್ರೆ, ತಮಾಶ, ಮುಂತಾದ ಅತಿ ಕೋಲಾಹಲವಾದ ಮಹೋತ್ಸವಗಳಾದವು. ಎರಡುದಿವಸ ಪಟ್ಟಣಸ್ಥರಿಗೆಲ್ಲ ದೊಡ್ಡದೊಂದು ಹಬ್ಬವೇ ಆಯಿತೆಂದು ಹೇಳಬಹುದು. ಮಿಸ್ತರ ವೆಸ್ತನ್‌ಜೀ ಹೋರಮುಸಜೀಕಾಮಾ ಎಂಬ ಶ್ರೀಮಂತನು ಹೆಂಗಸರಿಗಾಗಿ ಆಸಪತ್ರೆಯನ್ನು ಕಟ್ಟಿಸುವದಕ್ಕೋಸ್ಕರ ೧೨೦೦೦೦ ರೂಪಾಯಿ ಕೊಟ್ಟಿದ್ದರಿಂದ ಆ ಆಸಪತ್ರೆಯ ತಳದ ಮೊದಲನೇ ಕಲ್ಲನ್ನು ರಾಜಪುತ್ರರವರು ತಮ್ಮ ಸ್ವಂತಕೈಯಿಂದ ಕೂಡಿಸಿದರು. ಈ ರಾಜಪುತ್ರರು ಪೂರತ ಪಟ್ಟಣದಲ್ಲಿ ಇರುವ ದಂ

ಯಿನ ಮುಖ್ಯಾಧಿಕಾರಿಗಳಾಗಿ ಈ ದೇಶಕ್ಕೆ ಬಂದದ್ದರಿಂದ ಇವರು ಈ ದೇಶದಲ್ಲಿ ನಿಂತು ನಮ್ಮ ಬಾಂಧವರ ಸ್ವಭಾವ ಸ್ಥಿತಿರೀತಿಗಳನ್ನು ಸಹಜವಾಗಿ ತಿಳಿದುಕೊಳ್ಳುವರೆಂದು ನೋಡಿ ನಮಗೆ ಅತ್ಯಾನಂದವಾಗುತ್ತದೆ.

—o—

ವಿಕ್ಟೋರಿಯಾ ಮಹಾರಾಜ್ಞಿಯವರ ನಾಲ್ವರು ಮಕ್ಕಳಿಗೆ ಇರುವ ವಾರ್ಷಿಕಆದಾಯದ ಪಟ್ಟಿಯು ಒಂದು ವರ್ತಮಾನ ಪತ್ರದಲ್ಲಿ ಪ್ರಸಿದ್ಧವಾಗಿರುತ್ತದೆ. ಅದು ಹ್ಯಾಗಂದರೆ — ಹಿರಿ ಮಗ ಪ್ರಿನ್ಸ್ ಆಫ್ ವೆಲ್ಸ ಇವರಿಗೆ ಸ್ವಾರ್ಜಿತಾದಾಯ ೪೫೨೪೫, ಸರಕಾರೀ ನೇಮಣೂಕ ೪೨೦೦೦, ಅಂತು ವರ್ಷಕ್ಕೆ ೮೭೨೪೫ ಪೌಂಡು. ಎರಡನೇ ಮಗ ಡ್ಯೂಕ ಆಫ್ ಎಡಿನಬರೊ ಇವರಿಗೆ ವಾರ್ಷಿಕ ನೇಮಣೂಕು ಪೌಂಡು ೨೭೪೦೦; ಮೂರನೇ ಮಗ ಡ್ಯೂಕ ಆಫ್ ಕಾನಾಟ (ಈಗ ಹಿಂದುಸ್ತಾನಕ್ಕೆ ಬಂದವರು) ಇವರಿಗೆ ವಾರ್ಷಿಕ ನೇಮಣೂಕು ಪೌಂಡು ೨೭೫೦೦. ನಾಲ್ಕನೇಮಗ ಡ್ಯೂಕ ಆಫ್ ಆಲ್ಬನಿ ಇವರಿಗೆ ೨೫೦೦೦ ಪೌಂಡು.

—o—

ಪಾರಿಸ ಪಟ್ಟಣದಲ್ಲಿ ಒಬ್ಬ ಶಿಲ್ಪಿಪ್ರವೀಣನು ವಿದ್ಯುತ್ತಿನ ಬಲದಿಂದ ವಿಮಾನವನು ಏರಿಸಿ ಮೂರು ತಾಸುಗಳವರೆಗೆ ನಿರ್ಬಾಧವಾಗಿ ಆಕಾಶಸಂಚಾರವನ್ನು ಒಳಗಡೆಯಲ್ಲಿ ಮಾಡಿದನು. ಗಾಳಿಯು ಈ ವಿಮಾನದೆದುರಿನಿಂದ ಬಹಳ ವೇಗದಿಂದ ಬೀಸಿದಾಗ್ಯೂ ವಿಮಾನದ ಗತಿಯು ಎಷ್ಟು ಮಾತ್ರವೂ ಬದಲಾಗಲಿಲ್ಲ. ಇದರಿಂದ ವಿಮಾನ ಪ್ರಯಾಣವು ಬಹು ಬೇಗ ವ್ಯ

ಕಾರದೊಳಗೆ ಬರುವದೆಂದು ತೋರುತ್ತದೆ. ಪೂರ್ವಕಾಲದಲ್ಲಿ ದೇವತೆಗಳು ವಿಮಾನದಲ್ಲಿ ಕೂತು ಸಂಚರಿಸುವಂತೆ, ಅದೇ ಸೌಕರ್ಯವು ನಮಗೆ ಅಲ್ಪಕಾಲದೊಳಗೆ ಬರುವದೆಂದು ನೋಡಿ ಯಾರಿಗೆ ಸಂತೋಷವಾಗಲಿಕ್ಕಿಲ್ಲ?

—o—

ತಂಬಾಕ ಸೇದುವದರಿಂದ ಕಫಕ್ಷಯ, ಶ್ವಾಸ, ಅಗ್ನಿಮಾಂದ್ಯ, ಪಿತ್ತರೋಗ, ಕಾಮಾಲೆ, ಮಲಾವರೋಧ, ಇಷ್ಟು ರೋಗಗಳು ಹುಟ್ಟುತ್ತವೆಂಬ ಬಗ್ಗೆ ಇಂಗ್ಲಂಡದ ವಿದ್ವಾಂಸರಲ್ಲಿ ಬಹಳ ವಾದವಿವಾದಗಳು ಸದ್ಯಕ್ಕೆ ನಡೆದಿರುತ್ತವೆ. ಈ ವಿವಾದದ ಪರಿಣಾಮವು ಯಾವತ್ತು ಭೂಲೋಕಕ್ಕೆ ಅತ್ಯಂತೋಪಕಾರವಾಗುವದೆಂಬದಕ್ಕೆ ಸಂದೇಹವಿಲ್ಲ. ಆದರೆ ಮದ್ಯಪಾನದ ಅನಿವಾರ್ಯವಾದ ಬೆಳವಣಿಗೆಯನ್ನು ಹಿಮ್ಮೆಟ್ಟಿಸುವ ಉದ್ಯೋಗ ಯಾರಾದರೂ ಮಾಡುವರೋ?

—o—

ಮಿ. ಗ್ರಹಾಮನೆಂಬವನೊಬ್ಬ ಗೃಹಸ್ಥನು ಹಿಮಾಲಯ ಪರ್ವತದ ಮೇಲೆ ಏರ್ಪ್ಲೇನದೊಳಗಿಂದ ಏರಿಹೋಗುವ ಪ್ರಯತ್ನ ನಡಿಸಿದ್ದಾನೆ. ಆದರೆ ಆ ಶಿಖರದ ಮೇಲೆ ಕೈಲಾಸವಿರುತ್ತದೆ. ಆದ್ದರಿಂದ ಈ ಸಾಹಸಿಗನು ಕೈಲಾಸಕ್ಕೆ ಹೋಗಿ ಕೈಲಾಸವಾಸಿಯಾಗಲಿಕ್ಕಿಲ್ಲೆಂದು ಕೋರುತ್ತೇವೆ.

—o—

ಹತ್ತು ವರ್ಷದ ಹಿಂದೆ ಈ ದೇಶದಲ್ಲಿ ಖ್ರಿಸ್ತಿಜನರ ಸಂಖ್ಯೆಯು ೬೯೭೨೧೭ ಇತ್ತು. ಈಗ ೧೬೬೨೫೫೫ ಇರುತ್ತದೆ.

—o—

ತಗಣಿಗೆ ಉಪಾಯ— ಬಿಲ್ಲು ಕೋತಂಬರಿಯ ರಸವನ್ನು ತಗಣಿ ಇರುವ ಸ್ಥಳದಲ್ಲಿ ಸಾರಿಸಿದರೆ ಅಲ್ಲಿ ತಗಣಿ ಪುನಃ ಆಗುವದಿಲ್ಲೆಂದು ಒಬ್ಬ ಶೋಧಕನು ತಿಳಿಸುತ್ತಾನೆ. ಆವಶ್ಯಕರು ಇದರ ಅನುಭವವನ್ನು ಅಗತ್ಯವಾಗಿ ನೋಡತಕ್ಕದ್ದು.

—o—

ಓಡುವ ಕುದುರೆಗಳ ಮೇಲೆ ನಾನಾ ಪ್ರಕಾರದ ಕಸರತ್ತುಗಳನ್ನು ಮಾಡಿ ತೋರಿಸುವಂಥ ತಮಾಷೆಗಳು ಆಗಾಗ್ಗೆ ವಿಲಾಯತಿಯಿಂದ ಬರುತ್ತಿರುತ್ತವೆ. ಅವುಗಳನ್ನು ನೋಡಿ ಪುಣೆಯವನಾದ ವಿಷ್ಣುಪಂತ ಛತ್ರೆ ಎಂಬ ಕೊಂಕಣಸ್ಥ ಬ್ರಾಹ್ಮಣನು ಕುದುರೆಗಳ ಕಸರತ್ತಿನ ಆಟವನ್ನು ತಯಾರು ಮಾಡಿದ್ದಾನೆ. ಇವನ ಆಟಗಳು ಪುಣೆ, ಸಾತಾರೆ, ಮುಂತಾದ ಕಡೆಯಲ್ಲಿ ಆಗಿ ಜನರ ಆಶ್ರಯವು ಹೆಚ್ಚಾಗಿ ದೊರೆತದ್ದರಿಂದ ಈ ಜಟ್ಟಿಯು ಮುಂಬಯಿಗೆ ಈಗ ಹೋಗಿದ್ದಾನೆ. ಅಲ್ಲಿ ಇವನ ಕಸರತ್ತುಗಳನ್ನು ನೋಡಿ ಇಂಗ್ಲಿಷ ವರ್ತಮಾನ ಪತ್ರಕರ್ತರು ಇವನನ್ನು ತಮ್ಮ ಪತ್ರಗಳಲ್ಲಿ ಬಹಳ ಹೊಗಳುತ್ತಾರೆ. "ಅಭ್ಯಾಸ ಸಾರಿಣೀ ವಿದ್ಯಾ" ಎಂಬ ಗಾದೆಯು ಯಥಾರ್ಥವದೆ.

—o—

ನಮ್ಮ ದಾಯರೆಕ್ಟರರಾದ ಮೇ॥ ಹಬರ್ನ್ಸ್ ಚಾಟಫೀಲ್ಡ ದೊರೆಗಳು ರಜೆತಕೊಂಡು ವಿಲಾಯತಿಗೆ ಹೋಗತಕ್ಕವರಿದ್ದಾರೆ. ಅವರ ಸ್ಥಳಕ್ಕೆ ಡೆಕನ್ (ಪುಣೆ) ಕಾಲೇಜದ ಪ್ರಿನ್ಸಿಪಾಲರಾದ ಆಗ್ರಿಥನಾಮ ದೊರೆಗಳನ್ನು, ಅವರ ಸ್ಥಳಕ್ಕೆ ಮಿ॥ ಕ

ಕರ್ಗಾಪರ್, ಅವರ ಸ್ಥಳಕ್ಕೆ ರಾ. ರಾ. ವಾಮನರಾವ ಮೋಡಕ, ಅವರ ಸ್ಥಳಕ್ಕೆ ರಾ. ರಾ. ಮಾಧವರಾವ ಕುಂಠೆ ಇವರನ್ನು ಮುಂಬಯಿ ಹಾಯ ಸ್ಕೂಲಿನ ಪ್ರಿನ್ಸಿಪಾಲರಾಗಿ ನೇಮಿಸುವರೆಂದು ವರ್ತಮಾನಪತ್ರಗಳಿಂದ ತಿಳಿಯುತ್ತದೆ.

—o—

ಮುಂಗಸೆಲ ಧೊರೆಗೆ ಇಷ್ಟರೊಳಗೆ ಕೊಲ್ಲಾಪುರದಿಂದ ಬೆಳಗಾವಿಗೆ ಬರತಕ್ಕವರಿದ್ದಾರೆಂದು ಕೇಳುತ್ತೇವೆ.

—o—

ತಾಲೂಕಾ ಶಾಲೆಗಳಲ್ಲಿ ಇಂಗ್ಲಿಶ ಶಿಕ್ಷಕರನ್ನು ಕೆಲ ಕೆಲವು ಕಡೆಯಲ್ಲಿ ಬೇಗ ನೇಮಿಸ ತಕ್ಕವರಿದ್ದಾರೆಂದು ಕೇಳುತ್ತೇವೆ.

—o—

ಹುಬ್ಬಳ್ಳಿಯಲ್ಲಿ ನಡೆದ ವಾದದ ಪರಿಣಾಮವು.

ಈ ಪಟ್ಟಣಸ್ಥರಾದ ಹನ್ನೆರಡುಮಠದ ಚರಂತಯ್ಯನವರಿಗೂ ೧ನೇ ನಂಬರಿನ ಹೆಣ್ಣುಮಕ್ಕಳ ಶಾಲೆಯ ಮಾಸ್ತರರಾದ ಚನ್ನವೀರಯ್ಯನವರಿಗೂ ನಡೆದ ವಿವಾದಕ್ಕೆ ಸಂಬಂಧಿಸಿದ ಪತ್ರಗಳು ಕಳೆದ ಮೇ, ಅಗಸ್ಟ ತಿಂಗಳುಗಳ ಶಾಲಾಪತ್ರಕಗಳಲ್ಲಿ ಪ್ರಸಿದ್ಧವಾಗಿರುತ್ತವೆ. ಇವರಿಬ್ಬರೂ ಒಂದೇ ಮತದವರು, ಸ್ವಮತಾಭಿಮಾನಿಗಳು, ಅಭ್ಯಸ್ತರು, ಬುದ್ಧಿವಂತರು, ಆಗಿ ಇದ್ದುದರಿಂದ ಇವರ ಲೇಖಗಳಿಂದ ವೀರಶೈವಮತದ ಸಿದ್ಧಾಂತಗಳು, ಕವಿಷ್ಟದ ಮಾರ್ಗಗಳು, ಮುಂತಾದ ಉಪಯುಕ್ತ ವಿಷಯಗಳು ಶಾಲಾಪತ್ರಕ ಓದುವವರಿಗೆ ತಿಳಿಯುವವೆಂಬ ಅಭಿ

ಲಾಭದಿಂದ ಇವರ ಪತ್ರಗಳಿಗೆ ಸ್ಥಳಕೊಟ್ಟೆವು. ಆದರೆ ಇವರವಾದವು ಕೊನೆಯಲ್ಲಿ ಹಸಗೆಟ್ಟಿತೆಂದು ನೋಡಿ ನಾವು ಅತಿಖಿನ್ನರಾಗಿದ್ದೇವೆ. ಚನ್ನವೀರಯ್ಯನವರು ತಪ್ಪು ಲೇಖದಲ್ಲಿಯೂ ಭಾಷಣದಲ್ಲಿಯೂ ಚರಮೂರ್ತಿಗಳ ಮಾನಕ್ಕೆ ಹಾನಿಬರುವಂಥ ಶಬ್ದಗಳನ್ನು ಪ್ರಯೋಗಿಸಿದರೆಂದು ನೋಡಿ ಚರಮೂರ್ತಿಗಳು ಸರಕಾರೀ ಅಧಿಕಾರಿಯ ಮುಖಾಂತರ ಕಾಯುಶೆಯು ಆಶ್ರಯವನ್ನು ಅಪೇಕ್ಷಿಸಿ ಫಿರ್ಯಾದಿಯು ಮಾಡಿದರು. ಆದರೆ ಚನ್ನವೀರಯ್ಯನವರು ವಿವೇಕದಿಂದ ಕೋರ್ಟಿನಲ್ಲಿ ಚರಂತಯ್ಯನವರ ಕ್ಷಮೆಯನ್ನು ಬೇಡಿ ಅವರಿಗಾದ ವೆಚ್ಚವನ್ನು ಕೊಟ್ಟು ಅವರನ್ನು ಸಂತೈಸಿದರೆಂದು ಕೇಳಿ ನಾವು ಸಂತೋಷಪಡುತ್ತೇವೆ.

ಗೌರವದ ವಿಷಯಗಳಲ್ಲಿ ವಾದವು ನಡಿಯಲಿಕ್ಕೇಬೇಕು. "ವಾದೇವಾದೇ ಜಾಯತೇ ತತ್ತ್ವಬೋಧೋ ಬೋಧೇ ಬೋಧೇ ಸಚ್ಚಿದಾನಂದರೂಪಂ" ಎಂಬದಾಗಿ ಹಿಟ್ಟ ಸತ್ಪುರುಷನ ವಾಕ್ಯವುಂಟು. ಆದರೆ ವಾದದಲ್ಲಿ ನಿಷ್ಠುರಶಬ್ದಗಳನ್ನು ಉಚ್ಚರಿಸದೆ, ಅತಿಶಾಂತಿಯುಳ್ಳ ವಿನಯೋಕ್ತಿಯಿಂದ ಅಬಾಧಿತವಾದ ಪ್ರಮಾಣಗಳನ್ನು ಉದಾಹರಿಸಿದರೆ, ಅದರಿಂದ ಪ್ರತಿವಾದಿಯ ನ್ಯೂನವು ತನಗೆತಾನೇ ಬೈಲಿಗೆ ಬಂದು ವಾದಿಯ ಪಾಂಡಿತ್ಯಕ್ಕೂ ದೊಡ್ಡಸ್ತಿಕೆಗೂ ಕುಂದಣ ಹಾಕಿದ ಹಾಗಾಗುತ್ತದೆ. ಈ ತತ್ವವನ್ನರಿತು ವಾದಿಪ್ರತಿವಾದಿಗಳು ನಡೆದರೆ, ಅವರವಾದದಿಂದ ಅವರಿಬ್ಬರ ಗೌರವವೂ ಅಭಿವೃದ್ಧಿಗೈಯ್ಯುತ್ತದೇಹೊರತು ಕಳೆಗುಂದಲಾರದೆಂಬದನ್ನು ವಾದಿಗಳು ಸ್ಮರಣದಲ್ಲಿ ಇಡಬೇಕೆಂದು ನಮ್ಮ ಸೂಚನೆಯುಂಟು.

—o—

Untruthfulness.

ಅಸತ್ಯಭಾಷಣ.

ಹಿಂದಕ್ಕೆ ಗ್ರೀಸ ದೇಶದಲ್ಲಿ ಅರಿಸ್ಟಾಟಿಲ ಎಂಬವನೊಬ್ಬ ಮಹಾ ಪ್ರಸಿದ್ಧ ತತ್ವಜ್ಞಾನಿಯಾಗಿ ಹೋದನು. ಅವನು ಪ್ಲೇಟೊ ಎಂಬ ವಿಖ್ಯಾತ ವಿದ್ವಾಂಸನ ಶಿಷ್ಯನೂ, ಇತಿಹಾಸದಲ್ಲಿ ಹೆಸರಾದ ಸಿಕಂದರನ ಗುರುವೂ ಇದ್ದರು. ಅವನಿಗೆ ಒಂದು ದಿನ ಒಬ್ಬ ಮಿತ್ರನು 'ಸ್ವಾಮಿ' ಸುಳ್ಳು ಮಾತಾಡುವದರಿಂದ ಮನುಷ್ಯನಿಗೆ ಏನು ದೊರೆಯುತ್ತದೆ, ಎಂದು ಕೇಳಲು, ಅವನು ಅದಕ್ಕೆ ಪ್ರತ್ಯುತ್ತರವಾಗಿ ಅವಿಶ್ವಾಸವು ಎಂದು ಹೇಳಿದನು. ಮತ್ತು ಅದೇನು ಸುಳ್ಳಲ್ಲ; ದಿನಂಪ್ರತಿ ವ್ಯವಹಾರದಲ್ಲಿ ಪ್ರತ್ಯಯಕ್ಕೆ ಬರುತ್ತದೆ. ಇಂಥವನೊಬ್ಬನು ಸುಳ್ಳು ಆಡುತ್ತಾನೆಂದು ಒಮ್ಮೆ ಮನಗಂಡು ಬಂದರೆ ತೀರಿತು; ಎರಡನೇ ಸಾರಿ ಅವನು ದಿಟ ನುಡಿದಾಗ್ಯೂ ಯಾರೂ ಅವನ ಮಾತು ನಂಬುವದಿಲ್ಲ.

ಟೊಂಕದ್ದು ಬಿಚ್ಚಿ ತಲೆಗೆ ಸುತ್ತಿಕೊಳ್ಳುವಂಥ ನಾಚಿಕೆಗೇಡಿಗೆ ಸಹ ಜನರಲ್ಲಿ ತಾನು ಸತ್ಯವಂತನೆಂದನ್ನಿಸಿಕೊಳ್ಳಬೇಕೆಂಬ ಹವಣಿಕೆ ಇರುತ್ತದೆ. ದುರ್ಗುಣಿಗಳಿಗೆ ಬಹುತರವಾಗಿ ದುರ್ಗುಣಿಗಳೇ ಸ್ನೇಹಿತರು ದೊರೆಯುತ್ತಾರೆ ಮತ್ತು ಅವರು ದುರ್ಗುಣದಲ್ಲಿ ಒಬ್ಬರಿಗಿಂತ ಒಬ್ಬರು ಹೆಚ್ಚಿನವರೆಂದು ಅನ್ನಿಸಿಕೊಳ್ಳುವ ಅಭಿಲಾಷೆಯಿಂದ, ಬೇಕಬೇಕಾದ ಅಕೃತ್ಯಗಳನ್ನು ಮಾಡಲಿಕ್ಕೆ ಹೇಸುವದಿಲ್ಲ. ಆದರೆ ಅಂಥವರಿಗೆ, ಸಹ, ತಮ್ಮೊಳಗಿನವನು ಯಾರಾದರು ಸುಳ್ಳು ಆಡುತ್ತಾನೆಂದು ಕಂಡು ಬಂದರೆ, ಎಷ್ಟುಮಾತ್ರವಾದರೂ ತಡೆಯುವದಿಲ್ಲ. ಕಳ್ಳರಾದವ

ಕಳವು ಮಾಡುವನ್ನು, ಸೆನೆಬಹಕರಾದವರು ಸೆರೆ ಕುಡಿಯುವ

ದರಲ್ಲಿ ಒಬ್ಬರಿಗಿಂತೊಬ್ಬರು ಮೇಲಸ್ಥೈಯಾಗಬೇಕೆಂದು ಇಚ್ಛಿ
ಸುತ್ತಾರೆಂಬ ಮಾತು ನಾವು ದಿನಂಪ್ರತಿಯಲ್ಲಿ ನೋಡುತ್ತೇವೆ.
ಆದರೆ ಸುಳ್ಳುಮಾತಾಡುವದರಲ್ಲಿ ಮೇಲಸ್ಥೈಯಾಗಬೇಕೆಂಬ ಉ
ದ್ದೇಶದಿಂದ ಯತ್ನನಡಿಸಿದ್ದು ಎಲ್ಲಿಯೂ ನಮ್ಮ ಕೇಳಿಕೆಯ
ಲ್ಲಿಲ್ಲ. ಸಾರಾಂಶ ಹೇಳತಕ್ಕದ್ದೇನಂದರೆ, ಎಂಥ ಅಧಮರೂ
ನೀಚಶಿರೋಮಣಿಗಳೂ ಸಹ ಅಸತ್ಯ ಭಾಷಣವೆಂದರೆ ಬಹಳೇ
ನೀಚತನದ ಕೆಲಸವೆಂದು ತಿಳಿಯುವರು. ಅಂದಮೇಲೆ ಎಂಥ
ನೀಚ ಜನರ ಸಮಾಜದಲ್ಲಿ ಸಹ ಪ್ರವೇಶ ಹೊಂದದಂಥ
ಅಸತ್ಯಭಾಷಣದಿಂದ ಸುವಿಚಾರಿಗಳಾದವರು ತಮ್ಮ ಪವಿತ್ರವಾ
ದ ಮುಖವನ್ನು ನಿರರ್ಥಕವಾಗಿ ದೂಷಿತ ಮಾಡಿಕೊಳ್ಳುವದು
ಬಹಳೇ ಅನುಚಿತವೆಂದು ಹೇಳಿದರೆ, ಇಲ್ಲೆಂದು ಯಾರ ಹೇ
ಳುವರು? ಯಾರೂ ಇಲ್ಲ. ಎಲ್ಲರೂ ಅದು ನಿಜವೆಂದು ಸ್ವಾ
ನಗಂಡು ಒಪ್ಪಿಕೊಳ್ಳುವರು.

ಈ ಜಗತ್ತಿನಲ್ಲಿ ಅಸತ್ಯ ಮಾತಾಡುವವನ ಸಂಗತಿಯನ್ನು
ಯಾರೂ ಹಿಡಿಯುವದಿಲ್ಲ. ಅವನ ಮಾತು ನಿಜವಿದ್ದಾಗ್ಯು ಸಹ
ಯಾರೂ ನಂಬುವದಿಲ್ಲ. ಅವನನ್ನು ಎಲ್ಲರೂ ದೂರದೂ
ರ ನೋಡುತ್ತಾರೆ ಇದು ಸರ್ವಸಾಧಾರಣ ಜನರ ಮಾತಾಯಿ
ತು. ಸಜ್ಜನರಾದವರು ಅಂತು ಅಸತ್ಯ ಮಾತನಾಡುವನ ಗಾ
ಳಿಗೆ ಸಹ ನಿಲ್ಲುವದಿಲ್ಲ; ನಾಗರ ಹಾವಿನ ವಿಷಕಿಂತ ಅವನಮಾ
ತಿನಲ್ಲಿ ಘಾತಕಶಕ್ತಿ ಹೆಚ್ಚು ಉಂಟೆಂದು ತಿಳಿದು ವಾಸ್ತವಿ
ಕ ಮನಸ್ಸಿನಿಂದ ಅವನ ದ್ವೇಷ ಮಾಡುತ್ತಾರೆ; ತಾವು ಇದ್ದ
ಡೆಗೆ ಅವನ ಬರಗೊಡುವದಿಲ್ಲ. ಈ ಪ್ರಕಾರವಾಗಿ ಯಾರೊ
ಬ್ಬರು ಅಸತ್ಯಮಾತಾಡುವವನ್ನು ದೂರನೋಡುತ್ತಾರೆ. ಇನ್ನು
ಇದಕ್ಕೂ ಹೆಚ್ಚಿನ ನೀಚತನವೂ ಮಾನಭಂಗವೂ ಯಾವ

ಸರ ಟಾಮಸ ಬ್ರಾನ ಎಂಬ ಒಬ್ಬ ಮಹಾಪ್ರಖ್ಯಾತ ಇಂಗ್ಲಿಶ ಗ್ರಂಥಕಾರನಾಗಿ ಹೋದನು. ಅಸತ್ಯಭಾಷಣವನ್ನು ಕುರಿತು ಆವನ ಬರಹವು ಎಲ್ಲರೂ ಲಕ್ಷಗೊಟ್ಟು ಓದತಕ್ಕದ್ದಾಗಿದೆ. ಆವನು, ನರಕಲೋಕದಲ್ಲಿರುವ ಅಘೋರ ಪಾತಕಿಗಳು ಸಹ ಅಸತ್ಯ ಭಾಷಣ ಮಾಡುವದಿಲ್ಲ; ಅಂದರೇನು ನರಕವಾಸದಲ್ಲಿ ಸಹ ಸತ್ಯದಹೊರತು ಪರಿಣಾಮವಿಲ್ಲ; ಎಂದು ಬರೆದಿದ್ದಾನೆ. ಇದರಮೇಲಿಂದ ಈ ಮೃತ್ಯುಲೋಕದಲ್ಲಿ ಜನರಿಗೆ ಸತ್ಯಾವಲಂಬನವು ಎಷ್ಟು ಆವಶ್ಯಕವಾಗಿಯದೆ ಎಂಬ ಮಾತು ಸಹಜದಲ್ಲಿ ತರ್ಕದಿಂದ ತಿಳಿಯಬಹುದು. ಅಸತ್ಯವು ಬಹಳೇ ಕೆಟ್ಟದುರ್ಗುಣವಾಗಿರುವದರಿಂದ, ಅದನ್ನು ಆದಷ್ಟು ಮಾರು ವರ್ಜಿಸುವದಕ್ಕಾಗಿ ಎಲ್ಲರೂ ಯತ್ನಿಸತಕ್ಕದ್ದು ಉಚಿತವದೆ. ಅಸತ್ಯ ಭಾಷಣಮಾಡುವದರಿಂದ ಉಂಟಾಗುವ ಲಾಭಕಿಂತ, ಅದರಿಂದ ಆಗುವ ಹಾನಿಯು ಬಹಳೇ ದೊಡ್ಡದದೆ. ಇನ್ನು ಸಖವಿದ್ದರೆ ಕುಲಗೆಡಬೇಕು ಎಂಬ ಗಾದೆಯು ಭಾಷನ್ನು ಪ್ರತಿಪಾದಿಸುವವರಿಗೆ ನಾವು ಹೇಳತಕ್ಕದೇನಂದರೆ, ಅಸತ್ಯ ಭಾಷಣದಿಂದ ಲಾಭವಾದರೂ ಗಳಿಗೆ ಗಳಿಗೆಗೆ ಆಗುವದೆಂದು ಸಹ ಅನುಭವಸಿದ್ಧವಿಲ್ಲ. ಈ ಮೇರಿಗೆ ಲಾಭವಾಗುವದು ಬಹಳೇ ವಿರಳವು, ಹಾನಿಯಾಗುವದು ಮಾತ್ರ ಗಂಟು ಹಾಕಿಟ್ಟು ಹಾಗೆ ನಿಶ್ಚಿತ ಇರಲಾಗಿ ಅಸತ್ಯ ಭಾಷಣವನ್ನು ಮಾಡುವದು ಶುದ್ಧ ಸಾಹಸವಲ್ಲವೋ!

ಹೀಗಿದ್ದಾಗ್ಯೂ ಜನರು ಪ್ರತಿನಿತ್ಯ ಹೆಜ್ಜೆ ಹೆಜ್ಜೆಗೆ ಸುಳ್ಳು ಆಡುತ್ತಾರೆ. ನಾಲ್ಕು ಜನರು ಮಾತಾಡುತ್ತಾ ಕೂತಕೊಂಡಲ್ಲಿ, ಅಸತ್ಯಭಾಷಣಾ ಕಿವಿಗೆ ಬೀಳದೆ ಒಂದು ಅರಗಳಿಗೆ ಸಹ ಹೋಗುವದಿಲ್ಲ. ಇದರ ಇಂಗಿತವೇನಿರಬಹುದು?

ನಾಲ್ಕು ಜನರು ಕೂಡಿ ಮಾತಾಡುತ್ತಾ ಕೂತುಕೊಂಡಾಗ, ಗಿಡ ಮೂರು ಮೊಳ ಆದರೆ ಕಾಯಿ ಆರುಮೊಳ, ಎಂಬಂತೆ ಎಲ್ಲರಿಗೂ ಅಧ್ಭುತ ಕಾಣುವಂತೆ ಏನಾದರೂ ಬರದೇ ಉಳಿಸುವದು ಎಷ್ಟೋ ಜನರ ಸ್ವಭಾವ ವಿರುತ್ತದೆ. ಹೀಗೆ ಸುಳ್ಳು ಆಡುವದರಿಂದ ತಮಗೇನೂ ಲಾಭವಿಲ್ಲೆಂಬುದು ತಿಂಬಾ ಗೊತ್ತಿದ್ದಾಗ್ಯೂ, ಅವರು ತಮ್ಮ [illegible] ಪಾದ ಚಾಳಿಯು ಬಿಡುವದಿಲ್ಲ. ಇನ್ನು ಇಂಥಾ ಸ್ವಭಾವಕ್ಕೆ ಏನು ಅನ್ನಬೇಕು? ಪೇಟೆಯಲ್ಲಿ ಏನಾದರು ಪದಾರ್ಥ ಕೊಳ್ಳುವದಕ್ಕಾಗಿ ಹೋದಾಗ ಬಣಜಿಗನು ಅದರ ಕ್ರಯ ಹೇಳುವದರಲ್ಲಿ ಸುಳ್ಳು ಆಡುತ್ತಾನೆಂದು ಕೂಡಲೆ ತಿಳಿಯುತ್ತೇವೆ. ಇದೇ ಮೇರೆಗೆ ಯಾರಾದರು ತನಗಾಗದವನ ನಿಂದೆಮಾಡುತ್ತಿದ್ದರೆ, ಅದರಲ್ಲಿ ಎಷ್ಟೋ ಅಸತ್ಯ ವಿರುವದೆಂದು ಆಗಲೆ ತಿಳಿಯುತ್ತೇವೆ. ಆದದರಿಂದ ಆ ಮಾತಿನೊಳಗಿನ ಸತ್ಯಾಂಶವನ್ನು ಹೊರಗೆತೆಗಲಿಕ್ಕಾಗಿ ಯತ್ನ ಮಾಡುವ ಕಾರಣ ಬೀಳುತ್ತದೆ. ಯಾಕಂದರೆ ಹಾಗೆ ಮಾಡದೇ ಹೋದರೆ, ವಾಸ್ತವಿಕಕ್ಕಿಂತ ಹೆಚ್ಚು ಬೆಲೆ ಕೊಡುವದರಿಂದ ದುಡ್ಡಿಗಾಗಲಿ, ನಿಂದೆಯಿಂದಲಿ ಲೌಕಿಕಕ್ಕಾಗಲಿ ಹಾನಿ ಬರುವದು. ಆದರೆ, ಸಾಧಾರಣ ಮಾತಿನ ಪ್ರಕಾರ ಬೇರೆ ಇರುವದು. ಅದನ್ನು ಹೇಳುವಾಗ ಉಪ್ಪುಕಾರಾ ಹಚ್ಚಿ ಹೇಳಿದರೆ, ಕೇಳುವವರ ಮನೋರಂಜನವಾಗುವದು. ಇದಲ್ಲದೆ ಅದರಿಂದ ಯಾರಿಗೂ ಲಾಭ ಅಥವಾ ಹಾನಿ ಆಗುವ ಸಂಭವವಿಲ್ಲದೇ ಇರುವದರಿಂದ, ಅದರೊಳಗಿನ ಸತ್ಯಾಂಶವನ್ನಷ್ಟೇ ಶೋಧಿಸಿಹೊರಗೆತರುವದಕ್ಕಾಗಿ ಯಾರೂ ವಿಶೇಷ ಯತ್ನಮಾಡುವದಿಲ್ಲ. ಸರಿ.

ಸಾಧಾರಣ ಮಾತು ಹೇಳುವಾಗ ಅದಕ್ಕೆ ಉಪ್ಪು ಕಾರ

ಹಚ್ಚಿ ಹೇಳಿದರೆ, ಅದರಿಂದ ಕೇಳುವವರ ಮನೋರಂಜನ ವಾಗುವದೆಂದು ಮೇಲೆ ಹೇಳಿಯದೆ. ಈ ಪ್ರಕಾರದ ಮಾತುಗಳನ್ನು ಹೇಳಿ ಹೇಳಿ, ಎಷ್ಟೋ ಕ್ಷುಲ್ಲಕ ಜನರು ತಮಗಿಂತ ಪರಿಷ್ಕರಾದವರ ಲೋಭ ಸಂಪಾದಿಸಿ, ತಮ್ಮ ವಾಸ್ತವಿಕ ಯೋಗ್ಯತೆಗೆ ಮೀರಿದ ಪದಗಳನ್ನು ದೊರಕಿಸುತ್ತಾರೆ. ಆದರೆ ಈ ಪ್ರಕಾರವು ಬಹಳ ದಿವಸ ತನಕ ಮುಚ್ಚಿಕೊಂಡು ಇರುವದಿಲ್ಲ. ಇಸಾಪನ ನೀತಿ ಕಥೆಯೊಳಗಿನ ಸಿಂಹದ ಚರ್ಮವನ್ನು ಹೊದ್ದು ಕೊಂಡಂಥ ಕತ್ತೆಯಂತೆ ಒಮ್ಮೆ ಲೊಮ್ಮೆ ಅವರ ಖೊಳ ಸ್ವರೂಪ ಬೈಲಿಗೆ ಬಂದೇ ಬರುತ್ತದೆ. ಅದು ಬಂದ ಕೂಡಲೆ ಆಗುವ ಆ ಮನುಷ್ಯನ ಅಪ್ರತಿಷ್ಠೆಗೂ, ಮಾನ ಹಾನಿಗೂ ಅಳತೆ ಇಲ್ಲ. ಅವನಿಗೆ ತಿರುಗಿ ಜನರಲ್ಲಿ ಮೋರೆ ಎತ್ತದ ಹಾಗೆ ಆಗಿ ಹೋಗುತ್ತದೆ.

ಅನೇಕ ಭಾಷೆಗಳಲ್ಲಿ ಯಾವ ಪರಿಯಿಂದಲೂ ಎರಡನೆಯವರಿಗೆ ಉಪದ್ರವ ವಾಗದಲೆ ತಿರುಗಿ ಅವರ ಮನೋರಂಜನ ವಾಗುವಂಥಾದು ಇನ್ನೊಂದು ಪ್ರಕಾರವದೆ. ಕಾದಂಬರಿ, ಪಂಚ ತಂತ್ರ, ಅರಬೀ ಭಾಷೆಯೊಳಗಿನ ಸುರಸ ಕಥೆಗಳು ಮುಂತಾದ ಗ್ರಂಥಗಳಲ್ಲಿ ಬರೆದ ಸಂಗತಿಗಳು ಸುಳ್ಳು ಇರುತ್ತವೆಂದು ಎಲ್ಲರಿಗೂ ಗೊತ್ತುಂಟು. ಆದಾಗ್ಯೂ ಅವುಗಳನ್ನು ಓದುವವರಿಗೆ ಯಾವ ತರದಿಂದಲೂ ಹಾನಿ ಯಾಗುವ ಸಂಭವವಿಲ್ಲ. ಇಷ್ಟೇ ಅಲ್ಲ; ಅವುಗಳನ್ನು ಓದುವದರಿಂದ ಮನಸ್ಸಿಗೆ ಬಹಳ ಸಂತೋಷವಾಗುತ್ತದೆ. ಆ ಗ್ರಂಥಗಳಲ್ಲಿ ಹೇಳಿದ ಸಂಗತಿಗಳು ವಾಸ್ತವಿಕವಾಗಿ ಘಟಿಸದೇ ಇದ್ದಾಗ್ಯೂ ಅವುಗಳಲ್ಲಿ ಎಷ್ಟೋ ಘಟಿಸುವ ಸಂಭವವುಂಟು. ಅವುಗಳಿಂದ ಸುಬೋಧವೂ ನೀತಿಯೂ ಪ್ರಾಪ್ತವಾಗುವವು. ಆದ

ದರಿಂದ ಅವುಗಳನ್ನು ರಚಿಸಿದವರು ಸುಳ್ಳು ಆಡಿದ ದೋಷಕ್ಕೆ ಒಳಗಾಗುವದಿಲ್ಲ.

ಮೇಲೆ ಹೇಳಿದ್ದರಿಂದ ಮೇಲಿನ ಇನ್ನೊಂದು ಮಾತು ತಿಳಿಯಬರುವದು. ಅದು ಯಾವದೆಂದರೆ, ಸತ್ಯದೊಳಗೆ ತುಸು ಅಸತ್ಯ ಬೆರಿಸಿದರೆ ಜನರು ಅದನ್ನು ಬಹಳ ಪಾತಕವೆಂದು ತಿಳಿಯುವರು. ಮತ್ತು ಅದನ್ನು ತುಂಬಾ ತಿರಸ್ಕರಿಸುವರು. ಆದರೆ ಮೊದಲಿನಿಂದ ಕಡೆತನಕ ಕೇವಲ ಅಸತ್ಯಮಯವಾಗಿರುವ ಸಂಗತಿಗಳನ್ನು ಕುರಿತು ಅವರು ಎಷ್ಟು ಮಾತ್ರ ಪಾಪರೂ ವಿಪರೀತ ತಿಳಿಯುವದಿಲ್ಲ. ಇದು ಬಹಳ ಆಶ್ಚರ್ಯವಲ್ಲವೋ! ಆದರೆ ಇದರ ಕಾರಣವನ್ನು ಹುಡುಕಲಿಕ್ಕಾಗಿ ಬಹಳ ವಿಚಾರ ಮಾಡತಕ್ಕ ಕಾರಣವಿಲ್ಲ. ಅದು ಬಹಳ ಸುಗಮವಿದೆ. ಸತ್ಯ ಮಾತಿನಲ್ಲಿ ತುಸು ಅಸತ್ಯ ಬೆರಿಸಬೇಕಾದರೆ, ನಾವು ಎರಡನೆಯವರನ್ನು ಅವರಿಗೆ ತಿಳಿಯಗೊಡದರಂತೆ ಮೋಸಗೊಳಿಸುವ ಉದ್ದೇಶದಿಂದ ಬೆರಿಸುತ್ತೇವೆ. ಆದ್ದರಿಂದ ಅದರಲ್ಲಿ ಬಹಳ ಪಾತಕವುಂಟು. ಆದರೆ ಕಲ್ಪಿತ ಕಥೆಗಳಲ್ಲಿ ಅಂಥ ಪ್ರಕಾರವೇನೂ ಇರುವದಿಲ್ಲ. ಅಂದರೇನು, ಆ ಕಥೆಗಳು ಹೇಳಿ ಕೇಳಿ ಸುಳ್ಳು ಇರುತ್ತವೆ. ಹಾಗು ಅವು ಸುಳ್ಳು ಕಥೆಗಳೆಂದು ತಿಳಿದೇ ಓದುವವರಾದರೂ ಓದುತ್ತಾರೆ. ಅವುಗಳನ್ನು ರಚಿಸಿದವರ ಮನಸ್ಸಿನಲ್ಲಿ ಜನರನ್ನು ಮೋಸಗೊಳಿಸಬೇಕೆಂಬ ಉದ್ದೇಶ ಎಷ್ಟು ಮಾತ್ರವಾದರೂ ಇರುವದಿಲ್ಲ. ಆದದರಿಂದ ಈಗ ಹೇಳಿದ ಅಸತ್ಯವು ಪಾತಕವೆನಿಸುವದಿಲ್ಲ.

ಮೇಲೆ ಇಷ್ಟು ಹೊತ್ತು ತನಕ ಹೇಳಿದ್ದರ ಮೇಲಿಂದ ವಿಚಾರ ಮಾಡಿ ನೋಡಲಾಗಿ, ಮನುಷ್ಯನಿಗೆ ತನ್ನ ಮನಸ್ಸೇ

ಸತ್ಯಾ ಸತ್ಯಗಳ ಪರೀಕ್ಷೆಯಲ್ಲಿ ಪ್ರಮಾಣವೆಂದು ಮಾನಗೊಂಡು ಬರುವದು. ತನ್ನ ಮನಸ್ಸಿಗೆ ವಾಸ್ತವಿಕವೆಂದು ತೋರಿಬಂದ ಪ್ರಕಾರ ಆಡುವದೇ ಸತ್ಯವು. ಅದರ ವಿರುದ್ಧವಾದ ಕ್ರಮವೇ ಅಸತ್ಯವು. ಅಸತ್ಯದಿಂದ ಈ ಸಂಸಾರದಲ್ಲಿ ಅಸಂಖ್ಯಾತ ಅನ್ಯಾಯಗಳಾಗುತ್ತವೆ. ರಾಜ್ಯಕರ್ತರು ಅಸತ್ಯ ಪ್ರತಿಬಂಧಕ ಕಾಯಿದೆಗಳನ್ನು ಹೇರಿದ ಮೇಲೆ ಮಾಡುತ್ತಿದ್ದಾಗ್ಯೂ ಅಸತ್ಯದ ಪ್ರಸಾರವು ದಿನೇ ದಿನೇ ಹೆಚ್ಚುತ್ತ ನಡೆದದೆ. ಅಸತ್ಯವನ್ನು ಜನರೇ ಬಿಡಬೇಕು. ಹೊರತು ಕಾಯಿದೆಗಳಿಂದ ಅದನ್ನು ನಿಲ್ಲಿಸುವದಾಗದು.

—o—

A Snggestion to the Local Committees of Village Schools.

ಹಳ್ಳಿ ಸಾಲೀಬಗ್ಗೆ ಬರುವ ಸ್ಥಾನೀಕ ಕಮೀಟಿಗೆ ಸೂಚನೆ

“गोमाजीगणेश पितळेचादरवाजा”

೨೦೭ನೇ ಪುಟದಿಂದ ಮುಂದಕ್ಕೆ ಸಾಗಿದ್ದು

ಜನರ ಶ್ರೇಯವಾದ ಅಭ್ಯಾಸ ಕ್ರಮ ಇಲ್ಲದೆ ಇದ್ದುದರಿಂದ ಉದಾಸೀನರಾಗಿ ಸರಕಾರ ಸಾಲೆಗೆ ಹುಡುಗರನ್ನು ಕಳಿಸದೇ ಇದ್ದ ಮುಖ್ಯ ಮುದ್ದೆಯ ವಿಚಾರ ಅಗದೀ ಆಗದ ಬಡಮಾಸ್ತರಿಗೆ ಹುಡುಗರನ್ನು ಕೂಡಿಸರಿ! ಹುಡುಗರನ್ನು ಕೂಡಿಸರಿ!! ಭಷ್ಟರನ್ಯಾಯ!!! ಹುಡುಗರು ಬಾರದ್ದು ಮೂಲವಿಚಾರವಾಗದೆ ಅಭ್ಯಾಸ ಆಗಿಲ್ಲ; ಮಾಡರಿ ಕಮ್ಮಿಪಗಾರ, ಹಾಕರಿ ಶಿಕ್ಷಕ, ಕೊಡರಿ ಬಡತರ್ಫೆ; ಏನು ಗಮ್ಮತ್ತು ಇದು! ಏಕತ್ರಿತ ಜ್ಞಾನಶೂನ್ಯ ಗ್ರಾಮಮಾಸ್ತರನೇ ಜನರ ಶ್ರೇಯಸ್ಸಿಗೆ ಆಧಾರಣ ಪ

ಬೇರೆಗತಿಯು ವ್ಯರ್ಥವಲ್ಲವೇ? ಇವು ಮೂರೇ ವಿಷಯಗಳು ಸರಕಾರೀ ಶಾಸ್ತ್ರರ ಕಯಿಗಳಿಟ್ಟರೆ ಪ್ರೀತ್ಯಾಸ್ಪದನಾಗಿಯೂ ಚನ್ನಾಗಿಯೂ; ಶುದ್ಧವಾಗಿಯೂ ಅತಿಸ್ವಸ್ಥವಾಗಿಯೂ ತಯಾರುಮಾಡಲಾರನೇ? ನೋಡಿರಿ ೬|೭ ವರ್ಷದ ಹುಡುಗ ತ್ರಿಕಸೇ ವರ್ಷಕ್ಕೆ ನಿಶ್ಚಯವಾಗಿ ಬರಿಯುವುದಕ್ಕೆ ತಯಾರಾಗುವನು. ಜನರಿಗೆ ಹಿತವಾಗುವದು. ಶಾಸ್ತ್ರ ಸಂತೋಷಿಸರುವನು ಹ್ರೊತ್ರ ೮ ಗಿನರೀತಿ ಅನಸಕ್ಯವಾಗಿ ಸಾಧಾರಣ ಉತ್ಸಕಳದ್ದ ೧೫
ಜನರು ಹುಡುಗನನ್ನು ಸಮವಾಗಿ ಸಾಲಿಗೆ ಕಳಿಸೋದಿಲ್ಲ; ವೇಳ್ಳಕ್ಕೆ ಫೀಕೊಡೋದಿಲ್ಲ. ಹುಕುಂ ನೋಡಿದರೆ ೧೦ತಾರೀಖಿನ ಒಳಗಾಗಿ ಫೀ ಕೊಡದವು ಹೆಸರುತೆಗೀಬೇಕು. ಹೆಸರು ತೆಗೆದರೆ ಶಾಸ್ತ್ರಗ ಥಾಳಿ. ತಗಿಯದಿದ್ದರೆ ವರ್ಷಶ್ರಾದ್ಧ ದಕ್ಷಣಾ ಶರಮಾಹಾ ಬಿಟ್ಟೀತೆ? ಫೀ ಇಂದ ನಾಳೆನಾದರು ಕೊಡತೀವಿ ಅಂದು ಕ್ರ್ಯಾವಾದ ವಸು ಗೊತ್ತಿಲ್ಲ? ಇದಕ್ಕೆ ಉಪಾಯವಿಲ್ಲ? ಇದು ಸರಕಾರೀ ಫೀ ಅಲ್ಲವೆ? ಸರಕಾರೀ ಮುರ್ಗತು ಇರಬಾರದು? ಇದರಲ್ಲ ಶಾಸ್ತ್ರನತಪ್ಪೆ? ವಾಹವಾರೆ ಶಾಸ್ತ್ರ ನತಿಬ!!! ಹುಕುಮಿನಾಂತ ಕಾಯದ ನಡಿಸಿದರೆ ೧೦ನೇ ತಾರೀಖಿಗಶಾಸ್ತ್ರರ ಬಿಬ್ಬನದ ಪಟ್ಟಕ್ಕೆ ಹೆಸರುಹಚ್ಚಿ ಬಾಗಲಿಗೆ ಈದಾಗ ಬೇಕಾಗುವದುನಿಶ್ಚಯ! ನಿಶ್ಚಯ! ನಿಶ್ಚಯ!!! ಗೊತ್ತುಹಚ್ಚಿ ನೋಡಬೇಕಾದರೆ ಸುಧಾರಿಸಿದ ಬಿಬ್ಬ ನೇಟೀವಗಾಗಲೀ ಯುರೋಪಿಯನ್‌ಗಾಗಲಿ ಹುಳ್ಳಿಸಾಲೀಮೇಲೆ ಆರು ತಿಂಗಳವರಿಗೆ ಇಟ್ಟು ಪರೀಕ್ಷಿಸಬೇಕು. ಅಂದರೆ ಹಜರಿಪಟ್ಟಿಯು ಹುಡುಗರಲ್ಲಿ ಬರುವ ಹುಡುಗರು ನೀವು, ಬಾರದಹುಡುಗರನ್ನು ಜರೂರಿನ್ನು ಸಂಗಕ್ಕೆ ಶಾಸ್ತ್ರರನ್ನೇ ವರ್ಗಿನವೇಲೆ ಧೋತರಾಹಾಕಿಕೊಂಡು ಕರೀಲಿಕ್ಕೆ ಹೋಗಬೇಕು. ಅಂಗಳದಲ್ಲಿ ನಿಂತರೂ ಶೂಂಭುರಾದ ಟೋಪಿ

ರು ಮೇಲಕ್ಕೆ ಕರಿಯಲಿಕ್ಕಿಲ್ಲ. ಕರಿದರೂ ಪ್ರೋತ್ಸಾಹಿಸಿ ಬಾಯಿ ತೆರೆ ಸು ಗೃಹ ಛಿದ್ರ ಮಾಡಬೇಕು. ಹುಡುಗರ ಅಕ್ಷರಗಳನ್ನು ಹುಸ್ಸು ಕಾಲಕ್ಷೇಪನಂತೆ ತಲೆಹಾಕುತ್ತ ಕೇಳಬೇಕು ಕಡೆಗೆ ಹುಡುಗಹಿಲ್ಲ ಅಂತಾನರಿ. ಅಗ್ಗ ಮಾಸ್ತರನೇ ಹೋಗಿ ಗಡ್ಡಮುದ್ದ ಡಿಸಬೇಕು ಹಾಗೇ ಹುಡುಗಂಡು ತಾಯಿತಂದೆ ಬಾಯಿಲ ನೋತ್ರ ಮಂತ್ರ ಜಪಿಸುತ್ತಿರಬೇಕು. ಕೈಗೆ ಸಂಬಳ ಕೊಟ್ಟರೆ ಯಾರೂ ನೋಡದ ಹಾಗೆ ಮರಸಬೇಕು. ಹುಡುಗನ ರುಮಾಲ ಸುತ್ತಬೇಕು ಒಗಲೊಳಗೆ ಎತ್ತಿಕೊಂಡು ಸಾಲೆಗೆ ಒಯ್ಯಬೇಕು ಪರೀಕ್ಷಕರು ಬರುವಾಗ ಒಂದೊಂದು ಹುಡುಗರು ನೊಕ್ಕ ತಲೆಲ ಬರಬೇಕು. ಅವರಿಗೆ ಅವರ ಧೋತ್ರವೇ ಸುತ್ತಬೇಕು. ಅವರ ಧೋತ್ರದಿಂದ ಅವಂಸುಂಬಳ ಮರಸಬೇಕು. ಮಿಕ್ಕ ಹುಡುಗರ ಮಡಕಸ್ಲೇಟಗಳನ್ನು ಬಿಕ್ಷೆಯ ಜೋಳಿಯಾ ಚಿತ್ತಿಂದ ನರಸಾಳಿತ್ತು ಈ ದಿಗಂಬರ ಹುಡುಗರಿಗೆ ಕೊಡಬೇಕು. ನಾಲ್ಕಾರು ದುಡ್ಡಿನ ಪೇನಸಲು ಕಿಸೆಯಲ್ಲಿ ಇಟ್ಟುಕೊಳ್ಳಬೇಕು. ಅವು ಕೊಡಬೇಕು ಮಸ್ತೇ ಕಾಗದ ತಾಯಿತಂದೆಗಳು ಕೊಡೋದಿಲ್ಲ ಇದ್ದು ಮುಕಶೂರಂಭದ ಆ ಕಾಗದ ಬಿಡಗಸಬೇಕು. ಮುತ್ತು ಹುಡುಗರ ಎಜಮಾನರು ಬಂದು ಹುಡುಗಗೆ ಮಿಠಾಯಿ ಜರಾ ಕಾಯ್ದು ಸ್ಥಳ ಸುಳಿಗೆ ತರತ್ತಾರು. ಈ ಮಾತು ಮರ್ಜಾತನಕಾ ಹೇಳಿಬಿಟ್ಟು ನಿಂತಾಟಿ ಎಲ್ಲರೆ ನೋಡಿ ಕೊಂಡರೆ; ಮುಂದೆ ಬಿಟ್ಟನು ನಿಮ್ಮ ಹುಡುಗಗೆ ಕಾಯಿಗ ಸೋಕ ಕುಡಿ. ಈ ಮಾತುಂಬಿಸ್ಸುಬಿಟ್ಟರೆ ಹುಡುಗರು ನಾಚಿ ಅಕ್ಷರಕ್ಕೆ ಮಾಸ್ತರಗೆ ಥಾಳೀ ಸ್ಪಿನ ಬೆ... ಅದ್ದರಿಂದ ಇವು ಮನ್ನಿಸಕ್ಕೇಬೇಕು. ಒಟ್ಟು ಹುಡುಗನು ಅವಿಚಾರನು, ದಾಂಡಿಗನು, ಕಳವು ಮಾಡಿದ್ದು ಮಾಸ್ತರ ಸ್ಥಿತಿ ... ದರೆ ಎಜಮಾನನು ಕಂಗೆಕೆಕ್ಕರಿತ ಬರುತಾನೆ ಹೀ ಒಡೆವ ಮರಿಗೆ

ಕೇಳಿದರೆ ಸಾಹುಕಾರನ ಕೊಟ್ಟೇವು ಹೀಗೆ ಎಳಕಲೇಗಿಹಾಕಿ ಕೊ
ಡಲಿಕ್ಕೇ ಇಲ್ಲಾ ಕೊಡುವವರು ತಿಂಗಳಅಪ್ಪೆಂಕ್ಕೆ ಕೊಡಬೇಕು.
ಮುಂದೆ ಎರಡನೇ ತಿಂಗಳಿಷೇ ಕೇಳಿದರೆ, ಆಹಾ! ಇನಾಮೊನ್ನೆ
ಕೊಟ್ಟೇವಿ ಕ್ಕೆ ಆರಿಲ್ಲಾ ಏನ ಹೋಗಲೇ ಚಿರಿಚಿರಿಗಿ ಫಿಯಾ, ಫಿ
ಯಾ, ಫಿಯಾ, ನಾಳೀ * * * ಬಾರಲೆಹ್ರುದಗಾ ಗಂ
ಟಿತಗೊಂಡು. ಎಂದು ಹುರ್‍ರಂತ ಅಬ್ಬರಿಸಿದಾಗ ಬಾಯಿಮ್ಯಾ
ಲಡೋ ಕೆಳಗಡೊ ತಿಳಿಯದ ಹ್ಯೋಗುತ್ತದೆ. ಆಮೇಲೆ ಗೌಡ
ಕುಲಕರ್ಣಿರ ಬಳಿಗೆ ಫಿರ್ಯಾದು. ಅವರು ಗುಣಜ್ಞರಿದ್ದರೆ ಎ
ರಡುತಾಸಿಗೆ ಖಟ್ಲೆಗಳನ್ನಿ ನಿಕಾಲ ಮಾಡುತ್ತಾರೆ. ಇಲ್ಲದಿದ್ದರೆ
" ವ್ಹಾನ್ಸೋಬಾ " ಅಂಥಾ ಸಂದುನೋಡಿ ಕೆಲವ ಗ್ರಾಮಾಧಿ
ಕಾರಿಯಾ ಕಾರ್ಯಾಧಿಕಾರಿಯುರು ಮಾಸ್ತರಿಗೆ ಸಾಲಾಅಂತ
ಬೇಡುತ್ತಾರೆ. ಕೊಡದಾಕ್ಷಣಕ್ಕೆ ಒಂದೆರಡು ಗೊಂಬಸಹವಾಗಿ
ಅರ್ಜಿಯೇ ತಯಾರ ಆಗುತ್ತದೆ. ಹಾಯಹಾಯಿ ಎಷ್ಟುಸಂಕಟ
ಎಂಥಾ ದುಃಖವಯ್ಯಾ? ಇದು ಸರಕಾರೀ ನೌಕರೀಯೇ? ಛಲೇ
ರಸ್ಸೆವ! ಖಾಹಖಾರೆ ಹಿಂರೆಕ್ಕನೆ!! ಭಲೆಹ್ರುಕುಂ ನಿನ್ನದೇ ಸ್ವೆ
ಸ್ವೆ ಈ ದುಃಖದಸಂಕಟಗಳು ಶಾಲೆಹಾಕದ ಮಾನವಗೆ ಒಮ್ಮೆಗೆ
ಮನದಲ್ಲಿ ಬರಲಾರವು ಪರೀಕ್ಷಿಸಿದರೆ ಈ ಯಾವತ್ತುದರ ಗೊತ್ತು
ಹತ್ತದೇ ಇರಲಾರದು ಮಾಸ್ತರರ ಸಂಕಟಪ್ಪೆಕಿ ಜನರು ಪ್ರಸ್ತಿ
ಯು ಕಾಗದ ಕೊಡುವದಿಲ್ಲೆಂದು ಈಗ್ಗಿಮನದಟ್ಟಿ ಮು. ರಸಲದೊ
ರಗಳು ಶಾಲಾಪತ್ರಕದ ಮೋ ಅಂಕಿಯಲ್ಲಿ ನೋಟಿಸು ಕೊಟ್ಟಿ
ದ್ದಾರೆ. ಹಾಗೂ ಜುಲಾಯಿ ಅಂಕಿಯಲ್ಲಿ ಮಾಸ್ತರರಿಗೆ ಫೀ
ಕ್ಕೆಯಿಂದಾ ಬಹ್ರುಕ. ಬೀಳಲಿಕ್ಕಿಲ್ಲಾ ಆದಾಗ್ಯೂ ಮಾಸ್ತರರಿಗೆ
ಶಾಸ್ತ್ರಮಾಸ್ತರು ಬಹಳೇ ಅಡಚಣೆಯೊಳಗೆ ಹಾಕುತ್ತಾರೆ ಇದಕ್ಕೆ
ಸಂಶಯವಿಲ್ಲಾ ಅಂತಾ ಇಲಾಖೆ ಸಕ್ರ್ಯುಟರಿಯಿಂದಾ ನೋಟೀಸ

ಭಾಷಿಸಿದ್ದು ನೋಡಿ ಇನ್ನು ಮಾತ್ರ ದಿನದಿನ ಮಾಸ್ತರ ಸಂಕಟಗಳು ಅಧಿಕಾರಸ್ಥರ ನಜರಿಗೆ ಮನದಟ್ಟಿ ಆಪ್ಪವೇ ದೂರಾಗುವವು ಎಂದು ದೊಡ್ಡದೊಡ್ಡ ದೇಸಾಯಿಗಳು ಸಹ ಅನ್ನಹತ್ತಿದ್ದಾರೆ. ಇದು ಬಹು ಸಂತೋಷದಮಾತು. ಇದರಹೊರ್ತು ಈಗ ಮಾಸ್ತರರು ಎಷ್ಟೇ ಮೆಹನತ್ತು ಮಾಡಲಿ ಅದರ ಅಂಶಸುದ್ಧಾ ಅವರಿಗೆ ಬಡತಿ ದೊರೆಯುತ್ತದೆ ಅಂದರೆ ಅರ್ಧರೂಪಾಯಿ, ಮೂರಪಾವಲು, ೧ ರೂಪಾಯಿ ಏರುವದು. ಇದಕ್ಕಂತೂ ಎಲ್ಲಾ ಮಾಸ್ತರಜನರು ಬಹು ಸಂತೋಷಭರಿತ ಆಗಿದ್ದಾರು. ಸಂಶಯವಿಲ್ಲ. ಆಹಾ ರಾಯರೇ ನಿನ್ನೆ ರಾತ್ರಿ ನನಗೆ ಒಂದು ಕನಸು ಬಿದ್ದಿತ್ತು ಅದೇನಂದರೆ ಒಬ್ಬ ಕಪ್ಪ ಲಂಗೋಟಿಯಲ್ಲಿ ನೇತ್ರವುಳ್ಳ ಮಹಾ ಪುರುಷನು ಬಂದು ಎಲಾ! ಇನ್ನು ಮುಂದೆ (೫) ರೂಪಾಯಿಗೊಬ್ಬ ಮಾಸ್ತರನು. ಎರಡು ರೂಪಾಯಿಗೊಬ್ಬ ಶಿಕ್ಷಕನು ಆಗುವನು ತಿಳಕೊಳ್ಳು ಅಂದನಾಗ್ಗೆ ಎಚ್ಚರಾಯಿತು. ಇದು ಚಿತ್ತೂರ ಭೀಮಲಿಂಗನಂಥ ಕನಸೋ ಭವಿಷ್ಯೋ ತಿಳಿಯದು ಇದರಂತೆ ಅಮಲಿನಲ್ಲಿ ಬಂದರಂತೂ ಚಿಕ್ಕ ಹಳ್ಳಿಗೆ ಸಹ ಶಾಲೆ ಆಗಿ ಬಹು ಜನರು ಅನ್ನಕೊಡುವರು ಆದರೆ ಈ ಯಾವತ್ತು ಮುಖ್ಯಮುಖ್ಯ ಮುದ್ದೆಯಬಗ್ಗೆ ಮುಂದೆ ಸ್ಥಾಪಿಸುವ ಆಯಾಸ್ಥಾನೀಕ ಕಮೀಟಿದಾರರು ಜಾಗ್ರತೆಯಿಂದ ವಿಚಾರಮಾಡಿ ಮೇಲೆ ಮೇಲೆ ಸಭೆಮಾಡಿ ಸಾರ್ವಜನೀಕ ಹಿತವಾಗುವಹಾಗೆ ಸುಧಾರಿಸಿ ಗೋಮಾಜಿಗಣೇಶಗೆ ಕಡೆಗೆ ಸುಖದಲ್ಲಿಟ್ಟಂತೆ ಬೋಧಕರಿಗೆ ಇಡುವರೆಂದು ವಿನಯ. ಬಿನ:

ತಾ. ೧೨ಮಾಹೆ ಸಪ್ಟಂಬರ ಹನುಮಂತ ಶ್ರೀನಿವಾಸ ಹತ್ತ
ಸನ್ ೧೮೮೩ ಮು. ಧವಳಗಿ } ರಕೀಹಾಳ ಸ್ಕೂಲಮಾಸ್ತರ ಧ
ತಾ. ಮುದ್ದೇಬಿಹಾಳ ಜಿ. ಕ. { ವಳಗಿ.

Correspondence.

ಪತ್ರವ್ಯವಹಾರವು.

ರಾ. ರಾ. ದಕ್ಷಿಣಭಾಗದ ಪತ್ರಿಕದ ಎಡಿಟರರ ಸನ್ನಿಧಿಗೆ—

ವಿ. ವಿ. ತಾವು ವಿದ್ಯಾಭಿವೃದ್ಧಿಗೆ ಮೂಲಕಾರಣರೂ ಹಾಂಗು ದಯಾಸಾಗರರೂ ಅಂತ ತಿಳಿದು ಕೆಳಗೆ ಬರೆದ ಮಹತ್ವವಾದ ನಾಲ್ಕು ಸಂಗತಿಗಳನ್ನು ತಮ್ಮ ಕಡೆಗೆ ಕಳುಹಿಸಿದ್ದೇನೆ; ಅವುಗಳ ವಿಷಯ ಅನಾದರ ಮಾಡದೆ ಅವಶ್ಯವಾಗಿ ಮುದ್ರಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಧಾರವಾಡ ಶಹರದಲ್ಲಿರುವ ಸಮಸ್ತ ಲಿಂಗಾಯತ ಶೆಟ್ಟಿ ಸಾಹುಕಾರರೂ, ಇತರ ಮುಖಂಡಜನರೂ ಕೂಡಿ 'ಲಿಂಗಾಯತ ವಿದ್ಯಾಭಿವೃದ್ಧಿ ಸಭೆ' ಎಂಬ ಒಂದು ಸಮಾಜವನ್ನು ಸ್ಥಾಪಿಸಿದ್ದಾರೆ. ಸುಮಾರು ಒಂದು ಲಕ್ಷರೂಪಾಯಿ ಫಂಡು ಲಿಂಗಾಯತರಿಂದಲೇ ಜಮಾಯಿಸಿ, ಬ್ಯಾಂಕಿನಲ್ಲಿಟ್ಟು ಅದರ ಬಡ್ಡಿಯ ಹಣದಲ್ಲಿ ಲಿಂಗಾಯತ ವಿದ್ಯಾರ್ಥಿಗಳಿಗೆ "ಸ್ಕಾಲರಶಿಪ್" ಕೊಟ್ಟು, ಅವರನ್ನು ಪೂನಾ, ಮುಂಬಯಿ, ಕಲಕತ್ತಾ ಮುಂತಾದ ದೊಡ್ಡ ದೊಡ್ಡ ಶಹರಗಳಲ್ಲಿರುವ ಮಹಾ ಶಾಲೆಗಳಲ್ಲಿ ಇಟ್ಟು, ವಿದ್ಯಾಕಲಿಸಿ ಲಿಂಗಮತಸ್ಥರನ್ನು ಊರ್ಜಿತ ಸ್ಥಿತಿಗೆ ತರಬೇಕೆಂಬುವದೇ ಈ ಸಭೆಯವರ ಮುಖ್ಯ ಉದ್ದೇಶ ಉಂಟು. ಈ ವೃತ್ತಾಂತವನ್ನು ಕೇಳಿ ಯಾವತ್ತು ಲಿಂಗಾಯತ ಸಮೂಹಕ್ಕೂ ಹಾಂಗು ಅವರ ಹಿತಚಿಂತಕರಿಗೂ ಸಮಾಧಾನವಾಗಬೇಕಾದದು. ಈ ಸಭೆಯವರ ಕೆಲಸವು ನಿರ್ವಿಘ್ನವಾಗಿ ನಡೆದರೆ, ಸ್ವಲ್ಪಕಾಲದಲ್ಲಿಯೇ ಜಡಬುದ್ಧಿಯೆನಿಸಿಕೊಂಡ ಲಿಂಗವಂತರೇ ಚನ್ನಾಗಿ ತಿದ್ದಲ್ಪಟ್ಟು, ಯುನಿವರ್ಸಿಟಿಯ ಪದವಿಗಳನ್ನು ಪಡೆಯುವದು ಮಾತ್ರವಲ್ಲ ಉಪಯುಕ್ತ ಕಲಾಶಾಸ್ತ್ರಗಳಲ್ಲಿ ಸ

ಹಿಂತ ನಿಷ್ಣಾತರೆಂದೆನಿಸಿಕೊಳ್ಳುವರು.

ಈ ಸಭೆಯವರ ದೀರ್ಘ ಪ್ರಯತ್ನಗಳನ್ನು, ಸಾಹಸವನ್ನೂ ನೋಡಿದರೆ ನಂಬ ಆಶ್ಚರ್ಯವೂ ಆನಂದವೂ ಆಗುತ್ತದೆ. ಇಂಥಾ ಸ್ತುತ್ಯ ಆಲೋಚನೆಯು ತಮ್ಮ ಹೃದಯದಲ್ಲಿ ಅಂಕುರಿಸಿದ್ದು, ಪರಮೇಶ್ವರನ ಅಪಾರವಿತ ಕೃಪೆಯೂ, ನಮ್ಮ ಶಿವಮತಸ್ಥರ ದಾರಿದ್ರ್ಯ ಛಿನ್ನವಾಗದ ಸಮಯವೂ, ಸಮೀಪಿಸಿತೆಂಬುವದು ಸ್ಪಷ್ಟವದೆ. ಈ ಸಭೆಯವರ ಉದ್ದೇಶವು ಕೈಗೂಡಿ ಬರುವಂತೆ, ಸಮಸ್ತ ಲಿಂಗಾಯತ ಮತಾಭಿಮಾನಿಗಳು ಏಕಮನಸರಾಗಿ, ಸಹಾಯ ಮಾಡುವಂತೆ ಅವರಿಗೆ ಬುದ್ಧಿಕೊಡಲೆಂದು, ಅಂತರಾತ್ಮಕ ದಯಾಪರನಾದ ಉಮೇಶನನ್ನು ಕುರಿತು ಮನಃಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಹೇ ಶಿವ ಮತಸ್ಥರೇ, ಹೇ ಮಮ ಪ್ರಿಯ ಬಾಂಧವರೇ! ಇಷ್ಟು ದಿವಸಗಳಂತೆ ಇನ್ನು ಮುಂದೆ ನಿದ್ರಾವಶನ್ಯರಾಗಿ ಕೂಡ್ರುವದು ಸಮವಲ್ಲ. ಈಗ್ಗೆ ಯೋಗ್ಯಕಾಲವು ಸಂಭವಿಸಿದೆ. ನೀವೆಲ್ಲರೂ ಏಳಿರಿ. ನಡಕಟ್ಟಿಕೊಳ್ಳಿರಿ. ಕ್ರಮೇಣ ನಿಕೃಷ್ಟಾವಸ್ಥೆಗೆ ಇಳಿಯುತ್ತಿರುವ ಈ ಲಿಂಗವಂತ—ಸ್ತ್ರೈಣಾವಸ್ಥೆಗೆ ನಿಮ್ಮ ದಾತೃತ್ವವೆಂಬ ಭುಜಗಳ ಆಧಾರಕೊಟ್ಟು, ಅಂಬರಕ್ಕೆ ನೆಗವಿರಿ. ಈ ಪ್ರಸಂಗದಲ್ಲಿ ನಿಮ್ಮ ಕಣ್ಣುಗಳನ್ನು ತೆಗೆದು ವಿಚಾರಮಾಡದೆ ಇದ್ದರೆ, ನಿಮ್ಮ ಕಾಲಮೇಲೆ ನೀವೇ ಕಲ್ಲುಹಾಕಿಕೊಂಡ ಅಪವಾದಕ್ಕೆ ಗುರಿಯಾಗುವಿರಿ. ನೀವು ನಿಮ್ಮ ಪ್ರೀತಿಯ ಹಣವನ್ನು ಪ್ರತಿವರ್ಷಕ್ಕೆ ಕೊಡುವ ನಿರ್ಧಾರಮಾಡಿ, ಅದರಂತೆ ತಪ್ಪದೆ ಎಲ್ಲರೂ ವರ್ತಿಸಿದರೆ, ಸ್ವಲ್ಪಕಾಲದಲ್ಲಿ ಹಿಂದು ಲಕ್ಷವ್ಯಾಕೆ, ನಾಲ್ಕು ಲಕ್ಷ ರೂಪಾಯಿಯ ಭಾಂಡವಲವು ಸಹಜವಾಗಿಯೇ ಕೂಡಬೀಳಬಹುದು. ಈ ಧಾರವಾಡಜಿಲ್ಲೆಯಲ್ಲಿ

ನಡೆಯುತ್ತಿರುವ ಅನೇಕ ಸಾರ್ವಜನಿಕ ಇಮಾರತಿಗಳೂ ಅಂ
ದರೆ ಧಾರವಾಡ, ಹುಬ್ಬಳ್ಳಿ, ಗದಗ ಮುಂತಾದ ಶಹರಗಳ
ಲ್ಲಿರುವ ಭವ್ಯಮಾರ್ಕೇಟುಗಳೂ, ವಿದ್ಯಾಲಯಗಳೂ, ಕೆರೆಭಾವಿ
ಗಳೂ ಗುಡಿಗೋಪುರಗಳೂ ವಿಶೇಷವಾಗಿ ನಿಮ್ಮ ಹಣದಿಂದಲೇ
ಕಟ್ಟಲ್ಪಡಲಿಲ್ಲವೇ? ಅವುಗಳ ಉತ್ಪಾದಕರು ನೀವೇ ಅಲ್ಲವೆ!
ಇದಲ್ಲದೆ ಲಗ್ನ, ಕಾರ್ಯ, ಗಣಪತಿ ಹಾಗು ಅಡ್ಡಪಲ್ಲ
ಕ್ಕಿ ಮುಂತಾದ ಉತ್ಸವದ ಕೃತ್ಯಗಳಲ್ಲಿ ಅಪರಿಮಿತ ಹಣ
ಖರ್ಚ ಮಾಡಿದ ಕೀರ್ತಿಯು ಇಡಿ ಕರ್ನಾಟಕ ದೇಶವನ್ನೇ
ತುಂಬಿಇದೆ. ಇಂಥಾ ಕ್ಷಣಿಕ ಸಂತೋಷಕ್ಕಾಗಿ ಅಸಂಖ್ಯ ದ್ರ
ವ್ಯ ವ್ಯಯಮಾಡಲಿಕ್ಕೆ ಹಿಂದೆಮುಂದೆ ನೋಡದಂಥಾ ಲಿಂಗಾ
ಯಿತ ಪುತ್ರಸ್ಥರಾದ ನೀವು, ಈ ಚಿರಕಾಲ ಬಾಳಿರುವಂಥ,
ನಿಮ್ಮ ವಂಶೋದ್ಭವರ ಸೌಖ್ಯಕ್ಕೆ ಕಾರಣೀಭೂತವಾದಂಥ,
ಶಿವಮುಸ್ಕರ ಊರ್ಜಿತಸ್ಥಿತಿಗೆ ನೆಲೆಯಾದಂಥ ಈ ಸ್ತುತ್ಯ 'ಲಿಂ
ಗಾಯತ ವಿದ್ಯಾಭಿವೃದ್ಧಿ ಫಂಡಿಗೆ' ತ್ರಿಕರ್ಣಪೂರ್ವಕವಾ
ಸಹಾಯಮಾಡಲಿಕ್ಕೆ ಸರ್ವಥಾ ಹಿಂದೆಮುಂದೆ ನೋಡಬೇಡರಿ
ಒಬ್ಬರಮೇಲೊಬ್ಬರು ಹಾಕಬೇಡರಿ. ಸ್ವತಃ ನಿಮ್ಮ ನಿಮ್ಮ ಕೈ
ಗಳನ್ನು, ಆವೇಶದಿಂದ ಮುಂದೆ ಮಾಡಿರಿ. ಈ ಸತ್ಕೃತ್ಯಕ
ಹಾಕಿದಂಥ ದ್ರವ್ಯವು ಸರ್ವಥಾ ನಿಷ್ಪ್ರಯೋಜನ ವಾಗಲಿಕ್ಕಿಲ್ಲ. ಅ
ದು ನಿಶ್ಚಯ ವಾಗಿ ನಿಮಗೂ, ನಿಮ್ಮ ಸಂತಾನಕ್ಕೂ ಸೌಖ್ಯವನ್ನೂ
ಕೀರ್ತಿಯನ್ನೂ ಅಭಿವೃದ್ಧಿಸುವದಕ್ಕೆ ಮೂಲಕಾರಣವಾಗಿದೆ

ಹೇ ವಿದ್ಯಾಖಾತೆಯಲ್ಲಿರುವ ಸಮಸ್ತ ಲಿಂಗಾಯಿತ ಹೆಂ
ಮಾಸ್ತರರೇ, ಅತಿಸ್ನೇಹಿ ಮಾಸ್ತರರೇ, ನೀವು ಈ ಫಂಡಿನಿ
ದಾಗತಕ್ಕ ಲಾಭಗಳನ್ನು ಚೆನ್ನಾಗಿ ತಿಳಕೊಂಡವರಾದದ್ದರಿಂದ,
ಮಾ ನಿಮ್ಮ ಗ್ರಾಮಗಳಲ್ಲಿರುವ ಶ್ರೀಮಂತಜನರಿಗೆ ಉತ್ತೇ

ನಕ್ಕೂಟದ್ದು, ಸ್ವಹಸ್ತವಾಗಿಯೂ ಪರಹಸ್ತವಾಗಿಯೂ ಈ ಕೇಳಿ ನಕ್ಕೆ ಕೈಲಾದಷ್ಟಿಗೆ ಸಹಾಯ ಮಾಡಬೇಕೆಂದು ಬಿನ್ನೈಸುತ್ತೇನೆ.

ಧಾರವಾಡ | ಗಂಬಸಪ್ಪಾ ಷ. ಹಳಕಟ್ಟಿ ಶಾ.
ತಾ. ೨೨।೧೧।೯೩೩. | ಮಾ. ಶಾ. ನಂಬರ ೩ ಧಾರವಾಡ.

—o—

(೨೧೭ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

ಪಾರ್ವತೀಪರಮೇಶ್ವರರ ಸಂವಾದವು.

ಈಶ್ವ.—ಪಾ.—ಎಲೋ! ನೀನು "ಪಶುಪತಿ" ಯೆಂತಹೇಳುತ್ತೀಯೆ (ಪಶುನಾಂ+ಪತಿ=ಪಶುಪತಿ) ಪಶುಗಳಿಗೆ ಈಶನಾದ ಸ್ವಾಮಿ' ನಾದರೆ; ನಿನ್ನ ತಲೆಯಮೇಲೆ ಸೋಗಯಿಸುವ ಕೋಗಳು, ಧುಂಕತೋರೋರೋಣಲ್ಲ? ನಟಿಸುವಗಳನ್ನಾಡುತ್ತಾ ಸಂದಣಿಯದ ಗಮಿಸೆಂದಳು. ॥ ೧೨ ॥

ರಾಗ। ಮು। ಆ॥ ಅಂಗನೇವರ ಚಂದವದನೆಖು।ರಂಗನಯನಹೇ ಬಂಗಮನಯೆ॥ ಶೃಂಗವಿಹಪ್ಪವನಲ್ಲ ಲಾಯಿಸು। ನಂಗಹರಭೂತೇ ಬಿಡುಸ॥ ಸ್ವಂಗಧಾರಿಣೀ। ಜನನುತ।ರಂಗಚರಣಿತೇ ॥ ೧೩ ॥

ಈಶ್ವ.—ಪ.— ಎಲೇ! ಶ್ರೇಷ್ಠವಾದ ಮೋರೆಯುಳ್ಳಂಥಾ, ಖುರಂಗನಯನೆ ಖುರಂಗ=ಹರಿಣ ಮೃಗದ ಕಣ್ಣಿನಹಾಗೆ, ನಯನೆ=ನೇತ್ರಗಳುಳ್ಳಂಥಾ, ಹೇಮೆಲ್ಲ ಗಿನಡಕೆಯುಳ್ಳಂಥಾ, ಸ್ತ್ರೀಯಾದ ಪಾರ್ವತಿಯೇ! ನಾನು ಕೋಡುಗಳುಳ್ಳ ಬಸವನಲ್ಲ. ಅನಂಗಹರ [ಅನಂಗ = ಕಾಮನನ್ನು, ಹರ, ನಾಶಮಾಡಿದಂಥಾ] ಭೂತೇಶ 'ನಾಗ್ಯ'ರಿಂದ ಬಾಗಿಲುಬಿಡು, ನೀನಂಥವಳೆಂದರೆ, ಸತ್ಸಂಗಧಾರಿಣೀ [ಸತ್ = ಒಳ್ಳೆಯವರ, ಸಂಗ = ಸಹವಾಸವನ್ನು ಧಾರಿಣೀ = ಕೈಗೊಂಬುವವಳು.] ಮತ್ತು, ಜನನುತರಂಗಚರಣೀ

(ಜನ = ಜನರಿಂದ, ನುತ = ನುತಿಸಿಕೊಳ್ಳುವ, ರಂಗು = ಸುಂದರವಾದ, ಚರಣ = ಪಾದಗಳುಳ್ಳವಳು) ಎಂದನು. || ೧೩ ||

ರಾಗ | ಏ || ಲೇಸಾಯಿತ್ತೈಯ್ಯನಾನು | ಪೇಳುವೆನು ಭೂತೇಶನೆ ಕೇಳು ನೀನು || ಶಾಶ್ವತಾಶ್ವತ್ಥಪ್ರಕಾಶಿತಮಹಿಮೋಳು | ವಾಸಿಸು ನಡೆಯೆಂದಳೂ ||೧೪||

ಟೀಕು — ಪಾ — ಎಲೋ? ನಾನು ಹೇಳುತ್ತೇನೆ ಕೇಳಯ್ಯಾ? 'ಭೂತಾನಾಂ + ಈಶಾ = ಭೂತೇಶ' ನೀನು ಪಿಶಾಚಿಗಳಿಗೆ ಒಡೆಯನಾದ ಬ್ರಹ್ಮರಾಕ್ಷಸನಾದರೆ; ಅಳುಕಿಲ್ಲದ ಅಶ್ವತ್ಥಮರ ಅಥವಾ, ಶೋಭಿಸುವ ಆಲದಮರದಲ್ಲಿ ವಾಸಮಾಡಿಕೊಂಡಿರು. ನಡೆಯೆಂದಳು. || ೧೪ ||

ರಾಗ || ಮು | ಖ್ಯಾತಕೇಳ್ ವರನೀತೆಪಂಚಮ | ಗೀತಪಸೂಧಾರಮಾತೆಮಾರ್ಗತಿ || ಭೂತನಲ್ಲವೆ ನಾನು ಕುಜನರ | ಘಾತಪಂಚಾನನನು ಮಮಪ್ರಿಯ | ದೂತದಾತೇ | ಅರ್ಣವ ಜಾತಪ್ರೀತೇ ||೧೫||

ಟೀಕು — ಪಾ — ಎಲೇ! ಕೀರ್ತಿಹೊಂದಿದಂಥಾ, ಹೆಚ್ಚಿನ ನೀತಿಯುಳ್ಳಂಥಾ, ಪಂಚಮಸ್ವರದಲ್ಲಿ ಹಾಡುವಂಥಾ, ಭೂಜನಿಯಾದಂಥಾ, ಮಾರ್ಗತಿಯೆ? ನಾನು ಕುಜನಘಾತ (ಕುಜನ = ಕೆಟ್ಟವರನ್ನು, ಘಾತ = ನಾಶಮಾಡುವ,) 'ಪಂಚಾನನ' ನಾಗಿದ್ದೇನೆ. ನೀನೆಂಥವಳೆಂದರೆ, ಮಮಪ್ರಿಯ ದೂತದಾತ [ಮಮ = ನನ್ನ, ಪ್ರಿಯ = ಪ್ರೀತಿಯುಳ್ಳ, ದೂತ = ದಾಸಳು, ಮತ್ತು, ದಾತ = ಧರ್ಮಿಷ್ಠಳು,] ಹಾಗೂ, ಅರ್ಣವಜಾತಪ್ರೀತೆ (ಅರ್ಣವ = ಸಮುದ್ರದಲ್ಲಿ, ಜಾತ = ಜನಿಸಿದಂಥಾ ಲಕ್ಷ್ಮಿಗೆ, ಪ್ರೀತೆ = ಪ್ರಿಯಳು.) ಎಂದನು.

ರಾಗ | ಕಾ | ಪ ಪ್ರಗಾಜನಂದನುಮಾ | ಮ್ಯಾಜನುಕೇಳ್ವಿಗಲು ಹಾರಿತು ಮಾರಮಾ || ನಗಜನಕಾಗಿ ನೀಲಗ ಬಗೆಯೊಳುಮೋಗು | ಶೋಗಸಿನಿಂಪೇಳಿದನು || ೧೬ ||

ಶೀಕು.—ಪಾ.—ಎಲ್ಲೋ? ನೀನು, ಪಂಚಾನನನೆಂಬ ಮೃಗರಾಜ(ಸಿಂಹ) ನೆಂಬ ವಾಕ್ಯ ಕೇಳಿ ನನ್ನ ಬಿಗಲು ಹಾರಿಹೋದ ಕಾರಣ ಅತಿವೇಗ ಪರ್ವತ ಅಥವಾ ಅರಣ್ಯವನ್ನು ಕುರಿತು ಗಮನಮಾಡ.? ಚಂಪಗಿಂದ ಹೇಳಿದನೆಂದಳು. || ೧೫ ||

ತಾ. ೨೦|೧೦|೮೩ನೇ ಇ. } ನಾರಾಯಣ ಸುಬ್ರಾಯಗೋಕರ್ಣಕರ
(ಸ್ಕೂ. ಹೆ. ಮಾ. ಕುಮಟೋಕಾ.

—o—

ಶ್ರೀಮಂತ ರಾಜಮಾನ್ಯ ರಾಜೇಶ್ರೀ ಕನ್ನಡಶಾಲಾಪತ್ರ, ಕರ್ತರಿಗೆ —

ವಿದ್ಯಾ ಎಡಿಟರರಾಯರೇ ತಮ್ಮ ಕರಕಮಲದಲ್ಲಿ ಅಂಕುಸುಪ್ರಲೋಲವಾದ ಶಾಲಾಪತ್ರಕದಲ್ಲಿ ಬಾಲನು ಬಿನ್ನಹಿಸ್ವದ ಲೇಖನವೇನಂದರೆ— ಈ ಕೆಳಗೆ ಬರೆದ ತತ್ವದಿಂದ ನನ್ನ ದೃಷ್ಟಿಗೋಚರವಾದದ್ದರಿಂದ ಇದನ್ನು ತಮ್ಮ ಕಡಿಗೆ ಅರ್ಪಣ ಮಾಡಿದ್ದೇನೆ. ಆದರೆ ಸದರಿ ಪದವನ್ನು ತಮ್ಮ ದೇಶಬಾಂಧವರಿಗೆ ಸ್ವತಃ ಓದಿಸುವಿರೆಂಬ ಮಹತ್ವಾಕಾಂಕ್ಷೆಯುಂಟು. ಕಾರಣವಾ ಇನ್ನೇಳಿಂಗಳಲ್ಲಿ ಪ್ರಕಟಿಸುವ ಶಾಲಾಪತ್ರಿಕೆಯಲ್ಲಿ ಪ್ರಕಟಿಸಿ ಪ್ರಸಿದ್ಧಪಡಿಸುವಿರೆಂದು ನನ್ನ ಪೂರ್ಣ ನಂಬಿಗೆ ಅವ

ಇಂತಿ ಬಿನ್ನ:

||ಪದ|| ಎಂಥಾ ಸೋಜಿಗವಾಯಿತೇ ಕಾಂತೆ| ಇದ| ರಂತರ
ಗವ ಹೇಳಿಪ ಕಿವಿಗೆ ||ಪ|| ಕೊಳ್ಳಿ ಬಂದಾನಿಯು ತಿಂದಿತು |
ಕೋಳಿ| ಮೊಟ್ಟೆಯು ಗರುಡನ ನುಂಗಿತು || ಜೋಳ್ಳು ಬೀಜವು ಮೊ
ಳೆತಿದ್ದೀತು | ದೊಡ್ಡ ಕೊಳ್ಳಿಯು ರಿಯು ಹಣ್ಣು ಗಿಡ್ಡಿತು ||೧||
ಪಣಸಾಂಗದವ ಕಾಡಿತು | ಅದು| ಕೋಗಿನ ಗೆಂಟುನು ಬ
ಡಿದಿತು || ಪ್ರಾಣಿ ಹುಲ್ಲಿನ ತಿಸ ಹತ್ತೀತು | ಹಕ್ಕಿ ಬಾಣ

ಯಮುನಾಂಗಬಿಟ್ಟೀತು ॥ ೨ ॥ ಗೋಗ್ರಕಾಗಿಯುತಿರದುತೇಗೀತು | ಕಂಡು ಭೋಗಹಾಯಿಯುನೆತ್ತಿ ಕೂಗೀತು ॥ ಕೂಗಲು ಗಿಡಗನು ಸತ್ತೀತು | ನಾಯು ಲಾಗಳಿಗಣಕಾಣುತತ್ತೀತು ॥ ೩ ॥ ಕುರಿಯೊಂದು ನರಿಯನ್ನು ಹೆತ್ತೀತು | ಅದು ಗಿರಿಗಳೇಳನೆಮಂದು | ಹೊತ್ತೀತು ॥ ಕರಡಿಯು ಕಪ್ಪು ಮುರಿಕ್ಕೀತು | ಸಣ್ಣ | ಇರುವೆಯು ಕೈಗದು ತಿಕ್ಕೀತು ॥ ೪ ॥ ಇಲಿಯೊಂದು ಬೆಕ್ಕನು ಹಡೆದೀತು | ಬೆಕ್ಕು ಮಲನಾರುನಾಯಿಗಳ ಕಡಿದೀತು ॥ ಹುಲಿಯು ಗೋವನು ಕಂಡು ನಡುಗೀತು | ಅದು | ಸಿಂಗರಿಸಿದ ನೋಳಡಗೀತು ॥ ೫ ॥

ಎಲೈ! ರಸಿಕರಾದ ದೇಶಬಾಂಧವರುಗಳಿರಾ ಈ ಪದದ ಅಭಿಪ್ರಾಯವು ನನಗೆ ತಿಳಿಯದಕಾರಣ ನನ್ನ ಸಂಶಯವನ್ನು ದೂರಮಾಡುವಿರೆಂದು ಪ್ರಕಟಿಸಿರುತ್ತೇನೆ. ಇದರಲ್ಲಿ ಹಸ್ತದೋಷಾದಿಗಳೇನಾದರೂ ನ್ಯೂನತೆಗಳಿದ್ದರೆ ಹಂಸನೋಪಾದಿ ಗ್ರಹಣ ಮಾಡಬೇಕು. ಪ್ರಸ್ತುತ ಪತ್ರ ವಿಸ್ತಾರಬಗ್ಗೆ ಕ್ಷಮಾಇರಲಿ ಇತಿಶಿಷ್ಟ: ತಾ. ೨೭ನೇ ಮಾಹೆ ಅಗಟಬರ ಸನ್ ೧೮೮೩ ಇ.

ಮುನವಳ್ಳಿ ತಾ. ಹಂಸಗಡ | ಧೋಂಡೋ ತೀರ್ಥಭಟ್ಟ
ಐನಾಪುರ ಅ. ಪಾ.

—o—

ಶಾಲಾಪತ್ರಕವು

ಪುಸ್ತಕ ೧೮] [ಸಂಚಿಕೆ ೧೨

ಡಿಶಂಬರ. ೧೮೮೩

Education and Improvement.

ವಿದ್ಯಾಸುಧಾರಣಾಸಂಬಂಧವಾದ ಸಂಗತಿಗಳು.

—✱०✱—

ಜುಕೇಶನ್ ಕಮಿಶನ್ನಿನವರ ರಿಪೋರ್ಟು ಪ್ರಸಿದ್ಧವಾಗಿ ಕೆಲವುದಿವಸವಾಯಿತು. ಈಗ ಹಿಂದುಸ್ಥಾನ ಸರಕಾರದವರು ಅದರ ವಿಷಯವಾಗಿ ಇಲಾಖೆಗಳ ಸರಕಾರಗಳ ಅಭಿಪ್ರಾಯಗಳನ್ನು ಕೇಳಿದ್ದಾರೆಂತಾ ಕೇಳುತ್ತೇವೆ.

—o—

ಈ ವರ್ಷದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ೧೪ಜನ ಬಾಲಕಿಯರು ಹೋಗಿದ್ದರು. ಅವರಲ್ಲಿ ಏಳುಜನ ಪಾಸಾದರು.

—o—

ಉತ್ತರ ಹಿಂದುಸ್ಥಾನದಲ್ಲಿ ರುರ್ಕಿಯೆಂಬಲ್ಲಿ ದೊಡ್ಡದೊಂದು ಇಂಜನೀಯರಿಂಗ ಕಾಲೇಜುವಿರುತ್ತದೆ. ಅದರಲ್ಲಿ ಈ ವರ್ಷ ೧೬ಜನ ಹೊಸವಿದ್ಯಾರ್ಥಿಗಳನ್ನು ಅಭ್ಯಾಸಕ್ಕೋಸ್ಕರ ತಕ್ಕೊಂಡರು. ಈ ೧೬ರಲ್ಲಿ ೧೦ಜನ ಹಿಂದು, ೬ಜನ ಯು

ರೋಮಿನ್ನರು ಇದ್ದಾರೆ. ಇವರ ಅಭ್ಯಾಸವು ಬರುವ ಮೇ ತಿಂಗಳ ೧ನೇ ತಾರೀಖಿನಿಂದ ಆರಂಭವಾಗುವದು. ಇವರ ಪರೀಕ್ಷೆಯು ಸನ್ ೧೮೮೬ನೇ ವರ್ಷ ಆಗುವದು. ಅವರಲ್ಲಿ ಇಳಿದವ ನಂಬರವಾರಿಯಲ್ಲಿ ೧ರಿಂದ ೪ನೇ ನಂಬರಿನ ವಿದ್ಯಾರ್ಥಿಯವರೆಗೆ ನಾಲ್ಕು ಜನರಿಗೆ ಇಂಜಿನೀಯರಿಂಗ ಖಾತೆಯಲ್ಲಿ ದೊಡ್ಡದೊಡ್ಡ ಕೆಲಸಗಳು ದೊರೆಯುವವು. ಅವರಲ್ಲಿ ಸಹ ಮುಂಬಯಿ, ಮದ್ರಾಸ, ಬಂಗಾಲ ಇಲಾಖೆಗಳ ಹೊರತು ಅನ್ಯತ್ರದಲ್ಲಿ ಅಭ್ಯಾಸಮಾಡಿ ಬಂದಂಥ ಪರದೇಶೀಯ ವಿದ್ಯಾರ್ಥಿಗಳಿಗೆ ಎಲ್ಲಕ್ಕೂ ಮೊದಲು ನೌಕರಿ ದೊರೆಯುವದು. ಮೊದಲಿನ ನಾಲ್ವರೊಳಗೆ ಬಾರದಂಥ ವಿದ್ಯಾರ್ಥಿಗಳಿಗೆ ನೌಕರಿಯು ದೊರೆಯುವದೆಂಬ ನಿಯಮವಿಲ್ಲ.

—o—

ಅಮೇರಿಕದವನೊಬ್ಬ ವರ್ತಮಾನಪತ್ರಕರ್ತನು ಲೆಖ್ಖ ಮಾಡಿ ತಿಳಿಸುವದೇನೆಂದರೆ— ಯುರೋಪ, ಅಮೇರಿಕ, ಆಸ್ಟ್ರೇಲಿಯ ದೇಶಗಳ ನಿವಾಸಿಗಳಲ್ಲಿ ಬಳಗದೆಯಲ್ಲಿ ಚಿನ್ನವು ಬಹಳ ವೆಚ್ಚವಾಗುತ್ತದೆ. ದೈವುಳ್ಳವ ಬಂಗಾರದ ಆಭರಣಗಳನ್ನು ಮಾಡಿ ಮೈಮೇಲೆ ಇಟ್ಟುಕೊಳ್ಳುತ್ತಾರೆ. ಪ್ರತಿವರ್ಷ ಖಣಿಗಳಲ್ಲಿ ಹುಟ್ಟುವ ಹೊಸಬಂಗಾರದ ಆರರಲ್ಲಿ ಐದುಭಾಗ ಬಂಗಾರವು ಈ ಪ್ರಕಾರದ ಅಲಂಕಾರಗಳಲ್ಲಿ ವೆಚ್ಚವಾಗುತ್ತದೆ. ಉಳಿದ ೬ನೇ ಭಾಗ ಮಾತ್ರ ಉಪಯುಕ್ತ ವ್ಯವಹಾರ, ಕಲಾಕೌಶಲ್ಯಗಳಿಗೆ ಹೋಗುತ್ತದೆ. ಯುರೋಪದವರು ಅಲಂಕಾರಗಳನ್ನು ಧರಿಸುವ ನಮ್ಮ ಜನರನ್ನು ಹಳಿಯುತ್ತಿರುತ್ತಾರೆ. ಆದರೆ ಸಂಪತ್ತಿಯು ಅಪರಿಮಿತವಾಗಿ ಬೆಳೆತೆಂದರೆ ಅಲಂಕಾರಗಳ ಅಭಿ

ವೃದ್ಧಿಯೇ ಅದರ ಪರಿಣಾಮವೆಂಬ ಗುಟ್ಟು ಇದುವರೆಗೆ ಅವರಿಗೆ ತಿಳಿದಿಲ್ಲೆಂದು ತೋರುತ್ತದೆ. ಸ್ವಲ್ಪ ದಿವಸದೊಳಗೆ ಅವರು ನಮ್ಮ ಪಾಲಿಕೆಯೊಳಗೆ ಬಂದ ಬಳಿಕ ಹಿಂದೂಜನರ ಪೂರ್ವದ ಘನತೆಯ ಕಾಲದಲ್ಲಿ ಅಲಂಕಾರಗಳನ್ನಿಟ್ಟುಕೊಳ್ಳುವ ನಡಾವಳಿಯುಂಟಾದದ್ದು ಯಥಾರ್ಥವಿರುತ್ತದೆಂದು ಅವರಿಗೆ ತಿಳಿಯುವದು. ಆಗ ಲೌಕಿಕ ವ್ಯಾಪಾರಗಳಲ್ಲಿ ಪ್ರವೀಣರೆನಿಸಿಕೊಳ್ಳುವ ಈ ಸುಧಾರಿಸಿದ ಜನರು ಅಲಂಕಾರಗಳ ಮೋಹಕ್ಕೊಳಗಾಗಿ ಹಿಂದೂಜನರ ಕೀರ್ತಿಯನ್ನು ತೀರದೆ, ಈಗ ನಮಗೆ ತಾವು ಬುದ್ಧಿವಾದ ಹೇಳುವಂತೆ ತಾವೇ ಮಾಡಲು ನಡೆದರೆ, ಜಗತ್ತಕ್ಕೆ ಹೊಸರೀತಿಯನ್ನು ಕಲಿಸಿದ ಶ್ರೇಯವು ಅವರಿಗೆ ಬರುವದು.

—o—

ರಶಿಯದವನೊಬ್ಬ ಶಿಲ್ಪಿಯು ವಿದ್ಯುಲ್ಲತೆಯಿಂದ ಘಡಿಯಾಲಗಳನ್ನು ನಡಿಸುವ ಯುಕ್ತಿಯನ್ನು ತೆಗೆದಿದ್ದಾನೆ. ವಿದ್ಯುಲ್ಲತೆಯ ದೀಪಗಳಂತು ಈ ಪೂರ್ವದಲ್ಲಿಯೇ ರೂಢಿಯೊಳಗೆ ಬಂದು ದಿನದಿನಕ್ಕೆ ಪ್ರಬಲವಾಗುತ್ತ ನಡೆದವೆ. ತಂತಿಟಪಾಲನ್ನು ಆರಂಭದಿಂದ ವಿದ್ಯುಲ್ಲತೆಯೇ ನಡಿಸುತ್ತದೆ. ಬಂಡಿಗಳನ್ನು ವಿದ್ಯುಲ್ಲತೆಯಿಂದ ನಡಿಸುವ ಪ್ರಯತ್ನವು ಯುರೋಪದಲ್ಲಿಯೂ ಅಮೇರಿಕದಲ್ಲಿಯೂ ಎಡೆಬಿಡದೆ ನಡೆದದೆ. ಇವೆಲ್ಲ ಸಂಗತಿಗಳಿಂದ ಇನ್ನೊಂದು ಇಪ್ಪತ್ತಿಪ್ಪತ್ತೈದು ವರ್ಷಗಳೊಳಗೆ ವಿದ್ಯುಲ್ಲತೆಯು ಬೇರೆ ಯಾವತ್ತು ಯಾಂತ್ರಿಕ ಸಾಧನಗಳನ್ನು ಮುರಿದೊತ್ತಿ ಈ ಭೂಮಂಡಲದಲ್ಲಿ ಏಕಛತ್ರವಾದ ರಾಜ್ಯವ

ನ್ನು ಆಳಲಿಕ್ಕೆ ಆರಂಭ ಮಾಡುವದೆಂದು ತೋರುತ್ತದೆ.

—o—

ಅಮೇರಿಕದಲ್ಲಿ ಒಬ್ಬ ಗೃಹಸ್ಥನು ಜಿಮಾಪೀಯೆಂಗ್ಲಿಯ ನಲುವಾಗಿ ಒಂದು ಭಾವಿಯನ್ನು ಅಗಿಯುತ್ತಾ ಅಗಿಯುತ್ತಾ ೪೩೦೦ ಫೂಟು ಅಗಿದರೂ ಎಣ್ಣೆಯು ಹತ್ತಲಿಲ್ಲ. ಆದ್ದರಿಂದ ಅವನು ಇನ್ನೂ ೨೭೦೦ ಫೂಟು ಅಗಿಯುವ ಕೆಲಸವನ್ನು ನಡೆಸಿದ್ದಾನಂತೆ. ಇಷ್ಟು ಅಗಿದರೆ ೭೦೦೦ ಫೂಟು, ಅಂದರೆ ಸುಮಾರು ಸವ್ವಾಮೈಲು ಆಳವಾಗುವದು. ಇಷ್ಟು ಉದ್ದವಾದ ವಿವರವನ್ನು ಭೂಗರ್ಭದಲ್ಲಿ ಇದುವರೆಗೆ ಯಾರು ಅಗಿದಂತೆ ತೋರುವದಿಲ್ಲ.

—o—

ದುಡ್ಡು ದೊರಕಿಸುವ ಹೊಸಯುಕ್ತಿಯು—ರಶಿಯಾದೇಶದಿಂದ ಯುರೋಪದ ಬೇರೆ ರಾಷ್ಟ್ರಗಳಿಗೆ ಪವಿತ್ರ ಕೂದಲು ಮಾರಾಟಕ್ಕಾಗಿ ಒಳಗಡೆಯಲ್ಲಿ ಬಹಳ ಹೋಗುತ್ತಿರುತ್ತದೆ. ಈ ವ್ಯಾಪಾರವು ಬೆಳೆದಕಾರಣವನ್ನು ಶೋಧಿಸಲಾಗಿ, ಒಬ್ಬ ಪಾದ್ರಿಯು ಹೊಸದೊಂದು ಧರ್ಮಪಂಥವನ್ನು ಸ್ಥಾಪಿಸಿದ್ದಾನೆಂತಲೂ, ಅವನು ಹೊಸದಾಗಿ ತನ್ನ ಶಿಷ್ಯರಾದಂಥ ಜನರ (ವಿಶೇಷವಾಗಿ ಹೆಂಗಸರ) ತಲೆಗಳನ್ನು ಬೋಳಿಸಿ ಅವರ ಕೂದಲುಗಳನ್ನು ಮಾರಾಟಕ್ಕೆ ಕಳಿಸುತ್ತಿರುತ್ತಾನಂತಲೂ ತಿಳಿಯಬಂತು!

—o—

ಧಾರವಾಡ ವಕ್ತೃತ್ವೋತ್ತೇಜಕ ಸಮಾರಂಭವು ಸೆಪ್ಟಂಬರಿನಲ್ಲಿ ಆಗತಕ್ಕದ್ದಿರುತ್ತದೆ. ೨೫ನೇ ತಾರೀಖಿನಲ್ಲಿ ಇದು ಆರಂಭವಾಗುವದು. ಕನ್ನಡ, ಮಹಾರಾಷ್ಟ್ರ ಭಾಷೆಗಳಲ್ಲಿ ಉತ್ತಮವಕ್ತೃತೆಯ ವ್ಯಾಖ್ಯಾನಗಳಿಗೆ ೨೦ ರುಪಾಯಿ

ಕ್ಷೆಗಳು ಪ್ರಾರಂಭಗೊಳ್ಳುತ್ತವೆ. ವಿಷಯಗಳು— ಏಕ ನಾಟಕದಲ್ಲಿ ಸಲ್ಪದಿವಸದೊಳಗೆ ಪೂರಾವಾಗುವ ಹೊಸಗೆಬಂದಿರುವದ ಕಲಾಕೌಶಲ್ಯಗಳಿಗೆ ಉತ್ತೇಜನವು ಹ್ಯಾಗೆ ಬರುವದು, ಇತ್ಯಾದಿ; ೨ ಈಗಿನ ವರ್ಣದ ಸೂತ್ರಗಳನ್ನು ಸುಧಾರಿಸಲಿಕ್ಕೆ ಯೇನೇನು ಹೆಚ್ಚುಕಡಿಮೆಗಳನ್ನೂ ಉಪಾಯಗಳನ್ನೂ ಮಾಡಬೇಕು, ಇತ್ಯಾದಿ—ಹಿಂದಿನ ಸ್ಥಾನೀ ೩ ವ್ಯಾಖ್ಯಾನಗಳಿಗೆ ೧೦, ೫. ರೂಪಾಯಿಗಳ ಇನಾಮುಗಳು ನೇಮಿಸಿರುತ್ತವೆ.

—o—

ಧಾರವಾಡದ ಪ್ರಮುಖರಾದ ಲಿಂಗವಂತ ಜನರು ಸ್ವಜನರಿಗೆ ಈ ದೇಶದ ಕಾಲೇಜಗಳಲ್ಲಿಯೂ ವಿಲಾಯತಿಯಲ್ಲಿಯೂ ವಿದ್ಯಾಭ್ಯಾಸಮಾಡಿಸುವದಕ್ಕೋಸ್ಕರ ದೊಡ್ಡದೊಂದು ಫಂಡು ತಮೆಮಾಡಹತ್ತಿದ್ದಾರೆ. ಇದುವರೆಗೆ ೨೩೦೦೦ ರೂಪಾಯಿ ಜಮೆ ಆಗಿರುತ್ತವೆ. ಈ ಪ್ರಕಾರದ ಸ್ವಜನಹಿತಚಿಂತಕರು ನಮ್ಮ ದೇಶದಲ್ಲಿ ಇವರೇ ಮೊದಲಿನವರೆಂದೆನ್ನಲಿಕ್ಕೆ ಅಡ್ಡಿಇಲ್ಲ. ದೇವರದಯದಿಂದ ಇವರ ಪ್ರಯತ್ನವು ಬಹು ಬೇಗ ಸಫಲವಾಗುವದೆಂದು ನಾವು ಬಯಸುತ್ತೇವೆ.

—o—

ಮೆ. ಡಾಯರೆಕ್ಟರ ದೊರೆಗಳು ವಿಲಾಯತಿಗೆ ರಜೆತಕ್ಕೊಂಡು ಹೋಗುವ ಸುದ್ದಿಯು ಸುಳ್ಳೆಂದು ತಿಳಿಯಿತು.

—o—

ಮೆ. ರಸೆಲ್ ದೊರೆಗಳು ಸ್ವಲ್ಪದಿವಸದಲ್ಲಿ ಧಾರವಾಡಕ್ಕೆ ಬಂದು ಕಲಾದಗಿ ಜಿಲ್ಲೆಗೆ ಹೋಗತಕ್ಕವರಿದ್ದಾರೆಂದು ಕೇಳುತ್ತೇವೆ.

—o—

The Desayi Of Kittore.

ಕಿತ್ತೂರ ಸಂಸ್ಥಾನವು.

(೨೬೫ನೇ ಪುಟದಿಂದ ಮುಂದಕ್ಕೆ ನಡೆದದ್ದು)

ಮುಂದೆ ಬಾಜಿರಾವ ಸಾಹೇಬನು ಸಂನ ೧೮೧೧ನೇ ವರ್ಷ
ಲ್ಲಿ ಎಲ್ಫಿನ್ಸ್ಟನ್ ಸಾಹೇಬರ ಮುಂದೆ ಹೀಗೆ ವಾದವಿವಾದವನು
ತೆಗೆದನಲ್ಲಾ; ಬಾಗೆವಾಡಿ, ಸಂಪಗಾವ ತಾಲೂಕ, ಇವೆರಡು
ಗ್ರಾಮುಗಳನ್ನು ಕುಂದಮಾಡಕರವರ ಜಾಹಾಗೀರಿಗೆ ಹಚ್ಚಿ ಕೊ
ಟ್ಟಿದ್ದು, ದೇಸಾಯಿಯು ಅವುಗಳನ್ನು ಬಿಡುವದಿಲ್ಲ; ಕಾ
ಣವಾ ಅವುಗಳನ್ನು ಕೊಡಿಸಬೇಕು. ಬಾಜೀರಾಯನು ಪಂಕ್ಷಿ
ಷ್ಟನಾಗುವವರಿಗೆ ಪೇಶವೆ ಮುತ್ತು ದೇಸಾಯಿಯು ಮನಸ್ಸು
ದ್ಧವಿದ್ದಿಲ್ಲ. ದೇಸಾಯಿಯು ತಾನು ಕೊಡತಕ್ಕ ಕಪ್ಪ
ನ್ನು ವೇಳೆ ವೇಳೆಗೆ ಮುಟ್ಟಿಸುತ್ತಿದ್ದಿಲ್ಲ. ಈ ಕಾರಣಗಳ
ಲುವಾಗಿ ಪೇಶವೆಯ ಮನಸ್ಸಿನಲ್ಲಿ ದೇಸಾಯಿಯು ಜಹಾ
ರವನ್ನು ತೆಗೆದುಕೊಳ್ಳಬೇಕೆಂದಿತ್ತು. ಮುಂದೆ ಸಂನ೧೮೧
ನೇ ವರ್ಷದಲ್ಲಿ ಪೇಶವೆ, ಇಂಗ್ಲಿಷರುಗಳ ಮಧ್ಯದಲ್ಲಿ ಯುದ್ಧ
ಪ್ರಾರಂಭವಾಗಲು, ದೇಸಾಯಿಯು ಇಂಗ್ಲಿಷರನ್ನು ಕೂಡಿಕೊಂ
ಡನು. ತರುವಾಯ ಈ ಯುದ್ಧವು ತೀರಿ ಯಾವತ್ತೂ ಕನಾ
ಟಕವು ಇಂಗ್ಲಿಷರ ಸ್ವಾಧೀನವಾಗಮೇಲೆ ಜನರಲ್ ಮನರೊ
ಸಾಹೇಬನು ಕಿತ್ತೂರ ದೇಸಾಯಿಯು ಕೂಡ ಪಂದು, ಹೊಸ
ಪ್ಪಂದವನ್ನು ಮಾಡಿ ಕೆಳಗೆ ಬರೆದಂತೆ ವ್ಯವಸ್ಥೆಯನ್ನು ಮಾಡಿದನು.

೧—ಕಿತ್ತೂರ ದೇಸಾಯಿಯವನು, ಪೇಶವೆಯವರಿ
ಕೊಡತಕ್ಕ ಕಪ್ಪನ್ನು ಎಂದೂ ವೇಳೆ ವೇಳೆಗೆ ಕೊಟ್ಟಿಲ್ಲ. ಈ ಕಾರ
ಣವನ್ನು ಪೇಶವೆಯವರು ಯಾವಾಗಲೂ ಬಹು ಬಲಾತ್ಕಾ
ರದಿಂದ ತೆಗೆದುಕೊಳ್ಳಬೇಕಾಗುತ್ತಿತ್ತು. ಆದರೂ ಕಿತ್ತೂರ ಸಂಸ್

..., ಹುಬ್ಬಳ್ಳಿ, ಮುಂತಾದ ಎಷ್ಟೋ ಎರಡನೇ ತಾಲೂಕುಗಳು ಬಹುದಿನದಿಂದ ದೇಶಾಯಿಯ ಕಡೆಗೆ ನಡೆಯುತ್ತಲಿವೆ. ಮುನ್ನು ಈ ಸಲುವಾಗಿ ಅವನು ಎದಿಲಶ್ಯಾಹಾ, ಮುಹಮ್ಮದಶಾಹಾ, ಸುತ್ತ ಅಲಮಗೀರ, ಇವರು ರಾಜ್ಯಾಧಿಕಾರವನ್ನು ಮಾಡುತ್ತಿರುವಾಗ್ಯೂ; ಹಾಗೆಯೇ ಶಿವಾಜೀ ಮಹಾರಾಜ, ಶಾಹೂ ಮಹಾರಾಜ, ಪೇಶವೆ, ಇವರೂ ರಾಜ್ಯಭಾರವನ್ನು ನಡೆಸುತ್ತಿರುವಾಗ್ಯೂ ಸರಕಾರೀ ಕೆಲಸವನ್ನು ಒಳ್ಳೇ ಮನಸ್ಸಿನಿಂದ ಮಾಡಿದಾನೆ. ಹೀಗು ಎಲ್ಲರೂ ದೇಶಾಯಿಗೆ ಅವನ ಶೀಮೆಗಳನ್ನು (ವತನಗಳನ್ನು) ನಡಿಸಿಕೊಟ್ಟಿರುವರು. ಇನ್ನು ಇಂಗ್ಲಿಷ ಹಾಗು ಪೇಶವೆಯರ ನಡುವೆ ವೈಮನಸ್ಯ ಹುಟ್ಟಿದಾಗಲೇ ದೇಸಾಯಿಯು ಇಂಗ್ಲಿಷರನ್ನು ಕೂಡಿದನು. ಈ ಎಲ್ಲ ಸಂಗತಿಗಳನ್ನು ಮನಸ್ಸಿನಲ್ಲಿ ತಂದು ಇಂಗ್ಲಿಷ ಸರಕಾರವು, ದೇಶಾಯೀ ಇವರಿಗೆ ' ಮೆಹರಬಾನಿಯಿಂದ ಸ್ವಾಧೀನ ಸಂಸ್ಥಾನಿಕನಾಗಿ ಮಾಡಿ ಸಂಸ್ಥಾನವನ್ನು, ಸರದೇಶಾಯೀ ಹಕ್ಕನ್ನು ನಡಿಸಿಕೊಟ್ಟಿತು.

ದೇಶಾಯಿಯು ಮೊದಲಿನಂತೆ ೧,೬೫೦೦೦ ಶಹಾಪುರ ರೂಪಾಯಿಗಳ ಕಪ್ಪನ್ನು ಕೊಡುತ್ತ ಹೋಗಬೇಕು; ಮತ್ತು ಮೊದಲಿನರೀತಿಯಂತೆ ಸರಕಾರದಿಂದ ದೇಶಾಯಿಗೆ ೪,೯೫೫ ರೂಪಾಯಿಗಳ ಬೆಲೆಯು ವಸ್ತ್ರಗಳು ದೊರೆಯುತ್ತಾ ಹೋಗಬೇಕು; ಎಂದುಗೊತ್ತಾಯಿತು.

೨ —ದೇಶಾಯಿಯು ಕಳೆದ ಎರಡು ವರ್ಷಗಳ ಕಪ್ಪನ್ನು ಕೊಟ್ಟಿದ್ದಿಲ್ಲ. ಅದರಲ್ಲಿ ಒಂದು ವರ್ಷದ ಕರವನ್ನು ಕ್ಷಮಿಸಿ ಬಿಟ್ಟಿದ್ದೇವೆ. ಯಾಕಂದರೆ ಯುದ್ಧದಲ್ಲಿ ದೇಸಾಯಿಗೆ ಹಾದ ವೆಚ್ಚ ಹತ್ತಿರುವದು; ಹಾಗು ಅವನು ಮೊದಲಿನಿಂದ ಇಂಗ್ಲಿಷರವ

ಕ್ಷವನ್ನು ಸ್ವೀಕರಿಸಿರುವನು. ಉಳಿದ ಹಿಂದು ವರ್ಷದ ಹಣವನ್ನು ನಡೆಯುವ ವರ್ಷದಲ್ಲೇ ಕೊಡಬೇಕು. ಎಂದು ನೇಮವಾಯಿತು.

೩ — ಬಾಜೀರಾಯನು ದೇಸಾಯಿ ಮತ್ತು ಪಟವರ್ಧನ ಸಂಸ್ಥಾನಿಕರಿಗೆ ಒಬ್ಬರಿಗೊಬ್ಬರ ಪ್ರದೇಶದಲ್ಲಿ ಭೂಮಿಯನ್ನು ಕೊಟ್ಟನು. ಇದರ ಕಾರಣವು ಒಬ್ಬರಿಗೊಬ್ಬರಲ್ಲಿ ಕಲಹವು ಹತ್ತಬೇಕೆಂಬುದೇ. ತರುವಾಯ ಸರಕಾರದವರು, ಪೇಶವೆಯವರ ನೇಮದಂತೆ ನಿಮ್ಮ ನಿಮ್ಮ ಭೂಮಿಗಳು ನಡೆಯದೆ, ಯಾರ ಯಾರ ಅಧಿಕಾರದಲ್ಲಿ ಯಾವ ಯಾವ ಭೂಮಿಗಳುಂಟೋ, ಅವರವರೇ ಆ ಆ ಭೂಮಿಗಳ ಉಪಭೋಗವನ್ನು ಮಾಡಿಕೊಳ್ಳಬೇಕು; ಈ ಕಾರಣದಿಂದ ಬಾಗೆವಾಡಿ, ಸಂಪಗಾಂವ, ಮತ್ತು ಅಕ್ಕಲಕೋಟ ಇವುಗಳು ಬಹುದಿವಸದಿಂದ ದೇಸಾಯಿಯ ಕಡೆಗೆ ನಡೆಯುತ್ತ ಇದ್ದದರಿಂದ ಇವುಗಳನ್ನು ದೇಸಾಯಿಗೆ ಬಿಡಿಸಿ ಕೊಟ್ಟಿದ್ದೇವೆ. ಎಂದು ನಿರ್ಣಯಿಸಿದರು.

೪ — ದೇಸಾಯಿಯು ಪೂರ್ವದ ಸನದಿನಮೂಲಂದ ದೇಸಾಯಿಯು ೪೭೩ ಮಂದಿ ರಾಹುತರನ್ನೂ, ೧೦೦೦ ಕಾಲಾಳುಗಳನ್ನೂ, ಇಟ್ಟುಕೊಂಡು ಕೆಲಸವನ್ನು,(ನೌಕರಿಯನ್ನು) ಮಾಡಬೇಕೆಂದು ನಿಯಮವಿದ್ದಂತೆ ಗೊತ್ತಾಗುತ್ತದೆ. ಆದರೆ ದೇಸಾಯಿಗೆ ಇದನ್ನು ಕ್ಷಮಿಸಿಬಿಟ್ಟಿದ್ದೇವೆ. ಈ ಸಲುವಾಗಿ ಸರಕಾರದಿಂದ ನಡೆಯುವ ಖಾನಾಪುರ ತಾಲೂಕ ಹಾಗು ನಕ್ತು ೨೫,೦೮೦ ರೂಪಾಯಿಗಳನ್ನು ತೆಗೆದಿದ್ದೇವೆ. ಈ ಪ್ರಕಾರ ವ್ಯವಸ್ಥೆಯಾಯಿತು, ತಾ ೨೧।೧೨।೮೩೪.

ಧಾರವಾಡ ಕನ್ನಡ ೪ನೇನಂಬರ ಶಾಲೆಯಿಂದ { ಶಿವಾನಂದಾಚಾರ್ಯ ವಾಜಪೇಯಿ.

(ಮುಂದೆ ಸಾಗುವದು)

Morality and Iadurtry.

ನೀತಿ ಉದ್ಯೋಗ.

ದೇವನು ಮನುಷ್ಯನಮುಂದೆ ಎರಡು ಮಾರ್ಗಗಳನ್ನು ಇಟ್ಟಿದ್ದಾನೆ, ಒಂದು ಮಾರ್ಗ ನೀತಿಯು, ಎರಡನೇಯದು ಅನೀತಿಯು. ಅವುಗಳೊಳಗಿಂದ ತನಗೆ ಬೇಕಾದ ಮಾರ್ಗವನ್ನು ಹಿಡಿಯಲಿಕ್ಕೆ ಅವನಿಗೆ ಸ್ವಾತಂತ್ರ್ಯವುಂಟು. ಒಂದು ಮಾರ್ಗ ಸುಖವನ್ನು ಕೊಡುತ್ತದೆ. ಎರಡನೆಯದು ದುಃಖವನ್ನುಂಟು ಮಾಡುತ್ತದೆ. ಮನುಷ್ಯನು ತಾನಾಗಿ ಆರಿಸಿ ತನ್ನ ಮಾರ್ಗವನ್ನು ಹಿಡಿಯಬೇಕು, ಮತ್ತು ಅದರಿಂದ ಉಂಟಾಗುವ ಪರಿಣಾಮವನ್ನು ಅನುಭೋಗಿಸಲಿಕ್ಕೆ ಸಿದ್ಧನಾಗಿರಲಿಕ್ಕೆ ಬೇಕು. ಎರಡನೆಯವರ ಮೇಲೆ ದೋಷವಿಡಬಾರದು. ಸಹಜವಾಗಿ ನೋಡಲು ಯಾವದಾದರೊಂದು ರಾಷ್ಟ್ರವನ್ನು ತೆಗೆದುಕೊಂಡು ಅದರೊಳಗಿನ ಪ್ರತ್ಯೇಕ ಮನುಷ್ಯನು ಸ್ವಂತ ಪ್ರಯತ್ನ ಮಾಡುವವನಿದ್ದರೆ ಅದು ಪ್ರಬಲವಾಗಿರುವದು. ಅಲ್ಲಿಯ ರಾಜ್ಯವ್ಯವಸ್ಥೆಯು ಎಷ್ಟೋ ಉತ್ತಮವಿದ್ದಾಗ್ಯೂ ಇಷ್ಟು ಮಹತ್ವದ ಪರಿಣಾಮವು ಅದರಿಂದ ಆದೀತೆಂದು ಹೇಳಕೂಡದು. ಅನೇಕ ವ್ಯಕ್ತಿಗಳು ಒಟ್ಟು ಮಾಡುವದರಿಂದ ಒಂದು ರಾಷ್ಟ್ರವಾಗುತ್ತದೆ. ಮತ್ತು ಪ್ರತಿಒಬ್ಬ ಮನುಷ್ಯನ ಸುಧಾರಣೆ ಅವನ ಸ್ವಂತ ಶ್ರಮದಮೇಲೆ ಅದೆ. ಆದದರಿಂದ ಯಾವದಾದರೊಂದು ರಾಷ್ಟ್ರದ ಪೂರ್ಣ ಸುಧಾರಣೆಯಾಗಬೇಕಾದರೆ ಅದರೊಳಗಿನ ಪ್ರತಿಒಬ್ಬ ಮನುಷ್ಯನು ಸುಧಾರಿಸಿ ಇರಲಿಕ್ಕೆ ಬೇಕು. ಎಲ್ಲ ರಾಷ್ಟ್ರದ ಸುಧಾರಣೆ ಮಾಡತಕ್ಕದ್ದಿದ್ದರೆ, ಅದರೊಳಗಿನ ಪ್ರತಿಯೊಬ್ಬ ಮನುಷ್ಯನ ಸುಧಾರಣೆ ಮಾಡಿದರೆ ಸಾಕು. ರಾಷ್ಟ್ರದ ಸುಧಾರಣೆಯು ತನ್ನಿಂದ ತಾನೆ ಆಗುತ್ತದೆ.

ಇದರಮೇಲಿಂದ ಸಿದ್ಧವಾಗುವದೇನಂದರೆ ರಾಷ್ಟ್ರದ ಸುಸ್ಥಿತಿಯೆಂದರೆ ಅದರೊಳಗಿನ ಪ್ರತಿಯೊಬ್ಬ ಮನುಷ್ಯನ ಉದ್ಯೋಗ ಉತ್ಸಾಹ ಸತ್ಯ ಮುಂತಾದವುಗಳ ಸಮುದಾಯವು. ಅದರಂತೆ ರಾಷ್ಟ್ರದ ಕೀಳ ಸ್ಥಿತಿಯೆಂದರೆ ಅದರೊಳಗಿನ ಪ್ರತಿಯೊಂದು ವ್ಯಕ್ತಿಯ ಆಲಸ್ಯ, ಸ್ವಾರ್ಥದೃಷ್ಟಿ, ಅನೀತಿ ಇವುಗಳ ಸಮುದಾಯವು. ರಾಷ್ಟ್ರಕ್ಕೆ ದುಃಖಗಳು ಇಲ್ಲದ ಹೋಗಿದ್ದರೆ ಹಿತವಾಗುತ್ತಿತ್ತೆಂದು ಜನರು ಅನ್ನುತ್ತಾರೆ. ಅಂದರೆ ಈ ದುಃಖಗಳು ಹುಟ್ಟುವದಕ್ಕೆ ಮೂಲ ಕಾರಣವೇನೋ ಅದರ ಶೋಧ ಮಾಡುವದಿಲ್ಲ. ಈ ದುಃಖಗಳು ರಾಜ್ಯದೊಳಗಿನ ಪ್ರತಿಯೊಬ್ಬ ಮನುಷ್ಯನ ಅನೀತಿಯ ಫಲವು ಇದು ಅವರಿಗೆ ತಿಳಿಯುವದಿಲ್ಲ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅನೀತಿಯು ಬಹಳವಿರುತ್ತದೆಂದು ಯಾವತ್ತು ದೇಶದವರಿಗೆ ಗೊತ್ತು ಇರುತ್ತದೆ. ಕಲಕತ್ತಾ ಮುಂಬಯಿ ಪುಣೆ, ಬೆಂಗಳೂರ ಮುಂತಾದ ಪಟ್ಟಣಗಳನ್ನು ನೋಡಿದವರಿಗೆ ಅಲ್ಲಿ ಪ್ರತಿದಿನ ಸಂಭವಿಸುವಂಥ ವಿಷಯ ಅನೀತಿಯ ಉದಾಹರಣೆಗಳು ಗೊತ್ತುಂಟು. ಇದಕ್ಕೆ ಜನರು ಮನುಷ್ಯರು ಶಕ್ತಿಯು ಹೆಚ್ಚು ಬೆಳೆದಂತೆ ಅನೀತಿಯಾದರು ಹೆಚ್ಚುತ್ತದೆಂದು ತಿಳಿದು ಸ್ವಸ್ಥ ಕೂಡುತ್ತಾರೆ. ನೋಡಿದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸುಧಾರಣೆ ಪ್ರಥಮವಾಗವೆ ಆದರೆ ಯಾವ ಯಾವ ಸ್ಥಳಗಳಲ್ಲಿ ಸುಧಾರಣೆ ಹೆಚ್ಚಾಗುತ್ತದೆಯೋ ಅಲ್ಲಿ ಅನೀತಿಯಾದರು ಹೆಚ್ಚು ಬೆಳೆಯುತ್ತದೆ. ಆದದರಿಂದ ಸುಧಾರಣೆಯು ಅನೀತಿಯ ಪ್ರಸಾರ ಕಾರಣವಾಗುವದೆಂದು ತಿಳಿದು, ಕೆಟ್ಟವರು ಸುಧಾರಣೆಯನ್ನು ಹೂಡಬಾರದೆಂದು ಹೇಳುತ್ತಾರೆ. ಇನ್ನು ಮಾರ್ಮಿಕವಾಗಿ ನೋಡಿದರೆ ಅನೀತಿಯ ಕಾರಣವು ಸುಧಾರಣೆ ಅಥವಾ ಹೆಚ್ಚು ಜನವಸ್ತಿ

ಅಲ್ಲ. ಅದು ಬೇರೆ ಮೂಲನೆಯದೇ ಇರುವುದು. ಅದು ಯಾವದೆಂದರೆ ಮನುಷ್ಯನ ನಡತೆ. ಪಟ್ಟಣಗಳಲ್ಲಿ ಅನೇಕ ಪ್ರಕಾರದ ಜನರು ಇರುತ್ತಾರೆ, ಕೆಲವರು ನೀತಿವಂತರಿರುತ್ತಾರೆ, ಕೆಲವರು ದುರ್ಮಾರ್ಗಿಗಳು ಇರುತ್ತಾರೆ. ಪಟ್ಟಣಗಳಲ್ಲಿ ಅನೀತಿಯ ಉದಾಹರಣೆಗಳು ದೊರೆಯುವಂತೆ ನೀತಿಯವೂ ಪರೋಪಕಾರದವೂ ಸತ್ಕೃತ್ಯವೂ ಆದರೂ ದೊರೆಯುವವು. ಮತ್ತು ಸುಧಾರಣೆಯ ಉಪಯೋಗವು ಒಳ್ಳೇ ಕೆಲಸದಲ್ಲಿ ಆದಹಾಗೆ ಕೆಟ್ಟ ಕೆಲಸದಲ್ಲಿಯೂ ಆಗುತ್ತದೆ. ಆದದರಿಂದ ಕೆಟ್ಟ ಕೆಲಸಕ್ಕೆ ಅದರ ಉಪಯೋಗ ಮಾಡಿಕೊಂಡರೆ ಆ ದೋಷವು ಸುಧಾರಣೆಯದಲ್ಲ.

ರಾಷ್ಟ್ರದ ಸಂಕಟವು ನಿಜವಾಗಿ ರಾಷ್ಟ್ರದೊಳಗಿನ ಪ್ರತ್ಯೇಕ ಮನುಷ್ಯನ ನಡತೆಯಿಂದ ಉತ್ಪನ್ನವಾಗುತ್ತದೆ. ಇದೊಂದು ಮಾತು ಚನ್ನಾಗಿ ಪೂರ್ಣವಾಗಿ ತಿಳಿದರೆ ದೇಶಾಭಿಮಾನಿಗಳಾದ ಪುರುಷರ ಕೆಲಸವು ಯಾವದೆಂಬುವದು ಸಹಜವಾಗಿ ಗೊತ್ತಾಗುವದು. ರಾಷ್ಟ್ರದ ಸಂಕಟಗಳನ್ನು ದೂರ ಮಾಡತಕ್ಕದ್ದಿದ್ದರೆ ಕಾಯಿದೆಕಾನೂನುಗಳನ್ನು ಮಾಡಿದರೆ, ಅದರಿಂದೇನು ವಿಶೇಷ ಅರ್ಥವಿಲ್ಲೆಂಬುವದು ಸಹಜವಾಗಿ ತಿಳಿಯಬರುವದು. ರಾಷ್ಟ್ರದೊಳಗಿನ ಪ್ರತಿಒಬ್ಬ ಮನುಷ್ಯನ ನಡತೆ ಕೆಟ್ಟದಿದ್ದರೆ, ಆ ಸಂಕಟಗಳನ್ನು ಒಂದು ರೂಪದಿಂದ ದೂರ ಮಾಡಿದಾಗ್ಯಾದರು ಎರಡನೆಯ ರೂಪದಿಂದ ಅವು ದೃಷ್ಟಿಗೆ ಬೀಳುತ್ತವೆ. ಮೊದಲು ಒಂದು ದೇಶದಲ್ಲಿ ಅನೀತಿ ಇಷ್ಟು ಪರಾಕಾಷ್ಠೆಯಾಗಿ ಬೆಳೆದಿತ್ತಲ್ಲ, ಎತ್ತ ನೋಡಿದತ್ತ ವಾರಾಂಗನೆಯರ ಅಂಗಡಿಗಳೇ ದೃಷ್ಟಿ ಬೀಳುತ್ತಿದ್ದವು, ಮತ್ತು ಎಷ್ಟೋ ಜನರು ಅವರಿಂದಾಗಿದ್ದರು. ಇದನ್ನು ಕಂಡು ಆ ದೇಶದ ಅರಸನು ಆ ಅಂಗಡಿಗಳ

ನ್ನು ಇಕ್ಕುವದಕ್ಕೆ ಅಪ್ಪಣೆ ಮಾಡಿದನು. ಆ ಪ್ರಕಾರ ಆ ಅಂಗಡಿಗಳು ಹೆಸರಿಗೆ ಮಾತ್ರ ಇಕ್ಕಿದವು ಆ ಅನೀತಿಯು ಎರಡನೆ ಮಾರ್ಗದಿಂದ ಪ್ರಬಲವಾಯಿತು. ಆ ವಾರಾಂಗನೆಯರು ಮುಂದೆ ಮಾಡುವ ಅಂಗಡಿಗಳನ್ನು ಹಾಕಿ ಆ ಮಾರ್ಗದಿಂದ ತಮ್ಮ ಅನೀತಿಯನ್ನು ನಡಿಸಿದರು. ಇದರ ಮೇಲಿಂದ ಆ ಅರಸನು ಕೊಟ್ಟ ಅಪ್ಪಣೆಯ ಪರಿಣಾಮವು ವಿಹಿತವಾಗಿ ಆಗಲಿಲ್ಲ. ಈ ಕಥೆಯ ಮೇಲಿಂದ ಸ್ಪಷ್ಟವಾಗಿ ಕಂಡುಬರುವದೇನಂದರೆ, ಮನುಷ್ಯನ ಸ್ವಭಾವವು ಯಾವಕಾಲದ ವರೆಗೆ ಕೆಟ್ಟ ಸ್ಥಿತಿಯಲ್ಲಿ ಅದೆಯೋ ಆ ಕಾಲದವರೆಗೆ ಅನೀತಿಯನ್ನು ಮುರಿಯುವದಕ್ಕೆ ಕಾಯದೆಗಳಿಂದ ಏನು ಉಪಯೋಗವಾಗಲಿಕ್ಕಿಲ್ಲ.

—೦—

New Poetry.

ಹೊಸಕವಿತೆ.

ಧಾರವಾಡದ ಟ್ರೇನಿಂಗಕಾಲೇಜದ ವರ್ಣನೆ.

(ರಾ ಅಡಿವೆಯ್ಯಾ ಪರ್ವತಯ್ಯಾ ಪರ್ವತಮಠ, ವಿದ್ಯಾರ್ಥಿ ಟ್ರೇನಿಂಗಕಾಲೇಜ, ಇವರು ಈ ವರ್ಷದ ಸರಟಿಫಿಕೇಟಿನ ವಾರ್ಷಿಕ ಸಮಾರಂಭದ ಕಾಲಕ್ಕೆ ಸಂಸ್ಕೃತ ಕವಿತಾರೂಪ ಕಾಲೇಜವರ್ಣನೆ ಮಾಸ್ತರರಿಂದ ಅಂದದ್ದು)

ಗದ್ಯ

(ಪ್ರಸ್ತಾವನೆ)

ಇಂದಿನ ದಿನಂಗಳೊಳ್ ಸಕಲಕಳಾವಿಬುಧರ್ಗಳಾವಳಿಯಂ ನಿರೀಕ್ಷಿಸುತ್ತೆರಂ ಪರಮಪ್ರೀತನಾಗಿ, ಮೇಣಂಥ ಪ್ರಕಟದ ಚಿನ್ನಮುಂ ಬುಧಜನಂಗಳ್ಗೆ ತೋರಬೇಕೆಂದಪೇಕ್ಷಿಸಿ, ಕಂದಂ ಮುಂದ ಮಾತೆಯಂ ಗೈದೊಂದು ಪದ್ಯಮಿಪ್ಪುದು. ಅದರೊಳಿರ್ಪ ನ್ಯೂನ

ತೆಗಳಂ ಮಾನಸೋಳಿತಾರಜೆ, ನೀರಕ್ಷೀರ ವಿರಿಕ್ತಿಯೊಳ್ ರಾಳರ
ಕ್ಷೀರಮಂ ನೆಮೀರ್ವಂತೆ ದೋಷಮಂ ತ್ಯಜಿಸಿ ಗುಣಗ್ರಹಣಮಂ
ಮಾಳ್ಪುದೆಂದಾಂ ಪ್ರಾರ್ಥಿಸುತಿರ್ದಪೆಂ.

॥ ಕಂದ ॥ ಇಂದುವನಸಭೆಗಾನಂದದಿ ।
ಬಂಧುರದಧ್ಯಕ್ಷತಾಗುಣದಮಿಯಾಕೈಕೊಂ ॥
ದಂದದಿ ಮಾಚ್ಚಿಂಬುಪಧೋರೆ ।
ಗಂದುಧರಂಪೊರೆಯಲೆಂದುಬೇಡುವಮಾತಂ ॥ ೧ ॥

॥ಮತ್ತೇಭ॥ ಸುಂಲೋಕಾಧಿಪತ್ಯಂತೆಧರೆಯೊಳ್ ಶ್ರುತ್ತಮ
ತ್ರಂಬುನೋ ।
ಹರಮೂಗಸ್ತ್ರಗದ್ಯದ ತಂತ್ರಾಪ್ರದೇಳ್ಳಾಲೇಜಮಂ
ದಂಬುದು ॥
ನಿರುತಂ ತಂನೊಳ್ ಗರ್ವಮಾನವಂಗಂ ಸೌಖ್ಯಂಗ
ಳಂನೀಯುತಂ ।
ಪೊರೆಯುತಿರ್ಪ ದಂದಮಂ ತಳೆದು ತಾಂ ಜ್ಞಾನಾ
ರ್ಗವಂ ಪ್ರಾರ್ಗಯಂ ॥ ೨ ॥

॥ ಕಂದ ॥ ಯುದಬಲಗಡಗಳ ನಾಲ್ಗ ।
ಳಿದೆ ಮಿಡದಲೆ ಬಿಡದೆ ಫಲಪುಷ್ಪಗಳಂ ॥
ಕದುಸಾಗಾಮಂ ಪಡೆಯು ।
ತಿದಿಗದಿಗಂ ಮೆರೆದು ತೋರ್ಪ ಕಾಲೇಜಂ ॥ ೩ ॥
ಪರಿಪರಿ ಮಲ್ಲಿಗೆ ಲತೆಗಳ್ ।
ಸರೆ ಮೀರುತ್ತಿರಲು ಪಚ್ಚಲತಾವಂತಿಗೆ ಬಂ ॥
ಧುರ ಮಾವು ರಸಾಲ ವೃಕ್ಷಂಗಳ್ ।
ಸರಸದಿ ತೋರುತ್ತ ಕಣ್ಗೆ ಸಲೆ ರಂಜಿಸುಗುಂ ॥ ೪ ॥
ಕಾಲೇಜಮೆಂಬ ಸಿರಿಯುಳು ।

ಲೀಲೆಗೆತಳೆದರ್ಪಣವಳಮಾಲೆಗಳೆಂಬಿನೆ ||
ಸಾಲ ಗುಲಾಬಿಯತರುಗಳೊಳ್ |
ಸಾಲ್ದು ಬಿದಿರಳ್ದರ್ಕೆಂಪುಕುಸುಮಗಳೆಸೆಗುಂ || ೫ |
ಸುರನಗರಿಗಪ್ಪುವನಗಳ |
ಇರುತರುಲೀಗಪ್ಪವಿಷಯಸಾಯುಕರೆಂಬೋಲ್ ||
ಸುರಿಇರ್ಪನುಸುರಾವ್ರುಲಿಗೆಂ |
ಗುರಿಹರುಷಂತಾಳ್ದು ಮುರಿಪಡೀಕಾಲೇಜಂ || ೬ ||
||ಶಾರ್ದೂಲ|| ಯುಕ್ತನೋಡಿದಡತ್ತ ರತ್ನಗಂಡಗಳಂ |
ಕೆತ್ತಿಸಿದಗ್ಗಾದೆಕಟ್ಟಗಳನಿರ್ರಂಗಳಿಂ ||
ಸುತ್ತುಮುತ್ತರಾಶ್ಮಪಾಸರೆಗಳಿಂದಲೆ ಮನೋಹರಮಾ
ದಪ್ರಾಕಾರವು ||
ಬಿತ್ತರಿಸುತಿರ್ಪಮೂಪತ್ತುಮೋಲ್ಲೆಕ್ಕಪಾ* |
ನುತ್ತುಮುಂದೆಂಬೋಂಗಬರೆಲಿರ್ಪತರದಿಂದ |
ಅತ್ಯಧಿಕಕೆಂಪಿನಿಂದಾಲಗಚ್ಚಿರುವಾಗಿ ತೋಭೆಯಿಂತಳೆ
ದಿರ್ಪುದು || ೭ ||
||ಭಾಮಿನಿ|| ಇಂತೆಸೆವಕಾಲೇಜದೊಳುಬರ್ಪ |
ಸಂತಸದಿವಿದ್ಯಾರ್ಥಿಗಳ್ ವೆ |
ರಂತರದಅಧ್ಯಯನಗೈಯುತಖರಮಾಪ್ರೀತಿಯು ||
ಶಾಂತಬಾವದಗುರುಗಳಿಗೆಹಿತ |
ಚಿಂತಿಸುವಮಾಷೇಶಣ್ಟಿಗೆ |
ಶಾಂತಿಯಿಂದಲಿಸೋತ್ರಗೈಯುವರೀಶಪ್ರರಯಂ
ದು || ೮ ||

ಶಮಾನುಗಳು.

|| ತರಳ || ಕೆಲರು ವಿದ್ಯಾರ್ಥಿಗಳು ಮಿಗೆ ಜ್ಯೋತಿಷ್ಯಶಾಸ್ತ್ರವ ಕಲಿವರ್ |
ಕೆಲರು ಸಂಸ್ಕೃತ ಪಠನಪಾಠನ ಮಂಜುಘೋಷವ ಕೇಳ್ವರ್ ||
ಕೆಲರು ಸೃಷ್ಟಿಪದಾರ್ಥ ಗುಣಗಳೊಳಿರ್ಪ ತತ್ತ್ವವನರಿವರ್ |
ಕೆಲರು ಗಣಿತದ ಮಾರ್ಗದೊಳಿಯುವ ರಂಗಿಕೆಲ್ಲದ ತೋರ್ಪರ್ || ೯ ||
ಸೌಧರಾಯ ಯಂತ್ರ ಶಾಸ್ತ್ರ ಸುರಾಜಸೂಯ ಗಗನ ಗಣಿತವು |
ಸಾಂಘಗುಣ ಮಾಳ್ಕೆ ಗಳವರಿಗೆ ಮ್ಯಕ್ತಕಾವ್ಯಂಗಳು ||
ಮೇಧಿನಿಯೊಳುಚ್ಚರಿಯೆನಿಪ ಕುಸುಮಗಳ ಚಿತ್ರಂಗಳು |
ಮೋದಮಂದಿರ ಮ್ಯಾಲಿ ಕಾವ್ಯ ಮಾರ ವಿಷಯಂಗಳು || ೧೦ ||

|| ಊಟಣೀಪದಧಾಟಿ ||

ಅಂತೆ ಮಿತ್ರಕಲಾಜತಾಲಂ |
ಸಂತತ ಮಾಗುಣಶೀಲಾ |
ಸಂತಸಧಂತಮ್ಯಯುಜಾಲಾ |
ದ್ವಿತಚಿಂತಕಪಾಲಾ || ೧ ||
ಮಜ್ಞಾ ನಂದಬೋಧಸೋಮಾ |
ಶರಣಗಲ್ಲಿ ಪ್ರೇಮಾ |
ಧರ್ಣಿಯಮೋತ್ತಿಮಗನಂಬಾ |
ಸುರಚಿಂಗಣ ಧಾಮಾ || ೨ ||
ಸರಸಿಜಮೈರಿಜಟಾಧರನೇ |

ಸುರಚಿರಗೌರಿಮನೋಹರನೆ |
ಚಿರಕಾಲಿಪದನು ಶಂಕರನೆ |
ಪೊರೆಜಗದೀಶ್ವರನೆ. ॥ ಕ ॥ ೧೧ ॥

—o—

Correspondence.

ಪತ್ರವ್ಯವಹಾರವು.

ರಾ. ಸಾ. ಕನ್ನಡ ಶಾಲಾಪತ್ರಿಕದ ಎಡೀಟರರ ಸನ್ನಿಧಾನಕ್ಕೆ

ವಿ. ವಿ. ಅಯ್ಯಾ ಭವದೀಯ-ಕರ ಕಂಜಾತ ಸಂಜನಿತ ಸಂ
ಚಿಕೆ ೧೦ನೇ ಪತ್ರಿಕದ ೨೪೦ನೇ ಪುಟದಲ್ಲಿ ಪ್ರಕಟಿಸಿದ ಎ
ಡು ಶ್ಲೋಕಗಳಲ್ಲಿ ದ್ವಿತೀಯ ಶ್ಲೋಕವನ್ನು ಮನ್ಮಂದಮತಿಗ
ತಮ್ಮ ಟೀಕಿಸಿತ್ತ ತ್ವತ್ಸಂಚಿಕೆಯಲ್ಲಿ ಪ್ರಕಟಿಸುವದಕ್ಕೆ ಯಾಪ
ತ್ತತ್ಸಂಕಟಕೆ ಅಂಚೇವಾಗದಿಂದ ಸಂಚಿಸಿದ್ದೇನೆ. ಸಂಚಿಸ
ಮುದ್ರಿಸಿ ಕೊಂಚ ಆಕೆಯನ್ನು ಪೂರ್ಣ ಮಾಡಬೇಕೆಂದು ಬೇ
ಕೊಳ್ಳುತ್ತೇನೆ. ರಾಯರೇ ತ್ವತ್ಪತ್ರದರ್ಶನವು ಇದೇ ಪ್ರಥಮ
ವರ್ತ ಯಾದದರಿಂದ ಭಯಗೊಂಡಿರುತ್ತೇನೆ. ಶ್ರಮಜಯ
ನ್ನು ದಯಾಪಾಲಿಸುವಿರೆಂದು ಬಹಳ ನಂಬಿದ್ದೇನೆ. (೧೮೮
೪. ಅಕ್ಟಂಬರ ತಿಂಗಳ ಪತ್ರವಂನಿರೀಕ್ಷಿಸಬೇಕು.)

॥ ಸ್ರಗ್ಧರಾವೃತ್ತ ॥ ಸ್ಫೂರ್ಜತ್ಪದ್ಮೋಧರಾಭ್ಯಾಂ ಕ್ಷಿತೀಭ್ರದಾರ
ಧನುರ್ಭ್ಯಾಂ ತ್ವರಸ್ವೇಚ್ಛಯಾಸ್ಯ | ಕ್ಷ್ರ
ಭಾಭ್ಯಾಂ ತ್ಯಾಜ್ರೀಭ್ಯಾಂ ಮಧುಪರಿವೃಥಭಾ
ಭ್ಯಾಂ ಪಾರಂಭ್ಯಾಂ ರಥ್ವಿ | ಟಾಭ್ಯಾಂ ಭ್ಯಾಂ ಧ್ವಿ
ದ್ರೀಭ್ಯಾಂ ಮಿತರಂಡಿಭಿರಾಭ್ಯಾಂ ಪ್ರದ್ವೈತ್ಯೇಭ್ಯಾಂ
ಗಂಧ್ವ | ದ್ವಿತ್ವೇಟೋಭ್ಯಾಂ ದ್ಯುಜ್ಜಟಾಭ್ಯಾಂ ತ್ವಗಂಭ್ಯಾಂ

ನಭ್ರುದಿಷ್ವಾರ್ಥದೋಸ್ತ್ರ್ಯಶ್ವರೋವ: ||

ಶಬ್ದಾರ್ಥ — ಸ್ಫೂರ್ಜತ್ = ಪ್ರಕಾಶಮಾನವಾದ | ಸ್ವಭ್ರೇಭರಾಟ್; ಸು = ಲೇಸಕರವಾದಂಥ | ಅಭ್ರ = ಆಕಾಶದಲ್ಲಿದ್ದಂಥ | ಇಭರಾಟ್ = ಗಜಶ್ರೇಷ್ಠನಾದ ಐರಾವತನ | ತ್ವಿಟ್ = ಕಾಂತಿಯೋಪಾದಿಯಲ್ಲಿ ಕಾಂತಿಯುಳ್ಳಂಥ | ಕ್ಷಿತಿಭೃದುರುಧನುರ್ಭೃತ್, ಕ್ಷಿತಿ = ಭೂಮಿಯನ್ನು | ಭೃತ್ = ಧರಿಸಿದಂಥ | ಮೇರುಪರ್ವತವೆಂಬ | ಉರು = ಉತ್ಕೃಷ್ಟವಾದ | ಧನು: = ಧನುಸ್ಸನ್ನು | ಭೃತ್ = ಧರಿಸಿದಂಥ | ಪುರಸ್ಸ್ಫೂರ್ತಿಯುಗ್ದೃಕ್ಪ್ರಭ್ರಾಟ್, ಪುರ: = ಮುಂಭಾಗದಲ್ಲಿ | ಸ್ಫೂರ್ತಿಯುಕ್ = ಪ್ರಕಾಶವುಳ್ಳ | ದೃಕ್ = ಅಗ್ನಿನೇತ್ರದಿಂದ | ಪ್ರಭ್ರಾಟ್ = ಹಿಪ್ಪುತ್ತಿರುವಂಥ | ಪ್ರತ್ಯೇಕ್ಪ್ರತೀಟ್ಪ್ರಟ್; ಪ್ರತ್ಯೇಟ್ = ಪ್ರಮುಖರಾಗಿರುವಂಥ | ಗತಿ = ರತಿದೇವಿಯು | ಕಟ್ = ಪಲ್ಲಘನಾದುಮನ್ಮಥವನ್ನು | ಪ್ಲುಟ್ = ಸುಟ್ಟಂಥ | ಪ್ರಮಥಪೇಶ್ವರಭ್ರಾಡ್ವೃಷಾರುಟ್, ಪ್ರಮಥ = ಪ್ರಮಥಗಣಾಧೀಶರಲ್ಲಿ | ಪರಿವೃಢ = ಶ್ರೇಷ್ಠರುಗಳಿಗೆ | ಭ್ರಾಟ್ = ಹಿಪ್ಪುತ್ತಿರುವಂಥ | ವೃಷ = ವೃಷಭೇಶ್ವರನನ್ನು | ಆರುಟ್ = ಆರೋಹಣ ಮಾಡಿದಂಥ | ಪುರದ್ವಿಟ್ = ತ್ರಿಪುರಸಂಹಾರಕನಾದಂಥ | ಕ್ಷ್ಮಾಭೃದ್ಭಿದ್ವಿಗ್ಘ್ನಟ್, ಕ್ಷ್ಮಾ = ಭೂಮಿಯನ್ನು | ಭೃತ್ = ಧರಿರೂಢಿರುವ ಪರ್ವತಗಳನ್ನು | ಭಿತ್ = ಭೇದಿಸುತ್ತಿರುವಂಥ ಇಂದ್ರನಿಗೆ | ದ್ವಿಟ್ = ಶತ್ರುಗಳಾದ ರಾಕ್ಷಸರನ್ನು | ಹಟ್ = ಸಂಹಾರ ಮಾಡಿದಂಥ | ಅದ್ರಿರಾಟ್ = ಕೈಲಾಸಾಧಿಪತಿಯಾದಂಥ | ಕ್ಷಪಿತರುಡರಿಭಿತ್, ಕ್ಷಪಿತನಾಶ ಮಾಡಲ್ಪಟ್ಟಂಥ | ರುಟ್ = ಶಿಟ್ಟುಳ್ಳ ಬಲಿಮಿಗಳ | ಅರಿ = ವೈರಿಗಳನ್ನು | ಭಿತ್ = ಭೇದಿಸುತ್ತಿರುವಂಥ | ವ್ಯಾಪ್ರದ್ವೈತ್ಯೇಟ್ಪ್ರದ್ವಿಟ್; ವ್ಯಾಪ್ರ =

ವ್ಯಾಘ್ರರೂಪನಾದ । ಧೃತ್ಯೈ = ಅನುರಾಧನತಿಗೆ । ಕ್ಷಣಾ-
ಟ್ = ಶಿಥಿಲವಾಗಿಸ್ಥಂಥ । ವಿಶ್ವೇಟ್ = ಜಗತ್ತಲ್ಲಿ ಭವನಾದಂಥ
ಪ್ರೋದ್ಯಜ್ಜಟಾಭೃತ್, ಪ್ರೋದ್ಯತ್ = ವ್ಯಕ್ತವಾಗಿ ತೋರು-
ದ್ದಂಥ । ಜಟಾ = ಜಡೆಗಳನ್ನು । ಭೃತ್ = ಧರಿಸಿಕೊಂಡಿ-
ರುವಂಥ । ಫಣಿಭೃದಿನಭೃತ್; ಫಣಿ = ಹೆಡೆಯುಳ್ಳ । ಭೃ-
ತ್ = ಧರಿಸಿರುವ ಸರ್ಪಗಳ । ಇನ = ಒಡೆಯನಾದ ಮಹಾ-
ಶೇಷನನ್ನು । ಭೃತ್ = ಅಲಂಕಾರವಾಗಿ ಧರಿಸಿಕೊಂಡಂಥ
ಈಶ್ವರ: = ಶಿವನು । ವ: = ನಿಮಗೆ । ಇಷ್ಟಾರ್ಥದ:, ಇಷ್ಟಾ-
ರ್ಥ = ಅಪೇಕ್ಷಿಸಿದನ್ನು । ದ: = ಕೊಡುವಂಥಾತನು ।
ಸ್ತು = ಆಗಲಿ.

ಭಾವಾರ್ಥ — ತೇಜೋಮಯವಾದ ಐರಾವತದ ಕಾಂತಿಯೊ-
ಪಾದಿಯಲ್ಲಿ ಕಾಂತಿಯುಳ್ಳಂಥ, ಮಹಾ ಮೇರುಪರ್ವತವನ್ನು
ಧನುಸ್ಸು ಮಾಡಿಕೊಂಡಂಥ, ಮುಂಭಾಗದಲ್ಲಿ ಹೊಳೆಯುವ ಅ-
ಗ್ನಿನೇತ್ರದಿಂದ ಒಪ್ಪುವಂಥ, ಎದುರಾಗಿ ಬರುವ ಮನ್ಮಥನನ್ನು
ದಹನ ಮಾಡಿದಂಥ, ಪ್ರಥಮಗಣಾಧೀಶ್ವರರಲ್ಲಿ ಶ್ರೇಷ್ಠನಾದ
ನಂದಿಕೇಶ್ವರನನ್ನು ವಾಹನವಾಗಿ ಮಾಡಿಕೊಂಡಿರುವಂಥ, ತಾ-
ರಾಕ್ಷಕಮಲಾಕ್ಷವಿದ್ಯುನ್ಮಾಲಾ ಎಂಬ ರಕ್ಕಸರ ತ್ರಿಪುರವನ್ನು
ನಾಶ ಮಾಡಿದಂಥ, ನಿಶಾಚರಗಳನ್ನು ವಿಧ್ವಂಸ ಮಾಡಿದಂಥ,
ಕೈಲಾಸಪರ್ವತಕ್ಕೆ ಯಜಮಾನನಾದಂಥ, ಮುನಿಗಳ ವೈರಿಗ-
ಳನ್ನು ನಾಶ ಮಾಡಿದಂಥ, ವ್ಯಾಘ್ರಾಸುರನಿಗೆ ಶಿಥಿಲೋಪಾಯ-
ವಾದಂಥ, ಲೋಕಕ್ಕೆ ಒಡೆಯನಾದಂಥ ಪ್ರಕಾಶಮಾನವಾದ ಜ-
ಡೆಗಳನ್ನು ಧರಿಸಿದಂಥ, ಮಹಾಶೇಷನನ್ನು ಅಲಂಕಾರ ಮಾ-
ಡಿಕೊಂಡಿರುವಂಥ ಶಿವನು ನಿಮ್ಮ ಇಷ್ಟಾರ್ಥಗಳನ್ನು ಕೊಡು-
ವಾತನಾಗಲಿ.

ಛಂದಸ್ಸು — ಮರಭನಯಯಯ ಗಣಗಳಿಂದ ಸ್ರಗ್ಧರಾವೃತ್ತ ವು. ಚರಣದ ೭ನೇ ಸ್ಥಾನಕ್ಕೆ ಯತಿ ಯುಂಟು.

ಪತ್ರಪ್ರಸ್ತಾರಕ್ಕೆ ಮಾಫೀ ಬೇಡಿಕೊಂಡು ಲೇಖನಿಯನ್ನು ಸವ್ಯ ಕರ್ಣಸ್ಥಾನಕ್ಕೆ ಅರ್ಪಿಸಿದ್ದೇನೆ. ವಿಜ್ಞಾಪನ:

ತಾ. ೧|೧೨|೮೩೪. ಮು. } ಕೃಷ್ಣಯ್ಯ ಕಲ್ಲಯ್ಯ ಶಿರಕೋ
ಹೊಳೆಆಲೂರ ತಾ. ರೋಣ { ಳಕ್ಕರ ಹ. ಮಾ.

—o—

ಶ್ರೀಮನ್ಮಹಾರಾಜಪೂಜ್ಯ ಶ್ರೀವಿರಾಜಮಾನ ಮದ್ರಾಮಾ ಪ್ರವೀಣ ಶಾಲಾಪತ್ರಜನಕ ವಿಭುಂಗಳ್ಗಸಾವಸ್ಥಾನ ಸನ್ನಿಧಿಂಗೆ —

ಅಯ್ಯಾ— ತಮ್ಮಯ ಜ್ಞಾನ ಕಾಂತಿಯಿಂಪ್ರತಿ ಮಾಸದೋಳುದಯಿಸುತ್ತಿಪ್ಪ ಜ್ಞಾನಪ್ರಕಾಶ ಶಿಶುಕ ಮಸ್ತು ಪ್ರಾಲಾಪತ್ರಾಂತ ದೂಳಿಯಂ ಕಡೋಳ್ ಕರಗದಿಂದು ದಾರಾಶ್ರಯಂ ಜೊರೆಯಗೆ, ಮೇಣ್ ತಮ್ಮಯ ಕರುಣ ಕಟಾಕ್ಷಂ ಎಮ್ಮಯಾತೆಯಂ ಪೂರ್ಣಗೆಸುಗೆ; ಈತೆರನ್ನಿಚ್ಛಿಗೆ ಯಿಂತಂಬಲಿಸಿ ಬೇಡುತ್ತಿರುವೆ.—

॥ಶ್ಲೋಕ:॥ ರಣಿತೇನಸಾಧೃತೇ ನಿರ್ಮಂ | ಮತೇನಧ್ರಿಯತೇ ಮಹೀ |
ಅಸಾರೇಕ್ರೀಡತೆಸಂಸ: | ಕವಿಶೇಷೇಕಿಮದ್ಭುತಂ ॥೧॥

॥ಪ್ರಕಾಶ:॥ ಕವಿಶೇಷೇ (ಕವಯಃ ಶೇಷೋಯಸ್ಯ, ತಸ್ಮಿನ್ = ಕವಿಶೇ (ಷೇ, ಇತಿಸಮಾಸ: ಕವರ್ಗ ವಿಶೇಷೇ ಅಸ್ಮಿನ್ ಶ್ಲೋಕೇ ಇತ್ಯರ್ಥ:) ಕಿಂ = ಕಥಂ, ಕಿಂ, = ಅದ್ಭುತಂ = ಆಶ್ಚರ್ಯ.

॥ ಭಾಷಾನ ಸಾರಂಪ್ರಕಾಶಂ ॥ ಕವಿಶೇಷೇ = ಕಕಾರಂಮುಖ್ಯ ವಿಶೇಷಮಿಪ್ಪವಿಗರೋಳ್ (ಇವು ಪದ್ಯದೊಳ್) ಕಿಂ = ಏ, ಅದ್ಭುತಂ ಅಚ್ಚರಿ?

॥ ಭಾವಂ ॥ ಎಂತೆನೆ ಕರಣಾರವಂ ಪ್ರತಿಚರಣಾದಿ ಶಬ್ದಾದಿ ಯೊಳ್ಗೊಂಡಿತೆ; ಅರ್ಥಮುಂ ಸಹಜಮೆಂಬ ಭಾವಂ

॥ ಸಹಜಾರ್ಥವು ॥ ಕರಣೇನ = ಶ್ರೋತ್ರಾದಿ ಇಂದ್ರಿಯಗಳಿಂದ ಸಾಧ್ಯತೇ = ಸಾಧಿಸಲ್ಪಡುತ್ತದೆ. ಸರ್ವಂ = ಎಲ್ಲವು, ಕಮಠೇನ = ಕಮಠನಿಂದ, ಆಮೆಯಿಂದ; ಧ್ರಿಯತೇ = ಧರಿಸಲ್ಪಡುತ್ತದೆ. ಮಹೀ = ಭೂಮಿಯು, ಕಾಸಾರೇ = ಸರೋವರದಲ್ಲಿ, ಕ್ರೀಡತೆ = ಕ್ರೀಡಿಸುತ್ತದೆ, ಹಂಸಃ = ಹಂಸವು.

ಭಾವವು — ೧ನೇ ಚರಣದ್ದು — ಶ್ರೋತ್ರಾದಿ ಇಂದ್ರಿಯಗಳಿಂದ, ಸಮಸ್ತಕಾರ್ಯಭಾಗಗಳೂ ಸಾಧ್ಯವಾಗುತ್ತವೆ.

೨ನೇ — ಕಮಠನಿಂದ (ಆಮೆಯಿಂದ) ಭೂಮಿಯು ಧರಿಸಲ್ಪಡುತ್ತದೆ, ಆದರೆ ಹಿಂದಕ್ಕೆ ಸಮುದ್ರಮಥನಕಾಲದಲ್ಲಿ ವಿಷ್ಣುವು ಮಂದರಪರ್ವತವನ್ನು ಕಡೆಗೋಲಾಗಿ ಮಾಡಿದಾಗ್ಯೆ ಅದು ಚಂನಾಗಿ ನಿಲ್ಲದ್ದರಿಂದ ತಾನು ಕಮಠರೂಪನಾಗಿ ಆ ಪರ್ವತವನ್ನು ಧರಿಸಿದನೆಂದು ಕಥಾಭಾಗವುಂಟು. ಈ ಕಾರಣದಿಂದ ಕಮಠನಿಂದ ಭೂಮಿಯು ಧರಿಸಲ್ಪಡುತ್ತದೆ; ಎಂಬ ಭಾವವುತ್ಪನ್ನವಾಯಿತು.

೩ನೇ — ಕಾಸಾರದಲ್ಲಿ ಹಂಸವು ಕ್ರೀಡಿಸುತ್ತದೆ.

ಬಂಧುಗಳಾದ ಕನ್ನಡಶಾಲೆಯ ಶಾಲಾಗುರುಗಳೇ — ನನ್ನ ಮಂದಬುದ್ಧಿಗೆ ತಿಳಿದಭಿಪ್ರಾಯಾರ್ಥಗಳನ್ನು ಪ್ರಸಿದ್ಧ ಪಡಿಸಿದ್ದೇನೆ ತಪ್ಪು ಮನೋಗತಾರ್ಥವನ್ನು ಕೈಲಾದಷ್ಟಿಗೆ ಸರಿಮಾಡಿಸಿರುವ

ನೆಂದು ನಂಬಿಗೆಯುಳ್ಳವನಾಗಿದ್ದೇನೆ. ಆಲ್ಲದ ಪಕ್ಷದಲ್ಲಿ ತಮ್ಮ ಅಭಿಪ್ರಾಯವನ್ನೇ ನಾನು ನಂಬಿಕೊಂಡಿದ್ದೇನೆ. ಮತ್ತು ಸಂತೋಷಪಡಿಸುವದಾಗುವದೆಂದು ಆಶಿಸಿದ್ದೇನೆ.

ಪತ್ರಕರ್ತ ಪ್ರಭುಗಳೇ — ಪತ್ರ ವಿಸ್ತಾರಕ್ಕೆ ಕ್ಷಮಾಂಶವು ದೊರೆಯಲೆಂದು ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಪ್ರಸನ್ನಗುಣವಿರಲಿ,

णानंताशापालकाच्वो
तशाके सहाकृष्णत्र
दश्यामांगिरसे तारी
२७।१२।८३इ.

ಇನ್ನೊಂದು ಶ್ಲೋಕವು ಶಿವಸ್ತೋತ್ರಸಂಬಂಧವಾದದ್ದು. ಪದಚ್ಛೇದದಲ್ಲಿ ಮಾತ್ರ ಕಠಿಣವಿರುವದಲ್ಲದೆ ಅರ್ಥದಲ್ಲಿ ಸ್ಪಷ್ಟವೇ ಇರುವದು. ಆದರೆ ಸ್ಥಲಸಂಕೋಚದಿಂದ ಬಿಟ್ಟಿದ್ದೇನೆ. ಮುಂದಿನಂಕಗಳಲ್ಲಿ ಮತಿಯಾನುಸಾರವಾಗಿ ಪ್ರಸಿದ್ಧಿಸುವೆನು. ಲೋಭವಿರಲಿ.

वाजपेय्यन्वय यज्ञापत्य
शिवानंद:

—o—

ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡೀಟರವರು ಕ್ಯಾಂಪ ಮು ಧಾರಾನಗರ ಇವರಿಗೆ——

ವಿ. ಆರ್ಯರೆ; ದರತಿಂಗಳಲ್ಲಿ ತಮ್ಮ ಕರಕಮಲದಿಂದ ಹೊರಡುವ ಶಾಲಾಪತ್ರಿಕೆಯು ಮಾಸು ೧೯ ತಿಸೇರದಲ್ಲಿ "ರಾಜಶೇಖರ ಕುಲಕರ್ಣಿ" ಇವರು ಒರೆದಿರುವ ಶ್ಲೋಕದ ತನ್ನಲ್ಲೇನಾಗಳನ್ನು ತಪ್ಪುಬರೆದದ್ದರಿಂದ ನಾನು ಸದರಿ ಶ್ಲೋಕವನ್ನು ಮಾ ಶುದ್ಧರೀತಿಯಿಂದ ಬರೆದು ಮುಂದಿನಅನುಸಾರವಾಗಿ ಅರ್ಥವು

ನ್ನು ಮಾಡಿ ತಮ್ಮ ಕಡೆಗೆ ಕಳುಹಿಸಿದ್ದೇನೆ. ಸತ್ಯಾರ್ಥವಿದ್ದ ಪಕ್ಷದಲ್ಲಿ ಪ್ರಗಟಮಾಡಬೇಕು.

॥ಶ್ಲೋಕ॥ ಯಾಮಾತಮಾಮತಮಾಯಾ । ಮಾನರೇಕ್ಷಕ್ಷರೇವಮಾ ॥ ತಾರೇನೇಗಗನೇರೇತಾ । ಮಾಕ್ಷಗಕ್ಷಕ್ಷಗಕ್ಷಮಾ ॥೧॥

—ಪದಚ್ಛೇದ—

ಯಾ । ಮಾತಾ । ಮಮತಾ । ಮಾಯಾಮಾ । ಅವರಃ । ಕ್ಷಃ । ಅಕ್ಷರಃ । ಉವಮಾ । ತಾರಃ । ನಃ । ಗ+ಅಗಃ+ನಃ=ಗಗನಃ । ರೇತಾಂ । ಅಕ್ಷಗಃ ಕ್ಷ । ಅಕ್ಷಅಗ । ಕ್ಷಮಾ । ಅರ್ಥ ॥ ಅಕ್ಷರೇವಮಾ=ಶ್ರೇಷ್ಠರಿಗೆ ಸಮಾನನಾದಂಥಾತನೇ. ನಃ=ನಮ್ಮನ್ನು. ತಾರಃ=ರಕ್ಷಣೆ ಮಾಡತಕ್ಕ ನೀನು. ಮ್ಯಾಮರೇಕ್ಷಃ=ನಷ್ಟದುರಾಗಿಯೇ ತೀರಿಕೊಂಡಿ. ಅಕ್ಷಗಃ=ಇಂದ್ರಿಯಗಳಲ್ಲಿ ಸಂಚಾರಮಾಡತಕ್ಕ. ಕ್ಷ=ಪಂಚೇಶ್ವರನು. ಗಗನಃ=ಪರ್ವತವನ್ನು ಕುರಿತು ಗಮನಮಾಡತಕ್ಕ ನಮ್ಮ. ಅಕ್ಷಗಕ್ಷಮಾ=ಅಪರಾಧವನ್ನು ಕ್ಷಮಿಸಲಿಲ್ಲ. ಎಂದು ಯಾ=ಯಾವ. ಮ್ಯಾಯಾ=ಮಾಯಾಗುಣವಿಶಿಷ್ಟನಾದ ಷಟೋತ್ಕಚನ. ಮಾತಾ=ತಾಯಿಯು. ಮಮತಾ=ಮೋಹವುಳ್ಳಂಥ. ರೇತಾಂ=ರೋದನಮಾಡಿದಳು.

—ಭಾವಾರ್ಥವು—

ಶ್ರೇಷ್ಠರಿಗೆ ಸಮಾನನಾದ ಷಟೋತ್ಕಚನೆ! ನನ್ನನ್ನು ರಕ್ಷಣೆ ಮಾಡತಕ್ಕ ನೀನು ನಷ್ಟದುರಾಗಿಯೇ ತೀರಿಕೊಂಡಿ. ಇಂದ್ರಿಯಗಳಲ್ಲಿ ಸಂಚಾರಮಾಡತಕ್ಕ ಪಂಚೇಶ್ವರನು ಪರ್ವತವನ್ನು ಕುರಿತು ಗಮನಮಾಡತಕ್ಕ ನಮ್ಮ ಅಪರಾಧವನ್ನು ಕ್ಷಮಿಸಲಿಲ್ಲವೆಂದು ಯಾವ ಮಾಯಾಗುಣವಿಶಿಷ್ಟನಾದ ಷಟೋತ್ಕಚನ ತಾಯಿಯು (ಹಿಡಿಂಬಿಯು) ಮೋಹವುಳ್ಳ ರೋದನ ಮಾಡಿದಳು.

ಇದು ಅತಿಸನ್ನ ಶ್ಲೋಕವಿರುತ್ತದೆ. ಇದೇ ಮಾಸಲೇದ್ದು

ಗಳು ಎಷ್ಟೋ ಉಂಟು. ಅದರ ಪೈಕಿ ಒಂದೆರಡು ರಣಾರ್ಥವಾಗಿ ಇಲ್ಲಿ ಕೊಟ್ಟಿದ್ದೇನೆ—

|| ಶ್ಲೋಕವು ||

ಂ ವಿರಂಚಿನಾಚಿರಂ ವಿರಂಚಿ | ಸಾಕಾರತಾಸತಸ
ರಕಾಸಾ || ಸಾಕಾರತಾಸ್ಯಸತಾರಕಾಸಾ | ಚಿರಂ ವಿ
ಚಿನಾಚಿರಂ ವಿರಂಚಿ ||೧|| ತಾಮಸೀತ್ಯಸತಿಸತಸೀ
ತಾ | ಮಾಯಾಯಾಕ್ಷಮಸಮಕ್ಷಯಾಯಮಾ || ಮಾ
ಯಾಕ್ಷಮಸಮಕ್ಷಯಾಯಮಾ | ತಾಮಸೀತ್ಯಸತಿ
ತ್ಯಸೀಮತಾ ||೨||

ಸ್ತ್ಯ ಮಾಸ್ತರ, ವ ಅತಿಪ್ರಾಟ ವ್ಯಾ[illegible] ಬೇರೆ ವಿ . ಅಧೋಭಾಗದಲ್ಲಿರುವ ಪ್ರಶ್ನೆಗಳಿಗೆ ಸಮರ್ಪಕ ಉ ತ್ತರ ಎನ್ನ ಮನಸನಾನಂದ ಪೊಂದಿಸಬೇಕೆಂದು ದ ಸೂಚಿಸುತ್ತೇನೆ.

—ಪ್ರಶ್ನೆಗಳು—

ಪ್ರತ್ಯಕ್ಷ ವಸ್ತುಗಳ ವಿಚಾರಗಳು ಸತ್ಯವೋ? ಅಸತ್ಯ ಸಂಶಯವೋ?

ಅಪ್ರತ್ಯಕ್ಷ ವಸ್ತುಗಳ ವಿಷಯದಲ್ಲಿ ಮೂರು ಮಂದಿ ದಂತೆ ಹೇಳಿದರೆ ಇವರಲ್ಲಿ ಸತ್ಯ ಹೇಳಿದವರ್ಯಾರು? ಶವು ಯಲ್ಲಿ ಅದೆ? ಎಲ್ಲಿ ಇಲ್ಲ? ಯಲ್ಲಾ ಕಡೆ ವ್ಯಾಪ್ತವಲ್ಲ?

ವಿದ, ಸಂಸ್ಕೃತ, ಇಂಗ್ಲಿಷ, ಲಾಟಿನ, ಕನ್ನಡ, ಮ , ಮುಂತಾದ ಭಾಷೆಗಳು ಮೂಲ ಕರ್ತರು ಯಾರು? ನುಷ್ಯನು ಸತ್ತಮೇಲೆ ಎಲ್ಲಿಗೆ ಹೋಗುತ್ತಾನೆ? ಅವ ಜ್ಞಾನ ಪೇನಾಗುತ್ತದೆ? ವೇದಶಾಸ್ತ್ರ ಮುಂತಾದ ಲೌ

ಈ ಪುರಾವೇದ ಹೊರತು ಬೇರೆ ಪುರಾವೆಗಳುಂಟೆ?

(೬) ಬೈಬಲು, ವೇದ, ಖುರಾನ ಇವುಗಳಲ್ಲಿ ಎಲ್ಲ ಮೊದಲು ಉಂಟಾದದ್ದಾವದು?

(೭) ಭವಿಷ್ಯ ವಾದಿಗಳ ಮಾತುಗಳು ಸತ್ಯವೇ? ಅಸತ್ಯ. ಗಣಿತ ಮೊದಲಾದ ನೇಮದಿಂದ ಹೇಳಿದಮೇಲೆ ಹ್ಯಾಗಾಯಿತು?

(೮) ಪ್ರಾಣವಾಯು ಯಾತರಿಂದ ಉಂಟಾಯಿತು?

ಅಯ್ಯಾ ಎಡೀಟರ ಮಹಾರಾಯರೆ? ತಮಗೆ ಶ್ರಮ ರಬಹುದು. ಸ್ವಲ್ಪವಿಸ್ತಾರಕ್ಕೆ ಕ್ಷಮಿಸಬೇಕು ಕಂಡಿರೆ? ೩ನೆ ನವಂಬರ ಸನ್ ೧೮೮೩ ಇಸವಿ.

ಕೂಡಲಗಿ ಶಾಳಾ } ಭೀಮಾಜಿ ಶ್ರೀನಿವಾಸ ಅಡಬ್ಬ
ತಾ. ಕಲಘಟಗಿ } ಉಪಾಸ್ತ್ರಿ ಕೂಡಲಗಿ

— ೦ —